2

ಲಿಂಕನ್ ಲೆನಿನ್ ಗಾಂಧಿ



ಗಾಂಧೀ ಶಾಂತಿ ಪ್ರತಿಷ್ಠಾನ : ಬೆಂಗಳೂರು

The Gandhian Way

" No school of thought can claim a monopoly of right judgement. We are all liable to err and are often obliged to revise our judgements. In a vast country like this, there must be room for all schools of honest thought. And the least, therefore, that we owe to ourselves as to others is to try to understand the opponents' viewpoints and, if we cannot accept it, respect it as fully as we would respect ours. It is one of the indispensable tests of a healthy public life and therefore, fitness for Swaraj. "

—Gandhiji

ಬೆಲೆ: ರೂ. 4/-

ಕರ್ನಾಟಕ ಗಾಂಧೀ ಸ್ಮಾರಕ ನಿಧಿ (ರಿ)
ಪರಿಗ್ರಹಣ ಸಂಖ್ಯೆ:
ACC. No.: 620
ಗಾಂಧೀ ಗ್ರಂಥಾಲಯ, ಬೆಂಗಳೂರು-1

ಲಿಂಕನ್, ಲೆನಿನ್, ಗಾಂಧೀ

ಕೆ. ಎಸ್. ನಾರಾಯಣಸ್ವಾಮಿ

ಗಾಂಧೀ ಶಾಂತಿ ಪ್ರತಿಷ್ಠಾನ : ಬೆಂಗಳೂರು

LINCOLN, LENIN AND GANDHI

by

K. S. Narayanaswamy

(Second revised edition 1975)

Published by

GANDHI PEACE FOUNDATION
KUMARA PARK (EAST)
BANGALORE 560001

Price Rs. 4/-

Printed at
The Bangalore Press,
Mysore Road, Bangalore-560018

ಮುನ್ನುಡಿ

ಲಿಂಕನ್, ಲೆನಿನ್, ಗಾಂಧೀ ಈ ಮೂವರು ವಿಶ್ವಜ್ಯೋತಿಗಳು ಸ್ವಾತಂತ್ರ್ಯ, ಸಮತೆ, ಸೌಹಾರ್ದಗಳ ಪ್ರತೀಕವಾಗಿ ಬೆಳಗಿದರು. ಈ ಮಹಾನುಭಾವರು ಅವರವರ ಯುಗಕ್ಕೆ ಯುಗಸ್ವರೂಪಕ್ಕೆ ತಕ್ಕಂತೆ ಯಾವುದು ಸಾಮಯಿಕವಾಗಿ ಅಗತ್ಯವಾಗಿತ್ತೋ ಆ ತತ್ವವನ್ನೇ ಎತ್ತಿಹಿಡಿದರು ಅನ್ನುವುದು ಸ್ಪಷ್ಟ. ಮಾನವ ಜೀವನದ ಪರಿಪುಷ್ಟಿಗೆ, ಮಾನವ ಸಮಾಜದ ಅಭ್ಯುದಯಕ್ಕೆ ಈ ಮೂರು ತತ್ವಗಳ ಬಿಡಿಬಿಡಿಯಾದ ವಿಕಾಸ ಸಾಲದೆಂದೂ ಇವೆಲ್ಲವುಗಳ ಸಮರಸ ಸಾಧನೆ ಸಂತತವಾಗಿ ಆದ ಹೊರತು ಮಾನವಾಭ್ಯುದಯ ಏಕಪಕ್ಷೀಯ ವಾಗಿ ಉಳಿಯುತ್ತದೆಂಬ ತತ್ವವನ್ನು ಪ್ರತಿಪಾದಿಸುವ ದೃಷ್ಟಿಯಿಂದ ನನ್ನ ಮಿತ್ರರು ಈ ಹೊತ್ತಿಗೆಯನ್ನು ಬರೆದು ಪ್ರಕಟಿಸಿದ್ದಾರೆ.

ಸೌಹಾರ್ದದ ಆಧಾರವಿಲ್ಲದ ಸ್ವಾತಂತ್ರ್ಯ, ಸ್ವಾತಂತ್ರ್ಯವನ್ನು ಆಹುತಿ ತೆಗೆದು ಕೊಳ್ಳುವ ಸಮತೆಗಳ ಸಾಕ್ಷಾತ್ಕಾರ ಕ್ಷಣಭಂಗುರವಾಗುವುದೆಂಬ ಐತಿಹಾಸಿಕ ಪಾಠವನ್ನು ಮನವರಿಕೆ ಮಾಡಿಕೊಡುವ ಪ್ರಯತ್ನ ಶ್ರೀ ಕೆ. ಎಸ್. ಎನ್, ಅವರ 'ವಿಶ್ವಜ್ಯೋತಿಗಳು'.

ಈ ಅಮೂಲ್ಯ ಮಾನವೀಯ ತತ್ವಗಳನ್ನು ದಿಟ್ಟತನದಿಂದ ಆಚರಣೆಗೆ ತಂದ ಲಿಂಕನ್, ಲೆನಿನ್, ಗಾಂಧೀ ಇವರ ವಿಚಾರಧಾರೆಯನ್ನು ವಿದ್ಯಾರ್ಥಿ ವೃಂದಕ್ಕೆ ಪರಿಣಾಮಕಾರಿಯಾದ ರೀತಿಯಲ್ಲಿ ಮನವರಿಕೆ ಮಾಡಿಕೊಡುವ ತೀವ್ರ ಅಗತ್ಯತೆಯನ್ನು ಶ್ರೀ ನಾರಾಯಣಸ್ವಾಮಿಯವರು ಪೂರ್ಣಗೊಳಿಸಿದ್ದಾರೆ. ಈ ಪುಟ್ಟ ಗ್ರಂಥ ವಿದ್ಯಾವಂತ ಯುವಜನರಲ್ಲಿ ಪ್ರಚಾರವಾದರೆ ಇಂದಿನ ನಮ್ಮ ನಾಡಿನ ಯುವಕ ವರ್ಗಕ್ಕೆ ಒಂದು ವರಪ್ರಸಾದವಾದೀತೆಂದು ನಂಬುತ್ತೇನೆ. ಲಿಂಕನ್, ಲೆನಿನ್ ಮತ್ತು ಗಾಂಧೀ ಅವರ ಜೀವನದಲ್ಲಿ ನಡೆದ ಮುಖ್ಯ ಮುಖ್ಯ ವಾದ ಘಟನೆಗಳನ್ನು ಸರಳವೂ ಸ್ವಾರಸ್ಯವೂ ಆದ ಶೈಲಿಯಲ್ಲಿ ಈ ಗ್ರಂಥಕರ್ತರು ಓದುಗರ ಮುಂದಿಟ್ಟಿದ್ದಾರೆ. ಬೇಸರಗೊಳಿಸುವ ಒಂದು ಪುಟವೂ ಈ ಗ್ರಂಥ ದಲ್ಲಿ ಕಾಣಬರುವುದಿಲ್ಲವೆಂದು ಸಂತೋಷದಿಂದ, ತೃಪ್ತಿಯಿಂದ ಹೇಳಬಯಸು ತ್ತೇನೆ. ಈ ನನ್ನ ಅನುಭವ ಮತ್ತೆಲ್ಲ ಪಾಠಕರ ಅನುಭವವೂ ಆದೀತೆಂದು ನನಗೆ ಭರವಸೆಯಿದೆ.

ಗಾಂಧೀ ವಿಚಾರ ಪರಿಷತ್ತಿನ ಮುಂದಿನ ಹೊತ್ತಿಗೆಗಳಿಗೆ ಈ ಪುಸ್ತಕ ನಾಂದಿಯಾಗಲೆಂದು ಹಾರೈಸುತ್ತೇನೆ.

ಎಂ. ಯಾಮುನಾಚಾರ್ಯ
ಗೌರವ ನಿರ್ದೇಶಕ
'ಗಾಂಧೀ ಭವನ'
ಮಾನಸಗಂಗೋತ್ರಿ, ಮೈಸೂರು

ಕೃಷ್ಣಜನ್ಮಾಷ್ಟಮಿ
8-9-1966
ಮೈಸೂರು

ಯದ್ಯದ್ವಿಭೂತಿ ಮತ್ಸತ್ತ್ವಂ
ಶ್ರೀಮದೂರ್ಜಿತಮೇವವಾ ।
ತತ್ತದೇವಾವಗಚ್ಛತ್ವಂ
ಮಮತೇಜೋಽಂಶ ಸಂಭವಮ್ ॥

—ಭಗವದ್ಗೀತಾ.

ಪರಿವಿಡಿ

ಗ್ರಂಥಕರ್ತರು

ಶ್ರೀ ಕೆ. ಎಸ್. ನಾರಾಯಣಸ್ವಾಮಿ ಪ್ರಮುಖ ರಚನಾತ್ಮಕ ಕಾರ್ಯಕರ್ತರು. ಗಾಂಧೀ ಸಾಹಿತ್ಯ ಕ್ಷೇತ್ರದಲ್ಲಿ ಕಳೆದ ಇಪ್ಪತ್ತೈದು ವರ್ಷಗಳಿಂದ ಕೃಷಿ ಮಾಡಿದ್ದಾರೆ. ಮೈಸೂರಿನ ಗಾಂಧೀ ವಿಚಾರ ಪರಿಷತ್, ಗಾಂಧೀ ವಿದ್ಯಾಲಯಗಳನ್ನು ಕಟ್ಟಿ ನಡೆಸಿದರು. ಗ್ರಾಮ ಸೇವಾನಿಲಯ, ಚೇತನ ಪ್ರಕಾಶನ. ತತ್ವ ಪ್ರಚಾರ ಕೇಂದ್ರ, ಖಾದಿ ಸಹಕಾರ ಸಂಘ. ವಯಸ್ಕರ ಶಿಕ್ಷಣ ಸಮಿತಿಗಳಲ್ಲಿ ಕಾರ್ಯ ನಿರ್ವಹಿಸಿದರು. ಪ್ರೊ|| ಯಾಮುನಾಚಾರ್ಯರ ನಿಕಟಾನುವರ್ತಿಗಳಾಗಿ ಗಾಂಧೀ ಗ್ರಂಥಮಾಲೆಯ ಸಂಪಾದನೆ ಪ್ರಕಟಣೆಗಳಲ್ಲಿ ಪ್ರಧಾನ ಪಾತ್ರ ವಹಿಸಿದರು.

ಕರ್ನಾಟಕ ಸರ್ವೋದಯ ಮಂಡಲ ವಿಶ್ವವಿದ್ಯಾನಿಲಯ ಗಾಂಧೀ ಭವನಗಳ ಕಾರ್ಯಕಾರಿಣಿ ಸದಸ್ಯರು. ತೆಂಡೂಲ್ಕರರ 'ಮಹಾತ್ಮ' ಸಂಪುಟಗಳ ಅನುವಾದಕರಲ್ಲೊಬ್ಬರು. ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ ಅಧ್ಯಕ್ಷರಾಗಿ "ವಿನೋಬಾ ಗ್ರಂಥಮಾಲೆ"ಯ ಪ್ರಧಾನ ಸಂಪಾದಕರಾಗಿದ್ದಾರೆ.

'ಭೂದಾನಯಜ್ಞ', 'ಸತ್ಯಾನ್ವೇಷಕನ ಜೈತ್ರಯಾತ್ರೆ'. 'ಗಾಂಧೀ ದೀಪ'. 'ಮಹದೇವದೇಸಾಯಿ' ಮುಂತಾದ ಹಲವು ಸ್ವತಂತ್ರ ಕೃತಿಗಳಲ್ಲದೆ ಅನೇಕ ಲೇಖನಗಳು ವಿವಿಧ ಸಂಗ್ರಹಗಳಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಈಗ ಬೆಂಗಳೂರಿನ ಗಾಂಧೀ ಶಾಂತಿ ಪ್ರತಿಷ್ಠಾನ ಕೇಂದ್ರದ ಮುಖ್ಯಸ್ಥರು. ಅಖಿಲ ಭಾರತ ಗಾಂಧೀ ಶಾಂತಿ ಪ್ರತಿಷ್ಠಾನದ ಆಜೀವ ಕಾರ್ಯಕರ್ತರು.

ಪ್ರಕಾಶಕರು

ಜೈ ಜಗತ್

ಮಾನವಜಗತ್ತಿನ ಇತಿಹಾಸ ಒಂದು ರೋಮಾಂಚಕಾರೀ ಕಥೆ. ವಿಶ್ವದ ಸಮಸ್ತ ಮಾನವರೂ ಒಂದು ಬೃಹದ್ ವ್ಯವಸ್ಥೆಯ ಕನಸು ಕಾಣುತ್ತಿರುವ ನಮ್ಮ ಕಾಲ ಎಲ್ಲಿ. ಪ್ರಕೃತಿಯ ಮಡಿಲಲ್ಲಿ ಸಣ್ಣ ಸಣ್ಣ ಆದಿವಾಸೀ ಸಮಾಜಗಳಾಗಿ ಪರಸ್ಪರ ಸಂಪರ್ಕವೇ ಇಲ್ಲದೆ ಸಹಸ್ರಾರು ವರ್ಷಗಳು ಬಾಳಿದ ಇತಿಹಾಸಪೂರ್ವ ಮನುಜಕುಲವೆಲ್ಲಿ! ಆದರೂ ಅಂದಿಗೂ ಇಂದಿಗೂ ಒಂದು ಸಂತತ ಸೂತ್ರವಾಗಿ ಹರಿದುಬಂದ ಮಹತ್ವಾಕಾಂಕ್ಷೆಗಳು ಮಾನವನ ಸ್ಮೃತಿಯಲ್ಲಿ ಅಚ್ಚಳಿಯದೆ ಉಳಿದಿವೆ. ನಲವತ್ತು ಸಹಸ್ರ ವರ್ಷಗಳಿಗೂ ಮೀರಿ ಮನುಷ್ಯ ಸಮಾಜಜೀವಿಯಾಗಿ ಬಾಳಿದ್ದಾನೆ ಎನ್ನುತ್ತಾರೆ ಮಾನವ ಶಾಸ್ತ್ರ ಪಂಡಿತರು. ಬಹಳ ಪ್ರಯಾಸದಿಂದ ಸಿಕ್ಕಿರುವ ಸಾಕ್ಷ್ಯಗಳಿಂದ ನಮ್ಮ ಇತಿಹಾಸ ನಾಲ್ಕೈದು ಸಹಸ್ರ ವರ್ಷಗಳಿಗೆ ಮೀರಿ ಹೋಗುವುದಿಲ್ಲ. ಅದರಲ್ಲಿ ಸ್ಪಷ್ಟ ವಿಮರ್ಶೆಗೆ ಸಿಕ್ಕುವ ಕಾಲ ಎರಡು ಮೂರು ಸಹಸ್ರ ವರ್ಷಗಳು ಮಾತ್ರ. ನೆನಪಿನ ಪದರ ಪದರಗಳಲ್ಲಿ ಹಾಸುಹೊಕ್ಕಾಗಿರುವ ಈ ಕಾಲಪ್ರವಾಹದ ಮೈಲಿಗಲ್ಲುಗಳು ಆದೆಂತಹ ಅದ್ಭುತ ರಮ್ಯ ಚಿತ್ರಗಳನ್ನು ಮೂಡಿಸಬಲ್ಲವು! ಅಗಣಿತ ಗುಣವಿಶೇಷಗಳ ಸಮಸ್ತ ಸಂಕಲನವಾದ ವಿಶ್ವರೂಪದರ್ಶನವನ್ನು ಬಯಸಿದ ಅರ್ಜುನ. ಪರಿಮಿತ ಮನಸ್ಸಿಗೆ ಆ ವಿರಾಡ್ರೂಪ ಕಣ್ಣು ಕೋರೈಸುವಂತಾಗಿ ಮತ್ತೆ ತನ್ನ ಆರಾಧ್ಯ ದೇವತೆ ಸೌಮ್ಯಮೂರ್ತಿ ಶ್ರೀಕೃಷ್ಣನ ಮಾನವರೂಪವನ್ನೇ ಯಾಚಿಸಿ ಪಡೆದ. ಕಾಲ ದೇಶಗಳ ಸಮಸ್ತ ಘಟನೆಗಳೂ ಅಣುರೂಪಿ ಪರಮಾತ್ಮನಲ್ಲೂ ಪೂರ್ಣವಾಗಿ ಪ್ರತಿಬಿಂಬಿತವಾಗುವುದು ನಿತ್ಯ ಸತ್ಯ. ಅಂತೆಯೇ ಈ ಅನಾದಿ ಅನಂತ ಕಾಲಪ್ರವಾಹದ ನಿರಂತರ ಪುಣ್ಯವಾಹಿನಿಯ ದಿವ್ಯಾಂಶಗಳೆಲ್ಲವೂ ಪರಿಮಿತ ಮಾನವ ಸಮಾಜದಲ್ಲೂ ಪೂರ್ಣ ಪ್ರತಿಬಿಂಬಿತವಾಗಿವೆ. ತಲಕಾವೇರಿಯ ಸಣ್ಣ ಝರಿಯಲ್ಲೂ ಶಿವನಸಮುದ್ರದ ಮಹಾಪೂರದಲ್ಲೂ ಕಾವೇರಿಯನ್ನೇ ಗುರ್ತಿಸುತ್ತೇವೆ. ಅಲ್ಲಿ ಕಪಿಲೆ, ಹೇಮಾವತಿ, ಲಕ್ಷ್ಮಣತೀರ್ಥ, ಲೋಕಪಾವನಿಗಳ ಪ್ರತ್ಯೇಕ ಭಾಗಗಳನ್ನು

ಗ್ರಂಥಕರ್ತರು

ಶ್ರೀ ಕೆ. ಎಸ್. ನಾರಾಯಣಸ್ವಾಮಿ ಪ್ರಮುಖ ರಚನಾತ್ಮಕ ಕಾರ್ಯಕರ್ತರು. ಗಾಂಧೀ ಸಾಹಿತ್ಯ ಕ್ಷೇತ್ರದಲ್ಲಿ ಕಳೆದ ಇಪ್ಪತ್ತೈದು ವರ್ಷಗಳಿಂದ ಕೃಷಿ ಮಾಡಿದ್ದಾರೆ. ಮೈಸೂರಿನ ಗಾಂಧೀ ವಿಚಾರ ಪರಿಷತ್, ಗಾಂಧೀ ವಿದ್ಯಾಲಯಗಳನ್ನು ಕಟ್ಟಿ ನಡೆಸಿದರು. ಗ್ರಾಮ ಸೇವಾನಿಲಯ, ಚೇತನ ಪ್ರಕಾಶನ, ತತ್ವ ಪ್ರಚಾರ ಕೇಂದ್ರ, ಖಾದಿ ಸಹಕಾರ ಸಂಘ, ವಯಸ್ಕರ ಶಿಕ್ಷಣ ಸಮಿತಿಗಳಲ್ಲಿ ಕಾರ್ಯ ನಿರ್ವಹಿಸಿದರು. ಪ್ರೊ|| ಯಾಮುನಾಚಾರ್ಯರ ನಿಕಟಾನುವರ್ತಿಗಳಾಗಿ ಗಾಂಧೀ ಗ್ರಂಥಮಾಲೆಯ ಸಂಪಾದನೆ ಪ್ರಕಟಣೆಗಳಲ್ಲಿ ಪ್ರಧಾನ ಪಾತ್ರ ವಹಿಸಿದರು.

ಕರ್ನಾಟಕ ಸರ್ವೋದಯ ಮಂಡಲ ವಿಶ್ವವಿದ್ಯಾನಿಲಯ ಗಾಂಧೀ ಭವನಗಳ ಕಾರ್ಯಕಾರಿಣಿ ಸದಸ್ಯರು. ತೆಂಡೂಲ್ಕರರ 'ಮಹಾತ್ಮ' ಸಂಪುಟಗಳ ಅನುವಾದಕರಲ್ಲೊಬ್ಬರು. ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ ಅಧ್ಯಕ್ಷರಾಗಿ "ವಿನೋಬಾ ಗ್ರಂಥಮಾಲೆ"ಯ ಪ್ರಧಾನ ಸಂಪಾದಕರಾಗಿದ್ದಾರೆ.

'ಭೂದಾನಯಜ್ಞ', 'ಸತ್ಯಾನ್ವೇಷಕನ ಜೈತ್ರಯಾತ್ರೆ', 'ಗಾಂಧೀ ದೀಪ', 'ಮಹದೇವದೇಸಾಯಿ' ಮುಂತಾದ ಹಲವು ಸ್ವತಂತ್ರ ಕೃತಿಗಳಲ್ಲದೆ ಅನೇಕ ಲೇಖನಗಳು ವಿವಿಧ ಸಂಗ್ರಹಗಳಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಈಗ ಬೆಂಗಳೂರಿನ ಗಾಂಧೀ ಶಾಂತಿ ಪ್ರತಿಷ್ಠಾನ ಕೇಂದ್ರದ ಮುಖ್ಯಸ್ಥರು. ಅಖಿಲ ಭಾರತ ಗಾಂಧೀ ಶಾಂತಿ ಪ್ರತಿಷ್ಠಾನದ ಆಜೀವ ಕಾರ್ಯಕರ್ತರು.

ಪ್ರಕಾಶಕರು

ಜೈ ಜಗತ್

ಮಾನವಜಗತ್ತಿನ ಇತಿಹಾಸ ಒಂದು ರೋಮಾಂಚಕಾರೀ ಕಥೆ. ವಿಶ್ವದ ಸಮಸ್ತ ಮಾನವರೂ ಒಂದು ಬೃಹದ್ ವ್ಯವಸ್ಥೆಯ ಕನಸು ಕಾಣುತ್ತಿರುವ ನಮ್ಮ ಕಾಲ ಎಲ್ಲಿ, ಪ್ರಕೃತಿಯ ಮಡಿಲಲ್ಲಿ ಸಣ್ಣ ಸಣ್ಣ ಆದಿವಾಸೀ ಸಮಾಜಗಳಾಗಿ ಪರಸ್ಪರ ಸಂಪರ್ಕವೇ ಇಲ್ಲದೆ ಸಹಸ್ರಾರು ವರ್ಷಗಳು ಬಾಳಿದ ಇತಿಹಾಸಪೂರ್ವ ಮನುಜಕುಲವೆಲ್ಲಿ! ಆದರೂ ಅಂದಿಗೂ ಇಂದಿಗೂ ಒಂದು ಸಂತತ ಸೂತ್ರವಾಗಿ ಹರಿದುಬಂದ ಮಹತ್ವಾಕಾಂಕ್ಷೆಗಳು ಮಾನವನ ಸ್ಮೃತಿಯಲ್ಲಿ ಅಚ್ಚಳಿಯದೆ ಉಳಿದಿವೆ. ನಲವತ್ತು ಸಹಸ್ರ ವರ್ಷಗಳಿಗೂ ಮೀರಿ ಮನುಷ್ಯ ಸಮಾಜಜೀವಿಯಾಗಿ ಬಾಳಿದ್ದಾನೆ ಎನ್ನುತ್ತಾರೆ ಮಾನವಶಾಸ್ತ್ರ ಪಂಡಿತರು. ಬಹಳ ಪ್ರಯಾಸದಿಂದ ಸಿಕ್ಕಿರುವ ಸಾಕ್ಷ್ಯಗಳಿಂದ ನಮ್ಮ ಇತಿಹಾಸ ನಾಲ್ಕೈದು ಸಹಸ್ರ ವರ್ಷಗಳಿಗೆ ಮೀರಿ ಹೋಗುವುದಿಲ್ಲ. ಅದರಲ್ಲಿ ಸ್ಪಷ್ಟ ವಿಮರ್ಶೆಗೆ ಸಿಕ್ಕುವ ಕಾಲ ಎರಡು ಮೂರು ಸಹಸ್ರ ವರ್ಷಗಳು ಮಾತ್ರ. ನೆನಪಿನ ಪದರ ಪದರಗಳಲ್ಲಿ ಹಾಸುಹೊಕ್ಕಾಗಿರುವ ಈ ಕಾಲಪ್ರವಾಹದ ಮೈಲಿಗಲ್ಲುಗಳು ಅದೆಂತಹ ಅದ್ಭುತ ರಮ್ಯ ಚಿತ್ರಗಳನ್ನು ಮೂಡಿಸಬಲ್ಲವು! ಅಗಣಿತ ಗುಣವಿಶೇಷಗಳ ಸಮಸ್ತ ಸಂಕಲನವಾದ ವಿಶ್ವರೂಪದರ್ಶನವನ್ನು ಬಯಸಿದ ಅರ್ಜುನ. ಪರಿಮಿತ ಮನಸ್ಸಿಗೆ ಆ ವಿರಾಡ್ರೂಪ ಕಣ್ಣು ಕೋರೈಸುವಂತಾಗಿ ಮತ್ತೆ ತನ್ನ ಆರಾಧ್ಯ ದೇವತೆ ಸೌಮ್ಯಮೂರ್ತಿ ಶ್ರೀಕೃಷ್ಣನ ಮಾನವರೂಪವನ್ನೇ ಯಾಚಿಸಿ ಪಡೆದ. ಕಾಲ ದೇಶಗಳ ಸಮಸ್ತ ಘಟನೆಗಳೂ ಅಣುರೂಪಿ ಪರಮಾತ್ಮನಲ್ಲೂ ಪೂರ್ಣವಾಗಿ ಪ್ರತಿಬಿಂಬಿತವಾಗುವುದು ನಿತ್ಯ ಸತ್ಯ. ಅಂತೆಯೇ ಈ ಅನಾದಿ ಅನಂತ ಕಾಲಪ್ರವಾಹದ ನಿರಂತರ ಪುಣ್ಯವಾಹಿನಿಯ ವಿಪ್ರಾಂಶಗಳೆಲ್ಲವೂ ಪರಿಮಿತ ಮಾನವ ಸಮಾಜದಲ್ಲೂ ಪೂರ್ಣ ಪ್ರತಿಬಿಂಬಿತವಾಗಿವೆ. ತಲಕಾವೇರಿಯ ಸಣ್ಣ ಝರಿಯಲ್ಲೂ ಶಿವನಸಮುದ್ರದ ಮಹಾಪೂರದಲ್ಲೂ ಕಾವೇರಿಯನ್ನೇ ಗುರ್ತಿಸುತ್ತೇವೆ. ಅಲ್ಲಿ ಕಪಿಲೆ, ಹೇಮಾವತಿ, ಲಕ್ಷ್ಮಣತೀರ್ಥ, ಲೋಕಪಾವನಿಗಳ ಪ್ರತ್ಯೇಕ ಭಾಗಗಳನ್ನು

ಅಳೆಯಲು ಸಾಧ್ಯವೆ ? ಅವರೂ ಆ ಮಹಾನ ನದಿಗಳಲ್ಲಿಯೂ ಕಣಕಣದಲ್ಲಿ ಲೀನವಾಗಿರುವುದು ಸತ್ಯ. ಹಾಗೆಯೇ ವಿಶ್ವದ ವಿಭೂತಿಪುರುಷರ ಮಹಾನ್ ಸಂಘಟನೆಗಳ ಅಸಂಖ್ಯಾತ ಜೀವನದಿಗಳ ಪ್ರವಾಹಗಳಿಂದ ಬೆಳೆದು ನಿಂತಿದೆ ನಮ್ಮ ಸಮಕಾಲೀನ ಸಮಾಜ. ಭೂತಕಾಲದ ಬೇರಿನಿಂದುದ್ಭವಿಸಿ ಭವಿಷ್ಯದ ತಳಹದಿಯಾಗುತ್ತಿರುವ ಈ ವರ್ತಮಾನಕಾಲ ಅದೆಷ್ಟು ಕ್ಷಣಿಕ! ಆದರೆ ಆ ಒಂದೊಂದು ಕ್ಷಣವೂ ಮಾನವನ ಇತಿಹಾಸ ಸೌಧದ ಕಣಕಣವಾಗಿ ಸೇರುತ್ತಿರುತ್ತದೆ. ಜೀವನವನ್ನೆಲ್ಲ ಆವರಿಸಿ ನಿಲ್ಲುವ ಮಹತ್ವಾಕಾಂಕ್ಷೆಗಳೂ ಹಾಗೆಯೇ ರೂಪಿತವಾಗುತ್ತ ಸಾಗುತ್ತವೆ. ಒಂದೊಂದು ಕಾಲಕ್ಕೂ ಒಬ್ಬೊಬ್ಬ ಮಹಾಪುರುಷ ಈ ಸಾಮೂಹಿಕ ಸಾಮಾಜಿಕ ಮಹತ್ವಾಕಾಂಕ್ಷೆಗಳ ಮೂರ್ತಸ್ವರೂಪನಾಗಿ ನಿಲ್ಲುತ್ತಾನೆ. ಭವಿಷ್ಯಕಾಲ ಆ ಚಿಲುಮೆಯ ಆಧಾರದಿಂದ ಸಂಘಟಿತವಾಗುತ್ತದೆ. ಆ ಬುನಾದಿಯ ಮೇಲೆ ಸಮಾಜಗಳು ವ್ಯವಸ್ಥಿತವಾಗುತ್ತವೆ. ಹಂತ ಹಂತವಾಗಿ ಬಂದ ಈ ಪ್ರವಾಹ ಜಾಗತಿಕ ಮಹಾಸಂಘಟನೆಯ ಮಹತ್ಕಾರ್ಯದಲ್ಲಿ ತೊಡಗಿರುವುದನ್ನು ಇಂದು ಕಾಣುತ್ತಿದ್ದೇವೆ. ಇದೇ ಜಗತ್ತು ನಮ್ಮದು : ನಾವು ಮಾನವರು : ಮಾನವಕುಲ ಒಂದು : ಮಾನವ ಧರ್ಮ ಒಂದು : ಅದರಿಂದಲೇ ಇಂದಿನ ಘೋಷಣೆ ಜೈ ಜಗತ್.

ಜಗತ್ತಿನ ಸುದೀರ್ಘ ಚರಿತ್ರೆಯಲ್ಲಿ ವಿವಿಧ ಧರ್ಮಗಳು ಸ್ಥಾಪಿತವಾದ ಕಾಲ ಮಹಾಪರ್ವಕಾಲ. ಮಾನವನ ಬಾಳು ಉತ್ಕರ್ಷಮುಖಿ ಸಂಸ್ಕೃತಿಯ ಭವ್ಯದರ್ಶನ ಪಡೆದ ಕಾಲ ಅದು. ಒಂದೇ ಕಾಲಕ್ಕೆ ಪ್ರಪಂಚದ ಎಲ್ಲ ಸುಸಂಘಟಿತ ಸಮಾಜಗಳಲ್ಲೂ ಅಂತರಂಗದ ದಿವ್ಯದರ್ಶನದ ಆಕಾಂಕ್ಷೆ ಬೆಳೆಯತೊಡಗಿತು. ಈ ಆಧ್ಯಾತ್ಮಿಕ ಮಹತ್ವಾಕಾಂಕ್ಷೆ ಜಗತ್ತಿನ ಧರ್ಮಸಂಸ್ಥಾಪಕರಲ್ಲಿ ಮೂರ್ತೀಭವಿಸಿತು. ಯಾವ ಭೌತಿಕ ಸಂಪರ್ಕವೂ ಇಲ್ಲದ ವಿವಿಧ ಸಮಾಜಗಳಲ್ಲಿ ಮಹಾವ್ಯಕ್ತಿಗಳುದಿಸಿದರು. ಪರ್ಶಿಯಾದಲ್ಲಿ ಝರತುಷ್ಟ್ರ, ಗ್ರೀಕ ಸಾಕ್ರೆಟಿಸ್, ಪೈಥಾಗೊರಸ್, ಭಾರತದ ಭಗವಾನ್ ಬುದ್ಧ, ಮಹಾವೀರರು, ಚೀನದ ಕನ್‌ಫ್ಯೂಸಿಯಸ್, ಲಾವೋತ್ಸೆ ಈ ಮಹಾಮುನಿಗಳು ಬಾಳಿಗೆ ಆಧ್ಯಾತ್ಮ ಬೆಳಕಿನ ಗಣಿಗಳಾದರು. ಪರಸ್ಪರ ಸಂಪರ್ಕವಿಲ್ಲದಿದ್ದರೂ ಅವರೆಲ್ಲರೂ ಒಂದೇ ಕಾಲಕ್ಕೆ ಒಂದೇ ರೀತಿಯ ಅನ್ವೇಷಣೆಗಳನ್ನು ಮಾನವಕುಲಕ್ಕೆ ಧಾರೆಯೆರೆದರು. ಎರಡು ಸಾವಿರ ವರ್ಷ ನಮ್ಮ ಸ್ಮೃತಿಪಥದಲ್ಲಿ ಅಚ್ಚಳಿಯದ ಚೈತನ್ಯವಾಗಿ ಉಳಿದಿದೆ

ಅವರ ಉಗ್ರದರ್ಶನ. ಅದೆಂತಹ ಸಾಮ್ಯ! ಎಂತಹ ಸರಳತೆ! ಎಂತಹ ಜೀವನಸೂತ್ರಗಳು! ಇವರೆಲ್ಲರ ಬೋಧೆಗಳಲ್ಲಿ ಒಂದೇರೀತಿಯ ಸಂದೇಶ ತುಂಬಿಕೊಂಡಿರುವುದು ಆಶ್ಚರ್ಯಕರ ಸಂಗತಿ.

ಈ ಕಾಲವನ್ನು ಕುರಿತು ತಮ್ಮ 'ವಿಶ್ವ ಇತಿಹಾಸದ ಇಣುಕುನೋಟ' ಎಂಬ ಗ್ರಂಥದಲ್ಲಿ ಪಂಡಿತ್ ಜವಾಹರಲಾಲ ನೆಹರು ಹೀಗೆ ಬರೆದರು: "ಈ ಕಾಲಕ್ಕೆ ಜಗತ್ತಿನಲ್ಲಿ ಒಂದು ಮಹತ್ತರ ವಿಚಾರ ಅಲೆ ಅಲೆಯಾಗಿ ಹಬ್ಬಿರಬೇಕು. ಪ್ರಚಲಿತ ಸ್ಥಿತಿಯ ಬಗ್ಗೆ ಅಸಮಾಧಾನ ಅತೃಪ್ತಿ, ಯಾವುದೋ ಉತ್ತಮ ಪರಿವರ್ತನೆಯ ತೀವ್ರಾಕಾಂಕ್ಷೆಗಳು ಮೂಡಿ ನಿಂತಿತ್ತು. ಮಹಾನ್ ಧರ್ಮಸಂಸ್ಥಾಪಕರೆಲ್ಲ ಪರಿಸ್ಥಿತಿಯನ್ನು ಬದಲಿಸಿ ಉನ್ನತಿಯ ಪಥದಲ್ಲಿ ತಮ್ಮ ಸಮಕಾಲೀನ ಜನರನ್ನು ಕೊಂಡೊಯ್ಯಬಯಸಿದ, ದುಃಖಿತಮಾನವ ಹಾದಿಯಲ್ಲಿ ಲೋಕವನ್ನು ನಡೆಸಲು ಹವಣಿಸಿದ, ಅನ್ವೇಷಕರೇ. ವಾಸ್ತವ ಜಗತ್ತಿನ ಅಕೃತ್ಯ ಅನೀತಿಗಳನ್ನು ನಿರ್ಭಯವಾಗಿ ಖಂಡಿಸಿದ ಕ್ರಾಂತಿಪುರುಷರು ಇವರು. ಸಂಪ್ರದಾಯ ಬದ್ಧರಾಗಿ, ಕುರುಡು, ಪ್ರಗತಿ ಕುಂಠಿತವಾದಾಗಲೆಲ್ಲ ಧೈರ್ಯಶಾಲಿಗಳಾಗಿ ಅದನ್ನು ಕಿತ್ತೊಗೆದವರು. ಎಲ್ಲಕ್ಕಿಂತ ಹೆಚ್ಚಾಗಿ ಶತ ಶತಮಾನಗಳ ತರುವಾಯದ ತಲೆಮಾರುಗಳಿಗೆ ಅತ್ಯುನ್ನತ ಆದರ್ಶಗಳ ಅನುಷ್ಠಾನ ಮಾರ್ಗಗಳನ್ನು ತಮ್ಮ ಧನ್ಯಜೀವನ ಬೋಧಿಸಿ ಧಾರೆಯೆರೆದು, ಅಸಂಖ್ಯಾತ ಮಾನವರ ಕಲ್ಯಾಣ ಕಾರಕ ಶಕ್ತಿಗಳಾದವರು."

ಹಿಂದೂಧರ್ಮ, ಪಾರಸಿ, ಜೈನ, ಬೌದ್ಧ, ಕ್ರಿಸ್ತ, ಮಹಮ್ಮದೀಯ ಮತಗಳೆಲ್ಲ ಮಾನವಚರಿತ್ರೆಯಲ್ಲಿ ಸುಮಾರು ಒಂದು ಸಾವಿರ ವರ್ಷಗಳ ಅವಧಿಯಲ್ಲಿ ಸ್ಥಾಪಿತವಾದುವು. ಪ್ರಪಂಚದ ಬಹು ಭಾಗದ ಜನ ಈ ಮತಗಳಲ್ಲಿ ಒಂದಲ್ಲ ಒಂದಕ್ಕೆ ಶರಣುಬಂದವರು. ಮತಧರ್ಮ ಬಾಳಿನ ಅವಿಭಾಜ್ಯ ಅಂಗವಾಗಿ ಆಧ್ಯಾತ್ಮಿಕ ಮೌಲ್ಯಗಳು ಜೀವನದ ಹಾಸುಹೊಕ್ಕಾದವು. ಅಲ್ಲಿಂದೀಚೆಗೆ ಯಾವ ಹೊಸ ಮತ ಧರ್ಮವೂ ಸ್ಥಾಪಿತವಾಗಲಿಲ್ಲ. ಆ ಮಹಾಯುಗದ ಪ್ರಧಾನ ಗುಣ ಆಧ್ಯಾತ್ಮಿಕ ಅನ್ವೇಷಣೆ: ನೈತಿಕಾದರ್ಶಗಳ ಪ್ರತಿಷ್ಠಾಪನೆ: ಸಮಾಜ ಪೋಷಕ ಧಾರಣಶಕ್ತಿಗಳ ಸಿದ್ಧಿ. ಕೋಟ್ಯಂತರ ಹೃದಯಗಳಲ್ಲಿ ಅವ್ಯಕ್ತ ತರಂಗಗಳಾಗಿ ಜನಿಸಿಬಂದ ಈ ಮಹತ್ವಾಕಾಂಕ್ಷೆಯ ಉತ್ಥಾನ, ಅದರ ಸಾಧನೆ ಅದರ ಸಿದ್ಧಿಗಳ ಮೂರ್ತಸ್ವರೂಪವಾಗಿ ನಿಂತಿದೆ ಧರ್ಮಸಂಸ್ಥಾಪಕರ ಜ್ಯೋತಿಪಂಕ್ತಿ.

ಈ ಕ್ರಾಂತಿಯುಗ ಕಳೆದು ಸಾವಿರ ವರ್ಷಗಳುರುಳಿದುವು. ಮತ್ತೊಮ್ಮೆ ಜಗತ್ತಿನ ಇತಿಹಾಸ ಒಂದು ಹೊಸ ಸುಳಿಯಲ್ಲಿ ರಭಸದಿಂದ ತಿರುಗಹತ್ತಿತು. ಮೂಲತತ್ತ್ವಗಳ ವಾಸ್ತವ ಅನುಷ್ಠಾನದ ಆಧಾರ ಸಮಾಜಜೀವನದಲ್ಲಿ ಕಳಚಿಬಿತ್ತು. ಶುಷ್ಕತತ್ತ್ವಗಳ ಡಾಂಭಿಕ ಜಡ ಆಚರಣೆಗಳಿಗೆ ಮಹತ್ವ ದೊರೆತು ಎಲ್ಲೆಲ್ಲೂ ಸಾಮಾನ್ಯಜನದ ಬಾಳು ದುರ್ಭರ ಶೋಷಣೆಗೆ ಒಳಗಾಯಿತು. ಸಮಾಜದ ಸಾಮೂಹಿಕ ಮನಸ್ಸು ಸಂವೇದನೆಯಿಂದ ಕಂಪಿಸಿ ಯುಗಧರ್ಮದ ಹೊಸ ಆವಿಷ್ಕಾರವನ್ನು ಆಕಾಂಕ್ಷಿಸಿತು.

ಈ ಕಾಲಕ್ಕೆ ಯಾವ ಹೊಸ ಮತ ಸ್ಥಾಪನೆಯಾಗಲೀ ಧರ್ಮಸಂಸ್ಥೆಯ ಜನ್ಮವಾಗಲೀ ಆಗಲಿಲ್ಲ. ಜಗತ್ತಿನಲ್ಲೆಲ್ಲ ಸಾಧು ಸಂತರ ಒಂದು ಮಹಾ ಪೂರವೇ ಹರಿದುಬಂತು. ಭಾರತದ ಅದ್ಯಂತ ಸಂತಶ್ರೇಷ್ಠರನೇಕರು ಜನಿಸಿದರು. ಶಂಕರ. ರಾಮಾನುಜ, ಮಧ್ವರು. ಚೈತನ್ಯ ತುಲಸೀದಾಸ. ಕಬೀರ. ಮೀರಾ. ಬಸವಣ್ಣ : ಹರಿದಾಸರು ಶಿವಶರಣರು : ಕೇವಲ ಕೆಲವು ಶತಮಾನಗಳೊಳಗೆ ಆಗಿಹೋದರು. ಮಧ್ಯಪ್ರಾಚ್ಯ ದೇಶಗಳಲ್ಲಿ ಮುಸಲ್ಮಾನ ಸೂಫಿಗಳು ಯೂರೋಪಿನಲ್ಲಿ ಕ್ರೈಸ್ತ ಸಂತರು ಈ ಪಂಕ್ತಿಗೇ ಸೇರಿದವರು. ಅಂದಿನ ಪ್ರಧಾನ ಯುಗಧರ್ಮ ಸಮಾಜ ಸಂಸ್ಕರಣ. ಸನಾತನ ತಾತ್ವಿಕ ಮೌಲ್ಯಗಳ ಪುನರುತ್ಥಾನ ; ಬಾಳಿಗೊಂದು ಸತ್ವಪೂರ್ಣ ನಂಬಿಕೆ. ಈ ಸಾಧು ಸಂತರ ಪರಂಪರೆ ಮಹಾ ಕ್ರಾಂತಿಯನ್ನು ತಂದುಕೊಟ್ಟಿತು. ಆಚಾರ ವ್ಯವಹಾರಗಳಲ್ಲಿ ಅತ್ಯಗಾಧ ಪರಿವರ್ತನೆಯಾಯಿತು. ಜೀವನನಿಷ್ಠರಾದ ಸಾಮಾನ್ಯ ಜನ ತಮ್ಮ ಬಾಳನ್ನು ಈ ಹೊಸ ಬೆಳಕಿನಲ್ಲಿ ರೂಪಿಸಿಕೊಂಡರು. ಎಲ್ಲೆಲ್ಲೂ ಹೊಸ ಚೈತನ್ಯ ಸಂಚರಿಸತೊಡಗಿತು. ರಾಷ್ಟ್ರಗಳು. ರಾಜ್ಯಗಳು. ಸಾಮಾಜಿಕ ವ್ಯವಸ್ಥೆಗಳು ಈ ಮಹಾ ಸಾಧುವರ್ಯರ ಬಾಳಸಂದೇಶವನ್ನವಲಂಬಿಸಿ ರಚಿತವಾದವು.

ಅಂದಿನ ಯುಗದ ಬೇಡಿಕೆ ಮಾನವನ ನೈತಿಕ ಪರಿವರ್ತನೆ. ಸಾಮಾಜಿಕ ಮೌಲ್ಯಗಳ ಪ್ರತಿಷ್ಠಾಪನೆ ಮತ್ತು ವ್ಯಕ್ತಿಜೀವನದ ಪಾರಿಶುದ್ಧತೆ. ಈ ಆಕಾಂಕ್ಷೆಗಳಿಗೆ ರೂಪುಕೊಟ್ಟು ಮಾರ್ಗದರ್ಶನ ಮಾಡಿದ ಸಾಧು ಸಂತರ ಪರಂಪರೆ ಇತಿಹಾಸದ ಒಂದು ಉಜ್ವಲ ಪರಿಚ್ಛೇದ.

ಹಿಂದಿನ ಎರಡು ಮಹಾ ಯುಗಪರಿವರ್ತನೆಗಳಾದ ಕಾಲಕ್ಕೆ ಅವರ ಪೂರ್ಣ ಪ್ರಭಾವ ಮೈದೋರಲು ಅನೇಕ ಶತಶತಮಾನಗಳುರುಳಬೇಕಾಯಿತು.

ಅಲ್ಲಿಂದೀಚೆಗೆ ಈಗ ಆರೇಳು ಶತಮಾನಗಳುರುಳಿದ ನಂತರ ಮತ್ತೊಂದು ಮಹಾಯುಗ ಜಗತ್ತಿನ ಇತಿಹಾಸದಲ್ಲಿ ಸಂಭವಿಸಿದೆ. ಕಾಲ ದೇಶಗಳ ಪ್ರಮಾಣ ವಿಜ್ಞಾನದ ಪ್ರಗತಿಯಿಂದ ಕುಗ್ಗಿಹೋಗಿದೆ. ಪ್ರಪಂಚದ ಸಂಪರ್ಕ ವ್ಯವಹಾರ ಗಳು ನಿಕಟವಾದವು. ಅತಿ ತೀವ್ರವಾಗಿ ವಿಚಾರ ತರಂಗಗಳು ಎರಡು ಧ್ರುವಗಳ ಮಧ್ಯೆ ಪ್ರಬಲವಾಗಿ ಸಂಚರಿಸತೊಡಗಿದವು. ಅಷ್ಟೇ ಕ್ಷಿಪ್ರವಾಗಿ ಅಷ್ಟೇ ಅಗಾಧವಾಗಿ ಆಧುನಿಕ ನಾಗರಿಕತೆಯ ದುಷ್ಪರಿಣಾಮುಗಳೂ ಆವರಿಸಿ ನಿಂತವು. ವೈಜ್ಞಾನಿಕ ಕುಶಲತೆ ಮಾನವನ ದುರಾಸೆಯ ಪ್ರಬಲ ಅಸ್ತ್ರವಾಗಿಬಿಟ್ಟಿತು. ನಾಗರಿಕತೆಯ ನಾಗಾಲೋಟದಲ್ಲಿ ಹಿಂದೆಂದೂ ಕಾಣದ ಘೋರ ದಾಸ್ಯ, ದಾರಿದ್ರ್ಯ, ಅಸಮತೆಗಳು ಉಂಟಾದುವು. ಔದ್ಯೋಗಿಕ ಕ್ರಾಂತಿ, ತಾಂತ್ರಿಕ ಸಾಧನೆಗಳು, ಧನಪ್ರಧಾನ ಆರ್ಥಿಕ ವ್ಯವಸ್ಥೆ, ಕೇಂದ್ರೀಕೃತ ರಾಜ್ಯಾಧಿಕಾರ ಎಲ್ಲವೂ ಬಹುಸಂಖ್ಯಾತರ ರಾಕ್ಷಸೀಶೋಷಣೆಗೆ ಸಾಧನಗಳಾದವು. ಅಸಹನೀಯ ವೇದನೆಯಿಂದ ಮತ್ತೊಂದು ಮಹಾಕ್ರಾಂತಿಯ ಕಿಡಿ ಸಿಡಿದೊಡೆಯಿತು. ಅತಿ ನಿಕಟ ಸಂಪರ್ಕದಿಂದ ಕ್ರಾಂತಿಕಾರಕ ವಿಚಾರ ಪ್ರವಾಹಕ್ಕೂ ಅನುಕೂಲ ದೊರಕಿತು. ಸ್ವಾತಂತ್ರ್ಯ-ಸಮತೆಗಳಿಗಾಗಿ ಏಕಪ್ರಕಾರವಾದ ಉತ್ಕಟಾಕಾಂಕ್ಷೆ ಜಗದ್ವ್ಯಾಪಕವಾಗಿ ವಿದ್ಯುದ್ವೇಗದಿಂದ ಪ್ರತಿಧ್ವನಿಸತೊಡಗಿತು. ಇತ್ತೀಚಿನ ಒಂದು ಶತಮಾನದ ಅಸದೃಶ ಘಟನಾವಳಿಗಳೆಲ್ಲವೂ ಈ ಯುಗವಾಣಿಯ ಪ್ರತಿಧ್ವನಿ.

ಅಗ್ರಪಂಕ್ತಿಯ ಮೂರು ಮಹಾರಾಷ್ಟ್ರಗಳ ಪ್ರಖ್ಯಾತ ಪುರುಷರಾಗಿ ರಾಷ್ಟ್ರಪಿತರು ಎಂದು ಗೌರವ ಪಡೆದ ಅಮೆರಿಕದ ಏಬ್ರಹಾಂ ಲಿಂಕನ್, ರಷ್ಯದ ಲೆನಿನ್ ಮತ್ತು ಭಾರತದ ಮಹಾತ್ಮ ಗಾಂಧಿ ಆಧುನಿಕ ಯುಗವಾಣಿಯ ದಿವ್ಯವಾಹಕರಾಗಿ ಈ ಶತಮಾನದ ವಿಭೂತಿಪುರುಷರೆನಿಸಿಕೊಂಡಿದ್ದಾರೆ. ಹೊಸ ಬಾಳಿನ ಹೊಸಿಲಿನಲ್ಲಿ ನಿಂತ ಹದಿನೆಂಟು ಹತ್ತೊಂಬತ್ತನೆ ಶತಮಾನಗಳ ವಿಚಾರಮಂಥನಕ್ಕೆ ವಾಸ್ತವಿಕ ದಿನಜೀವನದಲ್ಲಿ ರೂಪುಕೊಟ್ಟ ಕೀರ್ತಿ ಇವರದು ಅವರು ನುಡಿದ ನುಡಿ, ನಡೆದ ನಡೆ, ಬಾಳಿದ ಬಾಳು ಜನಸ್ತೋಮದ ಭಾವನೆ ಗಳಿಗೆ ಆದರ್ಶವಾಯಿತು. ಅವರು ತಂದ ವಿಚಾರಕ್ರಾಂತಿ ಏಕೈಕ ವಿಶ್ವಭಾವನೆಗೆ ಬುನಾದಿಯಾಯಿತು.

ಸ್ವಾತಂತ್ರ್ಯ ಸಮತೆ, ಭ್ರಾತೃಭಾವ ಈ ಮಹಾ ಘೋಷಣೆ ಫ್ರಾನ್ಸಿನ ಜನತೆಯ ಅಂತರಾಳದಿಂದೆದ್ದು ಜಗದ್ವ್ಯಾಪಕ ಕ್ರಾಂತಿಪರಂಪರೆಗೆ

ಸ್ಫೋಟಕವಾಯಿತು. 1789ರ ಜುಲೈ 14 ರಂದು ಪ್ಯಾರಿಸ್ಸಿನಲ್ಲಿ ಭೋರ್ಗರೆದೆದ್ದ ಪ್ರಚಂಡ ಕ್ರಾಂತಿ ಅಲ್ಲಿನ ಶ್ರೀಮಂತಶಾಹಿ ನಿರಂಕುಶರಾಜತ್ವಗಳನ್ನೂ ಅದರೊಡನೆ ಸಹಸ್ರಾರು ಕೊಳೆತು ನಾರುತ್ತಿದ್ದ ಪರಂಪರಾನುಗತ ಸಾಂಪ್ರದಾಯಿಕ ಸಂಸ್ಥೆಗಳನ್ನೂ ತೊಡೆದುಹಾಕಿಬಿಟ್ಟಿತು. ಈ ರಾಜ್ಯಕ್ರಾಂತಿಯ ಫಲವಾಗಿ ಹೊಸ ಭಾವನೆಗಳುಕ್ಕಿಬಂದವು. ಮಾನವನೆದೆಯ ಸಂವೇದನೆ ಪ್ರಕಟವಾಯಿತು. ಮಾನವನ ಮನುಷ್ಯತ್ವದ ಹಕ್ಕು ನಿರ್ಭೀತವಾಗಿ ಘೋಷಿಸಲ್ಪಟ್ಟಿತು. ಅಂದು ಪ್ರತಿಧ್ವನಿತವಾದ ಡಿಕ್ಲರೇಷನ್ ಆಫ್ ದಿ ರೈಟ್ಸ್ ಆಫ್ ಮ್ಯಾನ್, ಸ್ವಾತಂತ್ರ್ಯ ಸಮತೆಗಳ ಮೊದಲ ಹೆಜ್ಜೆ.

ಪಂಡಿತ ಜವಹರಲಾಲರು ಮಗಳಿಗಾಗಿ ಬರೆದ ಜಗತ್ ಕಥಾವಲ್ಲರಿಯಲ್ಲಿ ಮಾರ್ಮಿಕವಾಗಿ ಹೀಗೆ ನುಡಿದಿದ್ದಾರೆ: "ಫ್ರಾನ್ಸಿನ ಘಟನೆ ಭಯಂಕರ ಸ್ವರೂಪದ್ದೇ ಆಯಿತು. ಆದರೆ ಘೋರ ರೋಗಗಳಾದ ಬಡತನ ನಿರುದ್ಯೋಗಗಳೊಡನೆ ಹೋಲಿಸಿದರೆ ಅದು ಕೇವಲ ಸೊಳ್ಳೆಯ ಕಡಿತವೇ. ಸಾಮಾಜಿಕ ಕ್ರಾಂತಿಗಳ ಬೆಲೆ ಅದೆಷ್ಟೇ ಅಗಾಧವೆಚ್ಚವೆನಿಸಿದರೂ ಈ ಘೋರ ರೋಗಗಳಿಗಿಂತ ಅಥವಾ ಅವು ಆಗಾಗ್ಗೆ ತಂದೊಡ್ಡುವ ಮಹಾ ಯುದ್ಧಗಳಿಗಿಂತ ಹೆಚ್ಚೇನೂ ಅಲ್ಲ." ವಿಶ್ವದಲ್ಲೆಲ್ಲ ಶ್ವೇತವರ್ಣ ಜನಾಂಗವೇ ಶ್ರೇಷ್ಠರೆಂಬ ಅಹಂಕಾರ ಬೆಳೆಯಲು ಔದ್ಯೋಗಿಕ ಕ್ರಾಂತಿ ಅವಕಾಶ ಮಾಡಿಕೊಟ್ಟಿತು. ಹಿಡಿಯಷ್ಟು ಜನಾಂಗದ ಭೋಗಪೂರಿತ ವಿಲಾಸ ಜೀವನಕ್ಕೆ ಆಧಾರವಾಗಿದ್ದ ಅಸಂಖ್ಯಾತ ವರ್ಣೀಯ ಜನಾಂಗಗಳನ್ನೆಲ್ಲ ದರ್ಪದಿಂದ ಧಿಕ್ಕರಿಸಿ ಎರಡನೇ ದರ್ಜೆಯ ಮಾನವರು ಎಂಬ ಅವಮಾನಕ್ಕೆ ಗುರಿಮಾಡಿದರು. ಯೂರೋಪಿನ ಜನ ವಸಾಹತುಶಾಹಿಯ ಅತ್ಯುನ್ನತ ಶಿಖರವನ್ನೇರಿದ್ದ ಸಮಯದಲ್ಲೇ ಹೊಸದಾಗಿ ರಾಷ್ಟ್ರಜೀವನವನ್ನು ರೂಪಿಸಿಕೊಳ್ಳುತ್ತಿದ್ದ ಅಮೇರಿಕದಲ್ಲಿ ಮಹಾಶಯ ಲಿಂಕನ್ "ಗುಲಾಮಗಿರಿಯ ಘೋರ ದೌರ್ಜನ್ಯವನ್ನು ತೊಡೆದು ಮನುಷ್ಯತ್ವಕ್ಕೆ ಗೌರವ ಕೊಡಿ" ಎಂದನು. ಸ್ವಾತಂತ್ರ್ಯ ಸಮರದ ಮೊದಲ ಹೆಜ್ಜೆ ಅಲ್ಲಿ ಅಂಕುರವಾಯಿತು. ಲಕ್ಷಾಂತರ ನೀಗ್ರೋ ಗುಲಾಮರು ಗೌರವಾನ್ವಿತ ಪ್ರಜೆಗಳಾದರು. ಅದಮ್ಯ ಕ್ರಾಂತಿ ಶಕ್ತಿಯ ಪ್ರಥಮ ಜಯಘೋಷ ಮೊಳಗಿತು.

ಸ್ವಾರ್ಥಬುದ್ಧಿಯ ನಿರಂಕುಶಬಂಡವಾಳಶಾಹಿ ಈ ಸ್ವಾತಂತ್ರ್ಯ ಘೋಷಣೆಯನ್ನು ಆರ್ಥಿಕ ದಾಸ್ಯದ ವ್ಯೂಹರಚನೆಯಲ್ಲಿ ಮತ್ತೆ ಸೆರೆಹಿಡಿದು ನಿಷ್ಫಲಗೊಳಿಸಿತು.


ಸಮಾಜದಲ್ಲಿ ಸಮತೆಯಿಲ್ಲದೆ ಸ್ವಾತಂತ್ರ್ಯಕ್ಕೆ ಬೆಲೆಯುಂಟೆ? ದುಡಿಮೆಯ ಸಾಮಾಜಿಕ ಘನತೆ ಸುಪ್ರತಿಷ್ಠಿತವಾಗದೆ, ಸಂಪತ್ಸಮೃದ್ಧಿಯ ಸಮಾನ ವಿತರಣೆ ಇಲ್ಲದೆ, ಸ್ವಾತಂತ್ರ್ಯಕ್ಕೆ ಬೆಲೆಯಿಲ್ಲ ಎಂಬ ಭಾವನೆ ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ವಿಚಾರಪರರನ್ನೆಲ್ಲ ಕಲಕಿತು. ವಿಚಾರಮಂಥನ ಮೊದಲಾಯಿತು. ಸಮಾನತೆಗಾಗಿ ಮತ್ತೊಂದು ಕ್ರಾಂತಿಕಿಡಿ ಮಿಂಚಿ ರಷ್ಯದ ಮಹಾಕ್ರಾಂತಿಯಲ್ಲಿ ಹತ್ತಿಕೊಂಡಿತು. ಸಮತೆಯ ಪತಾಕೆಯನ್ನೆತ್ತಿ ಹಿಡಿದ ಕೀರ್ತಿ ರಷ್ಯದ ರಾಷ್ಟ್ರಪಿತನೆನಿಸಿದ ಲೆನಿನ್ ಮಹಾಶಯನಿಗೆ ಸಲ್ಲಬೇಕು. ಸಮಾಜಿಕ ನ್ಯಾಯ, ಆರ್ಥಿಕ ಸೌಲಭ್ಯಗಳ ಸಮಾನಭೋಗ, ದುಡಿಮೆಗಾರನ ಗೌರವಯುತ ಬಾಳ್ವೆ ಈ ಮಹತ್ವಾಕಾಂಕ್ಷೆಗಳಿಗೆ ವಿಶ್ವದಲ್ಲೇ ಚಾಲನೆ ಕೊಟ್ಟ ವಿಚಾರಪ್ರವಾಹ ಲೆನಿನ್ ಸಾಧಿಸಿದ ಮಹಾಕ್ರಾಂತಿಯಿಂದ ಉದ್ಭವವಾಯಿತು.

ಸ್ವಾತಂತ್ರ್ಯ, ಸಮತೆಗಳ ಏಕಮುಖಸಾಧನೆಗಳಿಂದ ಜಗತ್ತಿನ ಸಮಸ್ಯೆಗಳಿಗೆ ಪರಿಹಾರ ದೊರೆಯಲಿಲ್ಲ. ಮಹಾಯುದ್ಧಗಳ ಭೀತಿ, ದಾರಿದ್ರ್ಯ ನಿರುದ್ಯೋಗಗಳ ವ್ಯಾಪಕ ರೋಗರುಜನೆ, ರಾಷ್ಟ್ರ ರಾಷ್ಟ್ರಗಳ ಭೀಕರ ದ್ವೇಷಾಸೂಯೆಗಳೆಲ್ಲವೂ ಈ ಮಹಾಘೋಷಣೆಗಳ ನೆರಳಿನಲ್ಲೇ ಸಾಗಿದವು. ಮಾನವ ಕುಲವನ್ನಾವರಿಸಿ ನಿಂತ ಭಯಂಕರ ವಿನಾಶಕಾರಕ ಕಗ್ಗತ್ತಲಿನಲ್ಲಿ ಮೂಡಿದ ಮತ್ತೊಂದು ಆಶಾಕಿರಣ ಮಹಾತ್ಮ ಗಾಂಧಿ. ಎರಡು ಮಹಾಪ್ರಯೋಗಗಳಿಂದ ಸಾಧಿಸಿದ ಮಹತ್ವಪೂರ್ಣ ಸಾಧನೆಗಳಿಗೆ ಶಾಶ್ವತ ಮೌಲ್ಯ ದೊರೆಯಬೇಕಾದರೆ ಭ್ರಾತೃತ್ವಭಾವನೆಯ ಸಾಕ್ಷಾತ್ಕಾರ, ಸತ್ಯಾಗ್ರಹ ಜೀವನಗಳೇ ಏಕೈಕ ಮಾರ್ಗ ಎಂದರು ಗಾಂಧೀಜಿ. ದಾಸ್ಯಶೃಂಖಲೆಯಲ್ಲಿ ನರಳುತ್ತಿದ್ದ ನಿಶ್ಶಸ್ತ್ರ ಜನಾಂಗವೊಂದರ ಸ್ವಾತಂತ್ರ್ಯಸಮರದ ಅಧ್ವರ್ಯುವಾಗಿ ಈ ಮಹಾಮಹಿಮರು ವಿಶ್ವಮಾನವನ ಕ್ರಾಂತಿಪಥದಲ್ಲಿ ಹೊಸ ಚೈತನ್ಯವನ್ನೇ ತುಂಬಿಕೊಟ್ಟರು. ಆಂತರಿಕ ಆತ್ಮಶಕ್ತಿ ಇಲ್ಲಿಯೂ ಈಗಲೂ ಪ್ರಭಾವಪೂರ್ಣವಾಗಿ ಅಭಿವ್ಯಕ್ತವಾಗಬಲ್ಲದು ಎಂದು ಪ್ರತ್ಯಕ್ಷಪ್ರಮಾಣಗಳಿಂದ ಸಾರಿದರು.

ಊಹೆಗೂ ಮೀರಿದ ಕ್ಷಿಪ್ರವೇಗದಲ್ಲಿ ಧಾವಿಸುತ್ತಿರುವ ಐತಿಹಾಸಿಕ ಪ್ರವಾಹದಲ್ಲಿ ಪರಿವರ್ತನಾಕ್ರಮದ ಪ್ರತಿಕ್ರಿಯೆಗಳು ಬಿಡಿಸಲಾಗದಂತೆ ಹೆಣೆದುಕೊಂಡುಬಿಟ್ಟಿವೆ. ಎಲ್ಲೆಡೆಯಲ್ಲಿಯೂ ಅಶಾಂತಿ ಅಸಮಾಧಾನ ಅತೃಪ್ತಿ ಕಾಣುತ್ತಿದ್ದರೂ ಒಂದು ಸುಸ್ಪಷ್ಟ ವಿಚಾರತರಂಗ ವಿಶ್ವವನ್ನು ಆವರಿಸಿ ನಿಂತಿದೆ.

'ವಿಜ್ಞಾನ ಆತ್ಮಜ್ಞಾನಗಳ ಸಮ್ಮೇಳನ'. ಮಾನವಕೋಟಿಯ ಕಲ್ಯಾಣಸಾಧನೆ; ಸರ್ವತ್ರ ಸಂತುಷ್ಟಜೀವನ ; ಶಾಂತಿಯ ಶಾಶ್ವತ ಸಂಘಟನೆ ; ಈ ಧ್ಯೇಯ ವಾಕ್ಯಗಳು ರಾಷ್ಟ್ರ ರಾಷ್ಟ್ರಗಳಲ್ಲೆಲ್ಲ ಪ್ರಜ್ವಲಿಸುತ್ತಿವೆ. ಪರೋಕ್ಷವಾಗಿಯಾದರೂ ಸರ್ವೋದಯದ ಭಾವನೆ ಸ್ವಲ್ಪ ಸ್ವಲ್ಪವಾಗಿ ಬೇರೂರುತ್ತಿದೆ. ಈ ನೂತನ ವಿಚಾರಮಾರ್ಗ ಜಗತ್ತಿನ ದಾರ್ಶನಿಕರ ಮನಸ್ಸನ್ನಾವರಿಸಿ ನಿಲ್ಲುತ್ತಿದೆ. ಭಾರತದ ಇತ್ತೀಚಿನ ಚರಿತ್ರೆಯಲ್ಲಿ ವಿಖ್ಯಾತರಾಗಿರುವ ಸಂತ ವಿನೋಬಾ ಅವರ ವಿಚಾರಧಾರೆ ಈ ಮಾರ್ಗದ ಒಂದು ದಾರಿದೀಪ.

ಸ್ವಾತಂತ್ರ್ಯ, ಸಮತೆ, ಸದ್ಭಾವನೆ ನಮ್ಮ ಜಗತ್ತಿನ ಸರ್ವಮಾನ್ಯ ಸಮಾನಾಕಾಂಕ್ಷೆ. ಪ್ರಾತಃಸ್ಮರಣೀಯರಾದ ಲಿಂಕನ್ ಲೆನಿನ್ ಗಾಂಧೀ ಈ ವಿಭೂತಿ ಪರಂಪರೆಯ ಅಗ್ನಿರೇಖೆ ಈ ಶತಮಾನಕ್ಕೆ ಭಗವಂತನ ಆಶ್ವಾಸನೆಯ ಆಶೀರ್ವಾದ. ಅವರ ಬಾಳು ಅವರು ಬೆಳಗಿದ ಬೆಳಕು ಅವರು ಸಾಕ್ಷಾತ್ಕರಿಸಿ ಕೊಟ್ಟ ದಿಕ್ಸೂಚಿ ಕ್ರಾಂತಿಪಥವನ್ನು ಅದಮ್ಯವಾಗಿ ಸಿದ್ಧಿಯ ಕಡೆಗೆ ಕರದೊಯ್ಯು ವುವೆಂಬ ಭರವಸೆ ದಿನದಿನಕ್ಕೂ ಹೆಚ್ಚು ಖಚಿತವಾಗುತ್ತಿದೆ. ಬರಲಿರುವ ವಿಶ್ವಪ್ರಜೆಗಳು ಈ ಪರ್ವಕಾಲವನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ.



ಏಬ್ರಹಾಂ ಲಿಂಕನ್

ಏಬ್ರಹಾಂ ಲಿಂಕನ್

೧

"ಭಗವಂತನ ಸೃಷ್ಟಿಯಲ್ಲಿ ಮಾನವರೆಲ್ಲ ಸಮಾನರು ; ಎಂದಿಗೂ ಪರಭಾರೆಮಾಡಲಾಗದ ಹಲವು ಹಕ್ಕುಗಳನ್ನು ಭಗವಂತನೇ ದಯಪಾಲಿಸಿದ್ದಾನೆ ; ಜೀವನ, ಸ್ವಾತಂತ್ರ್ಯ ಮತ್ತು ಆನಂದಾನ್ವೇಷಣೆ. ಇದು ಸ್ವಯಂ ವೇದ್ಯ ಸತ್ಯವೆಂಬುದೇ ನಮ್ಮ ದೃಢ ವಿಶ್ವಾಸ" ಈ ಉದ್ದಾಮ ಧ್ಯೇಯವಾಕ್ಯ, ಅಮೆರಿಕದ ಸ್ವಾತಂತ್ರ್ಯ ಜಯಘೋಷದಲ್ಲಿ ಮೊಳಗಿತು. ರಾಷ್ಟ್ರದ ಮುಖವಾಣಿಯಾಗಿ ಅದನ್ನು ನುಡಿದ ಮಹಾನುಭಾವ ಥಾಮಸ್ ಜಫರ್ಸನ್. ಇತಿಹಾಸ ಪ್ರಸಿದ್ಧವಾದ ಈ ಘಟನೆ ನಡೆದುದು 1776ರ ಜುಲೈ 4 ರಂದು.

ಇದಾದ ಹಲವು ದಶಕಗಳ ನಂತರ, ಉದಯೋನ್ಮುಖ ಸ್ವತಂತ್ರ ದೇಶವಾದ ಅಮೆರಿಕದ ಸ್ವಾತಂತ್ರ್ಯಕ್ಕೆ ಕಳಂಕದಂತಿದ್ದ ಅಮಾನುಷ ದಾಸ್ಯ ಪದ್ಧತಿಯನ್ನು ಕಂಡು ಕೋಮಲ ಹೃದಯವೊಂದು ಮರುಗಿತು. ನವೋನವ ರಾಷ್ಟ್ರವಾಗಿ ಮಹತ್ತರವೂ, ಬೃಹದ್ವ್ಯಾಪಕವೂ ಆದ ಆದರ್ಶಗಳನ್ನು ಆರಾಧಿಸುವ ನಾಗರಿಕ ಸಮಾಜದಲ್ಲಿ ಈ ಕರಾಳ ಕರ್ಕಶ ಗುಲಾಮಿ ಪದ್ಧತಿಯನ್ನು ನಿರ್ಮೂಲ ಮಾಡಲು ಕಠೋರ ಪ್ರತಿಜ್ಞೆಯೂ ಆ ಮರುಕದ ಸೆರಳಾಗಿ ಬಂದು ತುಂಬಿ ಕೊಂಡಿತು. ಒಂದು ಕಡೆ ಸಂಪತ್ಸಮೃದ್ಧಿ, ಅಪರಿಮಿತ ಔದ್ಯೋಗಿಕ ಸಾಹಸ ; ಮತ್ತೊಂದೆಡೆ ನಲವತ್ತು ಲಕ್ಷ ನೀಗ್ರೋ ಗುಲಾಮರ ಅಸಹನೀಯ ದಾಸ್ಯ ; ಪಶುಗಳಿಗೂ ಕಡೆಯಾಗಿ, ನೂಕಿದ ಕಡೆ ಬಿದ್ದು, ದುಃಖ ಅವಮಾನಗಳಿಗೆ ಗುರಿಯಾದ ಈ ದುಡಿಮೆಯ ದೇಹಧಾರಿಗಳು. "ಮಾನವತೆಯನ್ನೇ ತಿರಸ್ಕರಿಸಿದ ಜನಾಂಗ ಎಂದಿಗೂ ತಲೆಯೆತ್ತಿ ನಿಲ್ಲಲಾರದು. ಈ ಅವಮಾನವನ್ನೂ ಅಧರ್ಮವನ್ನೂ ತೊಡೆದುಹಾಕದೆ ಸ್ವಾತಂತ್ರ್ಯಘೋಷಣೆ ಅರ್ಥಹೀನ" ಎಂದು ಸಿಡಿದೆದ್ದ ಕಡುಗಲಿ ಏಬ್ರಹಾಂ ಲಿಂಕನ್.

ಅಸಾಮಾನ್ಯ ನೀಳದೇಹ, ಉದ್ದವಾಗಿ ಜೋತಾಡುತ್ತಿದ್ದ ಬಾಹುಗಳು, ಸುಕ್ಕಿಹೋದ ಮುಖ, ಕುರುಚಲು ಕುರುಚಲಾದ ಗಡ್ಡ, ವಿಶಾಲವಾದ ಹಣೆ, ಆಳವೂ ದಯಾಪೂರ್ಣವೂ ಆಗಿ ಮಿಂಚುತ್ತಿದ್ದ ಕಣ್ಣುಗಳು ;

ಸ್ವಲ್ಪ ಬಾಗಿದ ದೇಹ, ಆಳತೆಗೆ ಚಿಕ್ಕದಾದ ಎದೆಗೂಡು, ಗಂಭೀರ ವಿಚಾರ ಮಗ್ನತೆಯ ಚಿರಮುದ್ರೆ, ಚೆಲುವಿಲ್ಲದ ನಡೆ, ಇಂಥ ವ್ಯಕ್ತಿ ಲಿಂಕನ್. ಆದರೂ ವಾಷಿಂಗ್‌ಟನ್ ಪಟ್ಟಣದ ಮಧ್ಯಭಾಗದಲ್ಲಿ ಕಡೆದು ನಿಲ್ಲಿಸಿರುವ ಆತನ ಭವ್ಯ ಶಿಲಾಮೂರ್ತಿಯ ದರ್ಶನಕ್ಕೆ ಹಂಬಲಿಸದಿರುವವರು ವಿರಳ.

ದೃಢವಾಗಿ ಸ್ವಾತಂತ್ರ್ಯ ಜ್ಯೋತಿಯನ್ನೆತ್ತಿ ಹಿಡಿದಿರುವ ಅಮೆರಿಕದ ಸ್ವಾತಂತ್ರ್ಯದೇವಿಯ ಪ್ರಖ್ಯಾತ ಪ್ರತಿಮೆಯೊಡನೆಯೇ ಸ್ಮೃತಿಪಥದಲ್ಲಿ ಅಚ್ಚಳಿಯದಿರುವ ಜೀವಂತಮೂರ್ತಿ ಲಿಂಕನ್ ಮಹಾಶಯ. ರಾಷ್ಟ್ರಗೌರವ ಪ್ರಪ್ರಥಮವಾಗಿ ಸಲ್ಲುವುದು ಇಂದಿಗೂ ಈ ಭವ್ಯಮೂರ್ತಿಗೇ. ಒಂದು ನೂರು ವರ್ಷಗಳ ಕೆಳಗೆ ಕೊಲೆಗಡುಕನೊಬ್ಬನ ಅವ್ಯಕ್ತ ಹಸ್ತದಿಂದ ಹತನಾದ ಲಿಂಕನ್ ವಿಶ್ವಜ್ಯೋತಿಗಳ ದೀಪಮಾಲೆಯಲ್ಲಿ ಅಮರದೀಪವಾಗಿ ಉಳಿದನು. ಬರುವ ತಲೆಮಾರುಗಳಿಗೆ ಆತನ ಬಾಳು ಒಂದು ಅನಂತಸ್ಫೂರ್ತಿ.

೨

ಥಾಮಸ್ ಲಿಂಕನ್ ಏಬ್ರಹಾಮನ ತಂದೆ. ಪ್ರಕೃತಿದತ್ತವಾದ ವಿಶಾಲ ಭೂಮಿಗಳು ಅಂದಿನ ಅಮೆರಿಕದಲ್ಲಿ ಬಾಹುಶಕ್ತಿಗಳಿಗೆ ತಡೆಯಲಾಗದ ಆಕರ್ಷಣೆ. ದೃಢಕಾಯನಾಗಿದ್ದ ಥಾಮಸ್ ಲಿಂಕನ್ನನೂ ಸಾಹಸಪ್ರಿಯ. ಬಡಗಿಯಾಗಿ, ವ್ಯವಸಾಯಗಾರನಾಗಿ ದುಡಿಯುತ್ತಾ, ಮರ ಕಡಿದು, ನೆಲ ಮಾಡಿ, ಸಂತೋಷದಿಂದ ಜೀವಿಸುತ್ತಾ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗಿ ನೆಲಸುತ್ತಿದ್ದ ಚಪಲಜೀವಿ ಥಾಮಸ್. ಉತ್ತರ ಅಮೆರಿಕದ ಒಂದು ರಾಜ್ಯ ಕೆಂಟಕಿಯಲ್ಲಿ ಥಾಮಸ್ ತರುಣ ರೈತನಾಗಿ ಅಲೆದಾಡುತ್ತಿದ್ದ. ಬಡಗಿಯಾಗಿ ಮನೆಗಳನ್ನು ಕಟ್ಟಬೇಕು ಅನ್ನಿಸಿತು. ಸಾಹಸದಿಂದ ಶಿಕ್ಷಣ ಪಡೆದ. ಅದೇ ಕಾಲಕ್ಕೆ ಗುರುವಿನ ಬಂಧುವೊಬ್ಬಳಾದ ನ್ಯಾನ್ಸಿ ಈತನ ಬಾಳನ್ನು ಬೆಳಗಿಸುವ ಗೃಹಲಕ್ಷ್ಮಿಯಾಗಿ ಬಂದಳು. ಈ ದಾಂಪತ್ಯದ ಫಲವಾಗಿ ಪಡೆದ ಎರಡನೇ ಮಗ ಏಬ್ರಹಾಂ ಲಿಂಕನ್. ಅವನ ಅಕ್ಕ ಸಾರಾ. ಇವನಿಗಿಂತ ನಾಲ್ಕು ವರ್ಷ ದೊಡ್ಡವಳು. ಕೆಂಟಕಿಯ ಸಂಸ್ಥಾನದಲ್ಲಿನ ಅತಿ ಚಿಕ್ಕ ಗ್ರಾಮ ನೋಲಿನ್ ಕ್ರೀಕ್. 1809 ರ ಫೆಬ್ರವರಿ 12 ರಂದು ಜಗತ್ತಿನ ಇತಿಹಾಸಪ್ರಸಿದ್ಧ ಸ್ಥಳವಾಯಿತು. ಒರಟು ಒರಟಾಗಿ ಮರದ ತುಂಡುಗಳನ್ನು ಜೋಡಿಸಿದ ಜೋಪಡಿಯಲ್ಲಿ ಅಂದು

ನ್ಯಾನ್ಸಿ ಥಾಮಸ್ ಲಿಂಕನ್ ಇವರಿಗೆ ಜ್ಯೇಷ್ಠ ಪುತ್ರನಾಗಿ ಏಬ್ರಹಾಂ ಲಿಂಕನ್ ಹುಟ್ಟಿದ.

ತಾಯಿ ನ್ಯಾನ್ಸಿ ತನ್ನಿಬ್ಬರು ಮಕ್ಕಳ ಬಾಳನ್ನು ತನ್ನ ಬಡತನದ ಬೇಗೆಯಲ್ಲಿಯೂ ಪ್ರೇಮ ವಾತ್ಸಲ್ಯಗಳಿಂದ ತುಂಬಿದಳು. ಕೃಶದೇಹಿಯಾಗಿ ರೋಗಗ್ರಸ್ತಳಾಗಿ ಹಾಸಿಗೆ ಹಿಡಿದು ದೀರ್ಘಕಾಲ ನರಳುತ್ತಿರುವಾಗಲೂ ಮಕ್ಕಳ ಚಿಂತೆ ಆ ಕೋಮಲ ಹೃದಯವನ್ನು ತುಂಬಿತ್ತು. ಅನಾಸಕ್ತನಾಗಿ ಅಲೆಯುತ್ತಾ ಅನಿಶ್ಚಿತವಾಗಿ ಸ್ಥಳದಿಂದ ಸ್ಥಳಕ್ಕೆ ವಲಸೆಹೋಗುತ್ತಾ ಮನೆಯನ್ನು ಕಿತ್ತು ಕಿತ್ತು ಕಟ್ಟುತ್ತಾ ಜೀವನದೊಂದಿಗೆ ಅಸಡ್ಡೆಯಿಂದ ಆಟವಾಡುತ್ತಿದ್ದ ಯಜಮಾನನ ಆಶ್ರಯದಲ್ಲಿ ಆ ತಾಯಿ ಮಕ್ಕಳು ಅತಿ ಕಷ್ಟಕ್ಕೊಳಗಾಗುತ್ತಿದ್ದರು. ನಿರಕ್ಷರಕುಕ್ಷಿಯಾಗಿದ್ದ ಥಾಮಸ್ ಏಬ್ರಹಾಂನನ್ನು ಶಾಲೆಗೆ ಕಳುಹಿಸುವ ಯೋಚನೆಯನ್ನು ಹೇಗೆ ತಾನೆ ಮಾಡಿಯಾನು ? ಪುಸ್ತಕ ವಿದ್ಯೆಯ ಬಗ್ಗೆ ಆತನಿಗೆ ತಿರಸ್ಕಾರ. ಕೊಡಲಿ ಹಿಡಿದು ಮರ ಕೆತ್ತಿ ದುಡಿಯುವ ಜಡಕರ್ಮದ ಬಾಳಿನತ್ತ ತನ್ನ ಮಗನನ್ನೂ ತಿರುಗಿಸಲೆತ್ನಿಸಿದ. ತೆಳ್ಳನೆಯ ಉದ್ದನೆಯ ರೂಪವಿಲ್ಲದ ಮಗುವಾದರೂ ಏಬ್ರಹಾಂ ಚಿಕ್ಕವಯಸ್ಸಿನಲ್ಲೇ ಮಿತಿಮೀರಿ ಕೆಲಸದಲ್ಲಿ ತೊಡಗುತ್ತಿದ್ದ. ತಂದೆಯ ಕೋಪದ ಕೆಂಗಣ್ಣು ಅವನನ್ನು ಆಗಾಗ ಬೆದರಿಸುತ್ತಿದ್ದವು. ಸ್ವತಂತ್ರ ದುಡಿಮೆ, ಆತ್ಮಗೌರವ, ಪರೋಪಕಾರಬುದ್ಧಿ ಈ ಗುಣಗಳೂ ಥಾಮಸ್ ಲಿಂಕನ್ನಿನಲ್ಲಿದ್ದವು. ಅವುಗಳ ಪ್ರಭಾವ ಏಬ್ರಹಾಂನ ಮೇಲೆ ಸ್ಪಷ್ಟವಾಗಿ ಮುದ್ರೆಯೊತ್ತಿದವು. ಯಾವ ಶ್ರಮಕ್ಕೂ ಹಿಂಜರಿಯದ ಸ್ವಭಾವ ರಕ್ತಗತವಾಯಿತು ಏಬ್ರಹಾಮನಿಗೆ.

ಆಂತರಿಕ ಮಾಧುರ್ಯವನ್ನು ಬಾಳಿಗೆ ತುಂಬಿಕೊಟ್ಟು ಊರ್ಧ್ವಮುಖ ತತ್ವಚಿಂತನೆಯ ಪವಿತ್ರ ಚಿಲುಮೆಯನ್ನು ಪ್ರಚೋದಿಸುವ ಕಲೆ ಮಾತೃಹೃದಯದ ಸ್ವರ್ಣಸ್ಪರ್ಶಕ್ಕೆ ಮಾತ್ರ ಸಾಧ್ಯ. ವಾತ್ಸಲ್ಯಮಯಿಯಾದ ನ್ಯಾನ್ಸಿ ಸ್ವತಃ ಓದುಬರಹವನ್ನರಿತವಳಾಗಿದ್ದಳು. ಧಾರ್ಮಿಕ ಪ್ರವೃತ್ತಿ ಅವಳದು. ಬೈಬಲ್ಲಿನ ಆಧ್ಯಾತ್ಮಿಕ ಆಸರೆ ಏಬ್ರಹಾಮನಿಗೆ ದೊರೆತುದು ಈ ಮಹಾತಾಯಿಯ ಪವಿತ್ರಜೀವನದಿಂದ. ಬಾಳಿನಲ್ಲಿ ಊರುಗೋಲಾಗಿ ನಿಂತ ಈ ಉಪಕಾರಕ್ಕಾಗಿ ಚಿರಕೃತಜ್ಞತೆಯಿಂದ ಆಕೆಯನ್ನು ಸ್ಮರಿಸುತ್ತಿದ್ದ ಏಬ್ರಹಾಂ ಲಿಂಕನ್. ಆಕೆಯ ಸದ್ಗುಣದಿಂದ ಸ್ತ್ರೀಯರ ವಿಷಯಕ್ಕೆ ಅಪಾರ ಗೌರವ ಅವನಲ್ಲಿ ಬೆಳೆದುನಿಂತಿತು.

"ನನ್ನ ತಾಯಿಯ ಕೃಪೆ" ಎಂದು ಆಗಾಗ್ಗೆ ಬಾಷ್ಪಪೂರಿತನಾಗಿ ಗದ್ಗದ ಕಂಠದಿಂದ ನುಡಿದುಕೊಳ್ಳುತ್ತಿದ್ದ ಲಿಂಕನ್.

'ನ್ಯಾಬ್‌ಕ್ರೀಕ್ ಫಾರಂ' ನೆರೆಯ ಗ್ರಾಮ; ಏಬ್ರಹಾಮನ ಮೂರನೇ ವರ್ಷದಲ್ಲಿ ಆ ಸಂಸಾರ ವಲಸೆಬಂದು ನೆಲೆಸಿದ ಸ್ಥಳ. ಸಹನೆಯ ಪ್ರತಿಮೂರ್ತಿಯಾಗಿದ್ದ ನ್ಯಾನ್ಸಿ ಹೊಸ ಜಾಗವನ್ನೂ ರೂಢಿಸಿಕೊಂಡಳು. ಮಕ್ಕಳಿಬ್ಬರನ್ನೂ ಓದಿಸಲು ಶಾಲೆಗೆ ಕಳುಹಿಸಿಕೊಟ್ಟಳು. ದಿನವೂ ನಾಲ್ಕು ಮೈಲಿಗಳು ನಡೆಯಬೇಕಾಗಿತ್ತು. ಆ ಶಾಲೆಯಿಂದ ಮಕ್ಕಳು ಪಡೆದ ಲಾಭವೂ ಸ್ವಲ್ಪವೇ. "ಅದೊಂದು ಅರಚುವ ಶಾಲೆ" ಎಂದು ಸುತ್ತಲಿನ ರೈತರಾಡಿಕೊಳ್ಳುತ್ತಿದ್ದರು. ಮೊದಲೇ ಶಾಲೆಯ ಬಗ್ಗೆ ತಿರಸ್ಕಾರಬುದ್ಧಿಯುವನಾದ ಥಾಮಸ್ ಮಕ್ಕಳಿಗೆ ಶಾಲೆಯನ್ನು ತಪ್ಪಿಸಿಬಿಟ್ಟನು.

ಮತ್ತೊಮ್ಮೆ ವಲಸೆಯ ಹುಚ್ಚಿಗೆ ಬಲಿಯಾದ ಥಾಮಸ್, ಇಲ್ಯನೋಯ್ ಸಂಸ್ಥಾನದ ಪಿಜನ್‌ಕ್ರೀಕ್‌ನಲ್ಲಿ ಬಂದು ನೆಲೆಸಿದ. ಮತ್ತೊಮ್ಮೆ ಮರದ ಮನೆ ತಯಾರಾಯಿತು. ನೀರಿನ ಸಮೃದ್ಧಿಯಿದ್ದ ಫಲವತ್ತಾದ ಭೂಮಿ, ನಾಲ್ಕು ಕೈಗಳ ಶ್ರದ್ಧೆಯ ಬೇಸಾಯ, ಉತ್ತಮಜೀವನದ ಮಹತ್ವಾಕಾಂಕ್ಷೆ ಇವು ಆ ಸಂಸಾರದ ಸ್ಥಿತಿಯನ್ನೂ ಉತ್ತಮಗೊಳಿಸಿತು ಈ ಹೊಸ ನೆಲೆಯಲ್ಲಿ.

ಭಾಗ್ಯದ ಹೊಸಿಲಿನಲ್ಲಿಯೇ ದುರಂತದ ವಿಕಟಛಾಯೆಯೂ ಆ ಪುಟ್ಟ ಸಂಸಾರವನ್ನಾವರಿಸಿ ನಿಂತಿತು. ಕೃಶಳಾದ ನ್ಯಾನ್ಸಿ ಅಲ್ಲಿ ಆರಂಭವಾದ ಅಂಟುಜಾಡ್ಯಕ್ಕೆ ತುತ್ತಾಗಿ ಮಡಿದಳು. ಒಂಬತ್ತು ವರ್ಷದ ಮುಗ್ಧ ಬಾಲಕ ಏಬ್ ಹನ್ನೆರಡು ವರ್ಷದ ಹುಡುಗಿ ಸಾರಾ ಇವರನ್ನು ಗಂಡನ ಹರಕಲು ಮಡಿಲಲ್ಲಿ ಹಾಕಿ ಅಸ್ತಂಗತಳಾದಳು ಆಕೆ. ಹತ್ತಿರದ ವೈದ್ಯಸಹಾಯ ಮೂವತ್ತೈದು ಮೈಲಿಗಳಿಗಿಂತ ದೂರವಿದ್ದ ಆ ಕುಗ್ರಾಮದಲ್ಲಿ ದುರ್ಬಲಳಾದ ನ್ಯಾನ್ಸಿ ರೋಗಕ್ಕೆ ಬಲಿಯಾದುದೇನಾಶ್ಚರ್ಯ! ಸಾಯುವ ಮುನ್ನ ತಾಯಿ ತನ್ನಿಬ್ಬರು ಮಕ್ಕಳನ್ನು ಬಳಿ ಕರೆದಳು. ಸರಳ ಗಂಭೀರ ಪ್ರವೃತ್ತಿಯ ಅಕ್ಕ ತಮ್ಮ ಏನೂ ತಿಳಿಯದೆ ಕಣ್ಣೀರು ತುಂಬಿಕೊಂಡು ದಿಟ್ಟಿಸಿದರು. ನಂದಿಹೋಗುತ್ತಿದ್ದ ಆ ವಾತ್ಸಲ್ಯನಿಧಿಯ ಕ್ಷೀಣ ವಾಣಿ ಆ ಪುಟ್ಟ ಹೃದಯಗಳಲ್ಲಿ ಬೇರೂರಿ ನಿಂತಿತು. "ಅಕ್ಕನನ್ನು ಪ್ರೀತಿಸು ಏಬ್. ತಂದೆಯನ್ನು ಪ್ರೀತಿಸು. ಲೋಕವನ್ನು ಪ್ರೀತಿಸು. ಭಗವಂತನನ್ನು ಅನವರತವೂ ಧ್ಯಾನಿಸು. ಅವನ ಅನು

ಗ್ರಹದ ಪ್ರಸಾದವಾಗಲಿ ನಿನ್ನ ಬಾಳು" ಎಂದು ಹಾರೈಸಿ ಚಿರನಿದ್ರೆಯಲ್ಲಿ ಪ್ರಶಾಂತವಾಯಿತು ಆ ಮಾತೃಹೃದಯ. ಒಂಬತ್ತನೆಯ ವಯಸ್ಸಿನಲ್ಲಿ ಬಾಲಕ ಲಿಂಕನ್ ತಬ್ಬಲಿಯಾದ.

೩

ವಿಧುರನಾದ ಥಾಮಸ್ ಲಿಂಕನ್ ಒಂದು ವರ್ಷ ಕಳೆಯುವುದರೊಳಗಾಗಿ ಮಕ್ಕಳನ್ನು ಮನೆಯಲ್ಲಿ ಬಿಟ್ಟು ಅಲೆಯತೊಡಗಿದ. ಕೆಲವು ತಿಂಗಳ ಕಾಲ ಮುಗ್ಧ ಬಾಲಿಕೆ ಸಾರಾ, ಬಾಲಕ ಏಬ್ರಹಾಂ ತಾವೇ ಮನೆಯನ್ನು ನಡೆಸಿಕೊಂಡರು. ಒಂದು ಸಂಜೆ ತಂದೆ ಥಾಮಸ್ ಒಂದು ದೊಡ್ಡ ಪೆಟ್ಟಿಗೆಗಾಡಿಯ ತುಂಬ ಸಾಮಾನುಗಳನ್ನು ಹೇರಿಕೊಂಡು ಬಂದ. ಆ ಗಾಡಿಯೊಳಗಿಂದ ಮೂರು ಪುಟ್ಟ ಮಕ್ಕಳೂ. ದೃಢಕಾಯಳಾದ ಹೆಂಗಸೊಬ್ಬಳೂ ಇಳಿದರು. ಈಕೆ ಥಾಮಸ್ ಲಿಂಕನ್ನನ ಎರಡನೇ ಹೆಂಡತಿ. ಏಬ್ರಹಾಂ ಸಾರಾಗಳ ಬಲತಾಯಿ ಸಾರಾ ಬುಷ್ ಜಾನ್ಸನ್. ಲಿಂಕನ್ನನ ಸಚ್ಚಾರಿತ್ರ್ಯ, ಗಂಭೀರ ಪ್ರಾಮಾಣಿಕ ವ್ಯಕ್ತಿತ್ವ, ಎದ್ದು ಕಾಣುತ್ತಿದ್ದ ವಕ್ರರೂಪ, ಮಲತಾಯಿ ಮೃದುಹೃದಯವನ್ನು ಸೂರೆಗೊಂಡವು. ನ್ಯಾನ್ಸಿಗಿಂತ ಹೆಚ್ಚು ಗಟ್ಟಿಗಳೂ ವ್ಯಾವಹಾರಿಕ ಕುಶಲಳೂ ಆಗಿದ್ದ ಮಲತಾಯಿಯ ಕೃಪೆಯಿಂದ ಲಿಂಕನ್ ವಿದ್ಯಾಭ್ಯಾಸ ಮಾಡಲು ಅನುಕೂಲವಾಯಿತು. ಥಾಮಸ್‌ನನ್ನು ಬಲಾತ್ಕರಿಸಿ ಮಕ್ಕಳನ್ನು ಶಾಲೆಗೆ ಕಳುಹಿಸಿದಳು. ಆ ಒಂದೆರಡು ವರ್ಷಗಳು ಲಿಂಕನ್ನನ ಆಯುಷ್ಯದಲ್ಲಿ ಅಮೂಲ್ಯವಾದವು. ಅವನ ಜ್ಞಾನಾಭಿಲಾಷೆ ಮತ್ತೆ ಚಿಗುರಿತು. ಓದು ಬರಹದ ಆಸರೆ ಸಿಕ್ಕಿ ಬುದ್ಧಿಶಕ್ತಿ ಹೆಮ್ಮರವಾಗಿ ಬೆಳೆದು ನಿಂತಿತು. ಶ್ರದ್ಧೆ ಮತ್ತು ಪ್ರಾಮಾಣಿಕತೆ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಮಣಿಯದೆ ನಿಲ್ಲಬಲ್ಲುದೆಂದು ಸಾಧಿಸಿ ತೋರಿಸಿದ ಲಿಂಕನ್. ಅಸ್ತವ್ಯಸ್ತವಾಗಿ ಸಾಗಿ ಕೇವಲ ಒಂದು ವರ್ಷದ ಶಾಲಾ ವಿದ್ಯಾಭ್ಯಾಸ ಮಾತ್ರ ದೊರಕಿತು. ಆದರೆ ಅದು ಪ್ರಚೋದಿಸಿದ ಪ್ರಚಂಡ ಜ್ಞಾನದಾಹ ಅಪರಿಮಿತವಾಯಿತು. ಪುಸ್ತಕ ಪಿಶಾಚಿ ಹಿಡಿದವನಂತೆ ಸುತ್ತಲೂ ದೊರಕಿದ ಭಂಡಾರಗಳ ಗ್ರಂಥಗಳನ್ನು ಓದಿ ಮುಗಿಸಿದ. ಬೇಡಿ ಕಾಡಿ ಪುಸ್ತಕಗಳನ್ನು ಹೊತ್ತು ತಂದ. ನಿಮಿಷ ಬಿಡುವು ದೊರೆತರೂ ತಲ್ಲೀನನಾಗಿ ಪುಸ್ತಕಮಗ್ನನಾಗಿ ಬಿಡುತ್ತಿದ್ದ. ಸಾಮಾನ್ಯವಾಗಿ ಓದಿನ ಗೀಳಿಲ್ಲದ ಜನರ ಮಧ್ಯೆ ವಿಶಿಷ್ಟ

ವ್ಯಕ್ತಿಯಾದ. ಅವನ ಮಾತಿಗೆ ಬೆಲೆ ಬಂತು. ಸಲಹೆಗಳಿಗೆ ಗೌರವ ಹುಟ್ಟಿತು. ಯುವಕ ಲಿಂಕನ್ ಸುತ್ತಲಿನ ಗ್ರಾಮಗಳಲ್ಲಿ ಬುದ್ಧಿವಂತನೆಂದು ಪ್ರಸಿದ್ಧನಾದ.

ಒಂದು ಸಾರಿ ಕ್ರಾಫರ್ಡ್ ಎಂಬ ಹಣವಂತ ಸ್ನೇಹಿತ ಲಿಂಕನ್ನನಿಗೆ ಪುಸ್ತಕವೊಂದನ್ನು ಎರವಲಾಗಿ ಕೊಟ್ಟ. ಆ ರಾತ್ರಿ ದೊಡ್ಡ ಮಳೆ. ಹರಕು ಜೋಪಡಿಯ ಸಂದಿಯಲ್ಲಿದ್ದ ಪುಸ್ತಕ ನೆಂದು ಹಾಳಾಯಿತು. ಸ್ನೇಹಿತನಲ್ಲಿ ಕ್ಷಮೆಬೇಡಿ ಪ್ರಾಯಶ್ಚಿತ್ತಕ್ಕೆ ಸಿದ್ಧನಾದ ಲಿಂಕನ್. ನಿಷ್ಠುರನಾದ ಕ್ರಾಫರ್ಡ್ ಕಠೋರನಾದ. ಬೆಲೆ ಕೊಡುವ ಹಣವಿಲ್ಲದೆ ನಾಲ್ಕು ದಿನ ಸೇವಕನಾಗಿ ದುಡಿದು ಹಣ ಮುಟ್ಟಿಸುವೆನೆಂದು ಯಾಚಿಸಿದ ಲಿಂಕನ್. ದನ ಕಾದು, ಬಂಡಿಯನ್ನೆಳೆದು ನಾಲ್ಕು ದಿನ ಪ್ರಾಮಾಣಿಕನಾಗಿ ದುಡಿದ ಲಿಂಕನ್ನನ ಹಿರಿಮೆಯನ್ನು ತಿಳಿಯಲಾರದವನಾದ ಕ್ರಾಫರ್ಡ್. ಕೊನೆಗೂ ಛೀಮಾರಿಮಾಡಿ ದೂಡಿ ಬಿಟ್ಟ. ಸತ್ಯನಿಷ್ಠೆ ಪ್ರಾಮಾಣಿಕತೆಗಳ ಸಮಾಧಾನ ಆ ಸಂಕಟದ ಒಳಗಿನಿಂದ ತುಂಬಿಬಂತು ಲಿಂಕನ್ನನ ಹೃದಯದಲ್ಲಿ. ಸಿರಿವಂತರ ಸಣ್ಣತನವೂ ಆ ಬಾಲಕನ ಮೃದುಮನಸ್ಸಿನ ಮೇಲೆ ಆಘಾತಮಾಡಿತು.

೪

ಚರಿತ್ರೆ, ಸಾಹಸಕಥೆಗಳು, ಬೈಬಲ್ ಗ್ರಂಥ, ಕಾನೂನುಗಳ ಕಡತ ಹೀಗೆ ವಿವಿಧ ಗಂಭೀರ ವಿಷಯಗಳಲ್ಲೇ ಏಬ್ರಹಾಮನ ಆಸಕ್ತಿ. ಕೊರಡು ಕೊರಡಾಗಿ ಎತ್ತರವಾಗಿ ಬೆಳೆದು ನಿಂತ ಇಪ್ಪತ್ತು ವರ್ಷದ ಯುವಕ. ಎಷ್ಟು ನಿಷ್ಠಾವಂತ ದುಡಿಮೆಗಾರನೆನಿಸಿದನೋ ಅಷ್ಟೇ ವಿಚಾರವಂತನೂ ಆದ. "ದೊಡ್ಡ ಕೊಡಲಿಯಲ್ಲಿ ಒರಟು ಒರಟಾಗಿ ಕೆತ್ತಿಟ್ಟ ಮರದಂತೆ ನನ್ನ ಏಬ್. ಚಿಕ್ಕ ಉಳಿಯ ಕುಸುರಿ ಕೆಲಸ ಇಲ್ಲೂ ಕಾಣದು" ಎನ್ನುತ್ತಿದ್ದನಂತೆ ಅವನ ತಂದೆ ಬಡಗಿಯ ಭಾಷೆಯಲ್ಲಿ. ಮಗನ ಅಂತರ್ಯದ ಅರಿವು ಅವನಿಗಾಗಲಿಲ್ಲ. ಸಾಹಸ ಜೀವನದ ಹಸಿವು. ಹೊಸ ಆವರಣದ ಆಕಾಂಕ್ಷೆ. ವಿವಿಧ ಅನುಭವ ಜ್ಞಾನದ ಇಚ್ಛೆ ಏಬ್ರಹಾಮನಲ್ಲಿ ತುಂಬಿತ್ತು. 1828 ರಲ್ಲಿ ನೂರಾರು ಮೈಲಿಗಳಾಚೆಯ ನ್ಯೂ ಆರ್ಲಿಯನ್ಸ್ ಪಟ್ಟಣಕ್ಕೆ ವ್ಯಾಪಾರಕ್ಕಾಗಿ ಹೋಗುವ ಅವಕಾಶ ಸಿಕ್ಕಿತು. ವ್ಯಾಪಾರಿಯೊಬ್ಬನ ಸರಕುಗಳನ್ನು ಹೊತ್ತು ದೊಡ್ಡ ದೋಣಿಯಲ್ಲಿ ಪಯಣ ಮಾಡಿದ. ಪಟ್ಟಣದಲ್ಲಿ ಹಲವು ಅನೇಕ ವಸ್ತು

ಗಳನ್ನು ಕೊಂಡು ಹಿಂತಿರುಗುವ ಕೆಲಸವನ್ನು ನಿರ್ವಹಿಸಬೇಕಾಗಿತ್ತು. ವಿಶಾಲ ಪ್ರಪಂಚದ ವಿಶಾಲರಂಗದಲ್ಲಿ ಮೊದಲ ಹೆಜ್ಜೆ ಇಟ್ಟ. ಪಟ್ಟಣದಲ್ಲಿ ಅವನ ಕಣ್ಣಿಗೆ ಕಟ್ಟಿ ನಿಂತಿದ್ದು ಎಲ್ಲಕ್ಕಿಂತ ಹೆಚ್ಚಾಗಿ ಗುಲಾಮಗಿರಿಯ ಘೋರ ದೃಶ್ಯಗಳು. ರಾಜಕೀಯ ಸಾಮಾಜಿಕ ತತ್ತ್ವಚಿಂತನೆಯ ಹಲವು ಮುಖಗಳ ಪರಿಚಯವೂ ಅಲ್ಲಿನ ವೃತ್ತಪತ್ರಿಕೆಗಳಿಂದ ಆಯಿತು. ಕಾಯಿದೆ ಕಾನೂನುಗಳ ನಿಕಟ ಪರಿಚಯವನ್ನು ತನ್ನ ವ್ಯವಹಾರಗಳಿಗಾಗಿ ಪಡೆಯಬೇಕಾಗಿತ್ತು. ಹೊಸ ಗಾಳಿಯೊಂದು ಬೀಸಿದಂತಾಯ್ತು ಅವನ ಜೀವನದಲ್ಲಿ. ವ್ಯಕ್ತಿತ್ವ ಕಡೆದು ನಿಲ್ಲಲು ಪ್ರಾರಂಭವಾಯಿತು. ಲೋಕಸಂಚಾರದಲ್ಲಿ ಒಲವುಂಟಾಯಿತು. ಮತ್ತೊಮ್ಮೆ ನ್ಯೂ ಆರ್ಲಿಯನ್ಸ್ ಪಟ್ಟಣಕ್ಕೆ ಹೋಗಿ ಒಂದು ತಿಂಗಳ ಕಾಲ ವಿಹಾರ ಮಾಡಿದ. ನೀಗ್ರೋ ದಸ್ಯುಗಳ ಸ್ಥಿತಿಗತಿಗಳು ಅವನನ್ನು ಆಳವಾಗಿ ಕಲಕಿದವು. ದೃಢ ನಿರ್ಧಾರವೊಂದು ಅಬ್ರಹಾಮನ ಮನಸ್ಸಿನಲ್ಲಿ ಚಿಗುರೊಡೆಯಿತು. "ನನ್ನಲ್ಲೇನಾದರೂ ಶಕ್ತಿಯಿದ್ದರೆ ಈ ದುಷ್ಟಪದ್ಧತಿಯನ್ನು ತೊಡೆದು ಹಾಕುತ್ತೇನೆ" ಎಂದು ಈ ಉದಾರಚರಿತನ ಮನಸ್ಸು ಮೊರೆಯಿತು.

ಕರಿಮೊಗದ ದಷ್ಟಪುಷ್ಟರಾದ ನೀಗ್ರೋಜನರ ಗುಂಪೊಂದನ್ನು ಕುರಿಮಂದೆಯಂತೆ ಅಟ್ಟಿಸಿ ನಿಲ್ಲಿಸಿದ್ದರು ಸಂತೆಯೊಂದರ ಮಾರುಕಟ್ಟೆಯಲ್ಲಿ. ಹೆಣ್ಣುಗಂಡು ಅರೆನಗ್ನರಾಗಿ ತೋಳ್ಬಳೆಗಳಿಂದ ಬಂಧಿಸಲ್ಪಟ್ಟಿದ್ದರು. ಎದೆಗವುಚಿದ ಮಕ್ಕಳನ್ನು ಹೊತ್ತು ಅರೆಬಾಗಿದ ಬೆನ್ನುಗಳ ಮೇಲೆ ಚಾವಟಿ ಹೊಡೆತದ ಬಾರುಗಳು ಕಪ್ಪುಗಟ್ಟಿದ್ದವು. ಕಾಡಾನೆಗಳನ್ನು ಹಿಡಿದು ತರುಬುವ ಮಾವಟಿಗರಂತೆ ಕೆಲವು ಬಿಳಿಯ ಸಾಹುಕಾರರು ಕುದುರೆಯ ಮೇಲೆ ಚಾವಟಿ ಹಿಡಿದು ಅರಚುತ್ತಾ ಬಾರಿಸುತ್ತಾ ಈ ದೊಡ್ಡ ಗುಂಪನ್ನು ಜೋಡಿಸುತ್ತಿದ್ದರು. ಈ "ಅತಿಮಾನವರ" ಹರಾಜು ನಡೆದಿತ್ತು. ಉದ್ದನೆಯ ಈಟಿಯೊಂದರಲ್ಲಿ ಕರಿಹುಡುಗಿಯೊಬ್ಬಳನ್ನು ತಿವಿದು ಕೂಗಿದ ಆ ಯಜಮಾನ; "ಇವಳನ್ನು ನೋಡಿ ! ನಾಲ್ಕು ಕುದುರೆಯ ಕೆಲಸ ಮಾಡಿಯಾಳು! ನೂರು ಹೊನ್ನುಗಳಿಗೆ ಸವಾಲ್!" ಮುಗ್ಗರಿಸಿ ನೆಲಕಚ್ಚಿ ತಲೆಯೆತ್ತಲಾರದೆ ಆ ಹೆಣ್ಣು ತೀವ್ರ ವೇದನೆಯಿಂದ ಬಿಕ್ಕಿಸಿತು. ಆ ಕಣ್ಣಿನ ದೈನ್ಯತೆ ಹಠಾತ್ತನೆ ಗುಂಪಿನಲ್ಲಿದ್ದ ಅಬ್ರಹಾಮನ ಎದೆ ಹೊಕ್ಕು ತೀಕ್ಷ್ಣ ಬಾಣದಂತೆ ನೆಟ್ಟಿತು. ಓಡಿಬಂದು ಮುಖ ಮುಚ್ಚಿ ಆರ್ದ್ರ ಹೃದಯನಾಗಿ ಕೋಣೆಯಲ್ಲಿ ಕುಳಿತುಬಿಟ್ಟ. ಸ್ನೇಹಿತನೊಬ್ಬನಿಗೆ ಬರೆಯುತ್ತಾ "ನಾನು

ಆ ದಿನ ಕಂಡ ದೃಶ್ಯ ಪಿಶಾಚಿಯಂತೆ ನನ್ನ ಬೆನ್ನುಹತ್ತಿದೆ. ನಿರಂತರವಾಗಿ ನನ್ನ ಹೃದಯವನ್ನು ಹಿಂಡುತ್ತಿದೆ" ಎಂದ. ಅಮೆರಿಕದ ಸ್ವಾತಂತ್ರ್ಯ ಘೋಷಣೆ ಅವನಿಗೆ ಮೂದಲಿಸುವ ಅಪಚಾರವೆನಿಸಿತು. ಮುಂದೆ ಬಾಳಿನಲ್ಲಿ ಅವನ ಸಂಕಲ್ಪಕ್ಕೆ ಇದೇ ನಾಂದಿಯಾಯಿತು.

ವಯಸ್ಸಿಗೆ ಬಂದ ಯುವಕ ಏಬ್ರಹಾಂ ಸ್ವತಂತ್ರ ವೃತ್ತಿ ಹುಡುಕಿ ಮನೆಯ ಅವಲಂಬನೆಯನ್ನು ಬಿಟ್ಟುಕೊಡಬೇಕೆಂದು ನಿರ್ಧರಿಸಿದ. ತಂದೆ ಇಲ್ಲಿನೋಯ್ ಸಂಸ್ಥಾನಕ್ಕೆ ವಲಸೆ ಬಂದ. ಅಲ್ಲಿ ಒಂದು ವರ್ಷದ ನಂತರ ಮತ್ತೆ ಹೊಸ ಭೂಮಿಯನ್ನರಿಸಿ ಹೊರಟ. ಈ ವೇಳೆಗೆ ಏಬ್ರಹಾಂ ನ್ಯೂಸಲೇಮ್ ಪಟ್ಟಣದಲ್ಲಿ ಒಂದು ಹೊಸ ವ್ಯಾಪಾರೋದ್ಯಮದ ವ್ಯವಸ್ಥಾಪಕನಾಗಿ ನೇಮಿತನಾದ. ಅಲ್ಲಿ ಚುನಾವಣೆಗಳು ನಡೆದಿದ್ದುವು. ಅಂಗಡಿಯನ್ನು ಕಟ್ಟಿಕೊಳ್ಳುವವರೆಗೆ ಬಿಡುವೂ ಇತ್ತು. ಚುನಾವಣೆಯಲ್ಲಿ ಸಹಾಯಕನಾಗಿ ಕೆಲಸ ಸಿಕ್ಕಿತು. ರಾಜಕೀಯ ಕ್ಷೇತ್ರದ ಇಣುಕುನೋಟ ಆ ಕುಶಾಗ್ರಮತಿಗೆ ಮೊದಲ ಬಾರಿಗೆ ಒದಗಿಬಂತು. ಅವನ ಚಿಂತನಪ್ರಪಂಚದ ಒಂದು ಮೂಲೆಯಲ್ಲಿ ಮತ್ತೊಂದು ಆಕಾಂಕ್ಷೆ ಬೇರೂರಿ ನಿಂತಿತು. ರಾಜ್ಯಸೂತ್ರಗಳನ್ನು ಹಿಡಿದು ನಡೆಸುವ ಸಾಹಸ ಪಯಣಕ್ಕೆ ಅದು ಮೊದಲ ಹೆಜ್ಜೆಯಾಯಿತು.

ಗಿರಾಕಿಗಿಂತ ಪುಸ್ತಕಪ್ರಪಂಚದ ಒಲವೇ ಬಲವಾಗಿದ್ದ ವ್ಯಾಪಾರಿಯ ಉದ್ಯಮ ಬೆಳೆಯಲಾಗಲಿಲ್ಲ. ವರ್ಷ ಮುಗಿಯುವುದರೊಳಗೆ ಅಂಗಡಿಯ ಕಥೆ ಮುಗಿಯಿತು.

ಆ ವೇಳೆಗೆ ಅಮೆರಿಕದ ಮೂಲನಿವಾಸಿಗಳಾದ 'ರೆಡ್ ಇಂಡಿಯನ್ನರು' ಇಲ್ಲಿನೋಯ್ ಪ್ರಾಂತ್ಯದಲ್ಲಿ ಕೊನೆಯ ಬಾರಿ ದಂಗೆಯೆದ್ದರು. ಅದನ್ನು ಅಡಗಿಸಲು ಏರ್ಪಟ್ಟ ಸೈನ್ಯಪಡೆಗೆ ಏಬ್ರಹಾಂ ಸೇರಿದ. ಮತ್ತೆ ಕೆಲವು ತಿಂಗಳುಗಳು ಉದರಭರಣವಾಯಿತು. ಯುದ್ಧರಂಗವನ್ನೇ ನೋಡದೆ ಸೈನಿಕಶ್ರೇಣಿಯಿಂದ ಹೊರಬಿದ್ದ ಲಿಂಕನ್. ಮತ್ತೆ ನ್ಯೂಸೆಲೇಮಕ್ಕೆ ಬಂದು ರಾಜಕೀಯ ಕ್ಷೇತ್ರಕ್ಕೆ ಧುಮುಕಿದ. ಬಡತನದ ಬೇಗೆಯಲ್ಲಿ ಬೇಯುತ್ತಿದ್ದ ಇಪ್ಪತ್ತುಮೂರು ವರ್ಷದ ರೈತಯುವಕ ಪಟ್ಟಣಿಗರೊಡನೆ ಚುನಾವಣೆಯ ಸ್ಪರ್ಧೆಗೆ ನಿಂತ. ಇಲ್ಲಿನೋಯ್‌ನ ಶಾಸನಸಭೆಗೆ ಚುನಾವಣೆ ನಡೆದಿತ್ತು ಆಗ. ಪ್ರಚಾರಕಾರ್ಯದಲ್ಲಾದ ಜನಸಂಪರ್ಕವೇ ಉತ್ತಮ ಅನುಭವವಾಯಿತು. ಅಪರಿಚಿತ ಜನಮನ

ವಾರಸಿಗಾರು ಮತ ಕೊಟ್ಟಾರು ? ಆದರೂ ಅವನ ಮನವಿಗಳಿಗೆ ಓಗೊಟ್ಟವರು ಗಣನೀಯ ಸಂಖ್ಯೆಯಲ್ಲಿದ್ದರು. ಚುನಾವಣೆಯ ಸೋಲು ಹೊಸ ಸಾಹಸದ ಸ್ಫೂರ್ತಿಯಾಯಿತು.

ಮತ್ತೊಮ್ಮೆ ಬೆರ್ರಿ ಎಂಬ ಸ್ನೇಹಿತನೊಡನೆ ವ್ಯಾಪಾರೋದ್ಯಮದ ಪ್ರಯತ್ನ ಮಾಡಿದ ಲಿಂಕನ್. ಹಿಂದಿನ ಪ್ರಯತ್ನಗಳಂತೆಯೇ ಅದೂ ದಿವಾಳಿಯ ದಾರಿ ಹಿಡಿಯಿತು. ವಿಧಿ ಮತ್ತೆ ಮತ್ತೆ ಸಾರಿ ಹೇಳಿದಂತಿತ್ತು : "ನಿನ್ನ ಬಾಳಿನ ಪಥ ಇದಲ್ಲ, ಇದಲ್ಲ ! ಮಹೋದ್ದೇಶಗಳಿಗೆ ಮೀಸಲಾಗು" ಎಂದು. ಈ ಅಭಿಲಾಷೆಗಳಿಗೆ ರೂಪುಕೊಡುವ ಅದೃಷ್ಟ ಮಾತ್ರ ಮರೀಚಿಕೆಯಂತೆ ದೂರ ಸರಿಯುತ್ತಿತ್ತು. ಈ ಬೆಳಕು ನೆರಳುಗಳ ಚೆಲ್ಲಾಟದಲ್ಲಿ ಲಿಂಕನ್ನನ ಹೃದಯ ಆಸೆ ನಿರಾಸೆಗಳನ್ನು ಹೊತ್ತು ಸಾಗುತ್ತಿತ್ತು.

ಉಪಹಾರ ಗೃಹಗಳು ಎಲ್ಲೆಡೆಯಲ್ಲಿಯೂ ರಾಜಕೀಯ ಜಿಜ್ಞಾಸೆಗಳ ಬಿಸಿಚಿಲುಮೆಗಳು. ಒಬ್ಬಂಟಿಗ ಲಿಂಕನ್, ಜೇಮ್ಸ್ ರಟ್ಲೆಡ್ಜನ ಪಾನಮಂದಿರದ ಭಕ್ತನಾದ. ಮದ್ಯಪಾನ ಅವನಿಗೆಂದೂ ಅಭ್ಯಾಸವಾಗಲಿಲ್ಲ. ಆದರ ಬಗ್ಗೆ ಅವನಿಗೆ ಅಸಹ್ಯಭಾವನೆ. ಆದರೂ ರಟ್ಲೆಡ್ಜನ ಅಂಗಡಿಯಲ್ಲಿ ಸೇರುತ್ತಿದ್ದ ರಾಜಕಾರಣಿಗಳ ಸಹವಾಸ ಅವನಿಗೆ ಪ್ರಿಯವಾಯಿತು. ರಟ್ಲೆಡ್ಜನ ಸ್ನೇಹ ಹಾಗೂ ಮಗಳು ಆನ್‌ರೆಟ್ಲೆಡ್ಜನ ಸುಕೋಮಲ ಸೌಹಾರ್ದ ಲಿಂಕನ್ನನಿಗೆ ಒಂದು ಮಧುರ ಅನುಭವವಾಯಿತು. ಆನ್‌ರಟ್ಲೆಡ್ಜ್ ಅವನ ಹೃದಯವನ್ನು ಸೂರೆಗೊಂಡಳು. ನ್ಯೂಯಾರ್ಕಿನ ಸಾಹಸಿಯೊಬ್ಬನೊಡನೆ ಆಕೆಯ ವಿವಾಹ ನಿಶ್ಚಯವಾಗಿತ್ತು. ಲಿಂಕನ್ ಆಕೆಯ ಬಗ್ಗೆ ಬೆಳೆಸಿಕೊಂಡಿದ್ದ ಕನಸು ಒಡೆದರೂ ಅವನ ಹೃದಯದ ಮೂಲೆಯಲ್ಲಿ ಆಕೆಯ ನೆನಪು ಚಿರವಾಗಿಯೇ ಉಳಿಯಿತು. ಎಲ್ಲಾದರೂ ಆ ಸುಕೋಮಲ ಪುಷ್ಪ ನಗುತ್ತಿರಲೆಂದು ಔದಾರ್ಯದಿಂದ ಹಾರೈಸಿದ. ಆಕೆಯೂ ಲಿಂಕನ್ನನನ್ನು ವಾತ್ಸಲ್ಯದಿಂದ ಕಂಡಳು. ಅನೇಕ ವೇಳೆ ಸಂಕಟ ಸಮಯಗಳಲ್ಲಿ ಅವನ ನೆರವನ್ನು ಕೋರಿ ಪಡೆದಳು. ಕೊನೆಗೊಂದು ದಿನ 1834 ರಲ್ಲಿ ಆಕೆ ಹಾಸಿಗೆ ಹಿಡಿದು ಭಗ್ನಹೃದಯಿಯಾಗಿ ಮಡಿಯಬೇಕಾಯಿತು. ಅವಳನ್ನು ಮದುವೆಯಾಗಬೇಕಾಗಿದ್ದ ಯುವಕ ದೊಡ್ಡ ಮೋಸಗಾರನಾಗಿದ್ದ. ಸಂಸಾರ ಜೀವನ ದುರ್ಭರವಾಯಿತು. ಕೊನೆಯುಸಿರಿನ ವೇಳೆಯಲ್ಲಿ ಆ ಮೃದು ಮನಸ್ಸಿಗೆ ಸಮಾಧಾನವನ್ನೆರೆದ ಗೆಳೆಯ ಲಿಂಕನ್. ಮರಣಶಯ್ಯೆಯ

ಬಳಿ ನಿಂತು ತನ್ನ ಪ್ರಥಮ ಪ್ರೇಮದ ಪುತ್ಥಳಿಯೊಂದು ಸಿಡಿದೊಡೆದುದನ್ನು ಕಂಡು ಲಿಂಕನ್ ದುಃಖಿತಪ್ತನಾದ. ಆ ದುರಂತ ಒಂದು ಶಾಶ್ವತ ಬರೆಯನ್ನೆಳೆದುಬಿಟ್ಟಿತು.

ಈ ಮಧ್ಯೆ ಜೀವನೋಪಾಯಗಳ ಅನ್ವೇಷಣೆ ನಡದೇ ಇತ್ತು ಲಿಂಕನ್ನನ ಜೀವನದಲ್ಲಿ. ಅಂಚೆನೌಕರನಾದ ಮೋಜಣಿದಾರನಾದ. ಹತ್ತು ಹಲವಾರು ದಾರಿ ಹಿಡಿದು ನಡೆದ. ಕೊನೆಗೊಂದು ಬಾರಿ ನಿರ್ಧರಿಸಿಬಿಟ್ಟ: ನ್ಯಾಯವಾದಿಯಾಗಿ ನೆಲೆಸಿದ. ಚಾಣಾಕ್ಷ ಬುದ್ಧಿಯಿಂದ ಸ್ವಲ್ಪಕಾಲದಲ್ಲೇ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ತನ್ನ ವಾಕ್ಚತುರತೆಯಿಂದ ಉತ್ತಮ ನ್ಯಾಯವಾದಿಯೆಂದು ಅನಿಸಿಕೊಂಡ. ರಾಜಕೀಯ ಚಟುವಟಿಕೆಗಳಿಗೂ ಈ ಉದ್ಯೋಗ ಸಹಾಯಕವಾಯಿತು. ಜನಸಂಪರ್ಕದ ಅತ್ಯುತ್ತಮ ಸಾಧನವನ್ನಾಗಿ ವೃತ್ತಿಯನ್ನು ಬಳಸಿಕೊಂಡ. 1836 ರಲ್ಲಿ ಏಬ್ರಹಾಂ ಲಿಂಕನ್ ಕ್ರಮವಾಗಿ ಸನ್ನದನ್ನು ಪಡೆದು ವಕೀಲನಾದ. ಆ ಬಳಿಕ ಸ್ಪ್ರಿಂಗ್‌ಫೀಲ್ಡ್ ನಗರಕ್ಕೆ ಹೋಗಿ ನೆಲೆಸಿದ. ಇಲ್ಲಿನೋಯ್ ಸಂಸ್ಥಾನದ ರಾಜಧಾನಿ ಸ್ಪ್ರಿಂಗ್‌ಫೀಲ್ಡಿಗೇ ಬದಲಾಗಿತ್ತು. ವಕೀಲ ವೃತ್ತಿ ಅಲ್ಲಿ ಯಶಸ್ವಿಯಾಯಿತು.

ಎರಡು ಸಾರಿ ಹಿಮ್ಮೆಟ್ಟಿದರೂ 1834 ರಲ್ಲಿ ಲಿಂಕನ್ ಚುನಾವಣೆಯ ರಂಗದಲ್ಲಿ ಮತ್ತೆ ಸ್ಪರ್ಧಿಸಿದ. ಈ ಬಾರಿ ಎಲ್ಲರಿಗಿಂತ ಹೆಚ್ಚಾಗಿ ಮತ ಪಡೆದು ಗೆದ್ದ. ಸಮಕಾಲೀನ ರಾಜಕೀಯ ಸಮಸ್ಯೆಗಳನ್ನು ಕುರಿತು ಅಧ್ಯಯನಮಾಡಿ ಪ್ರಾಮಾಣಿಕ ವಿವರಗಳನ್ನಿತ್ತು ಪರಿಹಾರಗಳನ್ನು ಸೂಚಿಸುತ್ತಿದ್ದ ಲಿಂಕನ್ ಸಾಮಾಜಿಕ ಪ್ರಜಾಪ್ರತಿನಿಧಿಯಾದುದು ಎಲ್ಲರಿಗೂ ಹರ್ಷವೆನಿಸಿತು. ಈ ಗೆಲುವಿನೊಡನೆ ಅವನ ಬಾಳನೌಕೆ ಯಶಸ್ಸಿನ ಪಥ ಹಿಡಿದು ಮುಂದೆ ಸಾಗಿತು. ಮುಂದಿನ ದಿಗ್ವಿಜಯಗಳು ಅವನ ಸಮರ್ಥ ವ್ಯಕ್ತಿತ್ವಕ್ಕೆ ಪುಟ ಕೊಟ್ಟು ಅಮೆರಿಕದ ರಾಷ್ಟ್ರೀಯ ಚರಿತ್ರೆಯೊಡನೆ ಅವನ ಬಾಳೂ ಬೆರೆತುಹೋಯಿತು. ಅತನೇ ಇತಿಹಾಸ ನಿರ್ಮಾಪಕನೂ ಅಗಿಬಿಟ್ಟ. ಯುಗಪುರುಷರ ಜೀವನದಲ್ಲೆಲ್ಲ ಇದೇ ಸಂಭವಿಸುತ್ತದೆ.

೫

ಸ್ಪ್ರಿಂಗ್‌ಫೀಲ್ಡಿಗೆ ಬಂದಾಗಲೂ ಲಿಂಕನ್ನನ ಹತ್ತಿರ ಹಣವಿರಲಿಲ್ಲ. ಸಾಲ ಮಾಡಿ ಕೆಲವು ಅನುಕೂಲಗಳನ್ನು ಕಲ್ಪಿಸಿಕೊಂಡು ನೆಲೆಸಿದ. ಸತ್ಯನಿಷ್ಠೆ ಹಾಗೂ

ಪ್ರಾಮಾಣಿಕತೆ ಲಿಂಕನ್ನನ ಪರೀಕ್ಷಾ ಸಮಯಗಳಲ್ಲೆಲ್ಲಾ ರಕ್ಷಣೆಯಾಗಿ ಕಾಪಾಡಿತು. ಅವನ ನಿಷ್ಕಲ್ಮಷ ಕಪಟರಹಿತ ಔದಾರ್ಯಪೂರ್ಣ ಸ್ನೇಹ ಹಲವು ಮಿತ್ರರನ್ನು ಸಂಪಾದಿಸಿಕೊಟ್ಟಿತು. ಒರಟು ಒರಟಾದ ಬಹಿರಂಗ ರೂಪ ಒಂದು ರೀತಿಯಲ್ಲಿ ಗಮನ ಸೆಳೆದರೆ, ಆಂತರ್ಯದ ಸುಮಧುರ ಸಂಸ್ಕಾರ ಅಪರಿಮಿತ ಸ್ನೇಹವೃಂದವನ್ನು ಬೆಳೆಸಿತು.

ಇಲ್ಲಿನೋಯ್ ಶಾಸನಸಭೆಗೆ ಮತ್ತೆ ಮತ್ತೆ ಮೂರು ಬಾರಿ ಆರಿಸಿ ಬಂದ ಲಿಂಕನ್. ಆ ರಾಜ್ಯದಲ್ಲಿ ಗುಲಾಮಿ ಪದ್ಧತಿ ಜಾರಿಯಲ್ಲಿತ್ತು. ಶಾಸನಸಭೆಯ ಬಹುಮಂದಿ ಸದಸ್ಯರು ಅದರ ಪರವಾಗಿಯೇ ಇದ್ದವರು. ಗುಲಾಮಗಿರಿಯನ್ನು ತೊಡೆದುಹಾಕುವ ಪ್ರಚಾರವನ್ನು ಒಮ್ಮೆ ಈ ಶಾಸನ ಸಭೆ ತೀವ್ರವಾಗಿ ಖಂಡಿಸಿತು. ಕಪ್ಪು ಗುಲಾಮರು ಇತರ ಚಿರಸ್ವತ್ತುಗಳಂತೆ ಯಜಮಾನರ ಹಕ್ಕಿಗೆ ಒಳಪಟ್ಟವರು ಎಂದೇ ಸಾಮಾನ್ಯ ಭಾವನೆಯಾಗಿತ್ತು. ರೂಢಮೂಲ ಜಾಡಿನಲ್ಲಿ ಉರುಳುವ ಸಾಮಾಜಿಕ ಪದ್ಧತಿಯಲ್ಲಿ ಪಟ್ಟಭದ್ರ ಹಿತಗಳನ್ನು ಹಿಡಿದು ನೆಮ್ಮದಿಯಾಗಿ ಕುಳಿತ ವರ್ಗ ಯಾವ ಪ್ರತಿಭಟನೆಯನ್ನೂ ಸಹಿಸದು. "ಗುಲಾಮರಿಗೆ ಸ್ವಾತಂತ್ರ್ಯವೇ? ಅವರಿಗೆ ಹಕ್ಕುಗಳೇ? ಅವರಿಗೂ ಸಮಾನ ಆದರಣೆಯೇ? ನಾಚಿಕೆಗೇಡು!" ಎಂದು ಛೀಮಾರಿ ಮಾಡುವ ನಾಗರಿಕರೇ ಬಹುಮಂದಿ. ಈ ಗುಂಪಿನ ಮಧ್ಯೆ ಎದೆಗಾರಿಕೆಯಿಂದ ಪ್ರತಿಭಟಿಸಿ ನಿಲ್ಲುವ ಸ್ಥೈರ್ಯ ಯಾರಿಗೂ ಇರಲಿಲ್ಲ. ಮೊದಲ ಬಾರಿಗೆ ಶಾಸನ ಸಭೆಯಲ್ಲಿ ಪ್ರತಿಭಟಿಸಿ ನಿಂತವನು ಲಿಂಕನ್. ಗುಲಾಮಪದ್ಧತಿಯ ವಿರುದ್ಧ ತಂದ ನಿರ್ಣಯಕ್ಕೆ ಆದಿನ ಥ್ಯಾನ್‌ಸ್ಟೋನ್ ಎಂಬ ಸ್ನೇಹಿತನ ವಿನಹ ಮತ್ತಾರ ಬೆಂಬಲವೂ ದೊರೆಯಲಿಲ್ಲ. ಥ್ಯಾನ್‌ಸ್ಟೋನ್ ಮುಂದಿನ ಚುನಾವಣೆಗೆ ನಿಲ್ಲುವುದಿಲ್ಲವೆಂದು ನಿರ್ಧರಿಸಿದ್ದ. ಮಿಕ್ಕವರು ಕೆಲವರು ಅದೇ ಮನಸ್ಸಿನವರು ವಿರೋಧಕ್ಕೆ ಹೆದರಿ ಸುಮ್ಮನಾದರು. ಲಿಂಕನ್ನನ ಜೀವನಕಥೆಯನ್ನು ಬರೆದ ಹೆನ್ರಿ ಥಾಮಸ್ ಈ ನಿರ್ಣಯದ ಕೆಲವು ಭಾಗಗಳನ್ನು ಉದ್ಧರಿಸಿ ಕೊಟ್ಟಿದ್ದಾನೆ.

"ದಾಸ್ಯಪದ್ಧತಿ ಅನ್ಯಾಯದ ಆಧಾರದ ಮೇಲೆ ನಿಂತಿದೆ. ಇದು ಮಾನವನ ಗೌರವಕ್ಕೆ ಅವಮಾನ ಮಾಡುವ ಹೇಯಕಾರ್ಯ. ಶಾಸನ ಇದನ್ನು ಒಪ್ಪಿ ನಡೆಯುವುದು ಸರ್ವದಾ ಸಾಧುವಲ್ಲ."

"ಆದರೆ ಚಳುವಳಿಯ ಮಾರ್ಗ ದಾಸ್ಯಪದ್ಧತಿಯನ್ನು ನಿವಾರಿಸಲಾರದು. ಸಾಮಾಜಿಕ ಭದ್ರತೆಯನ್ನುಳಿಸಿಕೊಂಡು ಗುಲಾಮ ಪದ್ಧತಿಯನ್ನು ತೊಡೆದು ಹಾಕಬೇಕು."

"ಸಂಯುಕ್ತ ಸಂಸ್ಥಾನಗಳ ಕೇಂದ್ರ ಶಾಸನಸಭೆಗೆ ರಾಜ್ಯಶಾಸನಸಭೆಗಳ ಎಲ್ಲೆ ಕಟ್ಟಿನಲ್ಲಿ ಪ್ರವೇಶಿಸಲು ಹಕ್ಕಿಲ್ಲ. ರಾಜ್ಯದ ಜನತೆ ತನ್ನ ಪ್ರತಿನಿಧಿಗಳ ಮೂಲಕವೇ ಈ ಪರಿವರ್ತನೆಯನ್ನು ಜಾರಿಗೆ ತರಬೇಕು."

ನಿರ್ಭೀತ ವಾಣಿಯೊಂದು ಭವಿಷ್ಯ ನುಡಿದಂತಿತ್ತು. ಅಪ್ರತಿಹತ ಲೋಕವಾಣಿ ನಿರ್ಮಾಣವಾಗುವ ಸ್ಪಷ್ಟ ಚಿಹ್ನೆಗಳು ಆ ಸಭೆಯಲ್ಲಿ ಅಂದು ಅಂಕುರಿಸಿದವು. ಲಿಂಕನ್ ಆದರ ಮುಖವಾಣಿಯಾಗಿ ನಿಂತ. ಆ ಗಂಭೀರ ಉದಾತ್ತ ವ್ಯಕ್ತಿತ್ವದ ಬಲವಿಲ್ಲದಿದ್ದರೆ ನೂತನ ವಿಚಾರಪ್ರವಾಹ ಮೂಲದಲ್ಲೇ ಬತ್ತಿ ಹೋಗುತ್ತಿತ್ತು. ಲಿಂಕನ್ ವಿಚಾರಕ್ರಾಂತಿಯ ಸಮರ್ಥ ವಾಹಕನಾದ. ದಿಟ್ಟತನದ ದೃಢ ಹೆಜ್ಜೆಗಳನ್ನು ಮುಂದಿಟ್ಟು ಸ್ವಾತಂತ್ರ್ಯ ಪ್ರತಿಷ್ಠಾಪನೆಯ ಆಚಾರ್ಯ ಪುರುಷನೆನಿಸಿಕೊಂಡ.

ನ್ಯೂ ಸಲೀಮದಲ್ಲಿದ್ದಾಗ ಮತ್ತೊಂದು ಪ್ರಸಂಗ ನಡೆಯಿತು. ಮೇರಿ ಒವೆನ್ಸ್ ಎಂಬ ಮಧ್ಯವಯಸ್ಸಿನ ಸಿರಿವಂತ ಕನ್ಯೆ ಲಿಂಕನ್ನನನ್ನು ಮದುವೆಯಾಗ ಬಯಸಿದಳು. ಶಾಸನಸಭಾ ಸದಸ್ಯನಾಗಿ ಪ್ರಖ್ಯಾತನಾಗುತ್ತಿದ್ದ ಈ ಅಂದಗೆಟ್ಟ ವಕೀಲ ಒಂದು ದಿನ ಶ್ರೀಮಂತಿಕೆಯ ಅಧಿಕಾರಸ್ಥಾನದಲ್ಲಿ ಮೆರೆಯಬಹುದೆಂಬ ಆಸೆ ಅವಳದು. ತನ್ನ ಸಲಹೆಗೆ ಲಿಂಕನ್ ಉತ್ಸುಕನಾಗಿ ಓಗೊಡುವನೆಂದು ತಿಳಿದಳು ಆ ಸ್ಥೂಲಕಾಯದ ಚೆಲುವೆ. "ಕಷ್ಟಸಹಿಷ್ಣುತೆಯ ಬಡತನದ ಬಾಳು. ಕಾರ್ಪಣ್ಯ ಜೀವನ, ಭೋಗವಿಲಾಸಗಳಿಗೆಡೆಯಿಲ್ಲದ ಸರಳತೆ ಇವುಗಳನ್ನಪ್ಪಿದ್ದೇನೆ. ನೀನೂ ಒಪ್ಪಿ ಅರ್ಧಾಂಗಿಯಾಗುವುದಾದರೆ ಅಭ್ಯಂತರವಿಲ್ಲ" ಎಂದ ಲಿಂಕನ್. ಆಕೆಯ ಸ್ವರ್ಣಸ್ವಪ್ನ ನುಚ್ಚುನೂರಾಯಿತು. ಬಂಗಾರದ ಬಾಳನ್ನರಸಿ ಬಂದವಳು ಈ ಸತ್ಯನಿಷ್ಠುರ ವಿರಕ್ತ ಮನೋಭಾವದ ವಿಚಿತ್ರ ವ್ಯಕ್ತಿಯನ್ನು ಮರೆತುಬಿಟ್ಟಳು.

ಜಾನ್–ಟಿ–ಸ್ಟೂಯರ್ಟ್ ಸ್ಪ್ರಿಂಗ್‌ಫೀಲ್ಡಿನ ಗಣ್ಯ ವಕೀಲ. ರಾಜಕೀಯ ಚಟುವಟಿಕೆಗಳಲ್ಲಿ ತೀವ್ರಾಸಕ್ತಿ ಈತನಿಗೆ. ಅವನ ಕಾರ್ಯಾಲಯದಲ್ಲಿ ನ್ಯಾಯವಾದಿಗಳ ಕಡತಗಳಿಗಿಂತ ರಾಜಕೀಯ ಚರ್ಚೆಗಳೇ ಹೆಚ್ಚು. ಸರಳ ಭಾಷಿ. ಸ್ನೇಹ

ವರ ಸ್ಟ್ಯೂಯರ್ಟ್, ಲಿಂಕನ್ನನನ್ನಾಕರ್ಷಿಸಿದ್ದು ಸಹಜವೇ. ಲಿಂಕನ್ ಮತ್ತು ಸ್ಟ್ಯೂಯರ್ಟ್ ವಕೀಲ ಕಾರ್ಯಾಲಯದ ಪಾಲುದಾರರಾದರು. ಸಾಲದ ಹೊರೆಯಿಂದ ಉದ್ಯೋಗ ಪ್ರಾರಂಭಿಸಿದ ಲಿಂಕನ್ ಅಷ್ಟೇನೂ ಯಶಸ್ವಿಯಾದ ವಕೀಲನಾಗಲಿಲ್ಲ. ಕಾನೂನು, ನ್ಯಾಯ, ಮೊಕದ್ದಮೆ ಇವುಗಳೆಲ್ಲದರ ಹಿಂದೆ ಹೆಣೆದುಕೊಂಡಿದ್ದ ಮಾನವೀಯ ಸಂಬಂಧಗಳನ್ನು ಕುರಿತು ಲಿಂಕನ್ ಆಳವಾಗಿ ಯೋಚಿಸುವನು. ವ್ಯಾಜ್ಯಗಳಿಗೆ ಪ್ರೋತ್ಸಾಹ ಕೊಟ್ಟು ನ್ಯಾಯನಿಷ್ಠೆಯನ್ನು ತ್ಯಜಿಸಿ ಹಣ ಹೀರುತ್ತಿದ್ದ ವೃತ್ತಿಬಾಂಧವರ ಬಗ್ಗೆ ತಿರಸ್ಕಾರವುಂಟಾಯಿತು. ಲಿಂಕನ್ ತನ್ನೆಡೆಗೆ ಬಂದ ವಿವಾದಗಳನ್ನು ಪರಸ್ಪರ ವಿಶ್ವಾಸದಿಂದ ಪರಿಹಾರಮಾರ್ಗಗಳನ್ನರಸುವ ದೃಷ್ಟಿಯಿಂದಲೇ ನೋಡುತ್ತಿದ್ದ. ಅನ್ಯಾಯದೆದುರು ಪ್ರತಿಭಟಿಸಿ ನಿಲ್ಲುತ್ತಿದ್ದ. ಹೇಗೋ ಗೆದ್ದುಕೊಡುವ ಅಪಮಾರ್ಗಗಳು ಅವನೆದುರು ಸುಳಿಯಲಿಲ್ಲ. ಹಣ ಸಂಪಾದನೆ ಕುಂಠಿತವಾದರೂ ಜನಪ್ರಿಯ ನಾಯಕನಾದ.

1838 ರಲ್ಲೂ ಮತ್ತೆ 1840 ರಲ್ಲೂ ಶಾಸನಸಭೆಯ ಚುನಾವಣೆಗಳಲ್ಲಿ ಲಿಂಕನ್ ವಿಜಯಿಯಾದ. ಪ್ರಸಿದ್ಧ ವಾಗ್ಮಿ, ದಿಟ್ಟತನದ ರಾಜಕಾರಣಿ, ದೀನದಲಿತರ ಬಂಧು ಎಂಬ ಶ್ರೇಯಸ್ಸನ್ನು ಗಳಿಸಿದ. ಸ್ಪ್ರಿಂಗ್‌ಫೀಲ್ಡ್ ಅಂದಿನ ಅಮೆರಿಕದ ಪ್ರಮುಖ ಪಟ್ಟಣಗಳಲ್ಲಿ ಒಂದಾಗಿತ್ತು. ಸಂಯುಕ್ತ ಸಂಸ್ಥಾನದ ರಾಜಕಾರಣಿಗಳನೇಕರು ಇಲ್ಲಿನೋಯ್ ಸಂಸ್ಥಾನದವರು. ಇಡೀ ರಾಷ್ಟ್ರದ ಲಕ್ಷ್ಯವನ್ನು ಸೆಳೆದಿದ್ದ ಇಬ್ಬರು ಉದಯೋನ್ಮುಖ ಯುವಕ ರಾಜಕಾರಣಿಗಳ ಸ್ಪರ್ಧೆಯೊಂದು ಅಲ್ಲಿ ನಡೆದಿತ್ತು. ಸ್ಟೀಫನ್ ಡೌಗ್ಲಾಸ್ ಮತ್ತು ಏಬ್ರಹಾಂ ಲಿಂಕನ್ ಅಂದಿನ ವಿಚಾರವಾಹಿನಿಯ ದುಂದುಭಿಗಳಂತೆ ಮೊಳಗಿದರು. ಶ್ರೀಮಂತಿಕೆಯ ಬಿಗುಮಾನ, ಉನ್ನತ ಶ್ರೇಣಿಯ ದುರಭಿಮಾನ, ತೀಕ್ಷ್ಣ ತರ್ಕಬುದ್ಧಿ, ವಾದದಲ್ಲಿ ಅಪ್ರತಿಹತ ಚಾಣಾಕ್ಷತೆ ಇವುಗಳಿಗೆ ಡೌಗ್ಲಾಸ್ ಪ್ರಸಿದ್ಧನಾಗಿದ್ದ. ರೂಪದಲ್ಲೂ ವಿದ್ಯೆಯಲ್ಲೂ ಲಿಂಕನ್ನನಿಗಿಂತ ಉತ್ತಮನೆನಿಸಿಕೊಂಡಿದ್ದ. ವರ್ಗವ್ಯವಸ್ಥೆ, ಮೇಲು ಕೀಳುಗಳ ತಾರತಮ್ಯ, ಬಿಳಿಯರ ಸಹಜಶ್ರೇಷ್ಠತೆ ಇವುಗಳಲ್ಲಿ ಸಾಂಪ್ರದಾಯಿಕ ನಂಬಿಕೆ ಇತ್ತು ಡೌಗ್ಲಾಸನಿಗೆ. ಕ್ರಾಂತಿಕಾರಕ ಬದಲಾವಣೆಗಳನ್ನು ಆತ ವಿರೋಧಿಸುತ್ತಿದ್ದ. ಪ್ರತಿಯಾಗಿ ಲಿಂಕನ್ ಶಾಸನಸಭೆಯ ಒಳಗೂ ಹೊರಗೂ ವಿಶ್ವವಿಶಾಲ ಮಾನವೀಯ ದೃಷ್ಟಿಯಿಂದ ವಾದಿಸುತ್ತಿದ್ದ ವಾಗ್ಮಿ. ಪ್ರಾಮಾಣಿಕತೆ

ತರ್ಕಚಾತುರ್ಯಕ್ಕಿಂತ ಶ್ರೇಷ್ಠವೆಂದು ಭಾವಿಸಿದ್ದವನು. ಕೃತಕತೆಯಿಂದ ಆಕರ್ಷಿಸುವುದೆಂದಿಗೂ ಅವನಿಗೆ ಹಿಡಿಸುತ್ತಿರಲಿಲ್ಲ.

ಅದೇ ಸಮಯಕ್ಕೆ ಸ್ಪ್ರಿಂಗ್‌ಫೀಲ್ಡ್‌ಗೆ ವಿದ್ಯಾವತಿಯೂ ಸ್ವಾಭಿಮಾನಿಯೂ ಸುಸಂಸ್ಕೃತ ಶ್ರೀಮಂತಳೂ ಆದ ಚೆಲುವೆ ಮೇರಿಟಾಡ್ ಬಂದಳು. ಆಕೆಯ ಭಾವ ಅಲ್ಲಿನ ಶಾಸನಸಭೆಯ ಸದಸ್ಯನಾಗಿದ್ದ. ಅಕ್ಕನ ಮನೆಯಲ್ಲಿರುವಾಗ ಆಕೆಗೆ ಲಿಂಕನ್ ಮತ್ತು ಡೌಗ್ಲಾಸರಿಬ್ಬರ ಸ್ನೇಹವಾಯಿತು. ಲೋಕದ ಕಣ್ಣಿಗೆ ಪ್ರಸಿದ್ಧರೆನಿಸಿ ವಿವಾಹ ಸನ್ನದ್ಧರಾಗಿದ್ದ ಅವರಿಬ್ಬರನ್ನೂ ಆಕೆ ಪ್ರಬಲವಾಗಿ ಆಕರ್ಷಿಸಿದಳು. ಹೆಮ್ಮೆ ಪ್ರೌಢಿಮೆ ಆತ್ಮವಿಶ್ವಾಸಗಳು ತುಂಬಿದ್ದ ಈ ತುಂಬು ದೇಹಿ ಮೇರಿಟಾಡ್ ಲಿಂಕನ್ನನೆಡೆಗೇ ಹೆಚ್ಚು ವಾಲಿದಳು. ಆದರೂ ಡೌಗ್ಲಾಸನ ಝಗಮಗಿಸುವ ಆಕರ್ಷಣೆ ಪ್ರಬಲವಾಗಿಯೇ ಇತ್ತು. ಸ್ವಪ್ನಗಾಮಿನಿಯಾಗಿ ಭೋರ್ಗರೆದು ಹರಿಯುತ್ತಿದ್ದ ಪ್ರೇಮಝರಿ ಈ ಮೂವರಲ್ಲೂ ಆಕಾಂಕ್ಷೆಗಳ ಚಿಲುಮೆಗಳನ್ನೆಬ್ಬಿಸಿತ್ತು. ಆಸೆ ನಿರಾಸೆಗಳ ಹೊಯ್ದಾಟದೊಡನೆ ಸಾರ್ವಜನಿಕ ವೇದಿಕೆಯ ತುಮುಲವೂ ಈ ಸ್ನೇಹಿತರ ಮಧ್ಯೆ ಬೆಳೆದು ನಿಂತಿತು. ಐದು ವರ್ಷಗಳ ದೀರ್ಘಕಾಲ ವೇದನೀಯ ರಸಭಾವಗಳು ಹರಿದವು. ಮಧ್ಯೆ ಒಂದು ಬಾರಿ ಲಿಂಕನ್ ಆತ್ಮಹತ್ಯೆಕ್ಕೂ ಹವಣಿಸಿದ್ದ. ಕೊನೆಗೊಮ್ಮೆ ಟಾಡಳು ವಿವಾಹಕ್ಕೆ ಒಪ್ಪಿದರೂ ಲಿಂಕನ್ ಪ್ರಾಮಾಣಿಕನಾಗಿ ಆತ್ಮನಿರೀಕ್ಷೆಯಲ್ಲಿ ತೊಡಗಿದ. ಒಂದು ಮಹಾಸಮರ ಅವನಾಂತರ್ಯದಲ್ಲಿ ಎದ್ದು ನಿಂತಿತು. "ಟಾಡಳ ಸ್ವರ್ಣ ಸ್ವಪ್ನಗಳಿಗೆ ತನ್ನ ಸಹಜಪ್ರವೃತ್ತಿಗಳಿಂದ ಭಗ್ನ ಬಂದರೇನು ಗತಿ! ಆಕೆಯ ಆಕಾಂಕ್ಷೆಗಳಿಗೆ ಸರಿದೂಗದವನಾದರೆ? ಆಕೆಯ ಬಾಳು ನೀರಸವಾದರೆ? ತನ್ನ ಆಳವಾದ ನಂಬಿಕೆಗಳನ್ನು ಆಕೆ ಪ್ರತಿಭಟಿಸಿದರೆ?—ತನ್ನ ಆಂತರ್ಯವನ್ನೆಲ್ಲ ಅವಳಲ್ಲಿ ತೋಡಿಕೊಳ್ಳಬೇಕು. ತನ್ನ ಪ್ರಾಮಾಣಿಕ ಚಿತ್ರ ಅವಳಲ್ಲಿ ಮೂಡಿದ ಮೇಲೆಯೇ ಅವಳು ನಿರ್ಧರಿಸಬೇಕು" ಹೀಗೆ ಓಡಿತ್ತು ಲಿಂಕನ್ನನ ಮನಸ್ಸು. ಯಾವ ನಿರ್ಣಯಕ್ಕೂ ಬರಲಾರದವನಾದ. ಗೆಳೆಯ ಸ್ಪೀಡ್ ಎಂಬಾತನ ಮಧ್ಯಸ್ಥಿಕೆಯಿಂದ ಮೇರಿಟಾಡಳಿಗೆ ತನ್ನ ಅಂತರ್ಯವನ್ನೆಲ್ಲ ತೋಡಿಕೊಂಡ. "ಹೀಗಿರುವ ಸಾಧಾರಣ ವ್ಯಕ್ತಿಯನ್ನು ವರಿಸಲು ನಿನ್ನ ಆಂತರ್ಯ ಒಪ್ಪಿದರೆ ಮಾತ್ರ ಈ ವಿವಾಹ" ಎಂದು ಹೇಳಿದ. ಆ ನಿಷ್ಕಲ್ಮಷ ಪ್ರಾಮಾಣಿಕ ವರ್ತನೆ ಟಾಡಳನ್ನು ಪರಿವರ್ತಿಸಿಬಿಟ್ಟಿತು. 1842 ರಲ್ಲಿ ಅವರಿಬ್ಬರ ವಿವಾಹವಾಯಿತು.

ದಾಂಪತ್ಯ ಜೀವನದಲ್ಲಿ ಸರಸ ವಿರಸ ಘಟನೆಗಳು ಸಂಭವಿಸುತ್ತಲೇ ಇದ್ದುವು. ಆತ್ಮವಿಶ್ವಾಸದ ಹೆಮ್ಮೆ ತುಂಬಿದ್ದ ಮೇರಿ ಹೊಸ ಹೊಸ ಸಾಹಸಗಳಿಗೆ ಮುನ್ನುಗ್ಗುವಂತೆ ಲಿಂಕನ್ನನನ್ನು ಒತ್ತಾಯಮಾಡುತ್ತಿದ್ದಳು. ಆಗಾಗ್ಗೆ ನಿರುತ್ಸಾಹದಿಂದ ಹಿಂದೆ ನಿಲ್ಲುತ್ತಿದ್ದವನನ್ನು ಚುಚ್ಚಿ ಮೂದಲಿಸಿ ವಿಕೋಪಗೊಂಡು ಮಾತನಾಡಿದುದುಂಟು. ಸಹನಾಶೀಲ ಲಿಂಕನ್, ಹೆಂಡತಿಯ ಆಸೆಗಳ ಒತ್ತಡಕ್ಕೆ ಲೌಕಿಕ ಯಶಸ್ಸಿನ ಬೆನ್ನುಹತ್ತಿ ಓಡದೆ ಎಚ್ಚರದಿಂದ ತತ್ವನಿಷ್ಠನಾಗಿ ನಡೆದುಕೊಳ್ಳುತ್ತಿದ್ದುದು ಆ ಸಾಮಾನ್ಯ ಸ್ತ್ರೀಗೆ ಅರ್ಥವಾಗಲಿಲ್ಲ. ನಯನಾಜೂಕಿನ ಶ್ರೀಮಂತ ಸ್ತ್ರೀ, ಬಡತನದ ದುಃಖದಲ್ಲಿ ಬೆಂದು ಒರಟು ಒರಟಾಗಿ ಬೆಳೆದ ಸರಳ ಸ್ವಭಾವದ ಗಂಡ, ಇವರ ನಡುವೆ ವಿರಸಗಳಿಗೇನೂ ಕೊರತೆಯಿರಲಿಲ್ಲ. ಆದರೂ ಅವರ ಕೌಟುಂಬಿಕ ಜೀವನ ಪರಸ್ಪರ ಪ್ರೀತ್ಯಾದರಗಳನ್ನು ಕೊನೆಯವರೆಗೂ ಬೆಳೆಸಿಕೊಂಡೇ ಸಾಗಿತು.

೬

ವಕೀಲವೃತ್ತಿ ಎಂದಿನಂತೆ ಸಾಗಿತ್ತು. ಹಣದ ತೀವ್ರಾಕಾಂಕ್ಷೆಯಿಲ್ಲದ ನ್ಯಾಯವಾದಿ ಲಿಂಕನ್ ಸಂಪಾದಿಸುತ್ತಿದುದು ಅಲ್ಪವೇ. ಬಡತನದ ಸರಳ ಜೀವನ ಅವನ ಸಹಜ ಪ್ರವೃತ್ತಿ. ಸಂಪಾದನೆಯ ಕಡೆ ನಿರಾಸಕ್ತನಾದರೂ ನ್ಯಾಯಶಾಸ್ತ್ರದಲ್ಲಿ ಆಳವಾದ ಪಾಂಡಿತ್ಯ ಅವನದು. ವಿಮರ್ಶಾತ್ಮಕ ತೀಕ್ಷ್ಣ ಬುದ್ಧಿಯಿಂದ ಅಸಾಮಾನ್ಯ ವಾಗ್ವೈಖರಿಯಿಂದ ವಾದಮಾಡುತ್ತಿದ್ದ ಲಿಂಕನ್. ಅವನ ವಿನಯ ಸಚ್ಚಾರಿತ್ರ್ಯಗಳು ಪ್ರಸಿದ್ಧವಾಗಿದ್ದವು. ನಿಷ್ಠುರ ನ್ಯಾಯಪರತೆಯಿಂದ ಸಾಧಿಸಿದ ನೈತಿಕ ಶಕ್ತಿ ಅವನಲ್ಲಿ ಅಪಾರವಾಗಿದ್ದಿತು. ಯಾವ ಸಮೂಹದಲ್ಲೂ ಎದ್ದು ಕಾಣುವ ಎತ್ತರದ ನಿಲುವಿನಂತೆಯೇ ಅವನ ಪ್ರಭಾವದ ವರ್ತುಲವೂ ಮಹತ್ತರವಾಗಿ ಬೆಳೆಯಿತು. ಅಮೆರಿಕದ ಅಂದಿನ ರಾಷ್ಟ್ರೀಯ ಗಣ್ಯವ್ಯಕ್ತಿಗಳ ಪಂಕ್ತಿಯಲ್ಲಿ ಲಿಂಕನ್ನನ ಹೆಸರು ಕೇಳಲಾರಂಭವಾಯಿತು. ರಾಜಕೀಯ ಸಭೆ ಸಮ್ಮೇಳನಗಳಲ್ಲಿ ಲೋಕಾಭಿಪ್ರಾಯಗಳನ್ನು ಕಡೆದು ನಿಲ್ಲಿಸುವ ಶಕ್ತಿ ಲಿಂಕನ್ನನಿಗೆ ಹಸ್ತಗತವಾಯಿತು.

ಸಮಾಜದ ದಾರುಣ ರೋಗಗಳ ಉಪಶಮನ, ಅನಾವಶ್ಯಕ ಘರ್ಷಣೆ ದುರಂತಗಳಿಂದ ಕಕ್ಷಿಗಾರರ ರಕ್ಷಣೆ ಇವು ವಕೀಲಿವೃತ್ತಿಯ ಸೇವಾಕಾರ್ಯ.

ಗಾಂಧೀಜಿ ಈ ಬಗೆಗೆ ತಮ್ಮ ಬಾಳಿನಲ್ಲಿ ಸತ್ಸಂಕಲ್ಪಗಳನ್ನು ಅನುಷ್ಠಾನ ಮಾಡಿದಂತೆಯೇ ನೂರು ವರ್ಷಗಳ ಹಿಂದೆ ಲಿಂಕನ್ನನೂ ಧ್ಯೇಯುವಾದಿಯ ಸಾಹಸ ಪಥವನ್ನು ನಿರ್ಭೀತನಾಗಿ ಅನುಸರಿಸಿದ. "ನ್ಯಾಯಾಸ್ಥಾನದಲ್ಲಿ ಕೇವಲ ಹಠಮಾರಿತನದಿಂದ ಗೆದ್ದವನು ಸೋತ, ಸೋತವನು ಸತ್ತ: ಯಾವ ವಿವಾದವೂ ತೆರೆದ ಮನಸ್ಸಿಗೆ ಅಪರಿಹಾರ್ಯವಲ್ಲ ; ಮೂರನೆಯವರ ಕೈಗೊಪ್ಪಿಸುವುದಕ್ಕಿಂತ ಪರಸ್ಪರ ಸದ್ಭಾವನೆಯನ್ನುಳಿಸಿಕೊಂಡು ತಮ್ಮತಮ್ಮಲ್ಲೇ ತೀರ್ಮಾನಿಸಿಕೊಳ್ಳುವುದು ಮೇಲು...ಕಲಹವನ್ನು ಸಾಂತ್ವನಗೊಳಿಸುವುದೇ ವಕೀಲಿ ವೃತ್ತಿ" ಎನ್ನುತ್ತಿದ್ದ ಲಿಂಕನ್. ಸುಳ್ಳುಮೊಕದ್ದಮೆಗಳಲ್ಲೆಂದೂ ವಾದಿಸಲಿಲ್ಲ. "ಪ್ರಾಮಾಣಿಕತೆಗೂ ವಕೀಲಿ ವೃತ್ತಿಗೂ ಸರಿಹೊಂದುವುದಿಲ್ಲವೆಂಬ ಭ್ರಮೆಯುಂಟು; ಇದು ಶುದ್ಧಾಂಗವಾಗಿ ತಪ್ಪು. ಸತ್ಯ ನಿಷ್ಠೆಯೇ ಎಲ್ಲ ನ್ಯಾಯಶಾಸ್ತ್ರಗಳ ಆಧಾರ. ರಾಗದ್ವೇಷರಹಿತರಾಗಿ ಕಕ್ಷಿಗಾರನ ಹಿತವನ್ನು ಬಯಸಿ. ತಪ್ಪಿಗೆ ನ್ಯಾಯವಾದ ಶಿಕ್ಷೆಯಾದಾಗ ಸಮಾಧಾನ ಪಡುವ ಮನೋವೃತ್ತಿ ನ್ಯಾಯವಾದಿಗೆ ಅತ್ಯಗತ್ಯ. ದುರಾಸೆಯಿಂದ ಅಪ್ರಾಮಾಣಿಕ ರೀತಿ ನೀತಿಗಳಿಂದ ತಾರ್ಕಿಕ ದೊಂಬರಾಟ ಮಾಡುವ ವಕೀಲಿ ಸರ್ವಥಾ ತ್ಯಾಜ್ಯ" ಇದು ಲಿಂಕನ್ನನ ದೃಢವಾದ ನಂಬಿಕೆಯಾಗಿತ್ತು.

ಒಮ್ಮೆ ವಿಚಾರಣೆಯೊಂದು ನ್ಯಾಯಾಸ್ಥಾನದಲ್ಲಿ ನಡೆದಿತ್ತು. ಏಬ್ರಹಾಂ ಲಿಂಕನ್ ಅಪರಾಧಿಯ ಪರ ವಕೀಲ. ತನ್ನ ಕಕ್ಷಿಗಾರ ಸತ್ಯವನ್ನು ಮರೆಮಾಚಿ ಅನೇಕ ಸುಳ್ಳು ಸಾಕ್ಷ್ಯಗಳನ್ನು ತನ್ನಲ್ಲಿ ಕೊಟ್ಟಿದ್ದನೆಂದು ಲಿಂಕನ್ನನಿಗೆ ಸ್ಪಷ್ಟವಾಯಿತು. ಹಠಾತ್ತನೆ ನ್ಯಾಯಾಲಯಕ್ಕೆ ಬರುವುದನ್ನು ನಿಲ್ಲಿಸಿಬಿಟ್ಟ. ನ್ಯಾಯಾಧೀಶ ಹೇಳಿಕಳುಹಿಸಿದ. ತನ್ನೆಡೆಗೆ ಬಂದ ಅಧಿಕಾರಿಯನ್ನು ಕುರಿತು ಲಿಂಕನ್ "ಆ ಮೊಕದ್ದಮೆಯ ಸುಳ್ಳು ಕಾಗದಪತ್ರಗಳನ್ನು ಮುಟ್ಟಿ ನನ್ನ ಕೈ ಕಲುಷಿತವಾಗಿದೆ ; ಹೊಲಸನ್ನು ತೊಳೆಯಲು ಪರಿತಪಿಸುತ್ತಿದ್ದೇನೆ. ಮುಂದುವರಿಸಲಾರೆನೆಂದು ದಯಮಾಡಿ ನ್ಯಾಯಾಧೀಶರಿಗೆ ತಿಳಿಸಿ" ಎಂದನಂತೆ. ತನ್ನ ಕಕ್ಷಿಗಾರನಿಗೆ ಫೀಮಾರಿಮಾಡಿ ಕಡತಗಳನ್ನು ಹಿಂತಿರುಗಿಸಿ ಕೊಟ್ಟುಬಿಟ್ಟ.

ಹಿರಿಯ ಹಣವಂತನೊಬ್ಬ ಒಂದು ಬಾರಿ ಬಂದ. ಬಹಳ ಪ್ರಭಾವಶಾಲಿ. ನ್ಯಾಯಾಲಯದ ದೃಷ್ಟಿಯಿಂದ ಗೆಲ್ಲುವ ಸಾಧ್ಯತೆ ಅವನ ಪರ

ವಾಗಿಯೇ ಇತ್ತು. ಪರಿಣಾಮವಾಗಿ ಬಡಕುಟುಂಬವೊಂದು ತನ್ನ ಸರ್ವಸ್ವವನ್ನೂ ಕಳೆದುಕೊಂಡು ಮುಳುಗಿಹೋಗುತ್ತಿತ್ತು. ಲಿಂಕನ್ ನೇರವಾಗಿ ನಿಷ್ಠುರನಾಗಿ ಕಕ್ಷಿಗಾರನಿಗೆ ನುಡಿದ: "ಸ್ವಾಮಿ, ತಮ್ಮ ಮೊಕದ್ದಮೆಯನ್ನು ಗೆದ್ದುಕೊಡಬಲ್ಲೆ. ಒಂದು ಭಾರಿ ಆಸ್ತಿಯೂ ನಿಮ್ಮ ಕೈ ಸೇರಬಹುದು. ಆದರೆ ಪ್ರಾಮಾಣಿಕ ಕುಟುಂಬವೊಂದು ನ್ಯಾಯಸೂತ್ರಗಳ ತಂತ್ರಕ್ಕೆ ಸಿಕ್ಕಿ ನುಚ್ಚುನೂರಾಗುವುದನ್ನು ಮಾತ್ರ ನಾನು ಸಹಿಸಲಾರೆ. ದಯಮಾಡಿ ನನ್ನನ್ನು ಕ್ಷಮಿಸಿ. ಸ್ನೇಹಿತನಂತೆ ಸಲಹೆ ಮಾಡುತ್ತೇನೆ—ಈ ವಿನಾಶಕಾರಕ ಪರಹಿಂಸೆಯ ಅಪಮಾರ್ಗ ಬಿಟ್ಟು ನ್ಯಾಯಮಾರ್ಗದಿಂದ ಈ ಹಣವನ್ನು ತಾವು ಗಳಿಸಲಾರಿರಾ? ಯೋಚಿಸಿನೋಡಿ." ಈ ಪ್ರಾಮಾಣಿಕ ವ್ಯಕ್ತಿತ್ವದ ಮುಂದೆ ಕ್ಷುದ್ರ ಭಾವನೆಗಳ ಆ "ಸಂಭಾವಿತ" ನಿಲ್ಲಲಾರದೆ ಹುಡಿಯಾಗಿ ಹೋಗಿಬಿಟ್ಟ.

ಚುನಾವಣೆಗಳಲ್ಲಿ ಸ್ಪರ್ಧೆಗೆ ನಿಂತ ಉಮೇದುವಾರರ ಪರಸ್ಪರ ದೂಷಣೆ, ಖಂಡನೆ, ಅಪಪ್ರಚಾರಗಳು ಅಂದೂ ಇದ್ದವು. ಲಿಂಕನ್ನನನ್ನು ವಿರೋಧಿಸಿ ಅಮೆರಿಕದ ಪ್ರತಿನಿಧಿಸಭೆಗೆ ಸ್ಪರ್ಧಿಸಿದ್ದ ಒಬ್ಬ ಪಾದ್ರಿ ಪೀಟರ್ ಕಾರ್ಟ್‌ರೈಟ್ ಪ್ರಾರ್ಥನಾಸಭೆಗಳನ್ನೂ ಬಳಸಿಕೊಂಡು ಲಿಂಕನ್ನನ ಬಗ್ಗೆ ಅಪಪ್ರಚಾರ ಮಾಡಿದ. ಉಪದೇಶ ಭಾಷಣಗಳಲ್ಲಿ ವ್ಯಕ್ತಿದೂಷಣೆಗೆ ತೊಡಗಿದ. ಧಾರ್ಮಿಕ ಪ್ರವೃತ್ತಿಯ ಲಿಂಕನ್ನನು ಚರ್ಚಿನ ಪ್ರಾರ್ಥನೆಗಳಿಗೆ ಬರುತ್ತಿದ್ದದನ್ನು ಸಹಿಸದೆ ಒಂದು ಬಾರಿ ಅವಮಾನಗೊಳಿಸಿದ್ದ. ಚುನಾವಣೆಯಲ್ಲಿ ಲಿಂಕನ್ನನೇ ಜಯ ಗಳಿಸಿದ. ಸ್ವಲ್ಪ ಸಮಯದನಂತರ ಈ ಪಾದ್ರಿಯ ಮಗ ಒಂದು ಕೊಲೆ ಮೊಖದ್ದಮೆಯಲ್ಲಿ ಆಪಾದಿತನಾದ. ಮಗನ ಕಡೆ ವಾದಿಸಲು ಸಮರ್ಥ ವಕೀಲನನ್ನರಸುತ್ತಾ ಕಾರ್ಟ್‌ರೈಟ್ ಲಿಂಕನ್ನನ ಬಳಿಗೇ ಬಂದ. ಔದಾರ್ಯದ ಖನಿಯಾಗಿದ್ದ ಲಿಂಕನ್ ಅವನಿಗೆ ಕ್ಷಮೆತೋರಿ ಆದರದಿಂದಲೇ ಸಹಾಯ ಮಾಡಿದ. ಶತ್ರುವಿನ ಹೃದಯ ನೀರವವಾಗಿ ಈ ಸಾತ್ವಿಕ ವಿಜಯವನ್ನಂಗೀಕರಿಸಿತು.

1846 ರಲ್ಲಿ ಸಂಯುಕ್ತ ಸಂಸ್ಥಾನದ ಪ್ರತಿನಿಧಿಸಭೆಯ ಚುನಾವಣೆಗಳಲ್ಲಿ ಲಿಂಕನ್ ಜಯ ಗಳಿಸಿದ. ರಾಜಕೀಯ ಚಟುವಟಿಕೆಗಳಲ್ಲಿ ಆಸಕ್ತಿ ಕಮ್ಮಿಯಾಗಿ ವಕೀಲಿ ವೃತ್ತಿ ಕುದುರುತ್ತಿರುವ ಕಾಲಕ್ಕೇ ಈ ತಿರುವು ಬಂದೊದಗಿತು. ಸ್ಪ್ರಿಂಗ್‌ಫೀಲ್ಡ್‌ನಲ್ಲೇ ಕೊಳೆಯದೆ ರಾಷ್ಟ್ರದ ರಾಜಧಾನಿಗೆ ಹೋಗಿ ಹೆಚ್ಚು ಯಶಸ್ಸು ಗಳಿಸುವಂತೆ ಆಗ್ರಹ ಮಾಡಿದಳು ಮೇರಿಟಾಡ್. ಹೆಬ್ಬಯಕೆಗಳ

ಒತ್ತಡ, ಶ್ರೀಮಂತಿಕೆಯ ಆಕಾಂಕ್ಷೆ. ವಿಲಾಸಜೀವನದ ಮಹದಾಸೆ ಆಕೆಯನ್ನು ಸದಾ ಪ್ರೇರಿಸುತ್ತಿದ್ದವು. ಪತಿಯ ಮನೋಭಿಲಾಷೆಗಳನ್ನು ತನ್ನ ಪ್ರಭಾವದಿಂದ ಬದಲಿಸಲೆತ್ನಿಸುತ್ತಿದ್ದಳು. ಆದರೆ ರಾಜ್ಯಾಧಿಕಾರವನ್ನು ಯಾವ ಸ್ವಾರ್ಥಸಾಧನೆಗೂ ಬಳಸಿಕೊಳ್ಳದ ಈ ಸಾಧುಪುರುಷನ ಉದ್ದೇಶಗಳೇ ಬೇರೆಯಾಗಿದ್ದವು. ದಾಸ್ಯ ಪದ್ಧತಿಯ ಘೋರ ಕಳಂಕವನ್ನು ತನ್ನ ರಾಷ್ಟ್ರದ ಕಾನೂನು ಕಡತದಿಂದ ತೊಡೆದುಹಾಕುವ ಪವಿತ್ರಕಾರ್ಯಕ್ಕಾಗಿ ಪಣತೊಟ್ಟಿದ್ದ ಲಿಂಕನ್. ಅತ್ಯುನ್ನತ ರಾಷ್ಟ್ರ ಸಭೆಯಲ್ಲಿ ತನ್ನ ಸಂಕಲ್ಪ ನೆರವೇರುವುದೆಂಬ ಮಹತ್ವಾಕಾಂಕ್ಷೆಯಿಂದ ರಾಜಕೀಯ ಕ್ಷೇತ್ರದಲ್ಲಿ ನುಗ್ಗಿ ಮುನ್ನಡೆದ ಮೇಲೆ ಮೇಲೆ ಏರಿದಂತೆಲ್ಲ ಅವನ ವಿನಯ. ಸರಳತೆ. ವಿರಕ್ತಿ. ಸತ್ಯನಿಷ್ಠುರ. ಸಹಜತೆ ಇವೂ ಬೆಳೆದು ನಿಂತವು. ಶ್ರೀಮಂತ ಕೃತಕ ನಾಗರಿಕತೆಯ ಮೆರುಗಿಗೆ ಮಾರುಹೋಗಿದ್ದ ಮೇರಿಟಾಡ್ ಗಂಡನ ಸ್ವಭಾವಕ್ಕೆ ಕಿಡಿಕಿಡಿಯಾದಳು. ಲೋಕಮರ್ಯಾದೆಯ ಆಡಂಬರಪ್ರದರ್ಶನಕ್ಕಾಗಿ ಹಾತೊರೆಯುತ್ತಿದ್ದ ಆ ಪ್ರೌಢೆ, ಅನೇಕವೇಳೆ ಲಿಂಕನ್ನನ ಅಸಹಕಾರದಿಂದ ರೊಚ್ಚಿಗೇಳುತ್ತಿದ್ದಳು. ಕೆಲವುಬಾರಿ ಸ್ವತಂತ್ರಳಾಗಿ ವರ್ತಿಸಿ ಅಪಹಾಸ್ಯಕ್ಕೂ ಗುರಿಯಾದಳು.

ವಾಷಿಂಗ್‌ಟನ್ ನಗರದಲ್ಲಿ ರಾಷ್ಟ್ರದ ಶಾಸನಕರ್ತನಾಗಿ ಮೊದಲ ಬಾರಿಗೆ ಪ್ರತಿನಿಧಿಸಭೆಯಲ್ಲಿ ಕುಳಿತ ಲಿಂಕನ್ ದಾಸ್ಯ ಪದ್ಧತಿಯ ನಿವಾರಣೆಗಾಗಿಯೇ ತನ್ನ ಕಾರ್ಯ ಮೀಸಲೆಂಬ ಸಂಕಲ್ಪ ಮಾಡಿದ. ಪಶ್ಚಿಮ ರಾಷ್ಟ್ರವೊಂದರ ಸಾಮಾನ್ಯ ಜನತಾ ಸಮೂಹದ ಪ್ರತಿನಿಧಿಯ ವಾಣಿ ಉನ್ನತ ಸಭೆಯ ಸಭಾಂಗಣವನ್ನೆಲ್ಲ ತುಂಬಿ ನಿಂತಿತು. ಸಾಮಾನ್ಯತಾ ಶ್ರೀ ರಾಜಕೀಯದ ಪರಂಪರಾನುಗತ "ನೀಲರಕ್ತ"ದ ಪಟ್ಟಭದ್ರ ದೊಡ್ಡಸ್ತಿಕೆಗಳನ್ನು ಪುಡಿ ಮಾಡಿತು. "ಏಕೈಕ ಮಾನದಂಡ ಮಾನವನ ಮಾನವೀಯತೆ. ಈ ಅಳತೆಗೋಲನು ನಿರಾಕರಿಸುವ ರಾಜಕೀಯ ಸರ್ವಥಾ ತ್ಯಾಜ್ಯ" ಎಂದೇ ಲಿಂಕನ್ನನ ನಂಬಿಕೆ. ಶಾಸನಸಭೆಯಲ್ಲಿ ಯುದ್ಧಸನ್ನದ್ಧತೆಯ ಮನೋಭಾವವನ್ನು ಖಂಡಿಸಿದ. ಮೆಕ್ಸಿಕೋ ದೇಶದೊಡನೆ ಯುದ್ಧ ಕೂಡದು ಎಂದ. ಕ್ರಮ ಕ್ರಮವಾಗಿ ದಾಸ್ಯವಿಮೋಚನೆಗೆ ಸಹಾಯಕವಾಗುವಂತಹ ಕಾನೂನಿನ ಕರಡು ಮಸೂದೆಯೊಂದನ್ನು ತಯಾರಿಸಿ ಸಭೆಯ ಮುಂದಿಟ್ಟ. ಶಾಸನಸಭೆಯ ಒಪ್ಪಿಗೆ ದೊರೆಯಲಿಲ್ಲ. ಎರಡು ವರ್ಷಗಳು ಸದಸ್ಯನಾಗಿ ಲಿಂಕನ್ ಪಡೆದ ಅನುಭವ

ಕಹಿಯಾಗಿಯೇ ಇತ್ತು. ಮತ್ತೆ 1854 ರ ವರೆಗೆ ಆತ ಚುನಾವಣೆಗೆ ನಿಲ್ಲಲೇ ಇಲ್ಲ.

೭

ತಂದೆ ಥಾಮಸ್ ಲಿಂಕನ್ ಈ ಸಮಯಕ್ಕೆ ವೃದ್ಧಾಪ್ಯದಿಂದ ಮೃತನಾದ. ಮಲತಾಯಿ ಸಾರಾಬುಷ್ ಜಾನ್ಸನ್ನಳ ನೇರವಾದ ಉಪಕಾರ ಸ್ಮರಿಸಿ ಆಕೆಯನ್ನು ಪೋಷಿಸಿದ. ಅವಳ ಮಕ್ಕಳ ದುಷ್ಟಚಾಳಿಗಳು, ತಂದೆ ಬಿಟ್ಟು ಹೋದ ಸಾಲದ ಹೊರೆ ಎರಡನ್ನೂ ನಿರ್ವಹಿಸಬೇಕಾಯಿತು. ಅನೇಕವೇಳೆ ಹೆಂಡತಿಯ ಅಸಹಕಾರದಿಂದ ವಿಷಣ್ಣನಾಗುತ್ತಿದ್ದ ಲಿಂಕನ್. ಮಲತಾಯಿ ಮಲತಮ್ಮಂದಿರಿಗೆ ಬೋಧಕ ಪತ್ರಗಳನ್ನು ಬರೆಯುತ್ತಾ ತಿದ್ದಲು ಯತ್ನ ಮಾಡಿದ. ಮೃದುಭಾಷಿಯೂ, ಮಿತಭಾಷಿಯೂ ಆದ ಅಣ್ಣನ ಮಾತುಗಳು ಮೂರ್ಖ ತಮ್ಮಂದಿರಿಗೆ ಪಥ್ಯವಾಗಲಿಲ್ಲ. ಲಿಂಕನ್ನನ ಸಂಪಾದನೆಯಲ್ಲಿ ಅವರು ಪಾಲು ಪಡೆಯುವ ಪ್ರಯತ್ನ ಸಫಲವಾಗುತ್ತಿತ್ತೇ ಹೊರತು ಬಾಳನ್ನು ತಿದ್ದಿಕೊಳ್ಳುವ ಕಾರ್ಯದಲ್ಲಿ ಎಂದೂ ಅವರು ಪ್ರಯತ್ನಶೀಲರಾಗಲಿಲ್ಲ. ಸಾರಾ ಬುಷ್ ಜಾನ್ಸನ್ನಳು ಮಾತ್ರ ಕೃತಜ್ಞತೆಯ ಕಣ್ಣೀರಿನಿಂದ ತನ್ನ ಪ್ರಖ್ಯಾತ ಮಲಮಗನ ಕೋಮಲ ಹೃದಯವನ್ನರಿತು ಸ್ಮರಿಸಿದಳು. ಲಿಂಕನ್ನನ ಬಾಲ್ಯದಲ್ಲೊಮ್ಮೆ ಈ ಮಲತಾಯಿ ವಾತ್ಸಲ್ಯಪೂರ್ಣ ಧ್ವನಿಯಿಂದ "ಏಬ್ರಹಾಂ, ನೀನು ಚೆನ್ನಾಗಿ ಓದಿ ದೊಡ್ಡ ಪದವಿಗೇರುತ್ತೀ ಎಂದು ನನಗೆ ಭಾಸವಾಗುತ್ತದೆ. ಆದರೆ ಅಂಥ ಪದವಿಗೇರಿದಾಗ ಮತ್ಸರ ಪಡುವವರೆಲ್ಲಿ ನಿನ್ನನ್ನು ಕೊಂದು ಬಿಟ್ಟಾರೋ ಎಂಬ ಅಳುಕು ಆಗುತ್ತದೆ" ಎಂದು ಮುಂಗುರುಳನ್ನು ಮೂಸಿ ತಬ್ಬಲಿ ಬಾಲಕನನ್ನು ಬಾಚಿ ತಬ್ಬಿದ್ದಳಂತೆ. ಆ ತಾಯಿ ಸಾಕಿದ ಈ ಮಗ ರಾಷ್ಟ್ರಾಧ್ಯಕ್ಷ ಪದವಿಗೇರಿದುದನ್ನೂ ಯಶಸ್ಸಿನ ಶಿಖರದಲ್ಲಿದ್ದಾಗ ಹಠಾತ್ತನೆ ಪತನಾದುದನ್ನೂ ಕಂಡಳು.

ಸ್ಪ್ರಿಂಗ್‌ಫೀಲ್ಡ್‌ನಲ್ಲಿ ವಕೀಲಿ ವೃತ್ತಿಯ ಪಾಲುದಾರನಾಗಿ ಮತ್ತೊಬ್ಬ ಆತ್ಮೀಯ ಗೆಳೆಯ ಲಿಂಕನ್ನನನ್ನೊಡಗೂಡಿದ. ವಿಲಿಯಂ ಹೆಚ್. ಹರ್ನ್‌ಡನ್. ಈ ಗೆಳೆತನ ಜೀವನದುದ್ದಕ್ಕೂವರೆಗೂ ಬೆಳೆದು ಬಂತು. ಆತ ಲಿಂಕನ್ನನ ಜೀವನಚರಿತ್ರೆಯನ್ನು ಬರೆದಿದ್ದಾನೆ. ಈ ಗೆಳೆಯರ ಜನಪ್ರಿಯ ಕಾರ್ಯ ಚಟುವಟಿಕೆಗಳಲ್ಲಿ ಸ್ಪರ್ಧಿಸಿ ನಿಂತವನು ಡೌಗ್ಲಾಸ್. ಪ್ರೇಯಸಿಯ ಪ್ರೇಮಕ್ಕೆ

ಸ್ಪರ್ಧಿಸಿ ಸೋತ ಈ ಗೆಳೆಯ ಲಿಂಕನ್ನನ ಜೀವನ ಕ್ಷೇತ್ರಗಳೆಲ್ಲೆಲ್ಲಾ ಸ್ಪರ್ಧಿಯಾದ. ಅಂದಿನ ರಾಜಕೀಯ ಕ್ಷೇತ್ರದಲ್ಲಿ ಡೆಮೊಕ್ರಾಟಿಕ್ ಪಕ್ಷದ ಪ್ರಮುಖ ನಾಯಕ ಡೌಗ್ಲಾಸ್. ಆಗತಾನೇ ಜನಿಸಿದ್ದ ರಿಪಬ್ಲಿಕನ್ ಪಕ್ಷಕ್ಕೆ ಲಿಂಕನ್ ಪ್ರಮುಖನಾದ. ಸ್ಪ್ರಿಂಗ್‌ಫೀಲ್ಡಿನಂಥ ಸಣ್ಣ ನಗರದಲ್ಲಿ ನಡೆದ ಈ ಪ್ರಬಲ ರಾಜಕಾರಣಿಗಳಿಬ್ಬರ ಪ್ರಚಂಡ ವಾಗ್ಯುದ್ಧ ರಾಷ್ಟ್ರಮಟ್ಟದ ಪತ್ರಿಕೆಗಳಲ್ಲಿ ಪ್ರಾಮುಖ್ಯವಾಗಿ ಪ್ರಕಟಿತವಾಗುತ್ತಿತ್ತು. ಶ್ರೀಮಂತಿಕೆ, ವಿದ್ಯಾಸಂಪನ್ನತೆ, ಸಾಮಾಜಿಕ ಘನತೆ, ಅಧಿಕಾರ ದರ್ಪದ ಸಹಜಪ್ರವೃತ್ತಿ ಇವು ಡೌಗ್ಲಾಸನ ಪ್ರಭಾವಳಿ. ಪ್ರಾಮಾಣಿಕತೆ, ಸರಳತೆ, ಜನಮನದೊಡನೆ ಮಿಡಿಯುವ ಕೋಮಲತೆ, ದಲಿತ ವರ್ಗದ ಬಗ್ಗೆ ಅನುಕಂಪ, ವಿನಯಪೂರ್ಣ ಭಾಷೆ ಇವು ಲಿಂಕನ್ನನ ಮಹಾಸ್ತ್ರಗಳು. ಸಾರ್ವಜನಿಕ ವೇದಿಕೆಯ ಮೇಲೆ ಇಬ್ಬರೂ ನಿಂತು ವಾದಿಸಿದುದುಂಟು. ಗುಲಾಮ ಪದ್ಧತಿ, ರಾಷ್ಟ್ರೀಯ ಐಕ್ಯತೆ, ವ್ಯಕ್ತಿ ಸ್ವಾತಂತ್ರ್ಯ, ಸಾಮಾಜಿಕ ಮೇಲ್ಮೆಗಳನ್ನು ಕುರಿತು ತಮ್ಮ ತಮ್ಮ ವಿಚಾರಧೋರಣೆಗಳನ್ನು ಇವರಿಬ್ಬರೂ ಮಹಾಜನತೆಗೊಪ್ಪಿಸುತ್ತಿದ್ದರು. ಡೌಗ್ಲಾಸನ ಪ್ರತಿಭಾಪೂರ್ಣ ತಾರ್ಕಿಕ ಬುದ್ಧಿಶಕ್ತಿ ಲಿಂಕನ್ನನ ಆತ್ಮೀಯ ಸತ್ಯನಿಷ್ಠ ಹೃದಯಾನುಕಂಪನದ ಭಾವಗಂಗೆಗೆ ಮಣಿಯಬೇಕಾಯಿತು. "ರಾಷ್ಟ್ರ ಹೋಳು ಹೋಳಾಗಿ ಬದುಕಲಾರದು : ದಾಸ್ಯ ಪದ್ಧತಿಯ ದುರಾಚಾರ ಮಾನವೀಯತೆಗೆ ಸಲ್ಲದು ; ಕುಟುಂಬಕ್ಕಾಗಿ ಸ್ವಾರ್ಥವನ್ನೂ ಸಮಾಜಕ್ಕಾಗಿ ಕುಟುಂಬವನ್ನೂ ಲೋಕಸಂರಕ್ಷಣಾರ್ಥಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡುವ ಸಿದ್ಧತೆಯೇ ಬಾಳಿನ ಪ್ರಮುಖ ಗುರಿ" ಎಂಬ ಮಹಾತತ್ವ ಈ ಮೃದುಭಾಷಿಯ ಮೃದುಹೃದಯ ಧೀರೋದಾತ್ತ ವಾಣಿಯಲ್ಲಿ ಪಸರಿಸಿ ನಿಂತಿತು.

ಜಗತ್ತು ಕೆಂಗಣ್ಣಿನಿಂದ ಭೀಕರವಾಗಿ ದೃಷ್ಟಿಸಿದರೂ, ಅಂತಃಸಾಕ್ಷಿಗೆ ನಿಷ್ಠನಾಗಿ ಏಕಾಂಗಿಯಾಗಿ ನಿಂತ ಲಿಂಕನ್. ಸಂಯುಕ್ತ ಸಂಸ್ಥಾನದ ಚರಿತ್ರೆಯಲ್ಲಿ ಬಿರುಗಾಳಿಯೆಂತೆದ್ದ ಭಯಾನಕ ಅಂತಃಕಲಹದ ಕುರುಕ್ಷೇತ್ರ ಸನ್ನದ್ಧವಾಗುತ್ತಿತ್ತು. ಉತ್ತರ ದಕ್ಷಿಣಗಳು ಒಡೆದು ನಿಂತಿದ್ದವು. ದಾಸ್ಯ ಪಾಳೆಗಾರಿಕೆ, ಅಂಧ ಪ್ರಮತ್ತ ಅಧಿಕಾರಶಾಹಿ, ಅಧೋಗತಿಗಿಳಿದ ದಲಿತಜನಾಂಗ, ಇವುಗಳ ಮಧ್ಯೆ ವಿವೇಕವಾಣಿ ಸ್ಥಗಿತವಾಗಿತ್ತು. ಅಲ್ಲಲ್ಲಿ ಪ್ರತಿಭಟಿಸಿ ನಿಂತ ಮಹಾವೀರರು ದಬ್ಬಾಳಿಕೆಯಿಂದ ಹತರಾದರು. ಈ ಕಾಲದ ಮಹಾಪುರುಷ ಮಹಾವ್ಯಕ್ತಿ

ಗಳನ್ನು "ಧೈರ್ಯದ ಮಹಾಕಿಡಿಗಳು" ಎಂದು ಕೆನಡಿ ಚಿತ್ರಿಸಿದ್ದಾರೆ. ಮೆಸ್ಸಾಚುಸೆಟ್ಸಿನ ಡೇನಿಯಲ್ ವೆಬ್ಸಟರ್, ಟೆಕ್ಸಾಸಿನ ಸ್ಯಾಮ್ ಹೊಸ್ಟನ್ ಮತ್ತು ಮಿಸ್ಸಿಸಿಪಿಯ ಲೂಷಿಯಸ್ ಲೆಮಾರ್. ಮೊದಲಿನವರಿಬ್ಬರು ಲಿಂಕನ್ನನಿಗೆ ಪೂರ್ವದಲ್ಲೂ, ಕೊನೆಯವರು ನಂತರವೂ, ಏಕೈಕ ರಾಷ್ಟ್ರ, ಸಮಾನ ಮಾನವತೆಗಳಿಗಾಗಿ ಆದ ಹೋರಾಟದ ಬಲಿಪೀಠದಲ್ಲಿ ಹತರಾದವರು. ದಕ್ಷಿಣ ಸಂಸ್ಥಾನಗಳ ಕಾನ್‌ಫೆಡರೇಷನ್, ಉತ್ತರದ ಸಂಯುಕ್ತರಾಷ್ಟ್ರ ಒಡೆದು ಹೋಳಾಗಿತ್ತು. ದಾಯಾದಿಮತ್ಸರ ಸರ್ವನಾಶದ ದುರಂತಕ್ಕೆ ಸನ್ನದ್ಧ ವಾಗುತ್ತಿತ್ತು. ಗುಲಾಮರ ದಾಸ್ಯವಿಮೋಚನೆ ಭಿನ್ನಾಭಿಪ್ರಾಯದ ಕಗ್ಗಂಟಾಗಿದ್ದಿತು. ಲಿಂಕನ್ ರಾಜಕೀಯ ಕ್ಷೇತ್ರದ ಶಿಖರದಲ್ಲಿ ಬಂದು ನಿಂತಾಗ ದೇಶವೇ ಒಂದು ಅಗ್ನಿಪರ್ವತದ ಮೇಲೆ ನಿಂತಿತ್ತು.

೮

ಡೆಮೊಕ್ರಾಟಿಕ್ ಪಕ್ಷದ ನಾಯಕನಾಗಿ ಡೌಗ್ಲಾಸ್ ಎರಡು ಬಾರಿ ರಿಪಬ್ಲಿಕನ್ ಪಕ್ಷದ ಲಿಂಕನ್ನನನ್ನು ಚುನಾವಣೆಯಲ್ಲಿ ಸೋಲಿಸಿದ. ನಿರಾಶೆ ನಿರುತ್ಸಾಹಗಳ ಮಧ್ಯದಲ್ಲೂ ಧೈರ್ಯಗೆಡದೆ ಸ್ವಾತಂತ್ರ್ಯ ಐಕ್ಯತೆಗಳ ಶಾಶ್ವತ ಮೌಲ್ಯಗಳಿಗೆ ನಿಂತ ರಿಪಬ್ಲಿಕನ್ ಪಕ್ಷವನ್ನು ಪ್ರಬಲಗೊಳಿಸಿದ ಲಿಂಕನ್. 1860 ರ ವೇಳೆಗೆ ಈ ಪಕ್ಷ ಅಮೆರಿಕದ ರಾಜಕೀಯ ಕ್ಷೇತ್ರದ ಪ್ರಮುಖ ಪಕ್ಷವಾಗಿ ಬೆಳೆಯಿತು. ಆ ವರ್ಷದ ವಾರ್ಷಿಕಾಧಿವೇಶನದಲ್ಲಿ ಏಬ್ರಹಾಂ ಲಿಂಕನ್ನನನ್ನು ತನ್ನ ಏಕೈಕ ಪ್ರತಿನಿಧಿಯಾಗಿ ರಾಷ್ಟ್ರಾಧ್ಯಕ್ಷ ಚುನಾವಣೆಗೆ ನಿಲ್ಲಿಸಲು ರಿಪಬ್ಲಿಕನ್ ಪಕ್ಷ ನಿರ್ಣಯಿಸಿತು.

ಈ ನಿರ್ಣಯ ಕೈ ಸೇರಿದಾಗ ಲಿಂಕನ್ ಸ್ಪ್ರಿಂಗ್‌ಫೀಲ್ಡಿನ ಕ್ಲಬ್ಬೊಂದರಲ್ಲಿ ಚೆಂಡಾಟವಾಡುತ್ತಿದ್ದ. "ಮನೆಯಲ್ಲಿದ್ದ ಮಹದಾಸೆಯ ಹೆಣ್ಣು ಈ ಸುದ್ದಿಯಿಂದ ಹರ್ಷಿತಳಾದಾಳು" ಎಂದು ಧಾವಿಸಿ ಬಂದನಂತೆ. ಮೇರಿಟಾಡಳ ಕಿವಿಗಳು ನಿಮಿರಿ ನಿಂತವು. ಅಪರೂಪವಾದ ಸಂತಸದಿಂದ ಆ ಮನೆ ತುಂಬಿದ ಮಹತ್ವದ ದಿನವಾಯಿತು ಅಂದು. ಉದ್ವೇಗಪೂರ್ಣ ಮಹತ್ವಾಕಾಂಕ್ಷೆಗಳು ಲಿಂಕನ್ನನ ಹೃದಯದಲ್ಲಿ ಭೋರ್ಗರೆದವು. ರಾಜ್ಯಸೂತ್ರಗಳನ್ನು ಹಿಡಿದು ಒಂದು ಹಿರಿಯ ಜನಾಂಗವನ್ನು ಕ್ರಾಂತಿಪಥದ ಕಠಿಣ ಅಗ್ನಿಪರೀಕ್ಷೆಯನ್ನೆದುರಿಸಲು ಸಿದ್ಧಮಾಡುವ ಸಂಕಲ್ಪ ಮಾಡಿದ.

ಆರು ತಿಂಗಳ ಕಾಲ ಪ್ರಚಾರದ ಪ್ರಚಂಡ ಧೂಳಿ ಎದ್ದು ನಿಂತಿತು. ಡೆಮಾಕ್ರಾಟಿಕ್ ಪಕ್ಷದ ಪ್ರಬಲ ಪತ್ರಿಕೆಗಳು ವಾಚಾಮಗೋಚರವಾಗಿ ಈ ಜನನಾಯಕನನ್ನು ಹಳಿದವು. ಪಟ್ಟಭದ್ರ ಹಿತಗಳು ಕೋಪಗೊಂಡು ಕೂಗಿದವು. ದಕ್ಷಿಣ ಸಂಸ್ಥಾನಗಳು ಭಯಗ್ರಸ್ತವಾದವು. ಅಮೆರಿಕದ ರಾಜ್ಯಾಂಗದಲ್ಲಿ ಅಧ್ಯಕ್ಷಸ್ಥಾನ ವಿಶಿಷ್ಟವಾದುದು. ನೇರವಾಗಿ ಜನತೆಯಿಂದ ಚುನಾಯಿತನಾಗುವ ಅಧ್ಯಕ್ಷ ರಾಜ್ಯಾಡಳಿತದಲ್ಲಿ ಅಂತಿಮ ಅಧಿಕಾರವುಳ್ಳವನು. ವಿವಿಧ ಸಂಸ್ಥಾನಗಳ ಶಾಸನ ಸಭಾಸದಸ್ಯರ ಚುನಾಯಿತ ಪ್ರತಿನಿಧಿಗಳ ಮಹಾಮಂಡಳಿ. "ಕಾಲೇಜ್ ಆಫ್ ಡೆಲಿಗೇಟ್ಸ್", ನಾಲ್ಕು ವರ್ಷಗಳಿಗೊಮ್ಮೆ ಅಧ್ಯಕ್ಷನನ್ನು ಚುನಾಯಿಸುತ್ತದೆ. ಅಲ್ಲಿನ ರಾಜಕೀಯ ಪಕ್ಷಗಳು ತಮ್ಮ ಉಮೇದುವಾರನನ್ನು ಅಧ್ಯಕ್ಷಪದವಿಯ ಸ್ಪರ್ಧೆಗೆ ನಾಮಕರಣ ಮಾಡುತ್ತವೆ. ಎಲ್ಲ ಸಂಸ್ಥಾನಗಳಲ್ಲೂ ಚುನಾವಣೆ ನಡೆದು ಬಹುಮತ ಗಳಿಸಿದ ಉಮೇದುವಾರ ಅಧ್ಯಕ್ಷನಾಗುವನು. ಸೆನೆಟ್ ಮತ್ತು ಪ್ರತಿನಿಧಿಸಭೆಗಳೆರಡೂ ಸೇರಿ ಅಮೆರಿಕ ಸಂಯುಕ್ತ ಸಂಸ್ಥಾನದ ರಾಷ್ಟ್ರೀಯ ಲೋಕಸಭೆ ಅಥವಾ ಕಾಂಗ್ರೆಸ್. ರಾಷ್ಟ್ರಾಧ್ಯಕ್ಷನೂ ಮಂತ್ರಿಮಂಡಳವೂ ಆಡಳಿತದ ಬಗ್ಗೆ ಸರ್ವತಂತ್ರ ಸ್ವತಂತ್ರರು. ರಾಷ್ಟ್ರೀಯ ಧೋರಣೆಗಳ ಬಗ್ಗೆ ಮಾತ್ರ ಕಾಂಗ್ರೆಸ್ಸಿನ [ಲೋಕ ಸಭೆ] ಅಭಿಮತವನ್ನು ಪಡೆಯಬೇಕಾಗುವುದು. ಕಾಂಗ್ರೆಸ್ಸಿನ ಸಭೆಗಳಿಗೆ ಅಧ್ಯಕ್ಷನಾಗಲೀ ಮಂತ್ರಿ ಮಂಡಳದ ಸದಸ್ಯರಾಗಲೀ ನೇರವಾಗಿ ಜವಾಬ್ದಾರರಾಗಿರುವುದಿಲ್ಲ. ರಾಷ್ಟ್ರದ ಸೇನಾಬಲಕ್ಕೆ ಅಧ್ಯಕ್ಷನೇ ಮಹಾದಂಡನಾಯಕ. ಇತರ ಪ್ರಜಾಪ್ರಭುತ್ವ ರಾಜ್ಯಾಂಗಗಳಲ್ಲಿಲ್ಲೂ ಅಮೆರಿಕದ ಅಧ್ಯಕ್ಷ ಪದವಿಗಿರುವ ವಿಶೇಷಾಧಿಕಾರಗಳು ಇಲ್ಲ. ಪ್ರಪಂಚದಲ್ಲೇ ಅದು ಅತ್ಯುನ್ನತ ಪದವಿಗಳಲ್ಲೊಂದಾಗಿ ಅತ್ಯಂತ ಪ್ರಭಾವಯುತ ಸ್ಥಾನವೆಂದು ಪರಿಗಣಿಸಲ್ಪಟ್ಟಿದೆ.

ಏಬ್ರಹಾಂ ಲಿಂಕನ್ ಅಧ್ಯಕ್ಷಪದವಿಗೆ 1860 ರಲ್ಲಿ ಚುನಾಯಿತನಾದ. ಸಾಧಾರಣ ಜನತೆಯ ಸಂಘಟಿತ ಜಾಗೃತಿಯ ಸಂಕೇತವಾಗಿ ಆ ಉನ್ನತ ಪದವಿಯನ್ನಲಂಕರಿಸಿದ. ದೇಶ ಅಂತಃಕಲಹದಲ್ಲಿ ನುಚ್ಚುನೂರಾಗುವ ಶಂಕೆಯಿತ್ತು. ಯುದ್ಧದ ಕಾರ್ಮೋಡಗಳು ನಿಬಿಡವಾಗುತ್ತಿದ್ದವು. ಒಂದು ಕ್ಷಣ ದಿಗ್ಮೂಢನಾಗಿ ನಿಂತ ಲಿಂಕನ್. ಅತ್ಯುನ್ನತ ಅಧಿಕಾರವರ್ಗ. ಪ್ರತಿಷ್ಠಿತ ಸಭಾಸದಸ್ಯರೆಲ್ಲರ ಮಧ್ಯೆ ಏಕಾಕಿಯಾಗಿ ನಿಂತ. ಅವನ ಹಳೆಯ ಸ್ಪರ್ಧಿ

ಪೌಗ್ಲಾಸ್—ಆಗ್ಗೆ ರಾಷ್ಟ್ರದ ಉಚ್ಚ ಅಧಿಕಾರಿ—ಮುಂದೆ ಬಂದು ತನ್ನ ಅಧ್ಯಕ್ಷನ ಕೈಲಿದ್ದ ಟೋಪಿಯನ್ನೂ ಬೆತ್ತವನ್ನೂ ತೆಗೆದುಕೊಂಡು ನಿಂತ. ಸಮಾರಂಭವೂ ಸಾಂಪ್ರದಾಯಿಕ ಅಧ್ಯಕ್ಷ ಭಾಷಣವೂ ಆದವು. ದೈವಾನುಗ್ರಹ ಆತ್ಮನಿಷ್ಠೆ ಇವೆರಡರಲ್ಲೇ ಪೂರ್ಣನಂಬಿಕೆಯಿಟ್ಟು, ಗಂಭೀರವಾಣಿಯಿಂದ ರಾಷ್ಟ್ರೀಯ ದೃಢ ಸಂಕಲ್ಪವನ್ನು ಸ್ಪಷ್ಟವಾಗಿ ಘಂಟೆ ಹೊಡೆದಂತೆ ಲಿಂಕನ್ ಘೋಷಿಸಿದ. ಅಳುಕು ಹೃದಯಗಳಲ್ಲಿ ಆ ಘೋಷ ಪ್ರಬಲವಾಗಿ ಅಪ್ಪಳಿಸಿತು. ಸನ್ನಿಹಿತವಾದ ಕಾಲ ಸನ್ನದ್ಧನಾದ ನಾಯಕ ಏಕೀಭವಿಸಿದ್ದವು. ಚರಿತ್ರಾರ್ಹ ಘಟನೆಯೊಂದು ಅಂದು ಅಲ್ಲಿ ಸಂಭವಿಸಿ ಚಿರಸ್ಮರಣೀಯವಾಯಿತು.

೬

ಏಕೈಕ ಪ್ರಭುತ್ವದ ಅಂಗ ರಾಜ್ಯಗಳೆಂದೇ ಎಲ್ಲ ಸಂಸ್ಥಾನಗಳನ್ನೂ ಪರಿಗಣಿಸಿದ ಲಿಂಕನ್. ತನ್ನ ಅಂತರ್ಯದ ಆಕಾಂಕ್ಷೆಯಾಗಿದ್ದ ದಾಸ್ಯವಿಮೋಚನಾ ಕಾರ್ಯದಲ್ಲಿ ರಾಷ್ಟ್ರಘಾತಕ ವಿಧ್ವಂಸಕ ಅಂತರ್‌ಯುದ್ಧಕ್ಕೆಡೆಗೊಡಲು ಸಮ್ಮತಿಸಲಿಲ್ಲ. ಕೇಂದ್ರದ ಅಧಿಕಾರಕ್ಕೊಳಪಟ್ಟಿದ್ದ ಸಮ್ಟರ್ ಕೋಟೆಯ ಮೇಲೆ 1861 ಏಪ್ರಿಲ್‌ನಲ್ಲಿ ದಕ್ಷಿಣ ಸಂಸ್ಥಾನಗಳ ಒಕ್ಕೂಟ ಧಾಳಿಮಾಡಿತು. ಅನಿವಾರ್ಯವಾಗಿ ಯುದ್ಧಕ್ಕೆ ಸನ್ನದ್ಧವಾಗಬೇಕಾಯಿತು ಲಿಂಕನ್. ದೇಶಕ್ಕೆ ಸ್ಫೂರ್ತಿದಾಯಕ ಕರೆಕೊಟ್ಟ. ತೊಂಬತ್ತು ಸಾವಿರ ಮಂದಿ ಯುವಕರು ರಾಷ್ಟ್ರದ ಐಕ್ಯತೆಗೆ ಪಣತೊಟ್ಟು ಸೈನ್ಯಕ್ಕೆ ಸೇರಿದರು. ಅಧ್ಯಕ್ಷ ಪದವಿಯ ಹೊಸಿಲಿನಲ್ಲೇ ಬಂದ ಮಹಾವಿಪತ್ತಿನ ಕಾಲಕ್ಕೆ ರಾಷ್ಟ್ರೀಯ ಸೇನಾಪಡೆಯ ಉನ್ನತಾಧಿಕಾರವನ್ನೂ ಆತ ವಹಿಸಿಕೊಳ್ಳಬೇಕಾಯಿತು.

ಈ ಸಂದಿಗ್ಧ ಸಮಯದಿಂದ ಮೇರಿಟಾಡಳಿಗೆ ಆಶಾಭಂಗವಾಗಿಬಿಟ್ಟಿತು. ಅಧ್ಯಕ್ಷನ ಹೆಂಡತಿಯೆಂದು ಬಣ್ಣದ ಬೀಸಣಿಕೆಯಾಗಿ ನಲಿಯಲಾಗಲಿಲ್ಲ. ಸಮಾರಂಭಗಳೆಲ್ಲ ರದ್ದಾಗಿಬಿಟ್ಟವು. ನಾಲ್ಕು ವರ್ಷದ ಎರಡನೇ ಮಗನ ಮರಣದಿಂದ ಘಾಸಿಯಾಗಿದ್ದ ಆ ಮಾತೃ ಹೃದಯಕ್ಕೆ 1862 ರಲ್ಲಿ 12 ವರ್ಷದ ಮೂರನೇ ಮಗನ ಮೃತ್ಯು ಮತ್ತೆ ಆಘಾತ ಮಾಡಿತು. ಯುದ್ಧ, ಮಗನ ಸಾವುಗಳೆರಡೂ ತನ್ನ ಅಧ್ಯಕ್ಷ ಪದವಿಯ ಉಪಕ್ರಮದಲ್ಲೇ ಒದಗಿಬಂದು ಲಿಂಕನ್ನನ ಹೃದಯವೂ ದುಃಖತಪ್ತವಾಯಿತು. ಅವನ ನಾಲ್ಕು ಜನ ಗಂಡುಮಕ್ಕಳಲ್ಲಿ ಇಬ್ಬರೇ ಉಳಿದರು.

ತನ್ನ ನೋವುಗಳನ್ನು ಅರಗಿಸಿಕೊಂಡು ಕಾರ್ಯದಲ್ಲಿ ತೊಡಗಿ ನಿಲ್ಲುವ ನಿರ್ಲಿಪ್ತ ಮನೋಧರ್ಮ ಈ ಮಹಿಮಾಪುರುಷನಿಗೆ ಸಹಜವಾಗಿತ್ತು. ಕುಸುಮ ದಂತೆ ಕೋಮಲನಾದವನು ದಕ್ಷಿಣದ ಕಾನ್‌ಫೆಡರೇಷನ್ ಸೈನ್ಯಗಳ ಮೇಲೆ ವಜ್ರಕಠೋರನಾಗಿ ಪ್ರತಿಭಟನೆಯನ್ನು ವ್ಯವಸ್ಥೆ ಮಾಡಿದನು. ನಾಲ್ಕು ವರ್ಷ ಗಳ ದೀರ್ಘಕಾಲ ಯುದ್ಧ ಅಮೆರಿಕದ ಜನಜೀವನವನ್ನು ನುಚ್ಚುನೂರು ಮಾಡಿತು.

ಯುದ್ಧದ ಫಿರಂಗಿಗಳು ನಾಲ್ಕು ವರ್ಷಗಳು ಘೋರ್ಗರೆದವು. ಸೋದರರ ಮಧ್ಯೆ ರಕ್ತದಾಹದ ಹುಚ್ಚೆದ್ದು ರಾಷ್ಟ್ರಘಾತಕ ದುರಂತವಾಯಿತು. ಆರೂವರೆ ಲಕ್ಷ ಅಮೆರಿಕದ ಯೋಧರು ಮಡಿದರು. ಆವೇಶದ ದುಡುಕಿನಲ್ಲಿ ವಿವೇಕದ ದಾರಿ ತಪ್ಪಿದ ಸೈನ್ಯಾಧಿಕಾರಿಗಳ ಮೌಢ್ಯ ಸಾವಿರಾರು ಮುಗ್ಧ ಯುವಕರ ಬಿಸಿ ರಕ್ತವನ್ನು ಚೆಲ್ಲಿದ ದುರಂತ ಘಟನೆಗಳನ್ನು ಕಂಡು ಲಿಂಕನ್ ಅತ್ಯಂತ ಸಂಕಟಪಟ್ಟ. ಸಾವುನೋವುಗಳನ್ನು ಅನುಭವಿಸಿದ ಸಂಸಾರಗಳ ದುಃಖದಲ್ಲಿ ದುಃಖಿಯಾಗಿ ಆರ್ತರ ಕಣ್ಣೀರನ್ನೊರಸಲು ಧಾವಿಸುತ್ತಿದ್ದ. ದೃಢಸಂಕಲ್ಪ ಮುಪ್ಪುರಿದು ನಿಂತಾಗ ಮತ್ತೆ ಕಲಿಯಾದ. ಸೇನಾನಾಯಕರಾದ ಫ್ರಿಮಾಂಟ್ ಸ್ಕಾಟ್, ಮೆಕ್ಲಲನ್, ಗ್ರಾಂಟ್ ಮುಂತಾದವರ ಮಧ್ಯೆ ಪರಸ್ಪರ ಮತ್ಸರಗಳ ತಿಕ್ಕಾಟವನ್ನು ಹತ್ತಿಕ್ಕಿ ಜೀವನ ಚದುರಂಗದ ನಿಸ್ಸೀಮ ತಜ್ಞನಂತೆ ನಿರ್ಭಯನಾಗಿ ಮುನ್ನುಗ್ಗಿ ನಡೆದ ಸಂಖ್ಯಾಬಲದಿಂದ ದೊಡ್ಡದಾಗಿದ್ದರೂ ಉತ್ತರದ ಸೇನೆ ಮೊದಮೊದಲಲ್ಲಿ ಸೋಲನ್ನನುಭವಿಸಿತು. ದಕ್ಷಿಣ ಸಂಸ್ಥಾನಗಳ ಅದೃಷ್ಟವೋ ಎಂಬಂತೆ ಅದ್ವಿತೀಯ ದಂಡನಾಯಕ ಜನರಲ್ ಲೀ ಅವರ ಕಡೆಗೆ ಮೇರು ಸದೃಶ ಶಕ್ತಿಯಾಗಿ ನಿಂತ. ಗುಣಪಕ್ಷಪಾತಿಯಾದ ಲಿಂಕನ್ ಅನೇಕವೇಳೆ ಶತ್ರುಪಕ್ಷದ ದಂಡನಾಯಕನನ್ನು ಮೆಚ್ಚಿ ಹೊಗಳುತ್ತಿದ್ದ.

ಗುಲಾಮಗಿರಿಯ ಆಮೂಲಾಗ್ರ ನಾಶದ ವ್ರತ ತೊಟ್ಟಿದ್ದ ಲಿಂಕನ್ ಈ ಯುದ್ಧದ ಸಮಯದಲ್ಲೂ ಆ ದಿಕ್ಕಿನಲ್ಲಿ ತೀವ್ರವಾಗಿ ಆಲೋಚಿಸುತ್ತಿದ್ದ. ದಕ್ಷಿಣದ ಲಕ್ಷಾಂತರ ನಿರ್ಭಾಗ್ಯ ನೀಗ್ರೋದಸ್ಯುಗಳ ಬಾಳಿನಲ್ಲಿ ಸ್ವಾತಂತ್ರ್ಯ ಸೂರ್ಯನ ಬೆಳಕು ಹರಿಯಲು ಅವಕಾಶವಾದರೆ ಆ ಸಂಸ್ಥಾನಗಳ ಸರ್ವಾಧಿ ಕಾರಿಗಳ ನೈತಿಕ ಪತನ ಖಂಡಿತವೆಂದು ತೀರ್ಮಾನಿಸಿದ. ಒಡೆತನದ ಸಿರಿವಂತಿಕೆ ಯನ್ನನುಭವಿಸುತ್ತಿದ್ದ ಪಟ್ಟಭದ್ರಹಿತಗಳ ವಿರೋಧವೂ ದಟ್ಟವಾಗಿ ಪ್ರತಿ ಭಟಿಸಿತು. ತನ್ನ ಪಾಳೆಯದಲ್ಲೇ ಭಿನ್ನಾಭಿಪ್ರಾಯವಿದ್ದುದು ಲಿಂಕನ್‌ಗೆ ತಿಳಿದಿತ್ತು.

ಸೋಲಿನ ಪರಂಪರೆ ಕಳೆದು ವಿಜಯದ ಹಾದಿ ಹಿಡಿದಿತ್ತು ಉತ್ತರದ ಪಡೆ. ಬುಲ್‌ರನ್, ಅಂಟಿಯೇಟಂ ಘರ್ಷಣೆಗಳಲ್ಲಿ ಜನರಲ್ ಲೀ ಹಿಮ್ಮೆಟ್ಟಿದ. ಜನರ ಉತ್ಸಾಹ ಹುರುಪುಗೊಂಡಿತ್ತು. ಈ ವಿಜಯೋತ್ಸವದ ಅಲೆಯ ಶಿಖರದಿಂದ ಅಧ್ಯಕ್ಷ ಲಿಂಕನ್ ತನ್ನ ವಿಶೇಷಾಧಿಕಾರಗಳನ್ನೆಲ್ಲ ಪಡೆದು ನಿರ್ಧಾರ ವಾಣಿಯಿಂದ ದಾಸ್ಯ ನಿರ್ಮೂಲನ ನಿರ್ಣಯವನ್ನು ಘೋಷಿಸಿದ. ಜನ ಸ್ತೋಮದ ಆನಂದ ಕಡಲೊಡೆದು ಪ್ರವಾಹವಾಗಿ ಹರಿದುಬಿಟ್ಟಿತು. ಮಾನವ ಸಮಾಜದ ಒಂದು ಘೋರ ಕಳಂಕ ನಾಶವಾಯಿತು. ಸ್ವಾತಂತ್ರ್ಯ ಎಲ್ಲ ಮಾನವರ ಆಜನ್ಮಸಿದ್ಧ ಹಕ್ಕು ಎಂಬ ಯುಗವಾಣಿ ಚಿಮ್ಮಿ ಅಪ್ರತಿಹತವಾಯಿತು.

೧೦

ಅವ್ಯಾಹತವಾಗಿ ನಡೆದಿತ್ತು ಯುದ್ಧಭೂಮಿಯ ನರಮೇಧ. ಪ್ರಜಾ ಪ್ರಭುತ್ವದ ಜೀವನ ಮೌಲ್ಯಗಳನ್ನೆಲ್ಲ ಉರುಳಿಸುವ ಪ್ರತಿಗಾಮಿ ಶಕ್ತಿಗಳು ತಲೆಯೆತ್ತುತ್ತಿದ್ದವು. ಪ್ರಪಂಚದ ಗಮನವನ್ನು ಸೆಳೆದಿದ್ದ ಅಮೆರಿಕದ ಕ್ರಾಂತಿ ಪಥ ಮತ್ತೊಮ್ಮೆ ಮರುಭೂಮಿಯಲ್ಲಿ ಇಂಗಿಬಿಡುವುದೋ ಎಂಬ ಶಂಕೆ ಸಾಮಾನ್ಯ ಜನತೆಯ ಮನಸ್ಸನ್ನಾವರಿಸುತ್ತಿತ್ತು. ಮೂರು ವರ್ಷಗಳ ನಿರಂತರ ಕರ್ಕಶತೆಯಲ್ಲುರುಳಿದ ಲಿಂಕನ್ನನ ಅಧಿಕಾರ ಕೊನೆಯ ಹಂತದಲ್ಲಿ ಬಂದು ನಿಂತಿತ್ತು. ಸಮಾಜ ಪುನರ್ನಿರ್ಮಾಣದ ಯೋಜನೆಗಳೆಲ್ಲ ಯುದ್ಧಕಾರ್ಯದ ಮಹಾಪೂರದಲ್ಲಿ ಕೊಚ್ಚಿಹೋಗಿದ್ದವು. ಯಾವುದೋ ಶಾಶ್ವತ ಮಹಾತತ್ವ ವೊಂದು ಕುರುಕ್ಷೇತ್ರದಲ್ಲಿ ದೌರ್ಜನ್ಯ ಶಕ್ತಿಗಳೊಡನೆ ಹೋರಾಟ ನಡೆಸಿದಂತಿತ್ತು. ನಿಮಿತ್ತಮಾತ್ರನಾಗಿ ಈಶ್ವರೇಚ್ಛೆಯ ಸಾಧನೆಗೆ ಕೈಂಕರ್ಯವನ್ನರ್ಪಿಸುವ ಭಕ್ತ ತಾನೆಂಬ ಭಾವನೆ ಲಿಂಕನ್ನನ ಮನೋರಾಜ್ಯವನ್ನೆಲ್ಲ ವ್ಯಾಪಿಸಿ ನಿಂತಿತ್ತು.

ವೀರಯೋಧರ ಸ್ಮಾರಕ ಪುಣ್ಯಭೂಮಿಯಾಗಿ, ರಾಷ್ಟ್ರದ ಐಕ್ಯತೆ ಸ್ವಾತಂತ್ರ್ಯ ಗಳ ರಕ್ಷಣೆಗೆ ಬಲಿದಾನ ಮಾಡಿದ ಪುತಾತ್ಮರ ನೆನಪಿಗಾಗಿ 1863 ರ ನವೆಂಬರಿನಲ್ಲಿ ಗೆಟ್ಟಿಸ್‌ಬರ್ಗ್ ಪ್ರದೇಶ ಸಮರ್ಪಿತವಾಯಿತು. ಆ ಸ್ಮರಣೀಯ ದಿನದಂದು ಅಂದಿನ ಪ್ರಖ್ಯಾತ ವಾಗ್ಮಿ ಎಡ್ವರ್ಡ್ ಎವರಟ್ ತನ್ನ ಭೋರ್ಗರೆವ ವಾಗ್ಝರಿಯಿಂದ ವೀರಾದಿ ವೀರರ ಉಜ್ವಲ ಚರಿತ್ರೆಯನ್ನು ಬಣ್ಣಿಸಿದ. ಸೇರಿದ್ದ ಲಕ್ಷಾಂತರ ಜನ ರೋಮಾಂಚನದಿಂದ ಉನ್ಮತ್ತರಾದರು. ಅದೇ ಸಭೆಯಲ್ಲಿ

ಸಾಮಾನ್ಯತಾ ಶ್ರೀಯ ಹೃದಯಾಂತರಾಳದಿಂದ ಉದ್ಭವಿಸಿ ಪಾವನ ಗಂಗೆಯಂತೆ ಹರಿಯಿತು ಅಧ್ಯಕ್ಷ ಲಿಂಕನ್ನನ ವಾಣಿ. ಎವರೆಟ್‌ನ ಮಹಾಪ್ರತಿಭೆಯನ್ನೂ ಮುಳುಗಿಸಿ ಚಿರಸ್ಮರಣೀಯ ಚರಿತ್ರಾರ್ಹ ಅಜೇಯ ಸಂದೇಶವಾಗಿ ಜಗತ್ತಿನ ಸ್ವಾತಂತ್ರ್ಯ ಇತಿಹಾಸದಲ್ಲಿ ಆ ಭಾಷಣ ಮೈಲಿಗಲ್ಲಾಗಿ ನಿಂತಿತು.

"ಎಂಭತ್ತೇಳು ವರ್ಷಗಳ ಕೆಳಗೆ ನಮ್ಮ ಹಿರಿಯರು ಸ್ವಾತಂತ್ರ್ಯದ ಮಹತ್ವಾಕಾಂಕ್ಷೆಯ ಪ್ರತೀಕವಾಗಿ. ಮಾನವಲೋಕದಲ್ಲಿ ಸರ್ವರೂ ಸಮಾನರು ಎಂಬ ಉದಾತ್ತಭಾವನೆಗೆ ನಿವೇದಿತವಾದ ನೂತನ ರಾಷ್ಟ್ರವೊಂದನ್ನು ಈ ಖಂಡದಲ್ಲಿ ಕಟ್ಟಿದರು. ನಾವಿಂದು ದೊಡ್ಡದೊಂದು ಅಂತರ್ಯುದ್ಧದಲ್ಲಿ ತೊಡಗಿದ್ದೇವೆ. ಈ ರಾಷ್ಟ್ರ ಮಾತ್ರವಲ್ಲದೆ. ಈ ರೀತಿ ಕಟ್ಟಿದ ಇಂಥ ತತ್ವಕ್ಕೆ ಮುಡುಪಾದ ಯಾವುದೇ ದೇಶ ಭದ್ರವಾಗಿ ನಿಲ್ಲಬಲ್ಲುದೇ ಎಂದು ಪರೀಕ್ಷೆಗೆ ಗುರಿಮಾಡುತ್ತಿದ್ದೇವೆ. ಅಂಥ ಯುದ್ಧಕ್ಷೇತ್ರವೊಂದರಲ್ಲಿ ಇಂದು ಸೇರಿದ್ದೇವೆ. ಈ ನಮ್ಮ ರಾಷ್ಟ್ರ ಜೀವಂತವಾಗಿರುವಂತೆ ಬಲಿದಾನ ಮಾಡಿದ ಪುಣ್ಯಾತ್ಮರ ಅಂತಿಮ ಶಾಂತಿಶಯ್ಯೆಯಾಗಿ ಈ ಪ್ರದೇಶದ ಸ್ವಲ ಭಾಗವನ್ನು ಪರಿವರ್ತಿಸಿ ಸಮರ್ಪಣೆ ಮಾಡಲು ಇಲ್ಲಿಗೆ ಬಂದಿದ್ದೇವೆ: ಇದು ಯಥೋಚಿತವಾದುದೇ ಸರಿ. ಆದರೆ ವಿಶಾಲದೃಷ್ಟಿಯಿಂದ ನೋಡಿದರೆ ನಾವು ಏನನ್ನೂ ಸಮರ್ಪಿಸಲಾರೆವು. ಮುಡಿಪಾಗಿಡಲಾರೆವು. ಈ ನೆಲವನ್ನು ಹೆಚ್ಚು ಪವಿತ್ರಗೊಳಿಸಲಾರೆವು. ನಮ್ಮ ದುರ್ಬಲಶಕ್ತಿ ಈ ಪವಿತ್ರಭೂಮಿಗೆ ಕೊಟ್ಟು ಕೊಳ್ಳುವುದಕ್ಕಿಂತ ನೂರ್ಮಡಿ ಹೆಚ್ಚಾಗಿ ಇಲ್ಲಿ ಹೋರಾಡಿ ಮಡಿದ ಉಳಿದ ವೀರಯೋಧರು ಇದನ್ನು ಪವಿತ್ರಗೊಳಿಸಿದ್ದಾರೆ. ಇಲ್ಲಿ ನಾವು ಆಡುವ ಮಾತುಗಳನ್ನು ಲೋಕ ಗಮನಿಸದೇ ಹೋದೀತು. ಮರೆತೀತು. ಆದರೆ ಅವರ ಮಹಾಸಾಧನೆಯನ್ನು ಎಂದಿಗೂ ಮರೆಯಲಾರದು. ಇಲ್ಲಿ ಹೋರಾಡಿದವರು ಯಾವ ಮಹಾಕಾರ್ಯವನ್ನು ಗಂಭೀರವಾಗಿ ಈವರೆಗೆ ಮುನ್ನಡೆಸಿ ಅಪೂರ್ಣವಾಗಿ ಬಿಟ್ಟಿರುವರೋ ಆ ಕಾರ್ಯಕ್ಕೆ ಬದುಕಿರುವ ನಾವು ನಮ್ಮನ್ನು ಸಮರ್ಪಿಸಿಕೊಳ್ಳಬೇಕು. ಮುಂದೆ ಉಳಿದಿರುವ ಮಹತ್ಕಾರ್ಯ ಸಾಧನೆಗೆ ದುಡಿಯಬೇಕು. ಆ ದಿವಂಗತ ಕೀರ್ತಿಶಾಲಿಗಳು ಯಾವ ಆದರ್ಶಕ್ಕಾಗಿ ತಮ್ಮ ಸರ್ವಸ್ವವನ್ನೂ ಸಮರ್ಪಣೆಮಾಡಿದರೋ ಆ ಮಹೋದ್ದೇಶಗಳಿಂದ ಸ್ಫೂರ್ತಿ ಪಡೆಯಬೇಕಾಗಿದೆ. ಈ ಹುತಾತ್ಮರ ಬಲಿದಾನಗಳೆಂದಿಗೂ ವಿಫಲವಾಗದಿರಲಿ.

ದೈವಕೃಪೆಯಿಂದ ಈ ರಾಷ್ಟ್ರ ಸ್ವಾತಂತ್ರ್ಯದ ಪುನರ್ಜನ್ಮವೊಂದನ್ನು ಪಡೆಯಲಿ. ಜನತೆಯಿಂದ ಜನತೆಗಾಗಿ ಜನತಾಸರ್ಕಾರ ಈ ಲೋಕದಿಂದ ಎಂದಿಗೂ ನಶಿಸದಿರಲಿ, ಎಂದು ನಾವಿಲ್ಲಿಯೇ ದೃಢಸಂಕಲ್ಪ ಮಾಡೋಣ."

೧೧

ರಕ್ತಮಯ ಇತಿಹಾಸದಲ್ಲೇ ಉರುಳುತ್ತಿದ್ದ ಅಧ್ಯಕ್ಷ ಪದವಿಯ ಅವಧಿ ಮುಗಿಯಿತು. ಕದನವಿರಾಮ ದೂರದ ಆಸೆಯಾಗಿಯೇ ಉಳಿದಿತ್ತು. ಪ್ರಜಾತಂತ್ರದ ರಾಜ್ಯವ್ಯವಸ್ಥೆಯಲ್ಲಿ ಜನತೆಯ ವಿಶ್ವಾಸ ಮಾತ್ರ ಕಡಿಮೆಯಾಗಲಿಲ್ಲ. ಲಿಂಕನ್ನನ ಆತ್ಮವಿಶ್ವಾಸ ಇಮ್ಮಡಿಯಾಗಿತ್ತು. ಯುದ್ಧದ ಮಧ್ಯದಲ್ಲೇ ಅಧ್ಯಕ್ಷ ಚುನಾವಣೆಯು ನಡೆಯಲೇಬೇಕಾಯಿತು. ಪ್ರತಿಗಾಮೀಶಕ್ತಿಗಳು ಮತ್ತೊಮ್ಮೆ ಬಿರುಸಾದ ವಿರೋಧ ಪ್ರಚಾರ ಪ್ರಾರಂಭಿಸಿದವು. ಲಿಂಕನ್ನನ ಬದುಕಿನಲ್ಲಿ ಅತಿ ಉದ್ವೇಗದ ಕಾಲ ಅದು. ಯುದ್ಧದ ಫಿರಂಗಿಗಳು ನಿಲ್ಲುವ ಶುಭಸೂಚನೆ ಗಳಿದ್ದವು. ಧರ್ಮಯುದ್ಧದಲ್ಲಿ ತೊಡಗಿದ ಸಮಾಧಾನ ಹೇಳಿಕೊಂಡರೂ ಲಿಂಕನ್ನನ ಹೃದಯ ಯುದ್ಧದ ದಾರುಣ ಘಾಯಗಳಿಂದ ಪರಿತಪಿಸುತ್ತಿದ್ದ ರಾಷ್ಟ್ರಜೀವನವನ್ನು ಕಂಡು ಮರುಗಿತು. ಯುದ್ಧಕ್ಕಾಗಿಯಾಗಲೀ ಆಕ್ರಮಣಕ್ಕಾಗಿಯಾಗಲೀ ಕೇವಲ ಪ್ರತಿಷ್ಠೆಯ ಸಾಧನೆಗಾಗಲೀ ರಾಷ್ಟ್ರವನ್ನು ರಕ್ತದ ಮಡುವಿನಲ್ಲಿ ಮುಳುಗಿಸುವುದು ಸರ್ವಥಾ ತ್ಯಾಜ್ಯವೆನಿಸಿತ್ತು. ಚುನಾವಣೆಯ ಕಾಲದಲ್ಲಿ ಜನತೆಯ ಮುಂದೆ ಸೈನ್ಯಪಡೆಗಳ ಮುಂದೆ ನೀಗ್ರೋ ಗುಲಾಮ ಬಂಧುಗಳ ಮುಂದೆ ಪ್ರಾಮಾಣಿಕವಾಗಿ ತನ್ನ ಭಾವನೆಗಳನ್ನೆಲ್ಲ ಬಿಚ್ಚಿಟ್ಟ ಲಿಂಕನ್. ಪರಿಣಾಮವಾಗಿ ಪ್ರಚಂಡ ಬಹುಮತದಿಂದ ಮತ್ತೊಮ್ಮೆ ರಾಷ್ಟ್ರಾಧ್ಯಕ್ಷ ಪದವಿಯನ್ನಲಂಕರಿಸಿದ. ನಿರ್ಣಾಯಕ ಮತಗಳಾದ 233 ರಲ್ಲಿ 212 ಲಿಂಕನ್ನನಿಗೇ ದೊರಕಿದ್ದವು. ಎದುರಾಳಿಗಳ ನಿರೀಕ್ಷೆಯೆಲ್ಲವೂ ಧೂಳೀಪಟವಾಯಿತು. "ಜನರ ಅಪಾರ ವಿಶ್ವಾಸಕ್ಕೆ ನಾನು ಕೃತಜ್ಞ. ಯಾರನ್ನೂ ಸೋಲಿಸುವುದರಲ್ಲಿ ನನಗೆ ಯಾವ ಸಂತೋಷವೂ ಇಲ್ಲ. ನನ್ನ ಅಂತರ್ವಾಣಿಯ ಸಾಕ್ಷಿಗೆ ಸತ್ಯವಾಗಿಯೇ ನಾನು ನಡೆದೇನು" ಎಂದು ಸ್ಫುಟವಾಗಿ ನುಡಿದ ಆ ಸೌಜನ್ಯಮೂರ್ತಿ,

ಮಾರ್ಚಿ 5, 1865 ರಂದು ಲಿಂಕನ್ ಎರಡನೇಬಾರಿ ವಿಧ್ಯುಕ್ತವಾಗಿ ಅಧ್ಯಕ್ಷ ಪೀಠವನ್ನೇರಿದಾಗ ಆಡಿದ ಮಾತುಗಳು ಅಚ್ಚಳಿಯದೆ ನಿಂತಿವೆ.

"ಯಾರೊಬ್ಬರ ಬಗ್ಗೆಯೂ ಏಕಪಕ್ಷೀಯ ನಿರ್ಣಯ ಮಾಡುವುದು ಬೇಡ. ನಾಳೆ ನಮ್ಮ ಮೇಲೆಯೂ ಮತ್ತೊಬ್ಬರು ನಿರ್ಣಯ ಮಾಡಿಯಾರು" ಎಂಬ ಬೈಬಲ್ಲಿನ ಸಾಕ್ಷ್ಯವನ್ನು ಮನಸಾ ಸ್ಮರಿಸಿದ ಲಿಂಕನ್. "ಪರಮಾತ್ಮನಿಗೆ ತನ್ನದೇ ಉದ್ದೇಶ, ಲಕ್ಷ್ಯ, ಲಕ್ಷಣಗಳಿವೆ: ನಾವು ನಿಮಿತ್ತ ಮಾತ್ರ" ಎಂಬ ಆತ್ಮಸಮರ್ಪಣ ಭಾವ ಅವನಲ್ಲಿ ತುಂಬಿಬಂತು. "ಗುಲಾಮಗಿರಿಯ ಭಯಂಕರ ಪಾಪವನ್ನು ತೊಡೆದುಹಾಕಲು ಜಗನ್ನಿಯಾಮಕನೇ ತೀರ್ಮಾನಿಸಿದಂತಿದೆ. ಈ ದಾರುಣ ಸಂಗ್ರಾಮದ ದುರಂತವನ್ನು ಶಿಕ್ಷೆಯ ರೂಪದಲ್ಲಿ ಅನುಭವಿಸುತ್ತಿದ್ದೇವೆ,— ದೇವರ ನ್ಯಾಯ ಎಂದೆಂದಿಗೂ ಸತ್ಯವಾದುದು. ಧರ್ಮಬದ್ಧವಾದುದು" ಯುಗಧರ್ಮದ ತೂರ್ಯವಾಣಿ ಹೆಪ್ಪುಗಟ್ಟಿ ನಿಂತಂತೆ ಕಂಡಿತು. ಅಧ್ಯಕ್ಷ ಭಾಷಣ ಮುಂದುವರೆದಿತ್ತು. "ಯಾರ ಬಗ್ಗೆಯೂ ದ್ವೇಷವಿಲ್ಲದೆ ಎಲ್ಲರಲ್ಲೂ ಸ್ನೇಹ ಭಾವದಿಂದ. ದೇವರು ನಮಗೆ ದಯಪಾಲಿಸಿರುವಷ್ಟು ಸದಸದ್ವಿವೇಕದಿಂದ ನಿರ್ಣಯಿತ ನ್ಯಾಯದಲ್ಲಿ ದೃಢ ವಿಶ್ವಾಸವಿಟ್ಟು ನಾವು ಕೈಕೊಂಡಿರುವ ಮಹತ್ಕಾರ್ಯವನ್ನು ಪೂರೈಸೋಣ: ರಾಷ್ಟ್ರಕ್ಕಾಗಿರುವ ವೇದನೀಯ ಆಘಾತಗಳಿಗೆ ಶುಶ್ರೂಷೆ ಮಾಡೋಣ; ವೀರಯೋಧರ ಯೋಗಕ್ಷೇಮ. ವಿಧವೆಯರ. ಅನಾಥಮಕ್ಕಳ ಪಾಲನೆ ನೋಡಿಕೊಳ್ಳೋಣ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮಲ್ಲಿಯೂ ವಿಶ್ವದಲ್ಲಿಯೂ ಪರಸ್ಪರ ನ್ಯಾಯನಿಷ್ಠ ಚಿರಂತನ ಶಾಂತಿಯನ್ನು ಸಾಧಿಸಿ ರಕ್ಷಿಸಲು ಸರ್ವ ಪ್ರಯತ್ನವನ್ನೂ ಕೈಗೊಳ್ಳೋಣ." ಪ್ರಪಂಚದ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದ ಅಮೋಘ ಭಾಷಣಗಳಲ್ಲಿ ಒಂದಾಗಿ ಚಿರಸ್ಥಾಯಿಯಾಯಿತು ಲಿಂಕನ್ನನ ಈ ಉದ್ಘೋಷ.

೧೨

ಕೊನೆಗೊಮ್ಮೆ ಯುದ್ಧ ಸಮಾಪ್ತಿಯಾಯಿತು. ದಕ್ಷಿಣ ರಾಜ್ಯಗಳ ಸೇನಾನಿ ಜನರಲ್ ಲೀ ಶರಣಾಗತನಾದ. ತಕ್ಷಣವೇ ಲಿಂಕನ್ನನ ಮಾನವೀಯ ಔದಾರ್ಯ ಪ್ರಚೋದಿತವಾಯಿತು. "ಜನರಲ್ ಲೀ ಮಹಾವ್ಯಕ್ತಿ. ಧೀರ ಯೋಧ—ಆತನಿಗೆ ಯಾವ ಅವಮಾನವೂ ಆಗಕೂಡದು. ಗೌರವದಿಂದ ನೋಡಿಕೊಳ್ಳಿ" ಎಂದು ಆಜ್ಞಾಪಿಸಿದ. ಶ್ವೇತಭವನದ ಅಧ್ಯಕ್ಷ ಕಾರ್ಯಾಲಯದಲ್ಲಿ ತನ್ನ ಮೇಜಿನ ಮೇಲಿದ್ದ ಲೀಯ ಚಿತ್ರವನ್ನು ದಿಟ್ಟಿಸಿ ನೋಡಿ ಅವನ

ಮನಸ್ಸು ಮೊರೆಯಿತು. "ಈ ಮುಖದಲ್ಲಿ ಎಂಥ ಸೌಮ್ಯತೆ! ಗಂಭೀರ ಧೀರ ವೃತ್ತಿಯ ಮುಖ ಇದು. ಕೊನೆಗೆ ಯುದ್ಧ ಮುಗಿಯಿತಲ್ಲ. ನನಗದೇ ಸಂತೋಷ" ಎಂದ.

"ಕಾಮಯೇ ದುಃಖತಪ್ತಾನಾಂ ಪ್ರಾಣಿನಾಮ್ ಆರ್ತಿನಾಶನಂ" ಎಂದು ಲಿಂಕನ್ನನ ಕರುಣಾ ಹೃದಯ ದುಃಖತಪ್ತರನ್ನೂ ಆರ್ತರನ್ನೂ ಹುಡುಕಿಕೊಂಡು ಹೋಯಿತು. ಪ್ರಖ್ಯಾತವಾಗಿದ್ದ ರಿಚ್ಮಂಡ್‌ಕೋಟೆ ಕೈವಶವಾಗಿತ್ತು. ಲಿಂಕನ್ ತನ್ನ ಸೈನ್ಯಾಧಿಕಾರಿಗಳೊಡನೆ ಆ ಪ್ರದೇಶದಲ್ಲಿ ಕಾಲಿಟ್ಟ. ಮುದುಕ ನೀಗ್ರೋ ಒಬ್ಬ ತನ್ನ ಕಣ್ಣ ಮೇಲೆ ಕೈನೆರಳು ಮಾಡಿ ಆ ನೀಳ ಭವ್ಯಮೂರ್ತಿಯನ್ನು ದಿಟ್ಟಿಸಿದ. ಈತನೇ ತಮ್ಮ ಬಿಡುಗಡೆಯ ಕಾರಣಪುರುಷ ಎಂದು ಅವನಿಗೆ ಹೊಳೆಯಿತು. ಕೈಲಿದ್ದ ಗುದ್ದಲಿಯನ್ನು ಬಿಟ್ಟು ಧಾವಿಸಿ ಬಂದು ಕಾಲಿಗೆರಗಿದ. ಅವನೊಡನೆ ಹತ್ತು, ನೂರು, ಸಾವಿರ, ಕರಿಜನರು ಅಲೆ ಅಲೆಯಾಗಿ ಬಂದು ಈ ಅಪೂರ್ವ ಪುಣ್ಯಮೂರ್ತಿಯನ್ನು ತಮ್ಮ ಜೀವನದ ದಿವ್ಯ ಸೂರ್ಯನಾಗಿ ಅವತರಿಸಿ ಬಂದ ಉದ್ಧಾರಕನನ್ನು ಮುತ್ತಿಬಿಟ್ಟರು. ಭಾವನಾಪರವಶತೆಯಿಂದ ಕರುಣೆ ಉಕ್ಕಿ ಹರಿದಿತ್ತು. "ಬಡವರಾದ ನನ್ನ ಸ್ನೇಹಿತರೇ, ನೀವೀಗ ಸ್ವತಂತ್ರರು, ಗಾಳಿಯಂತೆ ಸ್ವತಂತ್ರರು. ಗುಲಾಮಗಿರಿ ನಿರ್ನಾಮವಾಗಿದೆ. ಆ ಹೆಸರನ್ನು ಕಾಲಡಿಯಲ್ಲಿ ತುಳಿದುಬಿಡಿ. ಸ್ವಾತಂತ್ರ್ಯ ನಿಮ್ಮ ಜನ್ಮಸಿದ್ಧ ಹಕ್ಕು. ದೇವರ ಮಕ್ಕಳಿಗೆಲ್ಲ ಸಾಮಾನ್ಯವಾದ ವರಪ್ರಸಾದವದು. ಇಷ್ಟು ವರ್ಷ ನೀವದರಿಂದ ವಂಚಿತರಾದುದು ಘೋರ ಪಾಪ! ಈ ಅಮೋಘ ವರವನ್ನು ಉಳಿಸಿಕೊಳ್ಳುವ ಯೋಗ್ಯತೆ ನಿಮಗಿದೆ. ಜಗತ್ತಿನಲ್ಲಿ ತಲೆಯೆತ್ತಿ ಬಾಳಿ. ಜಗನ್ನಿಯಾಮಕನಿಗೆ ಮಣಿದು ಕೃತಜ್ಞರಾಗಿರಿ" ಎಂದು ತಂದೆಯಂತೆ ಆ ನೀಗ್ರೋ ಜನಸ್ತೋಮಕ್ಕೆ ಉಪದೇಶಿಸಿದ ಲಿಂಕನ್. ಸಾವಿರಾರು ವರ್ಷಗಳ ಕೆಳಗೆ ದೇವವಾಣಿಯನ್ನು ಹೊತ್ತುತಂದ ಏಸುಕ್ರಿಸ್ತ ಮುಗ್ಧರಾದ ಕುರುಬರ ಮಧ್ಯೆ ನಿಂತ ಚಿತ್ರ ಮತ್ತೊಮ್ಮೆ ಮರುಕಳಿಸಿ ಬಂದಂತಿತ್ತು. ಜೀವನ ಸಾಫಲ್ಯತೆಯ ಧನ್ಯತೆ ಆ ಸಾಧುಪುರುಷನ ಸುಕ್ಕುಮುಖದಲ್ಲಿ ಮುದ್ರಿತವಾಗಿತ್ತು.

ಸ್ವಾತಂತ್ರ್ಯ ಘೋಷಣೆ ಪ್ರತಿಗಾಮಿ ಶಕ್ತಿಗಳಿಗೆ ಅಸಹನೀಯವಾಯಿತು. ಹಲವಾರು ದಶಕಗಳಿಂದ ಮಾನವದುಡಿಮೆಯ ಬಹುಪಾಲು ಫಲವನ್ನು ಸ್ವಾರ್ಥ ಭೋಗವಿಲಾಸಗಳಿಗೆ ಅಪಹರಿಸುತ್ತಿದ್ದ ಶೋಷಕ ಸ್ವಾಮ್ಯವರ್ಗ

ರೊಚ್ಚಿಗೆದ್ದಿತ್ತು. ಅವರನ್ನವಲಂಬಿಸಿ ಉಪಜೀವಿಸುತ್ತ, ದಾಸ್ಯದ ದುಷ್ಟಜಾಲವನ್ನು ಸಮಾಜದಲ್ಲಿ ಸಂತತವಾಗಿ ಹೆಣೆಯುತ್ತಾ ಭಯಂಕರ ಘಾತಕ ಮೃಗಗಳಂತೆ ಬೆಳೆದು ನಿಂತಿದ್ದ ಹಲವು ವರ್ಗದ ಜನಕ್ಕೆ ದಾಸ್ಯವಿಮೋಚನೆಯ ಶಾಸನ ಕೊಡಲಿಪೆಟ್ಟಾಯಿತು. ಸಂಕುಚಿತ ದುರ್ಬುದ್ಧಿಯುತ್ಪನ್ನವಾಯಿತು. ಮಾನವೀಯ ಮೌಲ್ಯಗಳನ್ನು ಕಡೆಗಣಿಸಿ ಸತತವಾಗಿ ಸಾಂಪ್ರದಾಯಿಕ ಸ್ಥಾನ, ಪ್ರತಿಷ್ಠೆ, ತಾರತಮ್ಯಗಳನ್ನು ನಿರ್ದಯತೆಯಿಂದ ಸ್ವಾರ್ಥಕ್ಕಾಗಿ ಬಳಸುವ ಜನ ಈ ಸುಧಾರಕನ ಮೇರುಸದೃಶ ವ್ಯಕ್ತಿತ್ವವನ್ನೂ ಪ್ರಭಾವವನ್ನೂ ಸಹಿಸಲಾರದಾದರು. ತನ್ನ ಸಮಾಜದ ಅವಗುಣಗಳನ್ನು ತೊಳೆದು, ಊರ್ಧ್ವಮುಖಿ ಪ್ರಗತಿಪಥದ ದೀಕ್ಷೆ ಕೊಟ್ಟು, ಧರ್ಮಜಾಗೃತಿಯ ಅನುಷ್ಠಾನ ಮಾಡಿಸುವ ಯುಗಪ್ರವರ್ತಕ ತನ್ನ ಸಮಕಾಲೀನ ಸಮಾಜದ ದುಷ್ಟಶಕ್ತಿಗಳ ದೌರ್ಜನ್ಯಕ್ಕೆ ಬಲಿಯಾಗುವುದು ಮಾನವ ಇತಿಹಾಸದ ದೌರ್ಭಾಗ್ಯ. ಅಥವಾ ಕಾಲಗರ್ಭದಿಂದ ಮಹಾತತ್ವವೊಂದು ಜೀವಂತವಾಗವತರಿಸಲು ಲೋಕ ಅನುಭವಿಸಬೇಕಾದ ಅಸಹನೀಯ ಬೇನೆ. ಸಾಕ್ರಟೀಸನ ಕಾಲದಿಂದ ಮಹಾತ್ಮ ಗಾಂಧಿ, ಅಧ್ಯಕ್ಷ ಕೆನೆಡಿಯ ಕಾಲದವರೆಗೂ ಈ ರಾಕ್ಷಸೀ ಪ್ರವೃತ್ತಿ ಮಾನವನೆದೆಯ ಕಾಳಕೂಟವಾಗಿ ಸುಪ್ತಪ್ರವಾಹವಾಗಿ ಹರಿಯುತ್ತಲೇ ಇದೆ. ಯಾವುದೋ ದುರಂತದ ಛಾಯೆ ಮಹಾಮಹಿಮರ ಬಾಳನ್ನು ಕೊನೆಯ ಹಂತದ ನಿಸ್ಸೀಮ ಬಲಿದಾನಕ್ಕೆ ಅನುಗೊಳಿಸಿ ಅವರು ಸಂಕೇತವಾಗಿ ಪ್ರತಿನಿಧಿಸಿದ ಮಹಾತತ್ವ ಅಮರವಾಗಿ ನಿಲ್ಲುವಂತೆ ಮಾಡುತ್ತದೆ. ಜಗನ್ನಿಯಾಮಕನ ಈ ಗೂಢತಮ ಅವ್ಯಕ್ತ ದಿವ್ಯ ಶಕ್ತಿ, ಸಿಡಿಲಿನಂತೆರಗಿ ಬರುವ ಅವನ ಲೀಲಾವಿಲಾಸ, ಇಂದಿಗೂ ನಮ್ಮ ಮನೋಕ್ಷಿತಿಜದ ಆಚೆಗೆ ನಿಂತ ಬಿಡಿಸಲಾಗದ ಒಗಟು.

ಶಾಂತಿಯ ದಿನಗಳು ಮರಳಿ ಬಂದಿದ್ದುವು. ಮೇರಿಟಾಡಳಿಗೆ ಎಲ್ಲರಿಗಿಂತ ಹೆಚ್ಚು ಸಂತಸ. ರಾಷ್ಟ್ರದ ಪ್ರಥಮ ಮಹಿಳೆಯಾಗಿ ಮೆರೆಯುವ ಆಕಾಂಕ್ಷೆ ಮತ್ತೆ ಗರಿಕೆದರಿ ನಿಂತಿತು. ಸಂತೋಷ ಕೂಟಗಳು ಉತ್ಸವಗಳು ಸಮಾರಂಭಗಳು ಮತ್ತೊಮ್ಮೆ ವಾಷಿಂಗ್ಟನ್ ನಗರದ ಜೀವನವನ್ನು ತುಂಬಿದವು. ನಗೆ ಗೆಲವುಗಳು ಬೆಳ್ದಿಂಗಳಿನಂತೆ ಪಸರಿಸಲು ಪ್ರಾರಂಭವಾಗುತ್ತಿತ್ತು. ಲಿಂಕನ್ ತನ್ನ ಮಡದಿಯ ಸಡಗರ ಚಂಚಲ ಚಾಪಲ್ಯಗಳನ್ನು ಕಂಡು ಅವಳ ಅಪ್ರಬುದ್ಧ ಮುಗ್ಧತೆಗಾಗಿ ನಸುನಗುತ್ತಿದ್ದ. ಯುದ್ಧದಿಂದ ರಾಷ್ಟ್ರಕ್ಕಾದ

ಆಘಾತದ ವ್ರಣಗಳನ್ನು ದಯಾಪೂರ್ಣನಾಗಿ ಪರಿಹರಿಸುವ ಕಡೆಗೇ ಅವನ ಮನಸ್ಸೆಲ್ಲ ಮೀಸಲಾಗಿತ್ತು. ಆದರೂ ಮಡದಿಯ ಉತ್ಸಾಹ ಭಂಗವಾಗ ಬಾರದೆಂದು ಅವಳೊಡನೆ ಹಲವಾರು ಸಮಾರಂಭಗಳಿಗೆ ಔಪಚಾರಿಕ ಭೇಟಿ ಗಳಿಗೆ ಹೋಗಿಬರುತ್ತಿದ್ದ. ಶಾಂತಿ ನೆಮ್ಮದಿಗಳ ಶುಭ್ರಾಕಾಶ ಮರಳಿಬಂದ ಅಮಿತೋತ್ಸಾಹದಲ್ಲಿ ಜನ ತಮ್ಮ ಅಧ್ಯಕ್ಷನನ್ನು ಧರೆಗಿಳಿದ ದಿವ್ಯಶಕ್ತಿಯ ಪ್ರತೀಕವೆಂದೇ ಭಾವಿಸಿ ಕೊಂಡಾಡಿದರು. ಅಸಂಖ್ಯಾತ ಆದರದ ಆಹ್ವಾನಗಳು ಸುರಿಮಳೆಯಂತೆ ಬರುತ್ತಿದ್ದವು. ಎಲ್ಲ ಕಡೆಗೂ ಧಾವಿಸುವ ಆಸೆ ಮೇರಿ ಟಾಡಳಿಗೆ. ಆದರೆ ಲಿಂಕನ್ನನ ಮನವೊಲಿಸಿ ಅವನೊಡನೆ ಜನಸ್ತೋಮದ ಕಣ್ಣುಮುಂದೆ ಪ್ರತಿಷ್ಠಿತ ಸ್ಥಾನದಲ್ಲಿ ಮೆರೆಯುವ ಅವಕಾಶ ಆಕೆಗೆ ಸಿಕ್ಕು ತ್ತಿದ್ದುದು ಅಪರೂಪವೇ ಆಗಿತ್ತು. ಸ್ವಾತಂತ್ರ್ಯ ವಿಜಯೋತ್ಸವಗಳ ಹಾಲ್ಗಡಲಿ ನಲ್ಲಿ ವಿಹರಿಸುತ್ತಿದ್ದ ಜನತೆಯ ಮಧ್ಯೆ ಮಹಾಶಯ ಲಿಂಕನ್ ಮೈಮರೆಯದೆ ಭವಿಷ್ಯದ ರೂಪರೇಶೆಗಳನ್ನು ಕುರಿತು ಆಳವಾಗಿ ಆಲೋಚನೆ ಮಾಡುತ್ತಿದ್ದ. ದ್ವೇಷ ಅಸೂಯೆ ದೌರ್ಜನ್ಯ ಆಕ್ರಮಣಗಳ ರಾಕ್ಷಸೀ ವೃತ್ತಿಗಳು ದಮನ ವಾಗಿದ್ದರೂ ಮಾನವನ ಅಂತರ್ಯ ಪೂರ್ಣ ಶುದ್ಧವಾಗುವ ಶುಭದಿನದ ಹಾರೈಕೆ ಆ ದಿವ್ಯ ಚೇತನದ ಮನೋರಾಜ್ಯವನ್ನು ಆವರಿಸಿ ನಿಂತಿತ್ತು. ಸ್ವಾತಂತ್ರ್ಯ ಕೇವಲ ಸ್ವೇಚ್ಛಾವರ್ತನೆಯ ಅವಕಾಶವಾಗದೇ ಸಮತೆ, ಸೌಹಾರ್ದಗಳ ಬುನಾದಿ ಯಾದರೆ ಮಾತ್ರ ಮಾನವಕಲ್ಯಾಣ ಎಂಬ ಭಾವನೆ ಆ ಮಹಾತ್ಮನಲ್ಲಿ ತುಂಬಿ ನಿಂತಿತ್ತು. ಅಂಥ ಮನೋಕ್ರಾಂತಿಯ ವಿಕಾಸದೆಡೆಗೆ ಹೆಜ್ಜೆಯಿಡುವ ಸಾಹಸಕ್ಕೆ ಅನುವಾಗುವ ಮುನ್ನವೇ ವಿಧಿವಿಲಾಸ ಆ ದಿವ್ಯಜೀವನವನ್ನು ಹಠಾತ್ತನೆ ಮುಗಿಸಿಬಿಟ್ಟಿತು.

ಘೋರ ಸಮರದ ಕೊನೆಯಲ್ಲಿ ಅದ್ಭುತ ವಿಜಯ ಗಳಿಸಿದ ವೀರಯೋಧ ಕರುಣೆ, ಕನಿಕರ, ಔದಾರ್ಯಗಳಿಂದ ಶತ್ರುಸಮೂಹವನ್ನು ನಡೆಸಿಕೊಳ್ಳು ವುದು ಅಪರೂಪ. ಮಾನವೀಯತೆಯ ಮೌಲ್ಯಗಳನ್ನು ಶಾಶ್ವತಗೊಳಿಸುವ ಮಹೋದ್ದೇಶದಿಂದ ಪ್ರೇರಿತರಾದ ಸಾಧು ಹೃದಯಗಳಿಗೆ ಮಾತ್ರ ಸಮರಪಥ ತೀವ್ರ ವೇದನೆಯ ಸಾಧನ. ವಿರೋಧ ಸಿದ್ಧಾಂತಗಳೊಡನೆ ಅವರ ಸಮರ; ವ್ಯಕ್ತಿಗಳೊಡನೆ ಅಲ್ಲ. ಸೋಲನ್ನಪ್ಪಿದ ಎದುರಾಳಿ ತನ್ನ ದೃಷ್ಟಿದೋಷವನ್ನು ಪರಿಹರಿಸಿಕೊಂಡು ಕಲ್ಯಾಣಪಥವನ್ನು ಹಿಡಿದು ನಡೆಯಲಿ ಎಂಬುದೇ ಅವರ

ಬಯಕೆ. ತಪ್ಪನ್ನು ನೂರು ಸಾರಿ ಕ್ಷಮಿಸಿ ಮಾನವ ಮಾನವನಾಗಿ ಉಳಿದು ಬೆಳೆಯುವ ಕಡೆಗೇ ಅವರ ಎಲ್ಲ ಸಾಹಸ. ಲಿಂಕನ್ ದಿನದಿನವೂ ನೂರಾರು ಅಧಿಕೃತ ಅಪ್ಪಣೆಗಳಲ್ಲಿ ಅಸಂಖ್ಯಾತ ಯುದ್ಧಖೈದಿಗಳನ್ನೂ, ರಾಜಕೀಯ ಅಪರಾಧಿಗಳನ್ನೂ ಕ್ಷಮಾದಾನದಿಂದ ಗೆದ್ದುಬಿಟ್ಟ. "ನಮ್ಮ ಕ್ರೋಧ ಶಾಂತವಾಗಬೇಕು. ರಾಷ್ಟ್ರದ ಸಮರಸ ಬಾಳಿಗೆ ಇದು ಅಗತ್ಯ. ನಮ್ಮ ಆಪ್ತಸ್ನೇಹಿತರನೇಕರಲ್ಲಿ ಒಡೆತನದ ಬಯಕೆ ವಿಪರೀತವಾಗಿದೆ. ಸರ್ವಾಧಿಕಾರ ದರ್ಪದಿಂದ ದಕ್ಷಿಣ ಸಂಸ್ಥಾನಗಳ ಮೇಲೆ ಅಧಿಕಾರ ನಡೆಸಿ ಸಹಜ ಹಕ್ಕುಗಳನ್ನು ನಿರಾಕರಿಸಲು ಆಶಿಸುತ್ತಾರೆ. ಸಮಾನ ರಾಷ್ಟ್ರಕರಂತೆ ಅವರನ್ನು ನಡೆಸಿಕೊಳ್ಳ ಲಾರರು. ಇದು ನನಗೆ ಸರ್ವಥಾ ಒಪ್ಪಿಗೆಯಿಲ್ಲ" ಎನ್ನುತ್ತಿದ್ದ.

೧೩

1865 ರ ಏಪ್ರಿಲ್ 14. ಅದೊಂದು ದುರಂತ ಶುಕ್ರವಾರ. ಕ್ರೂರವಿಧಿ ಮಾನವಶ್ರೇಷ್ಠನೊಬ್ಬನನ್ನಪಹರಿಸಿದ ಮತ್ತೊಂದು ಶುಕ್ರವಾರ. ಅಂದು ಸಂಜೆಯತನಕ ಕಾರ್ಯಾಲಯದಲ್ಲಿ ಬಿಡುವಿಲ್ಲದೆ ದುಡಿದ ರಾಷ್ಟ್ರಾಧ್ಯಕ್ಷ ಲಿಂಕನ್. ಮನೆಗೆ ಮರಳಿದೊಡನೆ ಮಡದಿಯ ಸಂತಸದ ಮುಖಮುದ್ರೆ ಸ್ವಾಗತಿಸಿ ನಿಂತಿತ್ತು. ದಣಿದ ಮನಸ್ಸಿಗೆ ಅಮೃತಸಿಂಚನದಂತೆ ಮೇರಿಟಾಡಳ ಮೃದು ಮಧುರ ವಾತ್ಸಲ್ಯ ಧಾರೆಯಾಗಿತ್ತು. ಇಂಥ ವಿರಳ ರಸನಿಮಿಷದ ಉಲ್ಲಾಸವನ್ನು ಮರೆಯಲಿಚ್ಛೆಯಿಲ್ಲದೆ ಏಬ್ರಹಾಂ ಲಿಂಕನ್ ಅಂದು ಪತ್ನಿ ಯೊಡನೆ ನಾಟಕೋತ್ಸವವೊಂದಕ್ಕೆ ಹೊರಟು ನಿಂತ. ಪ್ರಸಿದ್ಧ ನಟವರ್ಗ ವೊಂದು "ನಮ್ಮ ಅಮೆರಿಕಾದ ಬಂಧು" ಎಂಬ ನಾಟಕವನ್ನಾಡುತ್ತಿದ್ದರು. ಪ್ರೇಕ್ಷಕವೃಂದ ರಂಗಸ್ಥಳದ ಕಾಲ್ಪನಿಕ ಪ್ರಪಂಚದಲ್ಲಿ ತಲ್ಲೀನವಾಗಿತ್ತು. ಸಭಾಂಗಣವೇ ಮತ್ತೊಂದು ಘಳಿಗೆಯಲ್ಲಿ ನಿಜವಾದ ದುರಂತ ನಾಟಕದ ರಂಗ ಸ್ಥಳವಾದೀತೆಂದು ಪಾಪ, ಅವರ‍್ಯಾರೂ ಊಹಿಸಿರಲಾರರು. ಲಿಂಕನ್ ಮತ್ತು ಮೇರಿಟಾಡ್ ನಾಟಕಶಾಲೆಗೆ ಆಗಮಿಸಿದರು. ಕಿಕ್ಕಿರಿದ ಜನಸ್ತೋಮ ಜಯ ಘೋಷ ಮಾಡಿತು. ನಟನಟಿಯರು ಉತ್ಸಾಹದಿಂದ ವಂದಿಸಿದರು. ಅಧ್ಯಕ್ಷರ ಆಗಮನದ ಕುರುಹಾಗಿ ರಾಷ್ಟ್ರಗೀತೆ ಮೊಳಗಿತು. ಸ್ವಲ್ಪಕಾಲ ನೀರವ. ಮತ್ತೆ ನಾಟಕ ಆರಂಭವಾಯಿತು, ಸಭೆ ಮತ್ತೆ ಕಲಾವಿಲಾಸದಲ್ಲಿ ತಲ್ಲೀನವಾಯಿತು.

ದುಡಿಮೆಯ ಹೊರೆಯನ್ನಿಳಿಸಿ ಹಗುರ ಮನಸ್ಸಿನಿಂದ ಕನಸಿನ ಲೋಕದಲ್ಲಿ ಎರಡು ಗಂಟೆ ಕಳೆದಿದ್ದ ಲಿಂಕನ್. ಹಠಾತ್ತನೆ ಬಲಬದಿಯ ಅಂಕಣ ದಲ್ಲಿ "ಧಡಂ" ಎಂದಿತು. ಹುಚ್ಚಿಗೆದ್ದ ಯುವಕನೊಬ್ಬ ಅಧ್ಯಕ್ಷನ ಸಮೀಪಕ್ಕೆ ಧಾವಿಸಿ ಪಿಸ್ತೂಲನ್ನು ಅವನ ತಲೆಗೆ ಸರಿಯಾಗಿ ಹಿಡಿದು ದಢೀರೆಂದು ಹಾರಿಸಿಬಿಟ್ಟ. "ಹೋ" ಎಂದು ಹೌಹಾರಿದಳು ಮೇರಿಟಾಡ್. ಪಕ್ಕದಲ್ಲಿದ್ದ ಸೈನ್ಯಾಧಿಕಾರಿ ಹಂತಕನ ಮೇಲೆ ಹಾರಿ ಚೂರಿ ಇರಿತದಿಂದ ಹಿಮ್ಮೆಟ್ಟಿದ. "ಅಧ್ಯಕ್ಷ ಲಿಂಕನ್ನನಿಗೆ ಗುಂಡಿಟ್ಟು ಹೊಡೆದರು" ಎಂದು ಕ್ಷಣಾರ್ಧದಲ್ಲಿ ಆ ಜನತಾ ಸಮೂಹ ಕರ್ಕಶವಾಗಿ ಕಿರುಚಿಬಿಟ್ಟರು. ತಲೆಕೆಟ್ಟ ಕೊಲೆಗುಡುಕ ಜಾನ್ ವಿಲ್ಕಿಸ್ ಬೂತ್ ತಲೆತಪ್ಪಿಸಿಕೊಂಡು ಓಡಿದ. ಅಬ್ರಹಾಂ ಲಿಂಕನ್ ಧಾರಾಕಾರವಾಗಿ ಹರಿಯುತ್ತಿದ್ದ ರಕ್ತದ ಮಡುವಿನಲ್ಲಿ ಕುಸಿದು ಬಿದ್ದ. ಕೂಡಲೇ ಪಕ್ಕದ ಮನೆಯೊಂದಕ್ಕೆ ಸಾಗಿಸಿದರು. ಇಡೀ ವಾಷಿಂಗ್‌ಟನ್ ನಗರ ಅವನ ಮರಣಶಯ್ಯೆಯ ಕಡೆ ಧಾವಿಸಿತು. ಮಾರನೆಯ ಬೆಳಿಗ್ಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ಗಂಭೀರ ವಿಜಯಪತಾಕೆ ಶ್ವೇತ ಭವನದ ಉನ್ನತ ಶಿಖರದಲ್ಲಿ ಅರ್ಧಮಟ್ಟಕ್ಕೆ ಹಾರಿತ್ತು. ರಾಷ್ಟ್ರನಾಯಕ ಚಿರಂತನ ನಿದ್ರೆಯಲ್ಲಿ ಮಲಗಿದ್ದ. ಜಗತ್ತಿನ ಜೀವ ಸಿಡಿಲು ಬಡಿದಂತೆ ಒಂದು ನಿಮಿಷ ಸ್ತಬ್ಧ ವಾಯಿತು. ಆ ವಿಷಘಳಿಗೆಯ ವೇದನೆ ಅಸಂಖ್ಯಾತ ಕಣ್ಣುಗಳಿಂದ ಅಶ್ರು ಪ್ರವಾಹವಾಗಿ ಹರಿಯಿತು. ಶತಮಾನಗಳಿಗೊಮ್ಮೆ ಅವತರಿಸಿಬರುವ ದಿವ್ಯ ಚೇತನವೊಂದು ಅಂದು ಅಲ್ಲಿ ಮಾನವ ಇತಿಹಾಸದ ಅಮರ ಪಥದಲ್ಲಿ ಸೇರಿ ಹೋಯಿತು.



ವ್ಲಾಡಿಮಿರ್ ಇಲ್ಯಿಚ್ ಲೆನಿನ್

ವ್ಲಾಡಿಮಿರ್ ಇಲ್ಯಿಚ್ ಲೆನಿನ್

೧

ಮಾನವ ಸ್ವಾತಂತ್ರ್ಯದ ಘೋಷ ಹದಿನೆಂಟನೆಯ ಶತಮಾನದ ಇತಿಹಾಸವನ್ನು ತುಂಬಿ ನಿಂತಿತ್ತು. ಎಲ್ಲೆಡೆಯಲ್ಲಿಯೂ ವ್ಯಕ್ತಿಸ್ವಾತಂತ್ರ್ಯ, ಸಂಘಸ್ವಾತಂತ್ರ್ಯ, ರಾಷ್ಟ್ರಸ್ವಾತಂತ್ರ್ಯಗಳ ಪ್ರತಿಧ್ವನಿ ಮೊಳಗುತ್ತಿತ್ತು. ಆದರೂ ಆ ಶತಮಾನದ ಕೊನೆಯ ವೇಳೆಗೆ ವಿಶ್ವದ ಮುಕ್ಕಾಲುಭಾಗದಷ್ಟು ಜನ ಒಂದಲ್ಲ ಒಂದು ರೀತಿಯ ದಾಸ್ಯ ಶೃಂಖಲೆಗಳಿಗೆ ಸಿಲುಕಿದ್ದರು. ಅಮೆರಿಕಾ ಸಂಯುಕ್ತ ಸಂಸ್ಥಾನವೊಂದನ್ನು ಬಿಟ್ಟು ಮಿಕ್ಕೆಲ್ಲ ಪ್ರಪಂಚವೂ ಸಾಮ್ರಾಜ್ಯಶಾಹಿಗಳ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಪದಾಘಾತಕ್ಕೆ ಸಿಲುಕಿ ಸರ್ವರೀತಿಯ ಶೋಷಣೆಗಳ ಪರಿಣಾಮವಾಗಿ ವೇದನೆಯನ್ನನುಭವಿಸುತ್ತಿತ್ತು. ಯೂರೋಪಿನ ಬಿಳಿಯ ರಾಷ್ಟ್ರಗಳು ಅರ್ಥಸಾಧಕ ಬೃಹದ್ ಸಾಮ್ರಾಜ್ಯಗಳನ್ನು ಕಟ್ಟಿ ಯಂತ್ರೋದ್ಯೋಗದ ದೈತ್ಯ ರಚನೆಯ ಅಸಂಖ್ಯಾತ ಸಂಕೋಲೆಗಳಿಂದ ಏಷ್ಯಾ, ಆಫ್ರಿಕ, ದಕ್ಷಿಣ ಅಮೆರಿಕ ಖಂಡಗಳ ಸಂಪತ್ಸಮೃದ್ಧಿಯನ್ನೆಲ್ಲ ಹೀರಿ ಬೆಳೆಯುತ್ತಿದ್ದವು. ಬ್ರಿಟನ್, ಫ್ರಾನ್ಸ್, ಬೆಲ್ಜಿಯಂ, ಜರ್ಮನಿ, ಇಟಲಿ, ಸ್ಪೈನ್, ಪೋರ್ಚುಗಲ್ ದೇಶಗಳು ಜಗತ್ತಿನ ಸಂಪನ್ಮೂಲಗಳ ಸ್ವಾಮ್ಯಗಳನ್ನು ಕೇಂದ್ರೀಕೃತ ಬಂಡವಾಳಶಾಹಿಯ ಪೈಶಾಚಿಕ ಹಿಡಿತಕ್ಕೆ ಈಡುಮಾಡಿ ಅಲ್ಪಸಂಖ್ಯಾತ ರಾಷ್ಟ್ರಗಳ ಅಲ್ಪಸಂಖ್ಯಾತ ವರ್ಗಗಳ ಆರ್ಥಿಕ ಸಂಪತ್ಸಮೃದ್ಧಿಯನ್ನು ಅಗಾಧವಾಗಿ ಬೆಳೆಸಿದುವು. ಕೋಟಿ ಕೈಗಳ ದುಡಿಮೆ ನಾಲ್ಕು ಬಕಾಸುರ ಬಾಯಿಗಳಿಗೆ ಬಲಿಯಾಗುವಂತಾಯಿತು. ಸ್ವಾತಂತ್ರ್ಯ, ಸಮತೆ, ಸೌಹಾರ್ದಗಳ ಹಾಡು ಸಾಮ್ರಾಟರ ಸಮಾಜಗಳಿಗೆ ಸಂತಸ ತಂದರೂ ದುಡಿಮೆಯ ಲೋಕದ ದೈನ್ಯ ದಾರಿದ್ರ್ಯಗಳಿಗೆ ವಿಕಟ ಅಪಸ್ವರವಾಗಿ ಪರಿಣಮಿಸಿತು. ರಾಜಕೀಯ, ಆರ್ಥಿಕ, ಸಾಮಾಜಿಕ ಸಮತೆಯೇ ಸ್ವಾತಂತ್ರ್ಯದ ಪ್ರಕಟಸ್ವರೂಪ ಎಂಬ ಅರಿವೂ ಆ ವಿಷಜ್ವಾಲೆಯ ಆಂತರ್ಯದಿಂದಲೇ ಜಾಗೃತವಾಯಿತು. ಸಾಮಾನ್ಯ ಮಾನವ ಸಾಮ್ರಾಟವರ್ಗದ ಮೂಲೋತ್ಪಾಟನೆಯ ಸಂಕಲ್ಪ ತೊಟ್ಟು ಮತ್ತೊಮ್ಮೆ ವಿಶ್ವಕ್ರಾಂತಿಯ ವೀರದುಂದುಭಿಯನ್ನು ಮೊಳಗಿಸಿದ. ಜಗದ್ವ್ಯಾಪಕವಾಗಿ

ಹಬ್ಬಿ ನಿಲ್ಲುತ್ತಿದ್ದ ಈ ವಿಚಾರಕ್ರಾಂತಿಯ ಮತ್ತೊಂದು ವಿಶ್ವಜ್ಯೋತಿಯಾಗಿ ನಿಂತ ಮಹಾಪುರುಷ ರಷ್ಯದೇಶದ ವ್ಲಾಡಿಮಿರ್ ಇಲ್ಯಿಚ್ ಲೆನಿನ್.

ಜವಹರಲಾಲ್ ನೆಹರೂ ತಮ್ಮ 'ಜಗತ್ಕಥೆಯ ಇಣುಕುನೋಟ'ದಲ್ಲಿ ಮಹಾಶಯ ಲೆನಿನ್ನನ ಬಗ್ಗೆ ಬರೆಯುತ್ತಾ—"ಮಾಸ್ಕೋನಗರದ ಸುಂದರ ಕೆಂಪುಚೌಕದಲ್ಲಿ ಆತನ ಮೃತದೇಹ ಇಂದಿಗೂ ಗಾಜಿನ ಪೆಟ್ಟಿಗೆಯೊಂದರಲ್ಲಿ ಚಿರನಿದ್ರೆಯಲ್ಲಿದೆ. ಪ್ರತಿ ಸಂಜೆಯೂ ಅಸಂಖ್ಯಾತ ಜನರ ನೀರವ ಮೆರವಣಿಗೆ ಅದರೆಡೆ ಸಾಲುಗಟ್ಟಿ ನಡೆಯುತ್ತದೆ. ಮೃತನಾಗಿ ಬಹಳಕಾಲವಾಗಿದ್ದರೂ ರಷ್ಯ ದೇಶದಲ್ಲೊಂದರಲ್ಲೇ ಅಲ್ಲದೆ ಅಖಿಲ ಪ್ರಪಂಚದಲ್ಲೇ ಲೆನಿನ್ ಒಂದು ಮಹತ್ತರ ವಿಚಾರಮಾರ್ಗದ ಸಂಕೇತವಾಗಿದ್ದಾನೆ. ಕಾಲ ಹರಿದಂತೆ ಅವನ ಖ್ಯಾತಿ ಬೆಳೆಯುತ್ತಾ ಸಾಗುತ್ತದೆ. ಜಗತ್ತಿನ ಅಮರ ವ್ಯಕ್ತಿಗಳ ಅಗ್ರಪಂಕ್ತಿಗೆ ಸೇರಿಹೋಗಿದ್ದಾನೆ. ರಷ್ಯದ ಮನೆ ಮನೆಯಲ್ಲಿ ಆತನ ಚಿತ್ರ ರಾರಾಜಿಸುತ್ತದೆ. ಆದರೆ ಸ್ಮಾರಕಗಳಲ್ಲಾಗಲೀ, ಚಿತ್ರಗಳಲ್ಲಾಗಲೀ ಅಲ್ಲದೆ, ಮಹೋನ್ನತ ಕಾರ್ಯಸಾಧನೆಯಿಂದ ಕೋಟ್ಯಂತರ ಕೂಲಿಗಾರರ ಹೃದಯಸಿಂಹಾಸನದಲ್ಲಿ ಪ್ರತಿಷ್ಠಿತನಾಗಿ, ಅವರ ಜೀವನಾದರ್ಶಗಳಿಗೆ ಸ್ಫೂರ್ತಿಯಾಗಿ, ಬರಲಿರುವ ಭವ್ಯಬಾಳಿನ ಆಶಾಸಂಕೇತವಾಗಿ, ಲೆನಿನ್ ಜೀವಂತನಾಗಿದ್ದಾನೆ. ಯಾವ ಅಹಂಕಾರದ ಸೋಂಕೂ ಇಲ್ಲದೆ ತನ್ನ ಜೀವನಾದರ್ಶಸಿದ್ಧಿಯ ಮಹಾಕಾರ್ಯದಲ್ಲಿ ಸಂಪೂರ್ಣ ನಿಷ್ಠೆಯಿಂದ ತಲ್ಲೀನನಾಗಿದ್ದ ಲೆನಿನ್, ಒಂದು ಮಹಾತತ್ವದ ಜೀವಂತ ಮೂರ್ತಸ್ವರೂಪ" ಎಂದಿದ್ದಾರೆ.

೨

ಹದಿನೆಂಟನೆಯ ಶತಮಾನದವರೆಗೂ ರಷ್ಯಾದೇಶ ವಿಶ್ವ ರಾಷ್ಟ್ರಗಳ ಗುಂಪಿನಲ್ಲಿ ಗಣನೆಗೇ ಬಂದಿರಲಿಲ್ಲ. ಯಾವುದೋ ಅನಾಗರಿಕ ಅನಾಮಧೇಯ ಅರಾಜಕ ಜನಾಂಗವೊಂದು ಕೊರೆಯುವ ಛಳಿಯ ಆ ಭೂಭಾಗದಲ್ಲಿ ಉಂಟು ಎಂದು ಮಾತ್ರ ಜನ ಭಾವಿಸಿದ್ದರು. ಜ಼ಾರ್ ದೊರೆಗಳ ಆಡಳಿತದಿಂದ ಸ್ವಲ್ಪ ಸಂಘಟಿತವಾದ ಆ ಸಂಪತ್ಸಮೃದ್ಧಿಯ ಸ್ವರ್ಗಭೂಮಿ ಯುರೋಪ ರಾಷ್ಟ್ರಗಳ ಆರ್ಥಿಕ ಬೇಟೆಗೆ ಆಕರ್ಷಣೀಯ ಪ್ರದೇಶವಾಯಿತು. ಖನಿಜಗಳ ಸಮೃದ್ಧಿಯಿಂದ ತುಂಬಿತುಳುಕುತ್ತಾ, ಅತಿ ವಿರಳ ಜನಸಾಂದ್ರತೆಯಿಂದ ಕೂಡಿ ಬಿಕ್ಕಲಬನ

ಮಾಡುವ ಮುಗ್ಧ ರೈತ ಜನಾಂಗವೊಂದರ ಬೀಡಾಗಿದ್ದ ರಷ್ಯ, ಯೂರೋಪಿನ ಧನಿಕ ಉದ್ಯಮಿಗಳಿಗೆ ಹಸನಾದ ಭೂಮಿಯಾಯಿತು. ಔದ್ಯೋಗಿಕ ನಿಬಿಡತೆಯ ಒತ್ತಡದಿಂದ ಹೇರಳ ಧನಸಂಗ್ರಹದಿಂದ ಅವಿ ತುಂಬಿದ ಡಬ್ಬಿಯಂತಿದ್ದ ಯೂರೋಪ್ ರಾಷ್ಟ್ರಗಳ ಕೈಗಾರಿಕಾ ಬಡಾವಣೆಗೆ ರಷ್ಯದ ಧನಿಕ ರಾಜರು ಭೂಸಂಪತ್ತನ್ನೂ, ಜನಶಕ್ತಿಯನ್ನೂ ಮಾರಿಬಿಟ್ಟರು. ನಿರಂಕುಶ ರಾಜಕೀಯ ಅಧಿಕಾರದ ಅಪರಿಮಿತ ಅನೈತಿಕ ಅಟ್ಟಹಾಸಕ್ಕೆ ಜಾರ್ ದೊರೆಗಳ ಹೆಸರು ಪರ್ಯಾಯ ಪದವಾಯಿತು. ಅಲ್ಲಿ ಉತ್ಸಾಹಪೂರ್ಣ ದಷ್ಟ ಪುಷ್ಟ ರೈತ ಜನಾಂಗ ಶತಮಾನಗಳ ಕಾಲ ಪ್ರಶಾಂತ ಕೃಷಿಜೀವನದ ಗ್ರಾಮ ಸಮಾಜಗಳನ್ನು ಸೃಷ್ಟಿಸಿಕೊಂಡಿದ್ದಿತು. ಪಶ್ಚಿಮ ರಾಷ್ಟ್ರಗಳ ಔದ್ಯೋಗಿಕ ಆರ್ಥಿಕ ವ್ಯವಸ್ಥೆಯ ಹೊಸ ಗಾಳಿ ಬೀಸಿ ಅನೇಕ ಯಂತ್ರೋದ್ಯೋಗಗಳು ರಷ್ಯಾದೇಶದಲ್ಲಿ ಹುಟ್ಟಿಕೊಂಡವು. ಹೇರಳವಾದ ಪಾಶ್ಚಾತ್ಯ ಬಂಡವಾಳವೂ ಈ ಉದ್ಯಮಗಳಲ್ಲಿ ತೊಡಗಿಸಲ್ಪಟ್ಟಿತು. ಜಾರ್ ದೊರೆಯ ಬಂಧುಗಳೂ ಅವನ ಇಷ್ಟಮಿತ್ರರೂ ಹೇರಳವಾಗಿ ಹಣ ಸಂಪಾದಿಸಿದರು. ಅಗಾಧ ಐಶ್ವರ್ಯ, ಅಧಿಕಾರ, ಭೋಗ ಜೀವನ ಒಂದು ಕಡೆ; ಮತ್ತೊಂದು ಕಡೆ ಅಸಹನೀಯ ದುಡಿಮೆ, ದಾರಿದ್ರ್ಯ ಹಾಗೂ ಹಂಗಿನ ಬದುಕು. ಈ ವಿಷಮತೆಯ ವಿಕಟ ವಿಪರ್ಯಾಸ ಸಾಮಾಜಿಕ ನೆಮ್ಮದಿಯನ್ನು ಮುರಿದು ಅಸಂಖ್ಯಾತ ದುಡಿಮೆಗಾರರ ಅಂತರ್ಯದಲ್ಲಿ ಕ್ರಾಂತಿಯ ಕಿಡಿಗಳನ್ನು ಹೊತ್ತಿಸಿತು. ಅಸ್ಫೋಟಕರ ಪರಿಸ್ಥಿತಿಯಲ್ಲಿ ಕ್ರಾಂತಿನಾಯಕನ ಬರವಿಗಾಗಿ ಸ್ತಬ್ಧ ನೀರವತೆಯಿಂದ ಎದುರುನೋಡುವಂತಿತ್ತು ಹದಿನೆಂಟನೆಯ ಶತಮಾನದ ರಷ್ಯಾದೇಶ.

ಆ ಕಾಲಕ್ಕೆ ಔದ್ಯೋಗಿಕ ಪ್ರಗತಿಯ ನಾಗಾಲೋಟದ ಮುಂಚೂಣಿಯಲ್ಲಿದ್ದ ಜರ್ಮನಿ ದೇಶ ತನ್ನ ಜನಜೀವನವನ್ನೆಲ್ಲ ಹೊಸ ಬುನಾದಿಯ ಮೇಲೆ ನಿರ್ಮಿಸಲು ಹವಣಿಸುತ್ತಿತ್ತು. ತೀವ್ರ ವಿಚಾರಮಂಥನ ಅಲ್ಲಿನ ಬುದ್ಧಿಜೀವಿಗಳ ಮನೋರಾಜ್ಯವನ್ನೆಲ್ಲ ಆವರಿಸಿ ನಿಂತಿತ್ತು. ಬಂಡವಾಳಶಾಹಿ, ಸಾಮ್ರಾಜ್ಯಶಾಹಿಗಳ ಅಪರಿಮಿತ ಬೆಳವಣಿಗೆಯಲ್ಲಿ ನುಚ್ಚುನೂರಾಗುತ್ತಿದ್ದ ಕೂಲಿಗಾರರ ಬಾಳು ಅನೇಕ ವಿಚಾರವಂತರ ಮನಸ್ಸನ್ನು ಕಲಕಿತ್ತು. ಆರ್ಥಿಕ ಅಸಮತೆಯ ಅನಿಷ್ಟ ಪರಿಣಾಮ ಮಾನವ ಸಮಾಜವನ್ನು ದುರಂತದ ದಾರಿ ಹಿಡಿಸಿತ್ತು. ವಿಚಾರಸ್ವಾತಂತ್ರ್ಯ ಜೀವನಸ್ವಾತಂತ್ರ್ಯಗಳೆರಡೂ ಸೈನ್ಯಬಲ

ಧನಬಲಗಳ ಪದಾಘಾತಕ್ಕೆ ಸಿಲುಕಿ ನಲುಗಿಹೋಗಿದ್ದವು. ಅಂಕುಶದಡಿಯ ಆನೆಯಂತೆ ಜನತಾಶಕ್ತಿ ನಡೆಸಿದ ಕಡೆ ನಡೆದು ನೂಕಿದ ಕಡೆ ಬಿದ್ದು ರಾಜ್ಯಾಧಿಕಾರ ಯಂತ್ರದ ಭಾರ ಹೊತ್ತು ಸಾಗಿತ್ತು. ದುಡಿಮೆಗಾರರ ದುರ್ಭರ ಆರ್ಥಿಕ ದಾಸ್ಯ ಅಸಹನೀಯವಾಗಿತ್ತು, ಅಸಹ್ಯವಾಗಿತ್ತು. ಈ ಕುದಿಯುವ ಕೊಪ್ಪರಿಗೆಯೊಳಗಿನಿಂದ ಈ ಶತಮಾನದ ಮಹಾವಿಪ್ಲವದ ಆಧ್ವರ್ಯು ಕಾರ್ಲ್ ಮಾರ್ಕ್ಸ್ ಅವತರಿಸಿ ಬಂದ. ಅವನು ಸಾರಿದ ಮಾರ್ಕ್ಸ್‌ವಾದ ಅಂದಿನಿಂದ ಇಂದಿನವರೆಗೆ ಸಾಮ್ಯವಾದದ ಅಡಿಗಲ್ಲಾಗಿದೆ. ರಾಜಕೀಯ, ಆರ್ಥಿಕ ಕ್ಷೇತ್ರಗಳಲ್ಲಿ ಪ್ರಚಂಡ ಪರಿಣಾಮ ಮಾಡುತ್ತಿದೆ. ಜರ್ಮನಿಯ ಯಹೂದಿಯಾದ ಮಾರ್ಕ್ಸ್ ಮಾನವೀಯ ಅನುಕಂಪನದಿಂದ ಪ್ರೇರಿತನಾಗಿ ಸಮಾಜದ ಕನಿಷ್ಠ ಜೀವಿಯಾಗಿದ್ದ ದುಡಿಮೆಗಾರನ ಪ್ರತಿಷ್ಠಿತ ಪ್ರಭುತ್ವಕ್ಕೆ ಕಾರಣನಾದ. ಆಧುನಿಕ ವಿಶ್ವದ ಪವಾಡಸದೃಶ ವಿಚಾರಚಕ್ರವೊಂದಕ್ಕೆ ಚಾಲನೆ ಕೊಟ್ಟ ಈ ಮಹರ್ಷಿ. ದೇಶಭ್ರಷ್ಟನಾಗಿ ಫ್ರಾನ್ಸಿನಲ್ಲಿ ಸ್ವಲ್ಪಕಾಲವಿದ್ದು ಅಲ್ಲಿನ ಪ್ರಭುತ್ವದ ಆಕ್ರೋಶಕ್ಕೆ ಗುರಿಯಾಗಿ ಕೊನೆಗೆ ಲಂಡನ್ನಿನಲ್ಲಿ ತನ್ನ ಜೀವಿತದ ಬಹುಭಾಗವನ್ನು ಕಳೆದ. ಕಡು ಬಡವನಾಗಿ ಜೀವಿಸಿದ. 1818 ರಿಂದ 1883ರ ವರೆಗೆ ಬದುಕಿದ ಈ ಪ್ರತಿಭಾವಂತನ ಸಂದೇಶ ಪ್ರಚಂಡ ಕ್ರಾಂತಿನಾಯಕ ಲೆನಿನ್ ಮಹಾಶಯನಲ್ಲಿ ಅರಳಿ ಇತಿಹಾಸದ ಶಾಶ್ವತ ಪರಂಪರೆಯ ಉಜ್ವಲ ಜ್ಯೋತಿಯಾಯಿತು.

ಮಾರ್ಕ್ಸ್‌ನ ಸಾಮ್ಯವಾದ ಸಿದ್ಧಾಂತ (ಕಮ್ಯೂನಿಸ್ಟ್ ಮ್ಯಾನಿಫೆಸ್ಟೊ) ಜಗತ್ತಿನ ಪ್ರಮುಖ ರಾಜಕೀಯ ಆರ್ಥಿಕ ಸಂಹಿತೆಗಳಲ್ಲಿ ಪ್ರಖ್ಯಾತವಾದುದು ಇತಿಹಾಸವನ್ನು ಸತತವಾಗಿ ರೂಪಿಸುತ್ತಾ ಸಾಗಿರುವ ವರ್ಗಘರ್ಷಣೆ. ಆರ್ಥಿಕ ವ್ಯವಸ್ಥೆಯಲ್ಲಿ ಬಂಡವಾಳ ಮತ್ತು ದುಡಿಮೆಗಳ ವಿಷಮ ಸಂಬಂಧದಿಂದ ಉತ್ಪನ್ನವಾಗುವ ಈ ವರ್ಗಗಳು ; ಸಶಸ್ತ್ರ ಕ್ರಾಂತಿಯ ಮೂಲಕ ಕೂಲಿಗಾರ ಸಾಮ್ರಾಜ್ಯ ಸ್ಥಾಪನೆ ; ವರ್ಗನಿರಸನ ; ಕೊನೆಗೆ ವರ್ಗರಹಿತ. ಯುದ್ಧರಹಿತ, ಶೋಷಣರಹಿತ, ಪರಮಾಧಿಕಾರರಹಿತ, ಸಮತಾಪೂರ್ಣ ಪ್ರಬುದ್ಧ ವಿಶ್ವ ಸಮಾಜ. ಇದು ಮಾರ್ಕ್ಸ್‌ನ ವಿಚಾರಧಾರೆ. ಇದರ ಆಚಾರ ಸಂಹಿತೆಯಾಗಿ ಕ್ರಾಂತಿವಿಜ್ಞಾನದಲ್ಲಿ ಹಂತಗಳ ವಿವರಗಳನ್ನೂ, ಬಂಡವಾಳಶಾಹಿ ಸಾಮ್ರಾಜ್ಯಶಾಹಿಗಳು ಆಂತರಿಕ ವಿರೋಧಾಭಾಸಗಳಿಂದ ಅನಿವಾರ್ಯವಾಗಿ ನಾಶವಾಗುವ

ಬಗೆಯನ್ನೂ ಮಾರ್ಕ್ಸ್ ತನ್ನ ಸುಪ್ರಸಿದ್ಧ ಗ್ರಂಥ "ಡಾಸ್ ಕ್ಯಾಪಿಟಲ್"ನಲ್ಲಿ ತನ್ನ ಸ್ನೇಹಿತ ಎಂಜೆಲ್ಸ್‌ನ ಸಹಕಾರದೊಡನೆ ವಿವರವಾಗಿ ವಿವೇಚಿಸಿದ್ದಾನೆ. ಸಹಸ್ರಾರು ಮೇಧಾವಿ ಯುವಕರ ಜೀವನದೃಷ್ಟಿಯನ್ನೇ ಬದಲಿಸಿದ ಈ ಮಹಾಕೃತಿ ಲೆನಿನ್ ಮಹಾಶಯನಿಗೆ ಪ್ರಮಾಣ ಗ್ರಂಥವಾಯಿತು.

ಇದೇ ಕಾಲಕ್ಕೆ ಕೃಷಿಪ್ರಧಾನ ದೇಶವಾಗಿದ್ದ ರಷ್ಯದಲ್ಲಿ ಮತ್ತೊಬ್ಬ ಪ್ರತಿಭಾವಂತ ಆಚಾರ್ಯಪುರುಷ ತನ್ನ ಆತ್ಮಸಾಧನೆಯ ಮಂಥನದಿಂದ ಅಮೂಲ್ಯವಾದ ಅಹಿಂಸಾ ವಿಚಾರಧಾರೆಯನ್ನೂ ಜಗತ್ತಿಗೆ ಸಾರುತ್ತಿದ್ದ. ಅವನೇ ಜಗದ್ವಿಖ್ಯಾತ ಸಾಹಿತಿ ಮಹರ್ಷಿ ಟಾಲ್‌ಸ್ಟಾಯ್. ಯಾಸ್ನಾಯಾಪೋಲಿಯಾನಾದಲ್ಲಿ ಆತ ಕಾಯಕದ ವ್ರತ ತೊಟ್ಟು ಶ್ರೀಮಂತಿಕೆಯ ಭೋಗಜೀವನವನ್ನು ಧಿಕ್ಕರಿಸಿ ಇಳಿ ವಯಸ್ಸಿನಲ್ಲಿ ಋಷಿಯಂತೆ ಜೀವನ ನಡೆಸಿದ. ಆತ ಕಟ್ಟಿದ ಆಶ್ರಮ ಇಂದಿಗೂ ರಷ್ಯದ ಚಿರಸ್ಮರಣೀಯ ಯಾತ್ರಾಸ್ಥಳ. ಈ ಸಾಧಕನ ಲೇಖನಿಯಿಂದ ಹರಿದುಬಂದ ಅಮರಸಾಹಿತ್ಯ ಅಂದಿನ ವಿಚಾರವಂತರ ಮನಸ್ಸನ್ನು ಪ್ರಬಲವಾಗಿ ಸೆಳೆದಿತ್ತು. ಮಾರ್ಕ್ಸ್‌ನ ಸಮಕಾಲೀನನಾಗಿ 1828 ರಿಂದ 1910 ರ ವರೆಗೆ ತುಂಬುಜೀವನ ನಡೆಸಿ ವಿಪುಲವಾಗಿ ಬರೆದಿಟ್ಟ ಈತನ ವಿಚಾರಲಹರಿ 1905 ರಲ್ಲಿ ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ ಪ್ರಯೋಗ ಕೈಗೊಂಡಿದ್ದ ಗಾಂಧೀಜಿಯ ಮೇಲೆ ಪ್ರಭಾವ ಬೀರಿತು. "ಹಿಂಸೆಯಿಂದ ಹಿಂಸೆ ಎಂದಿಗೂ ಮಣಿಯಲಾರದು. ಏಸುಕ್ರಿಸ್ತನ ಕ್ಷಮಾಮಾರ್ಗ, ಸ್ವಾರ್ಥದಮನದ ತ್ಯಾಗಮಾರ್ಗ, ಆತ್ಮಬಲಿದಾನ, ಸತ್ಯನಿಷ್ಠೆ, ಪ್ರೇಮನಿಷ್ಠೆ, ವ್ಯಕ್ತಿ ಪರಿವರ್ತನೆಯ ಅಹಿಂಸಾಮಾರ್ಗ ಇವು ಸಾಮಾಜಿಕ ಕ್ರಾಂತಿಯಲ್ಲಿ ಶಾಶ್ವತ ಮೌಲ್ಯಗಳನ್ನು ಪ್ರತಿಷ್ಠಿಸಬಲ್ಲವು" ಎಂಬ ವಿಚಾರಪ್ರಣಾಲಿ ಟಾಲ್‌ಸ್ಟಾಯ್‌ನ ಬರಹಗಳಲ್ಲಿ ಒಡಮೂಡಿದವು. ಆದರೆ ಪ್ರತ್ಯಕ್ಷ ಜನತಾ ಸಂಘಟನೆಯಲ್ಲಿ ತೊಡಗದೆ ಕೇವಲ ವಯ್ಯಕ್ತಿಕ ಜೀವನದ ವಿಕಾಸ ಮಾತ್ರ ತೋರಿದ ಟಾಲ್‌ಸ್ಟಾಯ್ ಅಂದಿನ ಕ್ರಾಂತಿಕಾರರ ಮೇಲೆ ಪ್ರಭಾವ ಬೀರಲಿಲ್ಲ. ಕ್ರಾಂತಿಪಥದ ಈ ಹೊಸ ವಿಚಾರ ಕಾಲಗರ್ಭದಲ್ಲಿ ಇನ್ನೂ ಹಲವು ದಶಕಗಳುರುಳಿದ ನಂತರ ಗಾಂಧೀಜಿಯ ಅಹಿಂಸಾ ಕ್ರಾಂತಿಯಲ್ಲಿ ಅರಳಿತು. ಜರ್ಮನಿಯ ಮಾರ್ಕ್ಸ್ ಲೆನಿನ್ನನ ಪರಮಗುರುವಾದಂತೆ ರಷ್ಯದ ಟಾಲ್‌ಸ್ಟಾಯ್ ಗಾಂಧೀಜಿಯ ಗುರುಪರಂಪರೆಯಲ್ಲಿ ಸೇರಿಹೋದ. ಒಂದೇ ಕಾಲದಲ್ಲಿ ಒಂದೇ ಮಹಾವಿಪ್ಲವದ ಬುನಾದಿಯಾಗಿ ಉದ್ಭವಿಸಿದ ಎರಡು ವಿಚಾರ

ಧಾರೆಗಳು ಈ ಶತಮಾನದ ಸಮಕಾಲೀನ ವಿಭೂತಿದ್ವಯರಾದ ಲೆನಿನ್ ಮತ್ತು ಗಾಂಧೀಜಿಯಲ್ಲಿ ಸಫಲತೆಯ ಪರಿಮಳವನ್ನು ತುಂಬಿಕೊಂಡು ಜೀವಂತ ವಾಗಿ ಹರಿದವು.

1869 ರಲ್ಲಿ ಭಾರತದಲ್ಲಿ ಗಾಂಧೀ, 1870 ರಲ್ಲಿ ರಷ್ಯದಲ್ಲಿ ಲೆನಿನ್ ಜನಿಸಿದರು. ಯೌವನದಲ್ಲಿ ಇಬ್ಬರೂ ಅಂದಿನ ವಿಶ್ವರಾಜಧಾನಿಯಂತಿದ್ದ ಲಂಡನ್ ನಗರದ ಬೌದ್ಧಿಕ ಮೂಸೆಯಲ್ಲಿ ಪುಟಹೊಂದಿ ಮುಂದೆ ಪ್ರಖರ ಕ್ರಾಂತಿನಾಯಕ ರಾದರು. ಯುಗ ಪರಿವರ್ತನೆಯ ಪರಮನಿಯಮದ ಮೂರ್ತಸ್ವರೂಪರಾದರು. ವಿಶ್ವಕ್ರಾಂತಿಯ ಪೂರ್ಣಚಕ್ರಪ್ರವರ್ತನೆಯಲ್ಲಿ ಎರಡನೇ ಮೂರನೇ ಮಜಲು ಗಳಾದ ಸಮತೆ ಸೌಹಾರ್ದಗಳ ಆಚಾರಸಂಹಿತೆಯನ್ನು ನೀಡಿದ ಕಾರಣ ಪುರುಷರಾದರು.

೩

ವ್ಲಾಡಿಮಿರ್ ಇಲಿಚ್ ಉಲ್ಯನೋವ್ ಅಥವಾ ಲೆನಿನ್ 1870 ರ ಏಪ್ರಿಲ್ 22 ರಂದು ರಷ್ಯದ ವೋಲ್ಗಾ ಮಹಾನದೀತೀರದ ಸಿಂಬಿರಸ್ಕನಲ್ಲಿ ಜನಿಸಿದ. ಮಧ್ಯಮವರ್ಗದ ವಿದ್ಯಾವಂತ ಮನೆತನ ಅವರದು. ವಿದ್ಯಾ ಇಲಾಖೆಯ ಅಧಿಕಾರಿ ತಂದೆ ನಿಕೊಲೈವಿಚ್ ಪದವೀಧರ, ದಕ್ಷ ಆಡಳಿತಗಾರ. ತಾಯಿ ಮೇರಿಯಾ ಅಲೆಕ್ಸಾಂಡ್ರೋವ್ನಾ ಪ್ರಖ್ಯಾತ ವೈದ್ಯರೊಬ್ಬರ ಮಗಳು. ಸುಸಂಸ್ಕೃತ ಗೃಹಿಣಿ. ಮಕ್ಕಳ ಪಾಲನೆಯಲ್ಲಿ ಮಗ್ನಳಾದ ವಾತ್ಸಲ್ಯಮಯಿ. ತುಂಬು ಹೃದಯದ, ತೀಕ್ಷ್ಣ ಬುದ್ಧಿಯ. ತುಂಬು ಆರೋಗ್ಯದ ತುಂಬಿದ ಮನೆಯ ಆರು ಮಕ್ಕಳಲ್ಲಿ ಲೆನಿನ್ ಮೂರನೆಯವನು. ವ್ಲಾಡಿಮಿರ್ ಅವನಿ ಗಿಟ್ಟ ಹೆಸರು. ಮುಂದೆ ತಲೆ ಮರೆಸಿಕೊಂಡು ಕ್ರಾಂತಿನಾಯಕನಾಗಿ 'ಲೇನಾ' ನದೀತೀರದ ಅಜ್ಞಾತ ಶಿಬಿರದಲ್ಲಿ ಸಂಕೇತನಾಮ 'ಲೆನಿನ್' ಆದುದು ಶಾಶ್ವತ ವಾಗಿ ನಿಂತುಬಿಟ್ಟಿತು. ಅಕ್ಕ ಅನ್ನಾ, ಅಣ್ಣ ಅಲೆಕ್ಸಾಂಡರ್. ತಂಗಿಯರು ಓಲ್ಗಾ ಮೇರಿಯಾ ಮತ್ತು ತಮ್ಮ ಡಿಮಿಟ್ರಿ ಹೀಗೆ ಐದು ಜನ ಒಡಹುಟ್ಟಿ ದವರು ಲೆನಿನ್‌ಗೆ. ಸಾಲುಗಟ್ಟಿ ಧರೆಗಿಳಿದ ಈ ಆರು ಜನರೂ ಕ್ರಾಂತಿಪಥದ ಸಾಹಸಜೀವಿಗಳು. ಜೀವನದಲ್ಲಿ ತುಂಬು ಉತ್ಸಾಹದಿಂದ ಧೀರೋದಾತ್ತ ತತ್ವನಿಷ್ಠೆಯನ್ನು ನಿರ್ಭಯವಾಗಿ ಅನುಷ್ಠಾನ ಮಾಡಿದ ತೇಜಸ್ವಿಗಳು. ತಾಯಿಯೇ

ಅವರ ಪ್ರಥಮ ಗುರು. ಆಕೆ ಕೊಟ್ಟ ಚಾರಿತ್ರ್ಯ ಶಿಕ್ಷಣ ಎಲ್ಲರ ಬಾಳಿನಲ್ಲೂ ಪ್ರಜ್ವಲಿಸಿ ಬೆಳಗಿತು.

ಅಣ್ಣ ಅಲೆಕ್ಸಾಂಡರ್ ಸೇಂಟ್ ಪೀಟರ್ಸ್‌ಬರ್ಗ್ ವಿಶ್ವವಿದ್ಯಾನಿಲಯದ ಮೇಧಾವೀ ವಿದ್ಯಾರ್ಥಿ. ಬಾಲಕ ಲೆನಿನ್‌ಗೆ ಅವನ ನಡೆನುಡಿಗಳೇ ಆದರ್ಶ. ವಿಖ್ಯಾತ ವಿಜ್ಞಾನಿಯಾಗುವ ಅರ್ಹತೆಯಿತ್ತು ಅಲೆಕ್ಸಾಂಡರ್‌ಗೆ. ಆದರೆ ಯೌವನದ ಬಿಸಿರಕ್ತ ಜಾರ್‌ದೊರೆಯ ನಿರಂಕುಶ ದರ್ಪದ ವಿರುದ್ಧ ಆವೇಶದಿಂದ ಪ್ರತಿಭಟಿಸುವ ಅದಮ್ಯ ಉತ್ಸಾಹಕ್ಕೆ ಮಾರುಹೋಯಿತು. ಮೂರನೇ ಅಲೆಕ್ಸಾಂಡರ್ ದೊರೆ ರಷ್ಯವನ್ನಾಳುತ್ತಿದ್ದ. ಅವನ ದರ್ಪದ ದಬ್ಬಾಳಿಕೆಯ ವಿರೋಧವಾಗಿ ಜನತಾ ಪ್ರತಿಭಟನೆ ಹೊಗೆಯಾಡುತ್ತಿತ್ತು. ಕೆಲವೆಡೆ ದಂಗೆಗಳೆದ್ದು ರಕ್ತಪಾತವಾಗಿತ್ತು. ಪ್ರಭುತ್ವದ ಸಶಸ್ತ್ರಪಡೆ ಜನತೆಯನ್ನು ಸದೆಬಡಿಯುತ್ತಿತ್ತು. ಯುವಕ ವಿದ್ಯಾರ್ಥಿವೃಂದ ಸೇಡಿನ ಕಿಡಿ ಕಾರುತ್ತಿತ್ತು. ವಿಧ್ವಂಸಕ ಪ್ರತಿರೋಧದಲ್ಲಿ ತೊಡಗಿದ ಗುಂಪೊಂದು ಒಂದು ಸಾರಿ ಪೀಟರ್ಸ್‌ಬರ್ಗ್‌ನಲ್ಲಿ ದೊರೆಯ ಕೊಲೆಗೆ ಪ್ರಯತ್ನ ಮಾಡಿ ವಿಫಲವಾಯಿತು. ರೊಚ್ಚಿಗೆದ್ದ ಜಾರ್ ಪ್ರಭುತ್ವ ವಿದ್ಯಾರ್ಥಿನಾಯಕರ ಮೇಲೆ ನಿಷ್ಕರುಣೆಯಿಂದ ಧಾಳಿಮಾಡಿ ಶಿಕ್ಷಿಸಿತು. ಹದಿನೈದು ಅಪರಾಧಿಗಳಲ್ಲಿ ಲೆನಿನ್ನನ ಅಣ್ಣ ಅಲೆಕ್ಸಾಂಡರ್‌ನೂ ಒಬ್ಬ. ಸ್ವತಂತ್ರವೃತ್ತಿಯ ದಿಟ್ಟತನಕ್ಕೆ ಪ್ರಸಿದ್ಧನಾಗಿದ್ದ ಅವನಿಗೂ ಅವನೊಡನೆ ನಾಲ್ಕು ಜನರಿಗೂ ಮರಣದಂಡನೆಯಾಯಿತು. 1887 ರಲ್ಲಿ ಅಣ್ಣ ಅಲೆಕ್ಸಾಂಡರ್ ಗಲ್ಲಿಗೇರಿದುದನ್ನು ನೋಡಿ ಹದಿನೇಳು ವರ್ಷದ ಲೆನಿನ್ ದಾರುಣ ವ್ಯಥೆಯಿಂದ ವಿಷಣ್ಣನಾದ. ಸ್ವಪ್ರತಿಷ್ಠೆಯ ನಿರಂಕುಶ ರಾಕ್ಷಸೀ ಆಕ್ರೋಶದ ಈ ಏಕನಾಯಕ ಪ್ರಭುತ್ವದಿಂದ ಸಾಮಾನ್ಯ ಜನತೆ ಮುಕ್ತವಾಗುವ ಕ್ರಾಂತಿಪಥವನ್ನರಸಲು ಅವನ ಮನಸ್ಸು ಆಗಲೇ ಸಂಕಲ್ಪಮಾಡಿತು.

ಇದಕ್ಕೆ ಕೆಲವೇ ತಿಂಗಳುಗಳ ಹಿಂದೆ ಲೆನಿನ್ನನ ತಂದೆ ನಿಕೊಲಯ್‌ವಿಚ್ ಹಠಾತ್ತನೆ ಗತಿಸಿದ್ದರು. ಕೈಗೆ ಬಂದಿದ್ದ ಹಿರಿಯ ಮಗ ರಾಜನ ಆಕ್ರೋಶಕ್ಕೆ ಬಲಿಯಾದ. ಐದು ಚಿಕ್ಕ ಮಕ್ಕಳ ಪೋಷಣೆ ವಿದ್ಯಾಭ್ಯಾಸಗಳ ಹೊರೆ ತಾಯಿ ಅಲೆಕ್ಸಾಂಡ್ರೋವ್ನ ಮೇಲೆ ಬಿತ್ತು. ವಿದ್ಯಾವಂತಳೂ ದಕ್ಷ ಗೃಹಿಣಿಯೂ, ಪ್ರಗತಿಶೀಲ ಮನೋಧೋರಣೆಯುಳ್ಳವಳೂ ಆಗಿದ್ದ ಆಕೆ ಅದನ್ನು ಯಶಸ್ವಿಯಾಗಿ ನಿರ್ವಹಿಸಿದಳು.

ರಾಜನ ಕೊಲೆ ಪ್ರಯತ್ನದ ಪ್ರತಿಕ್ರಿಯೆ ವಿದ್ಯಾರ್ಥಿವೃಂದದ ಚಟು ವಟಿಕೆಗಳ ಮೇಲೆಲ್ಲಾ ಸಂಶಯದ ವಿಷಗಾಳಿಯನ್ನು ಹರಡಿತು. ಕ್ರೂರ ಶಿಕ್ಷೆಯ ಭಯೋತ್ಪಾದನೆಯಿಂದ ಯುವಕರ ವಿಚಾರಸ್ವಾತಂತ್ರ್ಯಕ್ಕೆ ಆಘಾತವಾಗಿತ್ತು. ಸುತ್ತಲೂ ಗೂಢಚಾರರ ದುಷ್ಟಜಾಲ ಹರಡಿ ನಿಂತಿತ್ತು. ಉತ್ಸಾಹೀ ತರುಣರ ಪ್ರಫುಲ್ಲ ಮನಸ್ಸು ದುರ್ದಮನದಿಂದ ರೋಸಿಹೋಗಿತ್ತು. ಆಕ್ರೋಶ ಹೊಗೆಯಾಡುತ್ತಾ ಅಲ್ಲಲ್ಲಿ ಆಸ್ಫೋಟವಾಗುತ್ತಿತ್ತು. ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಪಕ 'ಅಶಿಸ್ತಿನ' ಪ್ರಕರಣಗಳು ಹರಡುತ್ತಿದ್ದವು. ಕಜಾನ್ ವಿದ್ಯಾಲಯ ಕ್ಕೊಬ್ಬ ದರ್ಪ ವಿದ್ಯಾಧಿಕಾರಿ ಬಂದ. ಆಗ ಅಲ್ಲಿ ಲೆನಿನ್ ಒಬ್ಬ ವಿದ್ಯಾರ್ಥಿ. ಹತ್ತಾರು ಸ್ನೇಹಿತರನ್ನು ಹುರಿದುಂಬಿಸಿ ಅಧಿಕಾರಿಯ ಎದುರುಬಿದ್ದು ಪ್ರಶ್ನೆಗಳ ಸುರಿಮಳೆಯನ್ನೇ ಕರೆದ. ಸಿಟ್ಟಿನ ಆವೇಶವೂ ಉಕ್ಕಿಬಂತು. ಮುಷ್ಟಿಗಳನ್ನು ಮುಂದೆ ಚಾಚಿ ಎಡಬಿಡದೆ ಮೂದಲಿಸುತ್ತಿದ್ದ ಹುಡುಗರ ಲೇವಡಿಗೆ ಕುಪಿತನಾದ ಅಧಿಕಾರಿ ಅಲ್ಲಿಂದ ತಪ್ಪಿಸಿಕೊಂಡು ಹೋಗಿ ಸರ್ಕಾರಕ್ಕೆ ದೂರುಕೊಟ್ಟ. ಶಾಲೆ ಯಲ್ಲಿ ಅರಾಜಕತೆ ರಾಜಕೀಯ ಅಶಾಂತಿಗಳನ್ನು ಬೆಳೆಸುವ ದಂಗೆಕೋರರಿದ್ದಾರೆ ಎಂದು ಪೋಲೀಸರಿಗೆ ವರದಿಮಾಡಿಬಿಟ್ಟ. ಆ ಕೂಡಲೇ ರಾಜ್ಯಸರ್ಕಾರ ಹದ್ದಿನಂತೆ ಎರಗಿ ನಲವತ್ತು ಎಳೆಯ ವಿದ್ಯಾರ್ಥಿಗಳನ್ನು ಬಂಧಿಸಿತು. ಲೆನಿನ್ ಅವರ ಪ್ರಮುಖ ನಾಯಕ. ಪೋಲೀಸ್ ಅಧಿಕಾರಿ "ಗೋಡೆಗೆ ತಲೆ ಚಚ್ಚಿಕೊಳ್ಳುವ ಈ ಹುಚ್ಚು ದಂಗೆಯ ಪ್ರಯಾಸ ನಿನಗೇಕೆ ?" ಎಂದು ಚುಚ್ಚುಮಾತಾಡಿದ. ಲೆನಿನ್ ತಕ್ಷಣ ಪ್ರತಿಭಟಿಸಿ "ಆ ಹುಳುಕು ಗೋಡೆ ಒಂದೇ ಒದೆತಕ್ಕೆ ತತ್ತರಿಸಿ ಬೀಳುವುದೆಂದು ನಾನು ಬಲ್ಲೆ" ಎಂದ. ಹುಡುಗರೆಲ್ಲ 'ಉಘೇ' ಎಂದರು. ಅಧಿಕಾರಿ ಸಪ್ಪೆಯಾದ.

ಹದಿನೇಳು ವರ್ಷದ ಲೆನಿನ್ ಸರ್ಕಾರದ ದೃಷ್ಟಿಯಲ್ಲಿ ರಾಜಕೀಯ 'ದಂಗೆಕೋರ' ಆದ. ಕಾಲೇಜಿನಿಂದ ಅವನ ಸಂಗಡಿಗರೊಡನೆ ಅವನನ್ನು ಹೊರಗೆ ಹಾಕಿದರು. ದೂರದ ಕೊಕುಷ್ಕಿನೋ ಗ್ರಾಮದಲ್ಲಿ (ಈಗ ಅದು 'ಲೆನಿನೋ' ಆಗಿದೆ) ಒಂದು ವರ್ಷ ಪೋಲೀಸ್ ಬಂದಿಯಾಗಿ ಈ ಬಾಲಕ ನಿರ್ಬಂಧದಲ್ಲಿರಬೇಕಾಯಿತು. ಮತ್ತೆ ಕಾಜಾನ್‌ಗೆ ಹಿಂತಿರುಗಲು ಅನುಮತಿ ದೊರೆತರೂ ವಿದ್ಯಾಲಯ ಪ್ರವೇಶ ನಿರಾಕರಿಸಲ್ಪಟ್ಟಿತು. ವಿದೇಶಕ್ಕೆ ಹೋಗಲು ಅಪ್ಪಣೆ ಕೊಡಲಿಲ್ಲ. ಲೆನಿನ್ ಧೈರ್ಯಗೆಡದೆ ಸ್ವಯಂ ಶಿಕ್ಷಣದ ಪ್ರಿದ್ಧಾಯುಕ್ತ

ಪ್ರಯತ್ನದಲ್ಲಿ ಮತ್ತೊಂದು ವರ್ಷ ತಲ್ಲೀನನಾದ. ಅಸಾಧಾರಣ ಪ್ರಗತಿ ಸಾಧಿಸಿದ.

೪

ತರುಣ ಲೆನಿನ್ ಕಾಜಾನ್ ನಗರದ ಕ್ರಾಂತಿಕಾರ ವಲಯಗಳ ನಿಕಟ ಸಂಪರ್ಕ ಪಡೆಯಲಾರಂಭಿಸಿದ್ದ. ಅಣ್ಣ ಅಲೆಕ್ಸಾಂಡರ್ ತುಳಿದ ವ್ಯಕ್ತಿವಿಧ್ವಂಸಕ ಮಾರ್ಗ ಅವನಿಗೆ ಹಿಡಿಸಲಿಲ್ಲ. "ಅವ್ಯವಸ್ಥಿತ ದಂಗೆ, ಕೊಲೆ, ರಕ್ತಪಾತಗಳಿಂದ ಸಮಾಜ ಪರಿವರ್ತನೆ ಆಗದು, ರಾಜ್ಯಕ್ರಾಂತಿ ಕೈಗೂಡದು. ಜನತಾ ಸಂಘಟನೆ ಅಸಾಧ್ಯ" ಎಂದು ಖಂಡಿತವಾಣಿಯಿಂದ ಅಂದಿನ ನಾಯಕರೊಂದಿಗೆ ವಾದಿಸುತ್ತಿದ್ದ. ಪ್ರಬಲವಾಗಿದ್ದ 'ನಾರೊಡ್ನಯ ವೋಲ್ಯ' ಎಂಬ ರಹಸ್ಯ ರಾಜಕೀಯ ಸಂಸ್ಥೆಯನ್ನು ವಿರೋಧಿಸಿದ. ಇಡೀ ಜನತೆ ಜಾಗೃತರಾಗಿ ಸಂಘಟಿತರಾಗಿ ಅಧಿಕಾರ ವಹಿಸಿ ಬೃಹತ್‌ಪ್ರಮಾಣದ ಸಮತಾ ಸಮಾಜ ಸೃಷ್ಟಿಸುವ ಕನಸು ಲೆನಿನ್ನನ ಪ್ರಬುದ್ಧ ಮನಸ್ಸಿನಲ್ಲಿ ಬೇರೂರಿಬಿಟ್ಟಿತ್ತು.

ಮಾರ್ಕ್ಸ್‌ನ ಸಿದ್ಧಾಂತಗಳನ್ನು ಆಳವಾಗಿ ಅಧ್ಯಯನ ಮಾಡಲು ಅನೇಕ ಯುವಕಗೋಷ್ಠಿಗಳು ರೂಪಿತವಾಗುತ್ತಿದ್ದವು. ಲೆನಿನ್ ಆ ಕಾಲಕ್ಕೆ ಮಾರ್ಕ್ಸ್‌ನ 'ಕ್ಯಾಪಿಟಲ್' ಗ್ರಂಥವನ್ನು ಶ್ರದ್ಧೆಯಿಂದ ವ್ಯಾಸಂಗಮಾಡಿದ. ಅಕ್ಕ ಆನಾ–ಯಲಿಜಿರೋವಾ ಅವನ ನಿಕಟವರ್ತಿ. ಸ್ವತಃ ತೀಕ್ಷ್ಣ ಬುದ್ಧಿಯ ರಾಜಕಾರಣಿ ಆಕೆ. ತಮ್ಮನ ಜ್ಞಾನದಾಹ ತಣಿಯಲು ಆಸರೆಯಾದಳು. ತನ್ನನ್ನು ಮೀರಿಸಿ ಬೆಳೆದು ನಿಂತ ತಮ್ಮನ ಬುದ್ಧಿತೀಕ್ಷ್ಣತೆಗೆ ಮಾರುಹೋದಳು. ಬಾಲ್ಯದ ದಿನಗಳ ಸ್ಮೃತಿಯನ್ನು ಸುಂದರವಾಗಿ ಚಿತ್ರಿಸಿದ್ದಾಳೆ ಆಕೆ. "ಮಾರ್ಕ್ಸ್ ಸಿದ್ಧಾಂತಗಳನ್ನು ಅಭ್ಯಾಸ ಮಾಡುವ ಅಪರಿಮಿತ ಆಸಕ್ತಿ ಅವನನ್ನು ಪ್ರಭಾವಪೂರ್ಣ ಮಾತುಗಾರನನ್ನಾಗಿ ರೂಪಿಸಿತು" ಎಂದು ಬರೆದಿದ್ದಾಳೆ. "ಆ ಚಿಕ್ಕ ವಯಸ್ಸಿನಲ್ಲಿಯೂ ಅವನ ಪ್ರತಿಭೆ ಮಾತುಗಳಲ್ಲಿ ತುಂಬಿಬಂದು ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿಸುತ್ತಿತ್ತು—ಈಗಲೂ ಆ ಚಿತ್ರ ನನ್ನ ಕಣ್ಣಿಗೆ ಕಟ್ಟುತ್ತದೆ. ಕೈಯೆತ್ತಿ ಮುಷ್ಟಿ ಚಾಚಿ ರಭಸದಿಂದ ಮುಖ್ಯಾಂಶಗಳನ್ನು ಒತ್ತಿ ಹೇಳುತ್ತಿದ್ದ ಆ ತೇಜಃಪುಂಜ ಮುಖಮುದ್ರೆಯನ್ನು ಮರೆಯಲಾರೆ. ಓದಿದುದನ್ನೆಲ್ಲಾ ಮಿತ್ರರೊಡನೆ ವಿನಿಮಯ ಮಾಡಿಕೊಳ್ಳುವ ಆನಂದದಲ್ಲಿ ತಲ್ಲೀ–

ನಾಗುತ್ತಿದ್ದ ವ್ಲಾಡಿಮಿರ್. ಹಲವಾರು ಉತ್ಸಾಹೀ ಯುವಕರ ವೃಂದ ಸಹಜವಾಗಿ ಅವನನ್ನು ಕೂಡಿಕೊಂಡಿತು" ಎಂದು ನೆನೆಸಿಕೊಂಡಿದ್ದಾಳೆ.

ಕಷ್ಟಸಹಿಷ್ಣುತೆಯ ಪ್ರತಿಮೂರ್ತಿಯಾಗಿ ಗಾಂಭೀರ್ಯ ತಾಳ್ಮೆಗಳಿಂದ ಸಂಸಾರವನ್ನು ನಿರ್ವಹಿಸುತ್ತಿದ್ದ ತಾಯಿಯ ಬಗೆಗೆ ಲೆನಿನ್‌ಗೆ ಅಪಾರ ಗೌರವ. ಆಕೆಯ ಮನಸ್ಸಿಗೆ ನೋವಾದೀತೇನೋ ಎಂದು ಹೆದರಿ ದುಡುಕು ಹೆಜ್ಜೆಗಳನ್ನಿಡುತ್ತಿರಲಿಲ್ಲ. ಹಿರಿಯ ಮಗ ಗಲ್ಲಿಗೇರಿದಾಗ ಆಕೆ ತೋರಿಸಿದ ಧೃತಿ ಅಸಾಧಾರಣವಾಗಿತ್ತೆಂದು ಲೆನಿನ್ ಬಹಳಕಾಲ ಜ್ಞಾಪಿಸಿಕೊಳ್ಳುತ್ತಿದ್ದ. ಚಾರಿತ್ರ್ಯವನ್ನು ರೂಪಿಸಿದ ಮಾತೃಪ್ರಭಾವ ಅವನ ಅಪೂರ್ವ ಭಾಗ್ಯ. ತೀವ್ರ ಜ್ಞಾನಾನ್ವೇಷಣೆಯ ಕಾಲಕ್ಕೆ ಒಂದು ಬಾರಿ ಲೆನಿನ್ ಧೂಮಪಾನದ ದುರಭ್ಯಾಸಕ್ಕೆ ಬಲಿಯಾದ. ತಾಯಿ ಅನೇಕ ಬಾರಿ ಎಚ್ಚರಿಸಿದಳು. ಬಿಟ್ಟುಬಿಡಲು ಆಗ್ರಹ ಮಾಡಿದಳು. ಕೊನೆಗೊಂದು ಬಾರಿ "ಮಗೂ, ನನ್ನ ಪರಿಮಿತ ಪರಿಹಾರವೇತನದ ಆಧಾರದ ಮೇಲೆ ಸಂಸಾರವೆಲ್ಲ ನಡೆಯಬೇಕು. ನೀನು ಆರ್ಜಿಸಲಾಗದ ಹಣ ಅದೆಷ್ಟೇ ಚಿಕ್ಕ ಪ್ರಮಾಣದಲ್ಲಾಗಲೀ ಪೋಲುಮಾಡುವುದು ಬಹಳ ಅನ್ಯಾಯ" ಎಂದು ನೊಂದು ನುಡಿದಳು. ಈ ಮಾತು ಲೆನಿನ್‌ನ ಅಂತರ್ಯವನ್ನು ಪ್ರಬಲವಾಗಿ ಕಲಕಿತು. ಧೂಮಪಾನವನ್ನು ಸಂಪೂರ್ಣವಾಗಿ ತ್ಯಜಿಸುವ ಸಂಕಲ್ಪ ಮಾಡಿಬಿಟ್ಟ. ಕೊನೆಯುಸಿರಿನವರೆಗೆ ಅತ ಮತ್ತೆ ಎಂದೂ ಹೊಗೆಬತ್ತಿಯನ್ನು ಮುಟ್ಟಲಿಲ್ಲ.

ಕಾಜಾನ್ ಕ್ರಾಂತಿಕಾರಕ ಯುವಕರ ಜೇನುಗೂಡಾಯಿತು. ಸರ್ಕಾರ ಎಚ್ಚರಗೊಂಡಿತು. ಸಂಶಯ ಬಂದ ತರುಣರೆಲ್ಲ ಶಿಕ್ಷಿಸಲ್ಪಡುತ್ತಿದ್ದರು. ಆಗಾಗ್ಗೆ ಗುಟ್ಟಾಗಿ ಸೇರುತ್ತಿದ್ದ ಚಿಕ್ಕಸಭೆಗಳಲ್ಲಿ ಲೆನಿನ್ ಮಾತನಾಡುತ್ತಿದ್ದ. ಅಸಂಘಟಿತ ಆವೇಶಪೂರ್ಣ ವಿಧ್ವಂಸಕ ಮಾರ್ಗವನ್ನು ಖಂಡಿಸಿ ನರೋಡ್ನಯ ಪಕ್ಷದ ಚಟುವಟಿಕೆಗಳನ್ನು ವಿರೋಧಿಸುತ್ತಿದ್ದ. ಸಾಮಾನ್ಯಜನತೆ ಕಾರ್ಯೋನ್ಮುಖರಾಗುವಂತಹ ರಚನಾತ್ಮಕ ಕಾರ್ಯಕ್ರಮವಿಲ್ಲದೆ ಕ್ರಾಂತಿ ಸಫಲವಾಗದು ಎಂದು ವಾದಿಸಿದ. ಅಭ್ಯಾಸ ಅಧ್ಯಯನಗಳ ಸಾಧನೆ ಅತ್ಯಾವಶ್ಯಕ ಎನಿಸಿತು ಲೆನಿನ್‌ಗೆ. ಚಿಕ್ಕವಯಸ್ಸಿನ ತೀಕ್ಷ್ಣಮತಿಯ ವಿದ್ಯಾರ್ಥಿಯಂತೆ ಆಂದಿನ ಯೂರೋಪಿನ ರಾಜಕೀಯ ಆರ್ಥಿಕ ವಿಚಾರಮಾರ್ಗಗಳನ್ನೆಲ್ಲ ಆಳವಾಗಿ ವ್ಯಾಸಂಗಮಾಡಿದ.

ಸರ್ಕಾರದೊಡನೆ ಸತತವಾಗಿ ವಾದಮಾಡುತ್ತಾ ವಿಶ್ವವಿದ್ಯಾನಿಲಯಕ್ಕೆ ಸೇರುವ ಅನುಮತಿಗಾಗಿ ಪ್ರಯತ್ನ ಮಾಡುತ್ತಿದ್ದ ಲೆನಿನ್. ಹಲವಾರು ಬಾರಿ ನಿರಾಕರಿಸಲ್ಪಟ್ಟು ಕೊನೆಗೆ 1891ರಲ್ಲಿ ನೇರವಾಗಿ ನ್ಯಾಯಶಾಸ್ತ್ರದ ಪರೀಕ್ಷೆಗೆ ಕುಳಿತುಕೊಳ್ಳುವ ಒಪ್ಪಿಗೆ ಸಿಕ್ಕಿತು. 1889 ರಲ್ಲಿ ಅವನ ತಾಯಿ ಸಮಾರ ನಗರಕ್ಕೆ ಹತ್ತಿರವಿದ್ದ "ಅಲಕಯೇವ್ಕ" ಗ್ರಾಮದಲ್ಲಿ ಒಂದು ಚಿಕ್ಕ ವ್ಯವಸಾಯ ಕ್ಷೇತ್ರವನ್ನು ಕೊಂಡು ಮಕ್ಕಳೊಡನೆ ವಲಸೆಹೋದಳು. ಬೇಸಿಗೆಯಲ್ಲಿ ಆ ನಿರ್ಜನ ಪ್ರಶಾಂತ ಆವರಣದಲ್ಲಿ ವಾಸಮಾಡುವ ಅನುಕೂಲ ಒದಗಿ ಲೆನಿನ್ನನ ವ್ಯಾಸಂಗಕ್ಕೆ ಪುಟಕೊಟ್ಟಿತು. ಛಳಿಗಾಲದಲ್ಲಿ ಸಮಾರ ನಗರಕ್ಕೆ ಬಂದು ವಾಸಿಸುತ್ತಿದ್ದರು. ಪುಸ್ತಕ ಭಂಡಾರಗಳ ಸೌಲಭ್ಯ ಅಲ್ಲಿ ಒದಗುತ್ತಿತ್ತು. ತದೇಕಚಿತ್ತದಿಂದ ಸ್ವಯಂ ಶಿಕ್ಷಣದ ತಪಸ್ಸನ್ನಾಚರಿಸುತ್ತಿದ್ದ ಈ ಕಾಲದಲ್ಲಿ ಯುವಕ ಲೆನಿನ್ ಅತ್ಯಂತ ಗಂಭೀರನಾಗಿ, ಏಕಾಂಗಿಯಾಗಿ ಆಲೋಚನಾ ಮಗ್ನನಾಗಿ ಇತರ ಎಲ್ಲ ಚಟುವಟಿಕೆಗಳನ್ನೂ ನಿಲ್ಲಿಸಿಬಿಟ್ಟ. "ಪ್ರತಿದಿನ ಬೆಳಿಗ್ಗೆ ಉಪಹಾರವಾದೊಡನೆ ಪುಸ್ತಕಗಳ ಕಟ್ಟನ್ನು ಹಿಡಿದು ತಾನು ಆರಿಸಿ ಕೊಂಡಿದ್ದ ಏಕಾಂತ ಸ್ಥಳದಲ್ಲಿ ಯಾರೋ ಒಬ್ಬ ಕಠೋರ ನಿಯಮನಿಷ್ಠ ಗುರು ಕಾದಿರುವನೋ ಎಂಬಂತೆ ಸಮಯಕ್ಕೆ ಸರಿಯಾಗಿ ಹೋಗಿ ಕುಳಿತುಕೊಳ್ಳುತ್ತಿದ್ದ. ಮಧ್ಯಾಹ್ನದ ಊಟದವರೆಗೆ ಏಕಾಗ್ರತೆಯಿಂದ ವ್ಯಾಸಂಗದಲ್ಲಿ ಮುಳುಗಿಬಿಡು ತ್ತಿದ್ದ" ಎಂದು ಆಶ್ಚರ್ಯದ ನುಡಿಗಳನ್ನಾಡಿದ್ದಾಳೆ ಅವನ ಸೋದರಿ ತನ್ನ 'ನೆನಪು' ಗಳಲ್ಲಿ. ಸಂಜೆಯಲ್ಲಿ ಸರಸವಾಗಿ ಸಂತೋಷವಾಗಿ ಎಲ್ಲರೊಡನೆ ಗಹಗಹಿಸಿ ನಕ್ಕು ನಲಿಯುತ್ತಲೂ ಇದ್ದ. ಈ ಅಪೂರ್ವಗುಣ ಮಹಾಪುರುಷರ ಆಜೀಯರಕ್ಷೆ. ಹದಿನೆಂಟು ತಿಂಗಳುಗಳೊಳಗೆ ಸ್ವಾಧ್ಯಾಯದಿಂದ ನ್ಯಾಯಶಾಸ್ತ್ರದ ನಾಲ್ಕು ವರ್ಷಗಳ ಪಠ್ಯಕ್ರಮವನ್ನು ಮುಗಿಸಿ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿ ಯಲ್ಲಿ ಉತ್ತೀರ್ಣನಾದ.

೫

ಎಂಗಲ್ಸ್‌ನ "ಇಂಗ್ಲೆಂಡಿನ ಕಾರ್ಮಿಕರ ಸ್ಥಿತಿ" ಗ್ರಂಥ, ಮಾರ್ಕ್ಸ್ ಮತ್ತು ಎಂಗಲ್ಸ್ ಬರೆದ "ತತ್ವಶಾಸ್ತ್ರದ ದಾರಿದ್ರ್ಯ" (Poverty of Philosophy), 'ಕ್ಯಾಪಿಟಲ್' ಮುಂತಾದ ಕೃತಿಗಳು ಕ್ರಾಂತಿಪಥದ ಮಾರ್ಗ ದರ್ಶನಕ್ಕಾಗಿ ಹಾತೊರೆಯುತ್ತಿದ್ದ ಲೆನಿನ್ನನ ಮನಸ್ಸನ್ನು ಪ್ರಬಲವಾಗಿ ಸೆರೆ

ಹಿಡಿದವು. ಅನೇಕ ಗ್ರಂಥಗಳು ಇಂಗ್ಲೀಷ್ ಭಾಷೆಯಲ್ಲಿರಲಿಲ್ಲವಾಗಿ ಜರ್ಮನ್ ಭಾಷೆ ಕಲಿತು ವಿಚಾರವೇತ್ತರ ಅಭಿಪ್ರಾಯಗಳನ್ನು ಸಂಗ್ರಹಿಸಿದ. ಕಾಲ ಕ್ರಮದಲ್ಲಿ ಫ್ರೆಂಚ್. ಸ್ವೀಡಿಷ್ ಭಾಷೆಗಳ ಪರಿಚಯವನ್ನೂ ಮಾಡಿಕೊಂಡ. ಬೌದ್ಧಿಕ ಪ್ರಗತಿ ಮುಂದುವರೆದಂತೆ ಜೀವನಾನುಭವದ ವಾಸ್ತವ ಸತ್ಯದ ಒರೆಗಲ್ಲಿಗೆ ತನ್ನ ಜ್ಞಾನಭಂಡಾರವನ್ನು ಉಜ್ಜಿನೋಡುತ್ತಿದ್ದ ಲೆನಿನ್. ತಾನು ಸೇರಿದ್ದ ಮಧ್ಯಮವರ್ಗ. ಅಲ್ಪಸಂಖ್ಯಾತ ವಿದ್ಯಾವಂತವರ್ಗ, ಅಧಿಕಾರ ಸೂತ್ರ ಹಿಡಿದಿದ್ದ ಶ್ರೀಮಂತವರ್ಗ ಇವರೆಲ್ಲರೊಡನೆ ನಿಕಟ ಸಂಪರ್ಕ ಬೆಳೆಸಿದ. ಮಾನವ ಲೋಕದ ಬಹುಭಾಗ ದುಡಿಮೆಗಾರರು. ಅವರ ವ್ಯಕ್ತಿತ್ವ, ವಿಕಾಸ. ಮೇಲ್ಮೆ, ಸುಖಬಾಳು ಈ ಮೌಲ್ಯಗಳನ್ನೆಲ್ಲ ಮೇಲ್ವರ್ಗದ ಜನ ಕಡೆಗಣಿಸಿ ತಿರಸ್ಕಾರ ದೃಷ್ಟಿಯನ್ನು ಬೆಳೆಸಿಕೊಂಡಿದ್ದರು. ಕೂಲಂಕುಷ ವಿಮರ್ಶೆಯಿಂದ “ಇದು ಆರ್ಥಿಕ ಅಸಮತೆಯ ಅಗಾಧ ಬೆಳವಣಿಗೆಯ ಪರಿಣಾಮ. ದುಡಿಮೆಯ ಲೋಕ ಜಾಗೃತರಾಗಿ ಸಂಘಟಿತರಾಗಿ ಅಧಿಕಾರ ಸೂತ್ರ ಹಿಡಿದು ಸಾಮೂಹಿಕ ಒಡೆತನವನ್ನು ಸಾಧಿಸಿದಾಗ ಮಾತ್ರ ಶೋಷಣೆ ನಿಲ್ಲುತ್ತದೆ” ಎಂದು ಸಾಮ್ಯ ವಾದಿಗಳು ಮಂಡಿಸಿದ ವಿಚಾರಸರಣಿ ಲೆನಿನ್‌ಗೆ ಅನುಷ್ಠಾನಯೋಗ್ಯ ತತ್ವ ಎನ್ನಿಸಿತು. ಮರುಕ್ಷಣದಲ್ಲೇ ಜೀವನದಲ್ಲಿ ಈ ತತ್ವಪ್ರಣಾಲಿಯನ್ನು ಕಾರ್ಯ ಕ್ಷೇತ್ರದಲ್ಲಿ ಪ್ರಯೋಗಿಸುವ ಧೀರಸಂಕಲ್ಪ ಮಾಡಿದ. ಇತಿಹಾಸದ ಹೆದ್ದಾರಿ ಯನ್ನು ಪ್ರಬಲವಾಗಿ ತಿರುಗಿಸಿದ ಮಹಾಘಟನೆಗೆ ಇದು ನಾಂದಿಯಾಯಿತು.

ಗ್ರಾಮವಾಸದಲ್ಲಿದ್ದಾಗ ಲೆನಿನ್ ಸುತ್ತಲಿನ ರೈತವರ್ಗದ ಸರಳ ಜೀವನದ ಮುಗ್ಧಮನಸ್ಸಿನ ಪರಿಚಯ ಪಡೆದಿದ್ದ. ಅನಕ್ಷರಸ್ಥ ಅನುಭವಿಗಳೊಡನೆ ದೀರ್ಘವಾಗಿ ಸಂಭಾಷಿಸುತ್ತಿದ್ದ. ಅವರ ಆಸೆ ಆಕಾಂಕ್ಷೆಗಳನ್ನು ಕೇಳುತ್ತಿದ್ದ. ವ್ಯವಸಾಯ ಕ್ಷೇತ್ರವೊಂದೇ ಸರ್ವಸ್ವವಾಗಿದ್ದ ‘ಕುಲಕ್’ ಅಥವಾ ದೊಡ್ಡ ಒಕ್ಕಲುತನದ ಈ ವರ್ಗ ಕೈಗಾರಿಕಾ ಕಾರ್ಮಿಕರಿಗಿಂತ ರಾಜಕೀಯ ಜಾಗೃತಿಯಲ್ಲಿ ಬಹಳ ಹಿಂದುಳಿದಿದ್ದರು. ಇವರನ್ನು ಸಂಘಟಿಸಿ ಕ್ಷಿಪ್ರಕ್ರಾಂತಿಗೆ ಸಿದ್ಧಮಾಡುವುದು ದೂರದ ಮಾತು ಎನಿಸಿತು ಲೆನಿನ್‌ಗೆ. ದೊಡ್ಡ ಕಾರ್ಖಾನೆ ಗಳ ಕೇಂದ್ರವಾಗಿದ್ದ ಪೀಟರ್ಸ್‌ಬರ್ಗ್‌ಗೆ ಹೋಗಿ ನೆಲಸುವ ಅವಕಾಶವೂ ಬಂದೊದಗಿತು. ಅಲ್ಲಿ ಅವನಿಗೆ ಜೀವನದ ಹೊಸ ಪ್ರಯೋಗಶಾಲೆಯೊಂದು ಸಿಕ್ಕಿದಂತಾಯಿತು.

1893 ರ ಬೇಸಿಗೆಯಲ್ಲಿ ವ್ಲಾಡಿಮಿರ್ ಇಲ್ಯಚ್ ರಷ್ಯದ ರಾಜಧಾನಿಯಾಗಿದ್ದ ಸೆಂಟ್ ಪೀಟರ್ಸ್‌ಬರ್ಗ್ ನಗರಕ್ಕೆ ಬಂದ. ಈ ವೇಳೆಗೆ ಅವನು ನ್ಯಾಯಶಾಸ್ತ್ರದ ಪದವೀಧರನಾಗಿ ಒಂದು ವರ್ಷದ ಮೇಲಾಗಿತ್ತು. ಸಮಾರಾದಲ್ಲಿ ಸ್ವಲ್ಪಕಾಲ ವಕೀಲಿ ವೃತ್ತಿಯಲ್ಲೂ ತೊಡಗಿದ್ದ. ಪೀಟರ್ಸ್‌ಬರ್ಗ್‌ನ ಮಹಿಳಾ ವಿದ್ಯಾಲಯದಲ್ಲಿ ಉಚ್ಚವ್ಯಾಸಂಗ ಮಾಡುತ್ತಿದ್ದ ಅವನ ತಂಗಿ ವೋಲ್ಗಾ ಹಠಾತ್ತನೆ ವಿಷಮಶೀತಜ್ವರದಿಂದ ಮೃತಳಾದಳು. ತಾಯಿಯ ದುಃಖ ಅಪಾರವಾಗಿತ್ತು. ಪ್ರೀತಿಯ ಕಿರಿಯ ಮಗಳು ಪ್ರತಿಭಾವಂತ ಚೆಲುವೆ. ವೋಲ್ಗಾಳ ಮರಣದಿಂದ ಶೋಕತಪ್ತಳಾದ ತಾಯಿಯನ್ನು ಬಿಡಲಾರದೆ ಒಂದು ವರ್ಷ ಲೆನಿನ್ ಸಮಾರಾಗುಬರ್ನಿಯಾದಲ್ಲೇ ಇದ್ದುಬಿಟ್ಟ. ಆ ವರ್ಷದ ಕೊನೆಗೆ ಕಿರಿಯ ತಮ್ಮ ಡಿಮಿಟ್ರಿ ಮಾಸ್ಕೋ ವಿಶ್ವವಿದ್ಯಾನಿಲಯಕ್ಕೆ ಸೇರಿದ. ತಾಯಿ ಅವನೊಡನೆ ವಾಸಿಸಲು ಅಲ್ಲಿಯೇ ಸಂಸಾರ ಹೂಡಬೇಕಾಯಿತು. ಲೆನಿನ್ ಪೀಟರ್ಸ್‌ಬರ್ಗ್‌ಗೆ ಬಂದು ನೆಲೆಸಿದ. ತನ್ನ ಸ್ವಂತ ಜೀವನದಲ್ಲಿ ನಿರಾಸಕ್ತನಾಗಿರುತ್ತಿದ್ದ ಲೆನಿನ್ ಬಗ್ಗೆ ತಾಯಿಗೆ ಆತಂಕ. ಆಗಾಗ್ಗೆ ಹೋಗಿಬರುತ್ತಿದ್ದಳು. ಛಳಿಗಾಲ ಬಂದೊಡನೆ ಒಂದುಸಾರಿ ಅವನಿಗೆ ಬೆಚ್ಚನೆಯ ನಿಲುವಂಗಿ ತೆಗೆದುಕೊಡಲೆಂದೇ ಪೀಟರ್ಸ್‌ಬರ್ಗ್‌ಗೆ ಹೋದಳಂತೆ. ತಾಯಿಯ ಮಮತೆ ಅನೇಕ ಬಾರಿ ಅವನನ್ನು ದೇಹಾಲಸ್ಯಗಳಿಂದ ರಕ್ಷಿಸಿತು. ನಿಶ್ಚಿಂತನಾಗಿ ನಿರ್ಭೀತನಾಗಿ ತನ್ನ ಮಹೋದ್ದೇಶಗಳನ್ನು ಸಾಧಿಸಲು ಈ ಮಾತೃಕೃಪೆ ಎಷ್ಟು ನೆರವಾಯಿತು ಎಂಬುದನ್ನು ಹನಿಗಣ್ಣಿನಿಂದ ಸ್ಮರಿಸಿದ್ದಾನೆ ಲೆನಿನ್.

ಬೃಹದ್ ಕೈಗಾರಿಕೆಗಳ ಜೇನುಗೂಡಿನಂತಿತ್ತು ಅಂದಿನ ಸೆಂಟ್ ಪೀಟರ್ಸ್‌ಬರ್ಗ್ ನಗರ. ಕೂಲಿಗಾರರ ಅಗಾಧ ಸಂಖ್ಯೆ ಕ್ರಮ ಕ್ರಮವಾಗಿ ಜಾಗೃತವಾಗುತ್ತಿತ್ತು, ಸಂಘಟಿತವಾಗುತ್ತಿತ್ತು. ಮಾರ್ಕ್ಸ್ ಎಂಗಲ್ಸ್‌ರ ಸಾಮ್ಯವಾದ ಸಿದ್ಧಾಂತಗಳು ದಲಿತವರ್ಗದ ಆಕಾಂಕ್ಷೆಗಳನ್ನು ರೂಪುಗೊಳಿಸುತ್ತಿದ್ದವು. ವಿದ್ಯಾವಂತ ಯುವಕರಲ್ಲಿ ಕ್ರಾಂತಿ ಮನೋಧರ್ಮ ಪ್ರಚೋದಿತವಾಗಿ ಸಂಘ ಸಂಸ್ಥೆಗಳ ಸಂಘಟನೆ ಉತ್ಸಾಹದಿಂದ ಸಾಗಿತ್ತು. ದುಡಿಮೆಗಾರವರ್ಗ ವಿಚಾರವಂತರ ಪ್ರಾಮಾಣಿಕ ನಾಯಕತ್ವವನ್ನು ಅನ್ವೇಷಿಸುತ್ತಿತ್ತು. ಸಮಾಜದ ಬುದ್ಧಿಬಲಗಳು ಮಹಾ ಪರಿವರ್ತನೆಯ ಸಾಧನೆಗಾಗಿ ಸಂಯೋಜಿತವಾಗುತ್ತಿದ್ದ ಪರ್ವಕಾಲ ಅದು. ಲೆನಿನ್ ತನ್ನ ಅಸಾಧಾರಣ ಮೇಧಾಶಕ್ತಿಯಿಂದ, ಪ್ರಖರ ವಿಚಾರಗಳಿಂದ

ಖಚಿತ ಅಭಿಪ್ರಾಯಗಳಿಂದ ಯುವಕ ಸಮೂಹವನ್ನಾಕರ್ಷಿಸಿದ. ಸ್ಪಷ್ಟ ಮಾರ್ಗದರ್ಶನಕ್ಕಾಗಿ ಹಂಬಲಿಸುತ್ತಿದ್ದ ಎಚ್ಚೆತ್ತ ಜನ ಸಂಘಟಿತರಾಗಲು ಈ ಶಕ್ತಿಪುರುಷ ಕೇಂದ್ರಬಿಂದುವಾದ.

ಸಾಧಾರಣ ಜನತೆ ಕ್ರಿಯಾತ್ಮಕವಾಗಿ ರಾಜಕೀಯ ಆಂದೋಳನದಲ್ಲಿ ಪಾಲ್ಗೊಳ್ಳಬೇಕಾದ ಅವಶ್ಯಕತೆಯನ್ನು ಲೆನಿನ್ ಮನಗಂಡ. ಕೇವಲ ಹಿಡಿಯಷ್ಟು ಮೇಲ್ವರ್ಗದ ಜನ ತಮ್ಮ ಕೈಯೊಳಗಿನ ಮೇಣದ ಮುದ್ದೆಯಂತೆ ಜನಮನವನ್ನು ಸ್ವಾರ್ಥಸಾಧನೆಗೆ ಅನುಗೊಳಿಸಿಕೊಳ್ಳುವ ಪ್ರವೃತ್ತಿಯನ್ನು ವಿರೋಧಿಸಿದ. "ಬಹು ಸಂಖ್ಯಾತರಾದ ಶ್ರೀ ಸಾಮಾನ್ಯರಿಗೆ ಒಂದು ಸಾಮೂಹಿಕ ವ್ಯಕ್ತಿತ್ವ ಒಂದು ಖಚಿತ ಮನೋಧರ್ಮ. ಪ್ರಗತಿಪರವಾದ ಉತ್ಕಟ ಸಾಮಾಜಿಕ ಆಕಾಂಕ್ಷೆಗಳು ಮೂಡಿಬರಬೇಕು. ಜನತಾ ಕ್ರಾಂತಿಗೆ ಇವು ಅನಿವಾರ್ಯ ಅಂಗಗಳು" ಎಂದು ಲೆನಿನ್ ನಿರ್ಧರಿಸಿಕೊಂಡ. ತನ್ನ ಅಣ್ಣನ ಧೀರೋದಾತ್ತ ಸಾಹಸ ಪಥವನ್ನು ಮೆಚ್ಚಿದರೂ ವ್ಯಾಪಕ ಜನತಾ ಸಂಘಟನೆ ಕೇವಲ ಭಯೋತ್ಪಾದಕ ರಾಜಕೀಯ ಆಸ್ಫೋಟಗಳಿಂದ ಅಸಾಧ್ಯ ಎಂದೇ ಅವನ ನಂಬಿಕೆ. ಉನ್ನತಾಧಿಕಾರಿಗಳ ಕೊಲೆ, ಹಿಂಸಾಮಾರ್ಗದ ಅತಿರೇಕಗಳು ಅವನಿಗೆ ಹಿಡಿಸಲಿಲ್ಲ. 1902 ರಲ್ಲಿ "ಇಸ್ಕ್ರ" (ಕಿಡಿ) ಪತ್ರಿಕೆಯಲ್ಲಿ ಒಮ್ಮೆ ಹೀಗೆ ಬರೆದ:

"ಸಮಾಜಕ್ರಾಂತಿ ಪಕ್ಷದವರು ಭಯೋತ್ಪಾದಕ ಹಿಂಸಾಮಾರ್ಗವನ್ನು ಒಂದು ರಾಜಕೀಯ ಸಂಗ್ರಾಮ ಪಥವೆಂದು ಅಂಗೀಕರಿಸಿ ಪ್ರಚಾರ ಮಾಡುತ್ತಿದ್ದಾರೆ. ಇದರಿಂದ ಸಮಾಜವಾದ ಹಾಗೂ ಕ್ರಾಂತಿಕಾರಕ ಜನತಾ ಸಮೂಹಗಳ ನಡುವಿನ ಬಾಂಧವ್ಯ ಕಡಿದುಹೋಗುವಂತಾಗಿ ಆಂದೋಳನಕ್ಕೆ ತೀವ್ರ ಆಘಾತವಾಗುತ್ತದೆ. ಈ ಆಧುನಿಕ ವ್ಯಕ್ತಿಹಿಂಸಾ ಮಾರ್ಗಕ್ಕೂ ಸಾಮಾನ್ಯ ಜನಸಮೂಹದ ಸಂಘಟನಾ ಕಾರ್ಯಕ್ಕೂ ಯಾವ ಸಂಬಂಧವೂ ಏರ್ಪಡಲಾರದು—ಸುದೃಢವಾದ ವ್ಯವಸ್ಥಿತ ಜನತಾ ಪ್ರತಿಭಟನೆ ಕಾರ್ಯಗತವಾಗಲು ಈ ಮಾರ್ಗ ಸರ್ವಥಾ ಯೋಗ್ಯವಾಗಲಾರದು. ಇತಿಹಾಸದ ಅನುಭವದಲ್ಲಿ ಖಂಡನಾರ್ಹವೆಂದು ತ್ಯಜಿಸಲ್ಪಟ್ಟ 'ವ್ಯಕ್ತಿಯುದ್ಧ' ವಲ್ಲದೆ ಈ ಭಯೋತ್ಪಾದಕ ಹಿಂಸಾಮಾರ್ಗ ಬೇರೇನೂ ಅಲ್ಲ......".

ಇದರಿಂದ ಅವ್ಯವಸ್ಥಿತ ದಂಗೆಗಳ ಆವೇಶಮಾರ್ಗದಿಂದ ದೂರವಾಗಿ ಅನೇಕ ಯುವಕರು ವ್ಯವಸ್ಥಿತ ಕ್ರಾಂತಿಪಥದ ರಚನಾತ್ಮಕ ವಿಚಾರವನ್ನು ಅಂಗೀಕರಿಸಿದರು.

ಜನತೆಯ ಮನೋರಾಜ್ಯವನ್ನು ನೇರವಾಗಿ ಹೊಕ್ಕ ಮೊದಲ ರಾಜಕಾರಣಿ ಲೆನಿನ್. ಕೂಲಿಗಾರರೊಡನೆ ತಾದಾತ್ಮನಾಗಿ ಬೆರೆತು ಕೆಲಸ ಮಾಡುತ್ತಿದ್ದ ಯುವಕ ಲೆನಿನ್, ಅವರ ಅಂತರಂಗವನ್ನು ಸೂರೆಗೊಂಡ. ಅಭ್ಯುದಯಕ್ಕಾಗಿ ತವಕಪಡುತ್ತಿದ್ದವರಿಗೆ ಬೌದ್ಧಿಕ ಜಾಗೃತಿಯನ್ನುಂಟುಮಾಡಿ ಸಾಮಾಜಿಕ ಶಾಶ್ವತ ಪರಿವರ್ತನೆಗೆ ದಾರಿಮಾಡಿದ. "ಸಾಮೂಹಿಕ ಆವೇಶ ತುಂಬಿದ ಜನಸಮೂಹ ತಾತ್ಕಾಲಿಕ ಆರ್ಭಟದಿಂದ ಉಕ್ಕಿ ಹರಿದರೆ ಸಾಲದು, ಆಳವಾಗಿ ಸಮಾಜವಾದದ ಮೂಲತತ್ವಗಳು ವ್ಯಕ್ತಿ ವ್ಯಕ್ತಿಗಳಲ್ಲಿ ಬೇರೂರಬೇಕು; ಕರ್ಮ ಸಂಪೂರ್ಣವಾಗಿ ವಿಚಾರಬದ್ಧವಾಗಬೇಕು" ಎಂಬ ಆಕಾಂಕ್ಷೆಯಿಂದ ಲೆನಿನ್ ಕೂಲಿಗಾರರ ಸಹಸ್ರಾರು ಸಣ್ಣ ಸಣ್ಣ ಸಂಘಟನೆಗಳನ್ನು ಉತ್ಸಾಹದಿಂದ ಮಾಡತೊಡಗಿದ. ದಲಿತರೊಡನೆ ಏಕೀಭವಿಸಿ ಸರಳ ರೀತಿಯಿಂದ ಅವರ ತತ್ವನಿಷ್ಠೆಯನ್ನು ಜಾಗೃತಗೊಳಿಸುತ್ತಿದ್ದ. ಈ ಚಳುವಳಿಯಲ್ಲಿ ಸಹಸ್ರಾರು ತ್ಯಾಗಶೀಲ ಯುವಕ ಯುವತಿಯರು ಸೇರಿಕೊಂಡರು. ಪ್ರತಿಗಾಮೀರಾಜ್ಯಾಡಳಿತದ ಕಣ್ಣು ತಪ್ಪಿಸಿ ಗುಪ್ತ ತಂಡವೊಂದು ದಿನ ದಿನವೂ ನಿಶಾಚರರಾಗಿ ಕೆಲಸ ಮಾಡುತ್ತಾ ಕೂಲಿಗಾರರ ವಸತಿಗಳಲ್ಲಿ ಬೇರೂರಿತು. ಆಪ್ತ ಸ್ನೇಹಿತರಂತೆ ಬೆರೆತು ಅವರ ಬೌದ್ಧಿಕ ಸಾಮಾಜಿಕ ಅಭ್ಯುದಯಕ್ಕೆ ನಿಃಸ್ವಾರ್ಥ ಸೇವಕರಾಗಿ ದುಡಿದರು. ಈ ಪ್ರೇಮಮಯ ಸ್ಪರ್ಶಕ್ಕೆ ಇಡೀ ಕೂಲಿಗಾರ ವರ್ಗ ಮಾರುಹೋಯಿತು. ತರುಣ ಲೆನಿನ್ ಅವರ ಆರಾಧ್ಯ ದೈವವಾದ. ವಿಶ್ವಾಸಾರ್ಹ ಮಾರ್ಗದರ್ಶಕನಾದ. ಅವರ ವಾಣಿ ಆಜ್ಞೆಯುವಾಗುತ್ತ ಸಾಗಿತು.

ಕ್ರಾಂತಿಪಥದ ಮೊದಲ ಸೋಪಾನ ನಿರ್ಮಾಣವಾಗುತ್ತಿದ್ದ ಈ ಕಾಲಕ್ಕೆ ಲೆನಿನ್ ಇಪ್ಪತ್ತೈದು ವರ್ಷದ ಉದಯೋನ್ಮುಖ ವರ್ಚಸ್ವಿ. ತೇಜೋವಂತ ಮೇಧಾವಿ. ಮಾರ್ಕ್ಸ್‌ನ ಕ್ರಾಂತಿ ಸಿದ್ಧಾಂತದಲ್ಲಿ ದೃಢವಿಶ್ವಾಸ ಅವನಲ್ಲಿ ಮೂಡಿ ನಿಂತಿತ್ತು. ಚಿಕ್ಕವರಲ್ಲಿ ಚಿಕ್ಕವನಾಗಿ, ಸರಳರಲ್ಲಿ ಸರಳನಾಗಿ, ಯುವಕರಲ್ಲಿ ಯುವಕನಾಗಿ, ಲೆನಿನ್ ಪ್ರಭಾವಯುತನಾಗಿ ಪ್ರತಿಪಾದಿಸಿದ ಜೀವನ ಮಾರ್ಗಕ್ಕೆ ಮಣಿಯದವರೇ ಇರಲಿಲ್ಲ. ಹೀಗೆ ಆಕರ್ಷಿತರಾದವರಲ್ಲಿ ಪೀಟರ್ಸ್‌ಬರ್ಗ್‌ನ ಸಂಜೆಯ ಶಾಲೆಯೊಂದರ ಉಪಾಧ್ಯಾಯಿನಿಯಾಗಿದ್ದ ಯುವತಿ ನಾಡೆಸ್ಡಾ ಕಾನ್‌ಸ್ಟೆಂಟಿನೋವ್ನ ಕೃಪ್ಸ್‌ಕಯಾ ಪ್ರಮುಖಳು. ಸಮಾನ ಆದರ್ಶ, ಸಮಾನ ಮನೋಧರ್ಮ, ಸಮಾನ ಉಜ್ವಲ ಉತ್ಸಾಹಗಳು ಅತ್ಯಂತ ಸಹಜವಾಗಿ

ಒಂದು ಸಮಾನ ಜೀವನನಿಷ್ಠೆಯಲ್ಲಿ ಲೆನಿನ್ನನನ್ನೂ ಕ್ರುಪ್ಸ್ಕಯಾಳನ್ನೂ ಒಂದುಗೂಡಿಸಿತು. ಕಾರ್ಯತತ್ಪರರಾಗಿ, ಕ್ರಾಂತಿಪಥದ ಅಪಾಯ ಮಾರ್ಗದ ಸಾಹಸ ಜೀವನದಲ್ಲಿ ಒಡಗೂಡಿ ನಡೆಯುತ್ತಾ ಇಬ್ಬರೂ ಶಿಕ್ಷೆಗೊಳಗಾದರು. ಸೈಬೀರಿಯದಲ್ಲಿ ಗಡೀಪಾರು ಬಂದಿಗಳಾಗಿದ್ದಾಗ ಅವರು ವಿವಾಹವಾದರು. ಜಗತ್ತಿನ ಉತ್ಕೃಷ್ಟ ಪ್ರೇಮಮಯ ದಾಂಪತ್ಯದ ನಿದರ್ಶನಗಳಲ್ಲಿ ಒಂದಾಗಿ ಈ ನಿಃಸ್ವಾರ್ಥ ತೇಜೋಮಯ ಜೀವಗಳು ಒಂದಾಗಿ ನಿಂತವು.

೬

ಲೇಖನಕಲೆ ಭಾಷಣಕಲೆಗೂ ಮಿಗಿಲಾಗಿ ಹರಿಯಿತು ಲೆನಿನ್ನನ ಉಜ್ವಲ ಲೇಖನಿಯಿಂದ. ಸರಳವೂ ನೇರವೂ ಪ್ರಭಾವಯುತವೂ ಆದ ಅವನ ಶೈಲಿ ಸಾಮಾನ್ಯಜನತೆಯ ಸಾಧಾರಣ ಕೂಲಿಗಾರರ ಹೃದಯ ಮನಸ್ಸುಗಳನ್ನು ಸೂರೆಗೊಂಡಿತು. ಜನಜಾಗೃತಿಗೆ ರೆಕ್ಕೆ ಬಂದಂತೆ ನೂರಾರು ಕೈಹೊತ್ತಿಗೆಗಳ ಲಕ್ಷಾಂತರ ಪ್ರತಿಗಳು ಅಧಿಕಾರಶಾಹಿಯ ಕಣ್ಣು ತಪ್ಪಿಸಿ ಬಡಜನರ ಕುಟೀರ ಗಳನ್ನು ಸೇರುತ್ತಿದ್ದವು. ವಿದ್ಯಾರ್ಥಿಗಳ ಕೈಗೆ ಹೋಗುತ್ತಿದ್ದವು. ಹೆಂಗಸರ ಕಪಾಟುಗಳನ್ನು ತುಂಬುತ್ತಿದ್ದವು. "ದುಡಿಮೆಗಾರರಿಗಾಗಿ ಬರೆಯುವ ಮಹ ದವಕಾಶಕ್ಕಿಂತ ಮಿಗಿಲಾಗಿ ನನಗೆ ಮತ್ತಾವುದೂ ಪ್ರಿಯವಾಗಿರಲಿಲ್ಲ. ಮತ್ತಾವು ದನ್ನೂ ನಾನು ಅಷ್ಟು ಉತ್ಕಟವಾಗಿ ಬಯಸುತ್ತಲೂ ಇರಲಿಲ್ಲ" ಎಂದಿದ್ದಾನೆ ಲೆನಿನ್. ಸಾಮ್ಯವಾದ ಸಿದ್ಧಾಂತದಲ್ಲಿ ಏಕನಿಷ್ಠತೆ. ಜನತಾ ಸಂಘಟನೆ ಜನತಾಕ್ರಾಂತಿಗಳಲ್ಲಿ ಪೂರ್ಣವಿಶ್ವಾಸ, ಶೋಷಕ ಬಂಡವಾಳ ವರ್ಗದ ತೀವ್ರ ಖಂಡನೆ ಎಲ್ಲವೂ ಅವನ ಅಪ್ರತಿಹತ ಬರಹಗಳಲ್ಲಿ ಹರಿದು ಪ್ರತಿಧ್ವನಿತ ವಾಗುತ್ತಿತ್ತು. "ಜನತೆಯ ಕಪಟ ಸ್ನೇಹಿತರಾರು ?"..."ನಾವು ಮಾಡ ಬೇಕಾದುದೇನು ?"..."ಕೂಲಿಗಾರರೇ, ಎಚ್ಚರಗೊಳ್ಳಿ" "ಜನತೆಯ ನಿಜ ಹಿತರಕ್ಷಕರಾರು ?" ಮುಂತಾದ ಅನೇಕ ಚಿಕ್ಕಪುಸ್ತಕಗಳು ಕ್ರಾಂತಿಯ ಮಾರ್ಗ ದರ್ಶಕ ಸಂಹಿತೆಗಳಾದವು.

"ಸಾಮಾಜಿಕ ಪ್ರಜಾಪ್ರಭುತ್ವವಾದಿಗಳು (ಸೋಷಿಯಲ್ ಡೆಮೋಕ್ರಾಟ್ಸ್) ತಮ್ಮ ಗಮನವನ್ನೂ, ಕಾರ್ಯಚಟುವಟಿಕೆಯನ್ನೂ ಕೂಲಿಗಾರರ ವರ್ಗಕ್ಕೆ ಮೀಸಲಾಗಿಡಬೇಕು. ಈ ಮಹಾವರ್ಗದ ಪ್ರತಿನಿಧಿಗಳು ವೈಜ್ಞಾನಿಕ ಸಮಾಜ

ವಾದದ ತತ್ವಗಳನ್ನರಗಿಸಿಕೊಂಡು ರಷ್ಯದ ದುಡಿಮೆಗಾರರ ಐತಿಹಾಸಿಕ ಪಾತ್ರ ವನ್ನರಿತು. ವ್ಯಾಪಕ ಪ್ರಚಾರದಿಂದ ಈ ವಿಚಾರಪ್ರಣಾಲಿಯನ್ನು ಯಾವಾಗ ಹರಡುವರೋ. ಸುವ್ಯವಸ್ಥಿತ ಸುದೃಢ ಸಂಸ್ಥೆಗಳು ಕೂಲಿಗಾರ ವರ್ಗದೊಳಗಿ ನಿಂದ ಸಹಜವಾಗಿ ಉದ್ಭವಿಸಿ ನಿಂತು ಅಸ್ತವ್ಯಸ್ತ ದಂಗೆಗಳ ಮಾರ್ಗವನ್ನು ವರ್ಗ ಸಮರವನ್ನಾಗಿ ಎಂದು ಪರಿವರ್ತಿಸುವುವೋ, ಅಂದು ಜಗತ್ತಿನ ಪ್ರಜಾ ಸತ್ತಾತ್ಮಕ ಶಕ್ತಿಗಳ ಪ್ರಥಮ ಶ್ರೇಣಿಯಲ್ಲಿ ರಷ್ಯದ ದುಡಿಮೆಗಾರರು ನಿಲ್ಲುವರು." ಈ ಭವಿಷ್ಯವಾಣಿ ತರುಣ ಲೆನಿನ್ನನ ಲೇಖನಿಯಿಂದ 1894 ರಲ್ಲೇ ಮಿಂಚಿ ಹರಿಯಿತು. ರಷ್ಯದಲ್ಲೆಲ್ಲಾ ಕೂಲಿಗಾರರ ರಾಜಕೀಯ ಸಂಪುಟಗಳ ಸರಣಿಯೇ ಪ್ರಾರಂಭವಾಗಿ ವ್ಯಾಪಕವಾಗಿ ಹರಡಿತು.

1895 ರಲ್ಲಿ ಲೆನಿನ್ ಮೊದಲ ಬಾರಿಗೆ ವಿದೇಶ ಪ್ರಯಾಣ ಮಾಡಿದ. ಪಶ್ಚಿಮ ಯುರೋಪಿನ ಕೂಲಿಗಾರರ ಸ್ವಾತಂತ್ರ್ಯ ಚಳುವಳಿಯ ನಾಯಕರೊಡನೆ ನಿಕಟ ಸಂಪರ್ಕ ಬೆಳೆಸಿದ. ದೇಶಭ್ರಷ್ಟ ರಷ್ಯನ್ ನಾಯಕರಾಗಿದ್ದ ಪ್ಲೆಕನೋವ್ ಮತ್ತು ಆಕ್ಸಲ್ರಾಡ್ ಇವರ ಪರಿಚಯವಾಯಿತು. ಈ ಕ್ರಾಂತಿನಾಯಕರು ಸ್ವಿಟ್ಸರ್ಲೆಂಡಿನಲ್ಲಿ ನೆಲೆಸಿ ಕೆಲಸ ಮಾಡುತ್ತಿದ್ದರು. ಮುಂದೆ ಬರ್ಲಿನ್ ಪ್ಯಾರಿಸ್ ಗಳಿಗೆ ಭೇಟಿಕೊಟ್ಟ. ಕಾರ್ಲ್‌ಮಾರ್ಕ್ಸ್‌ನ ಅಳಿಯ ಪಾಲ್ ಲಫಾರ್ಜನ ಸ್ನೇಹವಾಯಿತು. ಮಾರ್ಕ್ಸ್‌ನ ನಿಕಟಾನುವರ್ತಿ ಎಂಜಲ್ಸ್‌ನನ್ನು ಕಾಣುವ ತೀವ್ರಾಕಾಂಕ್ಷೆಯಿತ್ತು ತರುಣ ಲೆನಿನ್‌ಗೆ. ಅದೇ ಸಮಯಕ್ಕೆ ವೃದ್ಧ ಎಂಜೆಲ್ಸ್ ರೋಗಗ್ರಸ್ತನಾದ. ಇವರಿಬ್ಬರ ಸಮಾಗಮವಾಗುವ ಮೊದಲೇ ಆತ ಸ್ವರ್ಗಸ್ಥ ನಾದ. ವಿಚಾರಮಂಥನದ ಕಡಲಿನೊಳಗೆ ಮಿಂದು, ಭಾವತರಂಗಗಳ ಬುಗ್ಗೆ ಯನ್ನು ಅಂತರ್ಯದಲ್ಲಿ ತುಂಬಿಕೊಂಡು, ಕ್ರಾಂತಿಕಿಡಿಗಳ ಹಲವು ರಹಸ್ಯ ಪ್ರಕಟಣೆಗಳನ್ನೂ ಹೊತ್ತು ಉತ್ಸಾಹದಿಂದ ಲೆನಿನ್ ಮರಳಿ ಸ್ವದೇಶಕ್ಕೆ ಹಿಂತಿರುಗಿದ.

ಲೆನಿನ್ ಮತ್ತು ಕೃಪ್ಸ್‌ಕಯಾ ದ್ವಿಗುಣ ಸ್ಫೂರ್ತಿಯಿಂದ ಚಳುವಳಿಗಳಲ್ಲಿ ತಲ್ಲೀನರಾದರು. ಪ್ರಖ್ಯಾತ ಕ್ರಾಂತಿನಾಯಕರ ತತ್ವಬದ್ಧ ಸಮೂಹ ನಿರ್ಮಾಣ ವಾಯಿತು. ಜಾರ್ ಸರ್ಕಾರಕ್ಕೆ ಈ ಶಕ್ತಿ ಸಂಚಯನದ ಬಿಸಿಯೂ ತಟ್ಟಲಾರಂಭ ವಾಯಿತು. ವ್ಯಾಸಯೇವ್, ಮಾರ್ಟ್ಸೋವ್, ರಾಡೆಂಕೋ, ಸ್ಟಾರ್ಕೋವ್ ಒಂದೊಂದು ಹೆಸರೂ ಪೋಲೀಸರಿಗೆ ಸಿಂಹಸ್ವಪ್ನವಾಗತೊಡಗಿತು. ಈ ಇಡೀ

ಗುಂಪನ್ನೇ ಸೆರೆಮನೆಗೆ ಹಾಕುವ ಸಂಚನ್ನು ಸರ್ಕಾರ ಕೈಗೊಂಡಿತು. ಜಾಣಾಕ್ಷತೆಯಿಂದ ಹೆಚ್ಚು ಘರ್ಷಣೆಯ ಘಟನೆಗಳಿಗೆಡಗೊಡದ ನಿಶ್ಶಬ್ದ ಅಂತರ್ಗಂಗೆಯಂತೆ ಜನತೆಯ ಮಾನಸಿಕ ಪರಿವರ್ತನೆಯು ಕಾರ್ಯ ವೇಗದಲ್ಲಿ ನಡದೀಇತ್ತು. ಹೃದಯ ಹೃದಯಗಳಲ್ಲಿ ಕ್ರಾಂತಿಯ ಸಂದೇಶ ಪ್ರತಿಬಿಂಬಿತವಾಗತೊಡಗಿತ್ತು. ಕೈಗಾರಿಕಾನಗರಗಳಲ್ಲಿ ಕಾರ್ಮಿಕರ ಮಹಾಸಂಘಟನೆ ವ್ಯಾಪಿಸುತ್ತಿತ್ತು. 1896 ರಲ್ಲಿ ಮೊದಲಬಾರಿಗೆ ಪೀಟರ್ಸ್‌ಬರ್ಗ್‌ನ ಬಟ್ಟೆಗಿರಣಿಗಳ ಮೂವತ್ತು ಸಹಸ್ರ ಕಾರ್ಮಿಕರು ತಮ್ಮ ನ್ಯಾಯಬದ್ಧ ಹಕ್ಕುಗಳಿಗಾಗಿ ಸಂಪು ಹೂಡಿದರು. ಈ ಸಮಯಕ್ಕೆ ಮುಖಂಡತ್ವ ವಹಿಸಿದ್ದ ಲೆನಿನ್ ಮತ್ತು ಅನುಯಾಯಿಗಳ 'ಸಮರ ಸಂಘ' (ಲೀಗ್ ಆಫ್ ಸ್ಟ್ರಗಲ್) ಜಾರ್ ಸರ್ಕಾರದ ಪ್ರಕೋಪಕ್ಕೆ ಬಲಿಯಾಗಿ ಸದಸ್ಯರೆಲ್ಲ ಬಂಧಿತರಾದರು. ಲೆನಿನ್ನನನ್ನು ಪ್ರತ್ಯೇಕಿಸಿ ಹದಿನಾಲ್ಕು ತಿಂಗಳ ಕಾಲ ಏಕಾಂತ ಸೆರೆಮನೆಯಲ್ಲಿ ಹಾಕಿದರು.

ಸೆರೆಮನೆಯ ಏಕಾಂತದಲ್ಲಿ ಲೆನಿನ್ ಗಂಭೀರ ವ್ಯಾಸಂಗ ಬರವಣಿಗೆಗಳಲ್ಲಿ ಮಗ್ನನಾದ. ವಿಖ್ಯಾತವಾದ ಅವನ ಕೃತಿ "ರಷ್ಯದ ಬಂಡವಾಳಶಾಹಿಯ ಬೆಳವಣಿಗೆ" ಆಗ ರಚಿತವಾಯಿತು. ಬಂಧನದೊಳಗಿನಿಂದ ವಿವಿಧ ರೀತಿಯಲ್ಲಿ ಗೆಳೆಯರಿಗೆ ಸೂಚನೆಗಳನ್ನು ಕಳುಹಿಸುತ್ತಿದ್ದ. ಕೊರೆಯುವ ಚಳಿಯನ್ನೆದುರಿಸಲು ರಭಸವಾದ ವ್ಯಾಯಾಮಗಳನ್ನು ಮಾಡುತ್ತಿದ್ದ. ಬಂಧನಕ್ಕೊಳಗಾದ ಮೇಲೆ ಲೆನಿನ್ನನ ಪರೋಕ್ಷಪ್ರಭಾವ ಅಗಾಧವಾಗಿ ಬೆಳೆಯಿತು. ಜನತಾ ಚಳುವಳಿಯ ಏಕೈಕ ನಾಯಕನಾದ. ತನ್ನ ಅಸ್ತಿತ್ವಕ್ಕೆ ಅಪಾಯವನ್ನು ಕಂಡ ಜಾರ್ ಸರ್ಕಾರ ಅವನನ್ನು ರಾಜದ್ರೋಹದ ಕಟ್ಟಳೆಗೆ ಗುರಿಮಾಡಿ 1897 ರ ಫೆಬ್ರುವರಿ ಹದಿಮೂರರಂದು ಪೂರ್ವ ಸೈಬೀರಿಯಾದಲ್ಲಿ ಮೂರು ವರ್ಷಗಳ ಗಡೀಪಾರು ಶಿಕ್ಷೆಯನ್ನು ವಿಧಿಸಿತು.

ತಾಯಿ ಮೇರಿಯಅಲೆಕ್ಸಾಂಡ್ರೋವ್ನ ಈ ಘಟನೆಗಳನ್ನೆಲ್ಲ ಅತ್ಯಂತ ತಾಳ್ಮೆಯಿಂದ ಎದುರಿಸಿದಳು. ಮಕ್ಕಳ ತತ್ವನಿಷ್ಠ ಸಾಹಸಪ್ರಿಯತೆ ಆಕೆಗೆಂದೂ ಅಸಹನೀಯವಾಗಲಿಲ್ಲ. ಅದರಲ್ಲೂ ನಚ್ಚಿನ ಲೆನಿನ್ ಇಷ್ಟುಬೇಗ ಅಸಂಖ್ಯಾತ ದಲಿತ ಜನರ ಆಶಾದೀಪದಂತೆ ಬೆಳಗಿದುದು ಆಕೆಗೆ ಅಭಿಮಾನವೆನಿಸಿತು. ದೂರದ ಸೈಬೀರಿಯದಲ್ಲಿ ಗೊತ್ತಾಗಿದ್ದ ಪ್ರದೇಶಕ್ಕೆ ಸ್ವಂತ ವೆಚ್ಚದಿಂದ ಗೌರವಯುತ ಪ್ರಜೆಯಂತೆ ತಾನೇ ಕಳುಹಿಸುವ ಏರ್ಪಾಟುಮಾಡಿದಳು ಆ ವೀರಮಾತೆ.

ರೈಲುಮಾರ್ಗದಿಂದ ಅತಿದೂರಕ್ಕೆ ಗ್ರಾಮೀಣ ವಾಹನಗಳಲ್ಲಿ ಪ್ರಯಾಣಮಾಡಿ ನಾಲ್ಕಾರು ದಿನಗಳ ನಂತರ ಲೆನಿನ್ ಕುಗ್ರಾಮವಾಗಿದ್ದ 'ಷುಷನ್‌ಸ್ಕೋಯಿ' ಗೆ ತಲುಪಿದ. ಕ್ರಾಂತಿಪಥದ ಮಹತ್ವಪೂರ್ಣ ಇತಿಹಾಸದಲ್ಲಿ ಈ ಗ್ರಾಮ ಪ್ರಖ್ಯಾತವಾಯಿತು.

"ಗಿಡಮರಗಳಾಗಲೀ ತೋಟ ವನಪ್ರದೇಶಗಳಾಗಲೀ ಇಲ್ಲದ ಅತಿ ಶೀತಲ ಗ್ರಾಮ ಇದು. ಸುತ್ತಲೂ ತಿಪ್ಪೆಗುಂಡಿಗಳ ದುರ್ಗಂಧದ ಆವರಣ ; ದೂರದಲ್ಲಿ ಕಾಣುವ ಹುಲ್ಲುಗಾವಲೊಂದೇ ಈ ಗ್ರಾಮದ ಆಕರ್ಷಣೆ" ಎಂದು ತನ್ನ ತಂಗಿಗೆ ಪತ್ರ ಬರೆದ ಲೆನಿನ್. ಕೆಲವು ಕಾಲ ಈ ಕಾರಾಗೃಹದ ಅನುಭವ ಕಹಿಯಾಗಿಯೇ ಇತ್ತು. ಮತ್ತೊಮ್ಮೆ ಅಂತರ್ಮುಖಿಯಾಗಿ ಅಧ್ಯಯನಕ್ಕೆ ತೊಡಗಿದ. ಕೆಲವು ಕಾಲದ ನಂತರ ಆತನ ಪ್ರೇಯಸಿ ಕೃಪ್ಸ್‌ಕಯಾ ತಾನೂ ಶಿಕ್ಷಿತಳಾಗಿ ಅದೇ ಗ್ರಾಮಕ್ಕೆ ಕಳುಹಿಸಲ್ಪಟ್ಟಳು. ದುರ್ಭರ ಸನ್ನಿವೇಶ ಹಠಾತ್ತನೆ ಹೊಸ ಸ್ವರೂಪವನ್ನೇ ತಳೆದು ನಿಂತಿತು. ಮನಸ್ಸು ಪ್ರಫುಲ್ಲವಾಯಿತು ಊರ್ಧ್ವಮುಖ ಉನ್ನತಾಕಾಂಕ್ಷೆಗಳನ್ನು ಸಮಾನವಾಗಿ ತುಂಬಿಕೊಂಡಿದ್ದ ಈ ಗಂಭೀರ ವ್ಯಕ್ತಿಗಳು ಅಲ್ಲಿ ಜೀವನಸಂಗಾತಿಗಳಾದರು.

ಸೈಬೀರಿಯದ ಈ ಕಾರಾಗೃಹವಾಸದಲ್ಲಿ ಲೆನಿನ್ ಮತ್ತು ಕೃಪ್ಸ್‌ಕಯಾ ಅಧ್ಯಯನ ಚಿಂತನ ಮನನಗಳಲ್ಲಿ ಮಗ್ನರಾದರು. ಪರಸ್ಪರಾವಲಂಬನೆಯ ಮಧುರಭಾವನೆ ತುಂಬಿನಿಂತು ಮನಸ್ಸು ಹೃದಯಗಳನ್ನು ಅರಳಿಸಿತು. ಜೀವನದ ಗುರಿ ಖಚಿತವಾಯಿತು. ದೃಢಸಂಕಲ್ಪರಾಗಿ ಮಹಾಕ್ರಾಂತಿಯ ನಾಯಕತ್ವ ವಹಿಸುವ ಸಾಹಸದ ಬಾಳನ್ನು ಸ್ವಾಗತಿಸಿದರು. ಸೋಷಿಯಲ್ ಡೆಮೋಕ್ರಾಟಿಕ್ ಪಕ್ಷಕ್ಕೆ ಒಂದು ಕಾರ್ಯಕ್ರಮದ ಕರಡು ತಯಾರಾಯಿತು. ಮೂರು ವರ್ಷಗಳಲ್ಲಿ ಮೂವತ್ತಕ್ಕೂ ಮೀರಿ ಪುಸ್ತಕಗಳನ್ನೂ ಕೈಹೊತ್ತಿಗೆಗಳನೂ ಬರೆದ ಲೆನಿನ್.

ಆವಾಸ "ರಷ್ಯದಲ್ಲಿ ಬಂಡವಾಳಶಾಹಿಯ ಬೆಳವಣಿಗೆ" ಎಂಬ ಪ್ರಖ್ಯಾತ ಗ್ರಂಥ ಪ್ರಕಟವಾಯಿತು. ಕೈಗಾರಿಕಾ ಕ್ಷೇತ್ರ ಮಾತ್ರವಲ್ಲದೆ ವ್ಯವಸಾಯವೂ ಬಂಡವಾಳದ ಹಿಡಿತಕ್ಕೆ ಸಿಕ್ಕಿರುವುದನ್ನು ಇದರಲ್ಲಿ ವಿವರಿಸಿ ಹೇಳಿದ. ಕಾರ್ಮಿಕರಿಗೂ ರೈತರಿಗೂ ಒಂದು ಸಮ್ಮಿಳನ ಸೂತ್ರವನ್ನು ಸೂಚಿಸಿದ. ಮಾರ್ಕ್ಸ್‌ನ ಮಾರ್ಗ ಇದರಿಂದ ಇನ್ನೂ ಒಂದು ಹೆಜ್ಜೆ ಮುಂದೆ ಹೋಯಿತು.

ದೇಶಭ್ರಷ್ಟತೆಯ ಅವಧಿ ಪೂರೈಸುವುದನ್ನೇ ಎದುರುನೋಡುತ್ತಿದ್ದ ಲೆನಿನ್. ರಾಜಕೀಯ ಆಂದೋಳನದ ದಾರಿ ಅವನಿಗೆ ಸ್ಪಷ್ಟವಾಗಿತ್ತು. ತನ್ನ ಹರಿತವಾದ ಲೇಖನಿಯಿಂದ ಪ್ರತಿಗಾಮಿ ಶಕ್ತಿಗಳನ್ನೆಲ್ಲ ಹಿಮ್ಮೆಟ್ಟಿಸಿದ್ದ. ಅವನ ತರ್ಕಸರಣಿ ಅಜೇಯವಾಯಿತು. ಪ್ರಾಮಾಣಿಕತೆ, ನಿಃಸ್ವಾರ್ಥತೆ, ನಿರ್ಭಯತೆಗಳೇ ಮೂರ್ತಿವೆತ್ತಂತೆ ಸಾಮಾನ್ಯಜನತೆಯ ಆರಾಧ್ಯಮೂರ್ತಿಯಾದ. ಅವನ ವ್ಯಕ್ತಿತ್ವ ಕಡೆದು ನಿಂತಿತು. ತವಕದಿಂದ ಎದುರು ನೋಡುತ್ತಿದ್ದ ಬಿಡುಗಡೆಯ ದಿನವೂ ಬಂತು. 1900 ರ ಜನವರಿಯಲ್ಲಿ ಸಂಕೋಲೆಗಳನ್ನು ಕಳಚಿ ದಂಪತಿಗಳಿಬ್ಬರೂ ಕರ್ಮಕ್ಷೇತ್ರದೆಡೆಗೆ ಧಾವಿಸಿದರು. ಛಳಿಗಾಳಿಗಳೆನ್ನದೆ ಹಗಲೂ ರಾತ್ರಿ ಕುದುರೆಗಾಡಿಗಳಲ್ಲಿ ಒರಟುದಾರಿಗಳಲ್ಲಿ ಪ್ರಯಾಣಮಾಡಿ ಸಹೋದ್ಯೋಗಿಗಳನ್ನು ಸೇರಲು ಓಡಿಬಂದರು. ಯಾವ ದೊಡ್ಡ ಪಟ್ಟಣದಲ್ಲೂ ನೆಲಸಲು ಅನುಮತಿ ಇಲ್ಲದಿದ್ದುದರಿಂದ ಪೀಟರ್ಸ್‌ಬರ್ಗ್‌ನ ಹತ್ತಿರದ ಪಸ್ಕೋವ್ ಗ್ರಾಮದಲ್ಲಿ ಬಿಡಾರ ಮಾಡಿದರು

೭

"ಇಸ್ಕ್ರಾ" (ಕಿಡಿ) ಆಂದೋಳನದ ಕೆಂಪು ಕಿಡಿ ಲೆನಿನ್ನನ ಪ್ರಥಮ ಪತ್ರಿಕೆಯಾಗಿ ಜನ್ಮ ತಾಳಿತು. ಜರ್ಮನಿಯ ಮ್ಯೂನಿಚ್‌ನಲ್ಲಿ ಅದು ಹುಟ್ಟಬೇಕಾಯಿತು. ಸ್ವದೇಶದ ದಾಸ್ಯಶೃಂಖಲೆಗಳು ಅಸಹನೀಯವಾಗಿ ಪತ್ರಿಕಾ ಸ್ವಾತಂತ್ರ್ಯವನ್ನು ದಮನಮಾಡುತ್ತಿದ್ದಾಗ ಕ್ರಾಂತಿಯ ಕಿಡಿಗೆ ಅವಕಾಶವೆಲ್ಲಿ. ಜರ್ಮನಿಯ ಸಮಾಜವಾದಿಗಳು ಲೆನಿನ್‌ಗೆ ನೆರವಾದರು. 1900 ರ ಡಿಸೆಂಬರಿನಲ್ಲಿ ಅದು ಬೆಳಕು ಕಂಡಿತು. ನೂತನ ಅಧ್ಯಾಯವೊಂದು ಅಂಕುರವಾಯಿತು. "ಕಿಡಿ ಒಂದು ಮಹಾ ಜ್ಯೋತಿಯಾಗಿ ಉರಿಯುತ್ತದೆ" ಎಂಬ ಧ್ಯೇಯ ವಾಕ್ಯದೊಡನೆ ಹೊರಟ ಈ ಕ್ರಾಂತಿದುಂದುಭಿ ಪ್ರಚಂಡ ಕುರುಕ್ಷೇತ್ರವನ್ನೇ ಪ್ರಚೋದಿಸಿ ಪ್ರಖ್ಯಾತವಾಯಿತು. ರಷ್ಯ ದೇಶದಲ್ಲೆಲ್ಲಾ ಅಂತರ್ಗಂಗೆಯಂತೆ ಪ್ರವಹಿಸುತ್ತಿದ್ದ ಸಾಮ್ಯಾವಾದ ಪ್ರಣಾಳಿಯ ಗುಪ್ತವಾಹಕವಾಗಿ 'ಇಸ್ಕ್ರಾ' ಅಧಿಕಾರಶಾಹಿಯ ಸರ್ಪಕಾವಲನ್ನು ತಪ್ಪಿಸಿ ಲಕ್ಷಾಂತರ ಕೂಲಿಕಾರರ ಕೈ ಸೇರುತ್ತಿತ್ತು. ಮುಂದೆ ರಾಷ್ಟ್ರನಾಯಕರಾಗಿ ಜನತೆಯ ನಾಯಕತ್ವ ವಹಿಸಿದ ಖ್ಯಾತನಾಮರನೇಕರು ಈ ಪತ್ರಿಕೆಯನ್ನು ಹೊತ್ತು ಮಾರುತ್ತಿದ್ದರು

ಬಾಬುಷ್ಕಿನ್. ಕ್ಯಾಲಿನಿನ್, ಕೆಟ್ಝೋವೆಲಿ, ಲಿಟ್ವಿನೋವ್, ಸ್ವಾಸೋವಾ ಇವರೆಲ್ಲ ಲೆನಿನ್‌ನ ಸಹಸ್ರ ಬಾಹುಗಳಂತೆ ಸಹಕರಿಸಿ ನಿಂತ ವೀರಾಗ್ರಣಿಗಳು. ಜನಜಾಗೃತಿಯನ್ನು ಹೊಡೆದೆಬ್ಬಿಸಿದ ದೇಶಭಕ್ತರು.

ಇದುವರೆಗೆ ವ್ಲಾಡಿಮಿರ್ ಇಲಚ್ ಉಲ್ಯನೋವ್ ಆಗಿದ್ದ ಹೆಸರು ಲೆನಿನ್ ಆದುದೂ ಈ ಕಾಲಕ್ಕೇ. "ಸೈಬೀರಿಯದ ಮಹಾನದಿ 'ಲೇನಾ' ಕೊಟ್ಟ ಸ್ಫೂರ್ತಿ ಅವನ ಹೃದಯ ತುಂಬಿ ಬಂದು ಲೆನಿನ್ ಎಂಬ ಅಜ್ಞಾತನಾಮ ವನ್ನೇ ವ್ಲಾಡಿಮಿರ್ ಆರಿಸಿಕೊಂಡ" ಎಂದಿದ್ದಾಳೆ ಅವನ ಪ್ರೇಯಸಿ ಕೃಪ್ಸ್ಕಯಾ. ಲೆನಿನ್ ಹೊಸ ಯುಗದ ನವಶಕ್ತಿಯ ಸಂಕೇತನಾಮವಾಯಿತು. ದೀನದಲಿತರ ಕೋಟಿ ಕುಟೀರಗಳಲ್ಲಿ ಅವನ ಮಾತು, ಅವನ ವಿಚಾರಗಳು ಗಾಳಿಯಂತೆ ಸಂಚರಿಸತೊಡಗಿದವು. ಇದೇ ಕಾಲಕ್ಕೆ ಅವನ ಪ್ರಖ್ಯಾತ ಗ್ರಂಥ "ಮಾಡಬೇಕಾದುದೇನು ?" ಪ್ರಕಟವಾಯಿತು. ಸಂಘಟನೆಯ ರೂಪ ರೇಖೆಗಳನ್ನು ಚಿತ್ರಿಸಿ ಕೂಲಿಗಾರರ ಸಾಂಘಿಕ ಶಕ್ತಿ ಮಾರ್ಕ್ಸ್‌ನ ಪಥದಲ್ಲಿ ಅಡಿಯಿಡಲು ಮಾರ್ಗದರ್ಶನ ಮಾಡಿದ. ಎಲ್ಲೆಡೆಯಲ್ಲಿಯೂ ಮಾರ್ಕ್ಸ್ ಪಕ್ಷಗಳು ಹುಟ್ಟಿ ಬೆಳೆಯಲಾರಂಭವಾಯಿತು. "ಮೊದಲು ವಿಚಾರಕ್ರಾಂತಿ, ಅದನ್ನನುಸರಿಸಿ ರಾಜಕೀಯ ಆಂದೋಳನ" ಎಂಬ ಘೋಷಣೆ ಲೆನಿನ್‌ನ ಲೇಖನಿಯಿಂದ ಅಖಂಡವಾಗಿ ಹರಿಯತೊಡಗಿತು.

1903 ರಲ್ಲಿ ಲೆನಿನ್ "ಬಡವರಾದ ನಮ್ಮ ಗ್ರಾಮಸ್ಥರಿಗೆ" ಎಂಬ ಚಿಕ್ಕ ಪುಸ್ತಕವನ್ನು ಬರೆದು ಪ್ರಕಟಿಸಿದ. ಯಂತ್ರೋದ್ಯಮ, ಬಂಡವಾಳದ ವ್ಯವಸ್ಥೆ ಇವು ಬಡತನದಿಂದ ಸಮಾಜವನ್ನು ಮುಕ್ತಮಾಡುವಂತಿರಬೇಕೆಂಬುದೇ ಅವನ ಪ್ರಬಲ ಇಚ್ಛೆ. ಕ್ರಾಂತಿ ಚಳುವಳಿಯಲ್ಲಿ ಸಹಕರಿಸಲು ರೈತರನ್ನಾಹ್ವಾನಿಸುತ್ತಾ, "ಹೊಸ ಉತ್ತಮ ಸಮಾಜದ ಸಾಧನೆ ನಮ್ಮ ಗುರಿ. ಈ ಹೊಸ ಉತ್ತಮ ಸಮಾಜದಲ್ಲಿ ಬಡವರೂ ಇರುವುದಿಲ್ಲ, ಶ್ರೀಮಂತರೂ ಇಲ್ಲ. ಪ್ರತಿಯೊಬ್ಬರೂ ಕಾಯಕ ಮಾಡಬೇಕು. ಸಾಮೂಹಿಕ ದುಡಿಮೆಯ ಫಲವನ್ನು ಎಲ್ಲರೂ ಅನುಭವಿಸಬೇಕು : ಕೇವಲ ಕೆಲವು ಶ್ರೀಮಂತರು ಮಾತ್ರವಲ್ಲ. ಯಂತ್ರಗಳೂ ಮತ್ತಿತರ ತಾಂತ್ರಿಕ ಸಾಧನೆಗಳೂ ಸರ್ವರ ಶ್ರಮವನ್ನೂ ಏಕರೀತಿಯಲ್ಲಿ ಕಡಿಮೆ ಮಾಡುವಂತಾಗಬೇಕೇ ಹೊರತು ಕೋಟ್ಯಾಂತರ ಜನರ ಶೋಷಣೆಯಿಂದ ಕೆಲವು ಶ್ರೀಮಂತರು ಬೆಳೆಯಲು ಎಂದಿಗೂ ಸಹಾಯಕ

ಸಾಧನವಾಗಬಾರದು. ಈ ಹೊಸದಾದ ಉತ್ತಮವಾದ ಸಮಾಜವನ್ನೇ "ಸಮಾಜವಾದೀ ಸಮಾಜ" ಎನ್ನುವರು. ಇದರ ಆಧಾರತತ್ವಗಳೇ "ಸಮಾಜವಾದ," ಎಂದು ಬರೆದ.

'ಕಿಡಿ' ಪತ್ರಿಕೆ ಪೋಲೀಸರ ಸಂಶಯದೃಷ್ಟಿಗೆ ಸಿಲುಕಿ ಲಂಡನ್ನಿಗೆ ವಲಸೆ ಹೋಗಬೇಕಾಯಿತು. ಕೃಪ್ಸ್‌ಕಯಾಳೊಡನೆ ಲೆನಿನ್ ಲಂಡನ್ನಿಗೆ ತೆರಳಿ ಒಂದು ವರ್ಷವಿದ್ದ. ಆ ಪ್ರಶಾಂತನಗರ ಅವನ ವೈಚಾರಿಕ ಅನ್ವೇಷಣೆಗಳಿಗೆ ಪುಟ ಕೊಟ್ಟಿತು. ಕೂಲಿಗಾರವಸತಿಗಳ ಸಂಪರ್ಕ ಬೆಳೆಸಿದ. ಅವರೊಡನೆ ಮಿಳಿತ ವಾಗಿ ಅವರ ಆಶೋತ್ತರಗಳನ್ನರಿತುಕೊಂಡ. —ತನ್ನ ಗುರು ಕಾರ್ಲ್ ಮಾರ್ಕ್ಸ್‌ನಂತೆಯೇ ಬ್ರಿಟಿಷ್ ಮ್ಯೂಸಿಯಂನಲ್ಲಿ ವ್ಯಾಸಂಗನಿಷ್ಠನಾಗಿ ಕುಳಿತು ಬಿಡುತ್ತಿದ್ದ. ಮತ್ತೆ ಜಿನಿವಾಕ್ಕೆ ಪತ್ರಿಕೆಯ ಕಾರ್ಯಾಲಯವನ್ನು ಬದಲಿಸ ಬೇಕಾಯಿತು. ಒಂದು ಸಣ್ಣ ಮನೆಯನ್ನು ಗೊತ್ತುಮಾಡಿ ಅಲ್ಲಿ ಸಂಸಾರ ಹೂಡಿದ. ಸ್ವದೇಶಕ್ಕೆ ಹತ್ತಿರವಾಗಿ ಅಂತರ್ರಾಷ್ಟ್ರೀಯ ನಗರದ ರಕ್ಷಣೆ ಗಳನ್ನಾಶ್ರಯಿಸಿ ಕ್ರಾಂತಿಚಳುವಳಿಯ ಸಂಘಟನೆ ಮಾಡತೊಡಗಿದ. ಅನೇಕ ಸಹಚರರ ಭೇಟಿಯಾಯಿತು. ಕೃಪ್ಸ್‌ಕಯಾಳ ಗಾಢಪ್ರೇಮದ ವಕ್ಷ ನೆರವಿನಿಂದ ಸತತವಾಗಿ ಹರಿಯುತ್ತಿದ್ದ ಪ್ರಚಾರವಾಹಿನಿ ಸಾವಿರ ಮುಖಗಳಿಂದ ರಷ್ಯದ ಜನತೆಯನ್ನು ಸೇರುತ್ತಿತ್ತು. ಅವರನ್ನು ಎಚ್ಚರಿಸಿ ಕಾರ್ಯೋನ್ಮುಖರನ್ನಾಗಿ ಮಾಡಿ ವಿಮೋಚನೆಯ ಮಹಾ ಸಮರದೆಡೆಗೆ ಪ್ರಬಲವಾಗಿ ನುಗ್ಗಿಸುತ್ತಿತ್ತು.

ದೇಶಭ್ರಷ್ಟರಾಗಿದ್ದ 'ಸೋವಿಯಟ್ ಡೆಮೋಕ್ರಾಟಿಕ್' ಪಕ್ಷದ ಸದಸ್ಯರು ತಮ್ಮ ಅಧಿವೇಶನಗಳನ್ನು ಒಮ್ಮೆ ಬ್ರೆಸೆಲ್ಸಿನಲ್ಲೂ ಮತ್ತೊಮ್ಮೆ ಲಂಡನ್ನಿನಲ್ಲೂ ನಡೆಸಿದರು. ಲೆನಿನ್ ಈ ಸಭೆಗಳ ಕೇಂದ್ರಶಕ್ತಿಯಾಗಿದ್ದ. ಪಕ್ಷದ ಕಾರ್ಯ ಕ್ರಮ ಇಲ್ಲಿ ರೂಪಿತವಾಯಿತು. 'ಇಸ್ಕ್ರಾ' ಅದರ ಮುಖವಾಣಿಯಾಯಿತು. ಆಂದೋಳನದ ಮಹಾಜ್ವಾಲೆ ಮುಂದೆ ಹದಿನೈದು ವರ್ಷ ಪ್ರಜ್ವಲಿಸಿ ಸಾಗಿತು. ಕಾರ್ಮಿಕ ಸಂಘಗಳ ಪ್ರಾಥಮಿಕ ಸಂಘಟನೆಯ ಮೇಲೆ ರಾಷ್ಟ್ರೀಯ ಪಕ್ಷವನ್ನು ರೂಪಿಸಿದ ಲೆನಿನ್. ಕೇವಲ ಚಂದಾ ಹಣವಾಗಲೀ ಬೌದ್ಧಿಕ ಸಹಾನು ಭೂತಿಯಾಗಲೀ ತತ್ವನಿಷ್ಠೆಗೆ ಸಹಾಯಕವಲ್ಲವೆಂದೇ ಅವನ ನಂಬಿಕೆಯಾಗಿತ್ತು. ದುಡಿಮೆಯ ಜೀವನಸೂತ್ರವನ್ನು ಅಂಗೀಕರಿಸಿಯೇ ಕ್ರಾಂತಿ ಪಕ್ಷವನ್ನು ಸೇರುವುದು ಅನಿವಾರ್ಯ ನಿಯಮ ಎಂಬ ನಿರ್ಣಯವಾಯಿತು. ಪ್ರತಿಗಾಮಿ

ಗಳಾಗಲೀ ತತ್ತ್ವಭ್ರಷ್ಟರಾಗಲೀ ಪಕ್ಷದೊಳಕ್ಕೆ ನುಸುಳಿಕೊಳ್ಳುವುದು ತಪ್ಪಿತು. ಒಂದು ಸಶಕ್ತ ಏಕಮುಖ ಸರ್ವಾಧಿಕಾರೀ ನಾಯಕತ್ವವನ್ನು ಪ್ರತಿಷ್ಠಾಪಿಸಿ ಜನತೆಯನ್ನು ಸಂಘಟಿಸಲು ಸರ್ವರೂ ಸಂಕಲ್ಪಿಸಿದರು

ಪಕ್ಷದೊಳಗೆ ಬಹುಸಂಖ್ಯಾತರನ್ನು ಆಕರ್ಷಿಸಿದ ಲೆನಿನ್ ಉಗ್ರಗಾಮಿ ಪಂಥದವನೆಂದು ಹಲವು ಸೌಮ್ಯವಾದಿಗಳು ಅವನ ವಿಚಾರ ಸರಣಿಯನ್ನು ಪ್ರತಿಭಟಿಸಿದರು. ಈ ಎರಡು ಗುಂಪುಗಳೂ ಸ್ಪಷ್ಟವಾಗಿ ಒಡೆದುವು. ಬಹುಸಂಖ್ಯಾತರು ಅಥವಾ 'ಬಾಲ್ಷವಿಕ್ಸ್' ಮುಂದೆ ಜನತಾ ಚಳುವಳಿಯ ಸೂತ್ರಧಾರಿಗಳಾದರು. ಅಲ್ಪಸಂಖ್ಯಾತರು ಅಥವಾ "ಮೆನ್ಷವಿಕ್ಸ್" ಮಾರ್ಕ್ಸ್‌ವಾದಿಗಳಾದರೂ ಅವರ ಕ್ರಾಂತಿಪ್ರಕ್ರಿಯೆ ಬಂಡವಾಳಶಾಹಿಗೇ ಪ್ರೋತ್ಸಾಹಕರವೆಂದು ಕಾರ್ಮಿಕವರ್ಗ ಅವರನ್ನು ನಿರಾಕರಿಸಿತು. ಅಲ್ಲಿಂದಾಚೆ ಬಹುಕಾಲದವರೆಗೆ ರಷ್ಯದ ಸಾಮ್ಯವಾದೀ ಪಕ್ಷದಲ್ಲಿ ಎರಡೂ ಗುಂಪುಗಳು ಇದ್ದವು. ಆದರೆ ವಾಸ್ತವವಾಗಿ ಎಲ್ಲ ನಾಯಕತ್ವವೂ 'ಬಾಲ್ಷವಿಕ್ಸ್' ಪಂಗಡಕ್ಕೇ ಸೇರಿ ಹೋಯಿತು. 1904 ರಲ್ಲಿ ಲೆನಿನ್ ಬರೆದು ಪ್ರಕಟಿಸಿದ "ಒಂದು ಹೆಜ್ಜೆ ಮುಂದೆ ಎರಡು ಹೆಜ್ಜೆ ಹಿಂದೆ" ಎಂಬ ಇತಿಹಾಸಪ್ರಸಿದ್ಧ ಲೇಖನದಿಂದ ಮೆನ್ಷವಿಕ್ಕರಿಗೆ ಸಂಪೂರ್ಣ ತೇಜೋವಧೆಯಾಯಿತು. "ಪ್ರತಿಭಟನೆಯ ಸಂಘಟನಾಶಕ್ತಿಯೇ ಕೂಲಿಗಾರರ ಏಕೈಕ ಅಸ್ತ್ರ. ಅದರ ಮೂಲಕವೇ ರಾಜ್ಯಾಧಿಕಾರ ಲಭ್ಯವಾದೀತು" ಎಂಬ ಸಿದ್ಧಾಂತ ಬೇರೂರಿತು. ಈ ಸಂಘಟನೆಯ ರೂಪುರೇಖೆಗಳನ್ನೆಲ್ಲಾ ಲೆನಿನ್ ವಿಶದಪಡಿಸಿದ. ರಷ್ಯದಲ್ಲಿ ಈವೇಳೆಗೆ ಕ್ರಾಂತಿಯು ಕಾವೇರುತ್ತಿತ್ತು. 1904 ರಲ್ಲಿ ಪಕ್ಷದ ಮೂರನೇ ಮಹಾಧಿವೇಶನದ ಸಿದ್ಧತೆಯೂ ಸಾಗಿತ್ತು. ಸ್ವದೇಶದೊಳಗಿನ ಸ್ವಾತಂತ್ರ್ಯಯೋಧರಿಗೆ ಧನ ಶಸ್ತ್ರಗಳನ್ನು ಸಂಗ್ರಹಿಸಿ ಕಳುಹಿಸಲು ದೇಶಭ್ರಷ್ಟ ದೇಶಭಕ್ತರೆಲ್ಲ ಸನ್ನದ್ಧರಾದರು.

೮

ಜಾರ್ ದೊರೆಯ ನಿರಂಕುಶಾಡಳಿತ ಜನತೆಯೊಳಗಿನ ಮೂಕ ವೇದನೆಗಳನ್ನು ಕಡಗಣಿಸಿ ಸಾಗುತ್ತಿತ್ತು. ಫ್ರಾನ್ಸ್ ಮತ್ತು ಜರ್ಮನಿಗಳೊಡನೆ ತನ್ನ ರಾಜಕೀಯ ಬಾಂಧವ್ಯವನ್ನು ಬೆಳಸಿಕೊಂಡು ನೆರೆರಾಷ್ಟ್ರಗಳ ಮೇಲೆ

ಯುದ್ಧ ಸನ್ನಾಹವನ್ನು ಜಾರ್ ದೊರೆ ಯೋಚಿಸುತ್ತಿದ್ದ. 1904 ರಲ್ಲಿ ಪೂರ್ವದ ತುದಿಯ ಪೋರ್ಟ್ ಆರ್ಥರ್‌ನಲ್ಲಿ ಜಪಾನ್ ಧಾಳಿಮಾಡಿತು. ಸೈನ್ಯ ಜಮಾವಣೆ ಮಾಡುತ್ತಾ ಯುದ್ಧಕ್ಕಾಗಿ ಕಾಲ್ಕೆರೆಯುತ್ತಿದ್ದ ರಷ್ಯಾ ಸರ್ಕಾರಕ್ಕೆ ಇದು ಸ್ವಲ್ಪ ಅನಿರೀಕ್ಷಿತ ಪ್ರತಿಭಟನೆಯೇ ಆಯಿತು. ಕ್ಷಿಪ್ರ ಕಾರ್ಯಾಚರಣೆಯಿಂದ ಜಪಾನ್. ರಷ್ಯ ಸೈನ್ಯದ ಸಂಖ್ಯಾಬಲಕ್ಕೆ ಜಗ್ಗದೆ ಮುನ್ನುಗ್ಗಿ ನಡೆಯಿತು. ನೌಕಾ ಯುದ್ಧದಲ್ಲೂ ರಷ್ಯ ಸೋತು ಹಿಮ್ಮೆಟ್ಟಬೇಕಾಯಿತು. ರಷ್ಯ ಜಪಾನ್ ಯುದ್ಧ ಅಗಾಧ ಪ್ರಮಾಣದಲ್ಲಿ ನಡೆದು ಲಕ್ಷಾಂತರ ರಷ್ಯನ್ ಸೈನಿಕರು ಮಡಿದರು. ದೇಶದೊಳಗಿನ ಅಶಾಂತಿಯನ್ನು ತುಳಿದು ಯುದ್ಧಸನ್ನದ್ಧತೆಯ ನೆಪಮಾಡಿ ಪ್ರತಿಭಟನೆಗಳನ್ನು ತಡೆಹಿಡಿದರೂ ಜಾರ್ ಸರ್ಕಾರ ಯುದ್ಧದಲ್ಲಿ ಸೋತುದು ಇಡೀ ರಾಷ್ಟ್ರವನ್ನು ಕೆಂಡದಂತೆ ಕೆರಳಿಸಿತು. ಸೈನ್ಯದಲ್ಲಿ ಅತ್ಯಂತ ಅಸಮಾಧಾನ ಹುಟ್ಟಿತು. ಕಾರ್ಮಿಕವರ್ಗ ಆರ್ಥಿಕ ಶೋಷಣೆಗಳಿಂದ ತೀವ್ರ ಕ್ಲೇಶತಪ್ತವಾಗಿ ಅಲ್ಲಲ್ಲಿ ದಂಗೆಯೇಳುತ್ತಿತ್ತು. ಸತತವಾಗಿ ಪ್ರಚೋದಕ ಪ್ರಚಾರ ಸಾಧನಗಳಿಂದ ಬೆಳೆದು ನಿಂತಿದ್ದ ಸಮಾಜವಾದ ತತ್ವಗಳು ಸಾಮಾನ್ಯ ಜನತೆಯನ್ನು ಸಂಘಟಿಸಿ ರಾಜ್ಯಕ್ರಾಂತಿಯೆಡೆಗೆ ಸೆಳೆಯುತ್ತಿದ್ದವು. ಸಮರದಲ್ಲಿ ಅಪಮಾನಗೊಂಡು ಜನತೆಯ ವಿಶ್ವಾಸ ಕಳೆದುಕೊಂಡು ಶೋಷಕರೆನಿಸಿದ್ದ ಅಂದಿನ ರಷ್ಯದ ನಿರಂಕುಶ ಪ್ರಭುಗಳು ನೈತಿಕ ಪತನದ ಅಂಚಿನಲ್ಲಿ ಬಂದು ನಿಂತಿದ್ದರು. ಕ್ರಾಂತಿಯ ಕಿಡಿ ಮೊದಲ ಬಾರಿಗೆ ಆಸ್ಫೋಟವಾಯಿತು.

ಇಡೀ ಜನಸ್ತೋಮವೊಂದು ರಾಜ್ಯಾಧಿಕಾರದ ಸಶಸ್ತ್ರಶಕ್ತಿಯೆದುರು ತಲೆಯೆತ್ತಿ ನಿಂತು ಆತ್ಮಗೌರವದ ಧೀರವಾಣಿಯಿಂದ ತಮ್ಮ ಅಜನ್ಮಸಿದ್ಧ ಹಕ್ಕುಗಳನ್ನು ಪಡೆದುಕೊಳ್ಳಲು 1905 ರ ಜನವರಿ ಎರಡರಂದು ಸೇಂಟ್ ಪೀಟರ್ಸ್‌ಬರ್ಗ್ ನಗರದಲ್ಲಿ ಮೊದಲಬಾರಿಗೆ ಒಂದು ಮಹಾಪ್ರದರ್ಶನ ನಡೆಯಿತು. ಜಗತ್ತಿನ ಸಮಾಜವಾದೀ ಚಳುವಳಿಯ ಚಿರಸ್ಮರಣೀಯ ಘಟನೆಯೊಂದು ಅಂದು ಅಲ್ಲಿ ಸಂಭವಿಸಿತು. ಮೂವತ್ತು ಸಾವಿರ ಸಾಮಾನ್ಯ ಕಾರ್ಮಿಕರು ಪ್ರಚಂಡ ಶಾಂತಿಯುತ ಮೆರವಣಿಗೆಯಲ್ಲಿ ಜಾರ್ ದೊರೆಯ ಅರಮನೆಯ ಕಡೆಗೆ ನಡೆದರು. ಫಾದರ್ ಗೆಪಾನ್ ಎಂಬ ಪಾದ್ರಿ ಈ ನೇರಕಾರ್ಯಾಚರಣೆಯ ನಾಯಕ. ರಾಜಕೀಯ ಸ್ವರೂಪ ತಾಳಿದ ಪ್ರಪ್ರಥಮ ಜನತಾ ಪ್ರದರ್ಶನ

ಇದು. ಸಾರ್ವಜನಿಕ ಮನವಿಯೊಂದನ್ನು ದೊರೆಯ ಕೈಗೆ ನೇರವಾಗಿ ಸಲ್ಲಿಸಲು ದೃಢಸಂಕಲ್ಪ ಮಾಡಿತ್ತು ಈ ಜನಸ್ತೋಮ. ಗಂಡಸರು ಹೆಂಗಸರು ಮಕ್ಕಳು ಜೀವದ ಹಂಗು ತೊರೆದು ನಡೆದಿದ್ದರು. ರಾಷ್ಟ್ರದಲ್ಲೆಲ್ಲಾ ಐದು ವರ್ಷಗಳಿಂದ ಸತತವಾಗಿ ಸಣ್ಣ ಸಣ್ಣ ಸಂಪುಗಳನ್ನು ನಡೆಸಿ ವಿಫಲರಾಗಿ ನಿರಾಶರಾಗಿದ್ದ ಕಾರ್ಮಿಕವರ್ಗ ಈ ಪ್ರತಿಭಟನೆಯ ಅದ್ಭುತ ಅಸ್ತ್ರವೊಂದನ್ನು ಧರಿಸಿ ಸಮರಸನ್ನದ್ಧವಾಗಿ ಜಾರನ ಕಡೆ ಧಾವಿಸುತ್ತಿತ್ತು. ದಾರಿಯಲ್ಲಿ ಸೈನ್ಯಾಡಳಿತ ಕಾರ್ಯಾಲಯವಿತ್ತು. ಈ ಶಾಂತಿಯುತ ಮೆರವಣಿಗೆ ಅವರ ಮುಂದೆ ಸಾಗುತ್ತಿದ್ದಾಗ ಗುಂಡು ಹೊಡೆದು ಚದುರಿಸುವಂತೆ ಸೈನ್ಯಾಧಿಕಾರಿಗಳು ಅಪ್ಪಣೆ ಮಾಡಿದರು. ಹಠಾತ್ತನೆ ಹಲವಾರು ಸೈನಿಕರು ಎಚ್ಚರಿಕೆಯನ್ನೂ ಕೊಡದೆ ನಿಶ್ಶಸ್ತ್ರ ನಿರಪರಾಧಿಗಳ ಮೇಲೆ ಗುಂಡಿನ ಮಳೆ ಕರೆದರು. ನೂರಾರು ಜನ ದಾರಿಯಲ್ಲೇ ಸತ್ತುಬಿದ್ದರು. ಭೀಕರ ಸಂಗ್ರಾಮದಂತಾದ ಈ ಘಟನೆಯಲ್ಲಿ ಸಾವಿರಾರು ಜನ ಘಾಯಗೊಂಡರು. ಹೆಂಗಸರು ಮಕ್ಕಳು ಮುದುಕರೆಲ್ಲ ಸಾವಿಗೀಡಾದರು. ಈ ಭಯಂಕರ ದಬ್ಬಾಳಿಕೆಯ ಸುದ್ದಿ ಕಾಳ್ಗಿಚ್ಚಿನಂತೆ ರಷ್ಯದ ಕಾರ್ಮಿಕವರ್ಗವನ್ನೆಲ್ಲ ಮುಟ್ಟಿ ಬಿರುಗಾಳಿಯೆದ್ದಿತು. ಈ ಸಾಮೂಹಿಕ ಕೊಲೆಯ ಪ್ರಕರಣ ಯೂರೋಪಿನಲ್ಲೂ ಅಸಹನೀಯ ವೇದನೆಯ ಅಲೆಗಳನ್ನೆಬ್ಬಿಸಿತು. ದರ್ಪದ ದಮನಪ್ರಯತ್ನ ಪ್ರಚಂಡ ಕ್ರಾಂತಿಯನ್ನೇ ಹೊಡೆದೆಬ್ಬಿಸಿತು. ರೊಚ್ಚಿಗೆದ್ದ ಜನ ಪ್ರತಿಭಟಿಸಿನಿಂತರು.

ಕಾರ್ಮಿಕರು ಜಾರ್ ದೊರೆಗೆ ಒಪ್ಪಿಸಹೊರಟಿದ್ದ ಮನವಿಯಲ್ಲಿ ಅವರ ಕಠೋರ ಪರಿಸ್ಥಿತಿಯ ಚಿತ್ರಣವಿತ್ತು. ಸಾಮಾನ್ಯ ಪ್ರಜೆಯ ಸಾಧಾರಣ ಸ್ವಾತಂತ್ರ್ಯ ಹಕ್ಕುಬಾಧ್ಯತೆಗಳಿಗಾಗಿ ಅವರು ಬೇಡಿದ್ದರು. ಅಸಹನೀಯ ನಿರಂಕುಶಾಧಿಕಾರವನ್ನು ಕೊನೆಗಾಣಿಸಲು ದೃಢಸಂಕಲ್ಪರಾಗಿ ಅವರು ಮನವಿಯನ್ನು ಹೀಗೆ ಮುಕ್ತಾಯ ಮಾಡಿದ್ದರು :—

"ನಿಮ್ಮ ಪ್ರಜೆಗಳನ್ನು ನಿಮ್ಮಿಂದ ದೂರಮಾಡದಿರಿ. ಅವರಿಗೆ ಸಹಾಯವನ್ನು ನಿರಾಕರಿಸದಿರಿ. ಜನತೆಯಿಂದ ನಿಮ್ಮನ್ನು ಪ್ರತ್ಯೇಕಿಸಿರುವ ಕೋಟೆಗಳನ್ನು ಧ್ವಂಸಮಾಡಿಬಿಡಿ. ನಮ್ಮ ಬೇಡಿಕೆಗಳು ಈಡೇರುವಂತೆ ಕೂಡಲೇ ಸಂಕಲ್ಪಮಾಡಿ ಅಪ್ಪಣೆಕೊಡಿ. ರಷ್ಯ ದೇಶಕ್ಕೆ ಸಂತೋಷವನ್ನು ತನ್ನಿ. ಇಲ್ಲದಿದ್ದರೆ ಇಲ್ಲೇ ನಮ್ಮ ಜೀವಗಳನ್ನು ಬಲಿಕೊಡಲು ಸಿದ್ಧರಾಗಿದ್ದೇವೆ.

ನಮಗಿರುವುದು ಎರಡೇ ಮಾರ್ಗ. ಸ್ವಾತಂತ್ರ್ಯ ಸುಖ ಇಲ್ಲವೇ ವೀರ ಮರಣ ”,

ಘಂಟಾನಾದದಂತೆ ಗುಡುಗಿ ಬಂದ ಈ ವೀರವಾಣಿ ಅದ್ಭುತ ಪರಿಣಾಮ ಮಾಡಿತು. ಅನೈತಿಕ ರಾಜ್ಯಪ್ರಭುತ್ವದ ಅಡಿಪಾಯವನ್ನೇ ಅಲ್ಲಾಡಿಸಿಬಿಟ್ಟಿತು.

ಕ್ರಾಂತಿಯ ಸುಪ್ತವಾಹಿನಿ ಭೋರ್ಗರೆದು ಹೊರಗೆ ಹರಿಯಿತು. ಪೀಟರ್‌ಬರ್ಗ್‌ನ ಹತ್ಯಾಕಾಂಡ ರಷ್ಯದ ಕಾರ್ಮಿಕವರ್ಗವನ್ನೆಲ್ಲ ಕೆರಳಿಸಿ ಒಂದಾದ ಮೇಲೊಂದು ಬೃಹತ್ ಪ್ರಮಾಣದ ರಾಜಕೀಯ ಪ್ರತಿಭಟನೆಗಳು ಸಂಪುಚಳುವಳಿಗಳು ಪ್ರಾರಂಭವಾದವು. ಇಪ್ಪತ್ತು ಲಕ್ಷಕ್ಕೂ ಮೀರಿ ಕಾರ್ಮಿಕರು ಒಂದು ತಿಂಗಳಿನವಧಿಯಲ್ಲಿ ದೇಶದ ನಾನಾ ಕಡೆ ಮುಷ್ಕರ ಹೂಡಿದರು. ರಾಜ್ಯಸರ್ಕಾರ ನಡುಗಿತು. ಸಂಘಟಿತ ಜನತಾಶಕ್ತಿ ಪ್ರಕಟವಾಗಿ ಕೋಟಿ ಹೃದಯಗಳಲ್ಲಿ ಧೈರ್ಯ ತುಂಬಿತು. ಇದೇ ಕಾಲಕ್ಕೆ ರೈತವರ್ಗ ಅನೇಕ ಕಡೆಗಳಲ್ಲಿ ದೊಡ್ಡ ಭೂಮಾಲೀಕರ ವಿರುದ್ಧ ಎದ್ದು ನಿಂತಿತು. ಸುಮಾರು ಆರುನೂರು ಘರ್ಷಣೆಗಳು ಸಂಭವಿಸಿದವು. ಲೆನಿನ್ ಈ ಜನತಾ ಚಳುವಳಿಯ ಬಗ್ಗೆ ಬರೆಯುತ್ತಾ “ಹೀಗೆ ಒಂದು ಅಗಾಧ ದೇಶ, ಹದಿಮೂರು ಕೋಟಿ ಜನಬಾಹುಳ್ಯದ ನಾಡು, ಕ್ರಾಂತಿಪಥವನ್ನು ಹಿಡಿಯಿತು. ಜಡನಿದ್ರೆಯಲ್ಲಿದ್ದ ರಷ್ಯ, ಕ್ರಾಂತಿಪ್ರೇರಿತ ಕಾರ್ಮಿಕವರ್ಗದ, ಕ್ರಾಂತಿಕಾರ ಮಹಾಜನತೆಯ ಎಚ್ಚೆತ್ತ ರಷ್ಯಾದೇಶ ಆಯಿತು” ಎಂದಿದ್ದಾನೆ.

ಈ ಚಳುವಳಿಗೆ ಸೈನ್ಯಪಡೆಯ ಅನೇಕ ಅಧಿಕಾರಿಗಳು ಬೆಂಬಲವಿತ್ತುದು ಸರ್ಕಾರದ ಬುಡವನ್ನು ಬಲವಾಗಿ ಅಲ್ಲಾಡಿಸಿದಂತಾಯಿತು. ನೌಕಾಪಡೆಯ ಒಂದು ಗುಂಪು ‘ಪೋಟೆಮ್‌ಕಿನ್’ ಎಂಬ ಯುದ್ಧನೌಕೆಯಲ್ಲಿ ದಂಗೆ ಎದ್ದು ಇತರರಿಗೂ ಕರೆಕೊಟ್ಟಿತು. ಸಬಾಸ್ಟಪೂಲಿನಲ್ಲಿ ಕಪ್ಪು ಸಮುದ್ರತೀರದ ಪಡೆ ಮತ್ತೊಂದು ಬಾರಿ ರಾಜಾಜ್ಞೆಗಳನ್ನು ಧಿಕ್ಕರಿಸಿ ನಿಂತಿತು. ಎಲ್ಲರಲ್ಲೂ ಒಂದೇ ಘೋಷಣೆ ಪ್ರತಿಧ್ವನಿತವಾಗುತ್ತಿತ್ತು. ‘ವರ್ಗನಿರಾಕರಣೆ, ಸಮಾನ ಗೌರವ ಆರ್ಥಿಕ ಸಮಾನತೆ.’

ದಂಗೆಗಳೇನೋ ವ್ಯಾಪಕವಾಗಿ ರಾಜ್ಯಸರ್ಕಾರದ ಮೇಲೆ ಧಾಳಿಮಾಡಿದರೂ ವ್ಯವಸ್ಥಿತ ಸಂಘಟನೆ ಇನ್ನೂ ಸಾಧ್ಯವಾಗಿರಲಿಲ್ಲ. ಸಶಸ್ತ್ರ ಅಧಿಕಾರಶಾಹಿ ದಬ್ಬಾಳಿಕೆಯಿಂದ ಈ ಮೊದಲ ಸಮರವನ್ನು ಹತ್ತಿಕ್ಕಿತು. ಹೊರದೇಶಗಳಿಂದಲೇ

ಈ ಸಮರ ಸಂಚಾಲನೆಯನ್ನು ಲೆನಿನ್ ಕೈಕೊಂಡಿದ್ದ. ನಾಯಕರು ಮತ್ತೊಮ್ಮೆ ನಿರಾಶರಾಗಿ ಅಜ್ಞಾತವಾಸಕ್ಕೆ ಹಿಂತಿರುಗಬೇಕಾಯಿತು. ಕೆಲವು ತಾತ್ಕಾಲಿಕ ರಾಜಕೀಯ ಸುಧಾರಣೆಗಳನ್ನು ಘೋಷಿಸಿ ಜಾರ್ ದೊರೆಯ ಬೆಂಬಲಿಗರು ಜನತೆಯ ಕ್ರಿಯಾತ್ಮಕ ಸಂಘಟನೆಯನ್ನು ಮುರಿದುಬಿಟ್ಟರು. 1905 ರ ಪ್ರಥಮ ವಿಪ್ಲವ ವಿಫಲವಾಯಿತು.

೯

ಈ ಕಾಲಕ್ಕೆ ಲೆನಿನ್ ಅನೇಕ ಗುಪ್ತಮಾರ್ಗಗಳಲ್ಲಿ ಕೆಲಸಮಾಡುತ್ತಾ ರಷ್ಯಾದ ಜನತೆಯೊಡನೆ ಅತಿನಿಕಟವಾಗಿ ಬೆರೆತು ಸ್ವಾತಂತ್ರ್ಯ ಸಮತೆಗಳ ಬೀಜಮಂತ್ರವನ್ನು ಕೋಟ್ಯಾಂತರ ಯುವಕ ಹೃದಯಗಳಲ್ಲಿ ಚಿರಸ್ಥಾಯಿಯಾಗಿ ಬೇರೂರಿಸಿದ. ಅಧಿಕಾರಶಾಹಿಯ ಕಣ್ಣು ತಪ್ಪಿಸಿ ಅಪಾಯದ ಎಲ್ಲೆಯಲ್ಲೇ ಸುಳಿದಾಡುತ್ತಾ ಜೀವದ ಹಂಗುತೊರೆದು ಕೆಲಸಮಾಡಿದ. ಈ ಮಹತ್ತರ ಕೋಲಾಹಲವೆದ್ದ ಸಮಯದಲ್ಲೇ ಕಾರ್ಮಿಕವರ್ಗದ ಪ್ರತಿನಿಧಿಗಳಿಂದ ಕೂಡಿದ 'ಸೋವಿಯಟ್' ಗಳು ರಷ್ಯದಲ್ಲಿ ಉದಯಿಸಿದುವು. ಜಗತ್ತಿನ ಇತಿಹಾಸದಲ್ಲಿ ಸಾಮಾನ್ಯ ಜನ ತಮ್ಮದೇ ಆದ ರಾಜಕೀಯ ಕ್ರಿಯಾತ್ಮಕ ಘಟಕಗಳನ್ನು ರೂಪಿಸಿಕೊಂಡುದು ರಷ್ಯದ ಈ ಸೋವಿಯಟ್‌ಗಳಲ್ಲಿ. ಪ್ರಾಚೀನಕಾಲದ ಭಾರತದಲ್ಲಿ ಗ್ರಾಮಸಮಾಜ ಬಹುಮಟ್ಟಿಗೆ ಸರ್ವತಂತ್ರ ಸ್ವತಂತ್ರವಾಗಿ ಜೀವನವನ್ನು ರೂಪಿಸಿಕೊಳ್ಳುತ್ತಿದ್ದಂತೆ ಆಧುನಿಕ ಔದ್ಯೋಗಿಕ ರಾಷ್ಟ್ರವೊಂದರ ಈ ಸೋವಿಯಟ್‌ಗಳಲ್ಲಿ ಸ್ವಾತಂತ್ರ್ಯವನ್ನೂ ಅದಕ್ಕಿಂತ ಹೆಚ್ಚಾಗಿ ಸರ್ವಮಾನ್ಯ ಸಮತೆಯನ್ನೂ ಕಾಣಬಹುದಾಗಿತ್ತು. ಶ್ರಮಜೀವಿಗೆ ಆತ್ಮಗೌರವದ ಸ್ವಾಭಿಮಾನವನ್ನು ತಂದುಕೊಟ್ಟವು. ಮಾನವ ಕುಲದಲ್ಲಿ ಸಮಾನತೆಯ ಮೌಲ್ಯ ಸುಪ್ರತಿಷ್ಠಿತವಾಗಲು ಇದು ನಾಂದಿಯಾಯಿತು.

1905 ರಲ್ಲಿ ಲೆನಿನ್ ಸ್ವದೇಶಕ್ಕೆ ಹಿಂತಿರುಗಿ ಚಳುವಳಿಯ ನಾಯಕತ್ವ ವಹಿಸಿದ್ದ. ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಬಂದು ನೆಲೆಸಿದ್ದ. ಬಾಲ್ಶವಿಕ್ಕರ ಮುಖಪತ್ರ "ನವಜೀವನ" (ನೊವಯಾಜಿಸ್ನ್) ಎಂಬ ಪತ್ರಿಕೆಯನ್ನು ನಿರ್ವಹಿಸುತ್ತಿದ್ದ. 1906 ರಲ್ಲಿ ಕ್ರಾಂತಿಯ ಬಹಿರ್ಮುಖ ಘಟನೆಗಳು ಪ್ರಬಲವಾಗಿ ದಮನ ಮಾಡಲ್ಪಟ್ಟವು. ಮೇಲೆ ಖತಿಗೊಂಡರೂ ಜನತೆಯ

ಅಂತರ್ಯದಲ್ಲಿ ದುರ್ದಮ್ಯ ನಿರ್ಧಾರ ಅಜೇಯವಾಗಿ ನಿಂತುಬಿಟ್ಟಿತು. ಮತ್ತೊಮ್ಮೆ ಸುಸಂಘಟಿತ ಸಮರ ಅನಿವಾರ್ಯವಾಗಿ ಸಂಭವಿಸುವುದು ಖಚಿತವೆನಿಸಿತ್ತು. ಭಿನ್ನಾಭಿಪ್ರಾಯಗಳ ಒಡಕು ನಾಯಕತ್ವವನ್ನೇ ನಾಶ ಮಾಡದಂತೆ ಎಚ್ಚರಿಕೆ ವಹಿಸಲು ಲೆನಿನ್ ಕಾತರನಾದ. ಐಕ್ಯತೆಯು ಪ್ರಧಾನ ಗುರಿಯನ್ನಿಟ್ಟುಕೊಂಡೇ ಕ್ರಾಂತಿಕಾರೀ ಪಕ್ಷಗಳ ಮಹಾ ಸಭೆಯನ್ನೇರ್ಪಡಿಸಲು ಉದ್ಯುಕ್ತನಾದ.

ಸ್ಟಾಕ್‌ಹೋಮಿನಲ್ಲಿ ನಡೆದ ಕ್ರಾಂತಿಕಾರೀ ಸಮಾಜವಾದಿಗಳ ಸಭೆಯಲ್ಲಿ ಭಿನ್ನತೆಗಳು ತೀವ್ರವಾದವು. ವ್ಯವಸಾಯ ಕ್ಷೇತ್ರದಲ್ಲಿ ಸಂಪೂರ್ಣ ಭೂರಾಷ್ಟ್ರೀಕರಣವಾದರೆ ಮಾತ್ರ ರೈತವರ್ಗ ಸುಸಂಘಟಿತ ಸಮಾಜವಾದಿಗಳಾಗುವುವೆಂದು ಲೆನಿನ್ ವಾದಿಸಿದ. ಬಾಲ್ಷವಿಕ್ ಪಕ್ಷದ ಈ ವಾದಸರಣಿಗೆ ಅಖಂಡ ಬೆಂಬಲ ಸಿಕ್ಕಿತು. ಪ್ರಾಮಾಣಿಕತೆಯೇ ಮೂರ್ತಿವೆತ್ತು ಸಂತತ ಪ್ರವಾಹದಂತೆ ಹರಿದು ಬರುತ್ತಿದ್ದ ಲೆನಿನ್‌ನ ನಾಯಕತ್ವ ಅಪ್ರತಿಹತವಾಯಿತು. ವಿರೋಧ ತಂಡ ಬಹುಮಟ್ಟಿಗೆ ಕರಗಿಹೋಯಿತು.

1907 ರಲ್ಲಿ ರಷ್ಯದ ಭಾಗವಾಗಿದ್ದ ಫಿನ್ಲೆಂಡಿನಲ್ಲಿ ಲೆನಿನ್ ವಾಸಿಸತೊಡಗಿದ. ಈ ಸಮಯಕ್ಕೆ ಜಾರ್ ಸರ್ಕಾರ ಕ್ರಾಂತಿಚಳುವಳಿಯನ್ನು ತೊಡೆದುಹಾಕಲು ತೀವ್ರಕ್ರಮ ಕೈಗೊಳ್ಳುತ್ತಿತ್ತು. ಪೋಲೀಸರ ಕೈವಾಡದಿಂದ ತಪ್ಪಿಸಿಕೊಂಡು ಕೆಲಸಮಾಡುವುದು ಲೆನಿನ್‌ಗೆ ಕಷ್ಟವಾಯಿತು. ಫಿನ್‌ಲೆಂಡಿನಿಂದ ತಪ್ಪಿಸಿಕೊಂಡು ಹೋಗಲು ಅರ್ಧರಾತ್ರಿಯ ಕತ್ತಲಲ್ಲಿ ಮಂಜುಗೆಡ್ಡೆಯ ಅಪಾಯಮಾರ್ಗವೊಂದರಲ್ಲಿ ಗಡಿದಾಟಿ ಯೂರೋಪಿಗೆ ಪ್ರಯಾಣ ಮಾಡಬೇಕಾಯಿತು. ದಾರಿಯಲ್ಲಿ ಮಂಜುಗೆಡ್ಡೆಯೊಂದು ಒಡೆದು ಅಪಘಾತಕ್ಕೀಡಾದನು. ದೈವವಶಾತ್ ಬದುಕಿ ಪಾರಾದ ಲೆನಿನ್ ಆ ಘಟನೆಯನ್ನು ಸ್ಮರಿಸಿಕೊಂಡು "ಆ ಸಮಯದಲ್ಲಿ ನನಗೆ 'ಇದೆಂತಹ ಮುಟ್ಠಾಳತನದ ಸಾವು' ಎಂಬ ಭಾವನೆ ಬಂತು" ಎಂದಿದ್ದಾನೆ. ಅಲ್ಲಿಂದ ಮುಂದೆ ಜಿನೀವಾಕ್ಕೆ ಹೋಗಿ ನೆಲೆಸಿದ. ಎರಡು ವರ್ಷಗಳವರೆಗೆ ಉತ್ಕಟ ಆವೇಶದಿಂದ ಜನತಾ ಸಮೂಹದೊಡನೆ ಎಡೆಬಿಡದೆ ಕೆಲಸಮಾಡಿದ, ಆಂದೋಲನ ವಿಫಲಗೊಂಡರೂ ಜನಶಕ್ತಿಯು ಅಪರಿಮಿತ ಬಲವನ್ನು ಕಂಡುಕೊಂಡ. ಮತ್ತೆ ಹತ್ತು ವರ್ಷಗಳು ಲೆನಿನ್ ಕಠಿಣ ವ್ರತಧಾರಿಯಂತೆ ಕ್ರಾಂತಿಸಂಘಟನೆಯ ಕಾರ್ಯದಲ್ಲಿ ತೊಡಗಿದ.

೧೦

ಕ್ರಾಂತಿ ವಿಫಲತೆಯ ಕಪ್ಪುಛಾಯೆ ಪ್ರತಿಗಾಮೀ ಶಕ್ತಿಗಳಿಗೆ ಆಶ್ರಯವಾಗುವುದು ಸ್ವಾಭಾವಿಕ. ನಾಯಕವರ್ಗದಲ್ಲಿ ಅನೇಕರು ಸತತ ತತ್ವನಿಷ್ಠೆಯ ಕಠಿಣ ವ್ರತತೊಟ್ಟು ನ್ಯೂನತೆಗಳನ್ನು ನಿವಾರಿಸಿಕೊಳ್ಳಲು ಅಸಮರ್ಥರಾದರು. ಕೆಲವರು ಅಡ್ಡದಾರಿ ಹಿಡಿದು ಕರ್ಮಭ್ರಷ್ಟರಾದರು. ಜನತೆಯಲ್ಲಿ ಆದರ್ಶಪ್ರಿಯತೆಯನ್ನೂ ಧೈರ್ಯವನ್ನೂ ತುಂಬುವ ಕೆಲಸ ಕಠಿಣವಾಯಿತು. ಲೆನಿನ್ ಮತ್ತು ಕೃಪ್ಸ್‌ಕಯಾ ತಮ್ಮ ಕೆಲವು ಸಂಗಡಿಗರೊಡನೆ ದೇಶಭ್ರಷ್ಟರಾಗಿ ಗಡಿಯಾಚೆಯಿಂದಲೇ ಈ ಕೆಲಸವನ್ನು ಕೈಗೊಳ್ಳಬೇಕಾಯಿತು. ಜಿನಿವಾದಿಂದ "ಕರ್ಮಜೀವಿ" (ಪ್ರಾಲಿಟರಿ) ಎಂಬ ಪತ್ರಿಕೆಯನ್ನು ಹೊರಡಿಸಿದ. ಸಾವಿರಾರು ಪ್ರತಿಗಳನ್ನು ರಷ್ಯದ ಸಾಮಾನ್ಯ ಕೂಲಿಗಾರರ ನಾಯಕರಿಗೆ, ವಿದ್ಯಾವಂತ ಯುವಕರಿಗೆ ರವಾನಿಸುತ್ತಿದ್ದ. ಉದ್ಯೋಗಗಳನ್ನು ಮೊಡುವಾಗ ವ್ಯಥಾಘರ್ಷಣೆಗಳಿಗೆ ಕೈಹಾಕದೆ ಜನಮನದಲ್ಲಿ ಸಾಮ್ಯವಾದ ತತ್ವದ ಪ್ರಚಾರ ಕೈಗೊಳ್ಳಲು ರಚನಾತ್ಮಕ ಸಲಹೆಕೊಡುತ್ತಾ ಅವರ ಹೃದಯಗಳನ್ನೊಲಿಸಿಕೊಂಡ. ಪ್ರಾಮಾಣಿಕ ತತ್ವನಿಷ್ಠ ಉತ್ಸಾಹೀ ಯುವಕರು ಅಗಾಧ ಪ್ರಮಾಣದಲ್ಲಿ ಲೆನಿನ್ನನ ಅನುಯಾಯಿಗಳಾದರು. ಸ್ನೇಹಮಯ ಸ್ಪರ್ಶದಿಂದ, ಉತ್ಕಟ ದೇಶಪ್ರೇಮದಿಂದ, ಕರುಣಾರ್ದ್ರ ಸಹಾನುಭೂತಿಯಿಂದ ಲೆನಿನ್ ಸೃಷ್ಟಿಸಿದ ನಿಕಟ ಬಾಂಧವ್ಯ ಸಹಸ್ರಾರು ಮೇಧಾವಿಗಳ ಜೀವನ ದೃಷ್ಟಿಯನ್ನೇ ಬದಲಾಯಿಸಿತು. 'ಸಮತಾ ಸಮಾಜ' 'ಸಾಮ್ಯವಾದ' ಇವು ಆದರ್ಶಗಳಾದವು. ರಾಜಕೀಯ ತಂತ್ರ, ಕ್ರಾಂತಿಯುತ ಬಂಡಾಯ, ಅಧಿಕಾರ ಸ್ಥಾಪನೆ ಈ ಮಾರ್ಗಗಳು ಅಸಂಖ್ಯಾತ ಕೂಲಿಗಾರರ ಮನೋರಾಜ್ಯದಲ್ಲಿ ಸುಪ್ರತಿಷ್ಠಿತವಾದವು.

ಅಖಿಲ ರಷ್ಯದ ರಾಜಕೀಯ ಸಮ್ಮೇಳನವನ್ನು ಪ್ಯಾರಿಸ್ಸಿನಲ್ಲಿ ವ್ಯವಸ್ಥೆ ಮಾಡಿದರು. ಆ ವೇಳೆಗೆ ಲೆನಿನ್ ಮತ್ತು ಕೃಪ್ಸ್‌ಕಯಾ ಪ್ಯಾರಿಸ್ಸಿಗೆ ಬಂದು ವಾಸಿಸತೊಡಗಿದ್ದರು. ಅತಿ ಸಾಮಾನ್ಯರಾಗಿ ಸರಳ ಬಾಳನ್ನು ಅಂಗೀಕರಿಸಿದ್ದ ಈ ದಂಪತಿಗಳು ನೂರಾರು ಸಂಗಡಿಗರಿಗೆ ಆಶ್ರಯದಾತರಾದರು. ದಿನವೂ ಹಲವು ಮೈಲಿ ಬೈಸಿಕಲ್ಲಿನ ಮೇಲೆ ತಿರುಗುತ್ತಿದ್ದ ಲೆನಿನ್. ತಾತ್ವಿಕ ಗ್ರಂಥಗಳ ಅಧ್ಯಯನ, ಕೂಲಿಕಾರ ಸಂಘಗಳ ಸಂಪರ್ಕ, ಫ್ರೆಂಚ್ ಬುದ್ಧಿ ಜೀವಿಗಳೊಡನೆ ಜಿಜ್ಞಾಸೆ, ಅಲ್ಲಲ್ಲಿ ಉಪನ್ಯಾಸಗಳು, ಪತ್ರಿಕೆಯ ಪ್ರಕಟನೆ ಹೀಗೆ ಅವನ ದಿನಚರಿ

ತುಂಬಿಹೋಗಿತ್ತು. ತತ್ವಭ್ರಷ್ಟರನ್ನು ನಿರಾಕರಿಸಿ ಏಕನಿಷ್ಠೆಯಿಂದ ಸಾಮ್ಯವಾದ ಸಿದ್ಧಾಂತವನ್ನಂಗೀಕರಿಸುವವರ ತಂಡ ಸೃಷ್ಟಿಯಾಯಿತು. ಈ ಅನುಯಾಯಿಗಳು ಎಲ್ಲ ತ್ಯಾಗ ಬಲಿದಾನಗಳಿಗೂ ಸಿದ್ಧರಾದರು.

ವಿರೋಧಾಭಿಪ್ರಾಯಗಳನ್ನೆದುರಿಸಲು ಲೆನಿನ್ 1909 ರಲ್ಲಿ ತನ್ನ ಪ್ರಸಿದ್ಧ ಗ್ರಂಥ "ವಸ್ತುವಾದದ ವಿಮರ್ಶೆ" (ಮೆಟೀರಿಯಲಿಸಂ ಅಂಡ್ ಎಂಪಿರಿಯೋ ಕ್ರಿಟಿಸಿಸಮ್) ಬರೆದು ಪ್ರಕಟಿಸಿದ. ಸಾಮ್ಯವಾದೀ ಪಕ್ಷದ ದಳಗಳಿಗೆ ಸಿದ್ಧಾಂತ ಶಿಕ್ಷಣ ಕೊಡಲು ಈ ಗ್ರಂಥ ಬಹಳ ಸಹಾಯಕವಾಯಿತು. ಮೊದಲ ಜನತಾ ಕ್ರಾಂತಿಯಲ್ಲಿ ನಿಕಟಾನುವರ್ತಿಗಳಾದ ಅನೇಕ ಮಿತ್ರರು ಅಧಿಕಾರ ವರ್ಗದೊಡನೆ ಬಂಡವಾಳಶಾಹಿ ವರ್ಗದೊಡನೆ ಮಿಳಿತವಾಗುವ ಶಿಥಿಲತೆಗೆ ಬಲಿಯಾಗುತ್ತಿದ್ದರು. ಲೆನಿನ್‌ನನ್ನು ವಿರೋಧಿಸಿದ ನಾಯಕರಲ್ಲಿ ಪ್ರಸಿದ್ಧ ನಾದವನು ಟ್ರಾಟ್ಸ್‌ಕಿ. ಅತ್ಯಂತ ಚಾಣಾಕ್ಷ: ಮೇಧಾವಿ. ವಾಗ್ಮಿ. ಪಾದರಸ ಸದೃಶ ಬುದ್ಧಿಶಕ್ತಿ ಅವನದು. ಮುಂದೆ ರಷ್ಯದ ಮಹಾಕ್ರಾಂತಿಯಲ್ಲಿ ಟ್ರಾಟ್ಸ್ಕಿ ಅದ್ಭುತ ಪಾತ್ರವಹಿಸಿ ಲೆನಿನ್ನನ ಬೆಂಬಲಿಗನಾದ. ಮುಂದೆ ದೇಶದ್ರೋಹಿಯೆಂದು ಅವಮಾನಿತನಾಗಿ ದೇಶಭ್ರಷ್ಟನಾದ. ಸೋವಿಯಟ್ ರಷ್ಯದಿಂದ ಹೊರದೂಡಲ್ಪಟ್ಟು ತಲೆಮರಸಿಕೊಂಡು ಅಲೆಯುತ್ತಾ ಮೆಕ್ಸಿಕೋ ರಾಷ್ಟ್ರದಲ್ಲಿ ವಿರೋಧೀ ಸಾಮ್ಯವಾದಿಯೊಬ್ಬನ ಗುಂಡಿಗೆ ಬಲಿಯಾದ. ಟ್ರಾಟ್ಸ್ಕಿಯ ದುರಂತ ಕತೆ ಲೆನಿನ್ ನಂತರದ ರಷ್ಯದೇಶದ ಇತಿಹಾಸದಲ್ಲಿ ಒಂದು ಕರಾಳ ಅಧ್ಯಾಯ.

ವಸ್ತುವಾದದ ಬಗ್ಗೆ ಲೆನಿನ್ ಬರೆದ ಗ್ರಂಥ ಸಾಮ್ಯವಾದ ವಿಚಾರ ಪಂಥದಲ್ಲಿ ಒಂದು ಮೈಲಿಗಲ್ಲು. ಇಪ್ಪತ್ತನೆಯ ಶತಮಾನದ ಪ್ರಾರಂಭದ ದಿನಗಳು ಅವು. ವಿಜ್ಞಾನ ಮಾನವನ ಮನೋಕ್ಷಿತಿಜವನ್ನು ಅಗಾಧವಾಗಿ ವಿಸ್ತರಿಸುತ್ತಿತ್ತು. ಅಭೇದ್ಯ ಅತಿಮಾನುಷ ಪೂರ್ವಕಲ್ಪನೆಗಳನ್ನೆಲ್ಲ ತಾರ್ಕಿಕ ತತ್ವಜ್ಞಾನದ ನಿಷ್ಠುರ ವಿಶ್ಲೇಷಣೆ ಒಡೆದು ಚೆಲ್ಲುತ್ತಿದ್ದ ಕಾಲ. ಮಾನವ ಸಮಾಜ ವಸ್ತುಲೋಕದ ಅಗಾಧ ಜ್ಞಾನ ಪ್ರವಾಹವನ್ನು ಸಾಮಾಜಿಕ ಆರ್ಥಿಕ ಪುನರ್ರಚನೆಯ ಮೂಲಶಕ್ತಿಯನ್ನಾಗಿ ಮಾಡಿಕೊಳ್ಳುತ್ತಿತ್ತು. ಮಾನವೀಯ ಸಂಬಂಧಗಳು ಮೂಢನಂಬಿಕೆಗಳ ಮೇಲಾಗಲೀ ಅಂಧಶ್ರದ್ಧೆಗಳ ಮೇಲಾಗಲೀ ಆಧಾರಿತವಾಗಿ ವ್ಯವಹರಿಸುವುದು ಅಸಾಧ್ಯವಾಯಿತು. ಪಾಶ್ಚಾತ್ಯ

ನಾಗರಿಕ ಸಮಾಜದಲ್ಲಿ ಆಗಲೇ ಶಿಥಿಲವಾಗಿದ್ದ ಮತಧರ್ಮಗಳ ಅಡಿಗಲ್ಲು ಕುಸಿದು ಆರ್ಥಿಕ ಸಾಮಾಜಿಕ ಮೌಲ್ಯಗಳು ವಸ್ತುನಿಷ್ಠ ವಿಜ್ಞಾನದ ಮೇಲೆ ಪುನರ್ರೂಪಿತವಾಗುತ್ತಿದ್ದವು. ವಿಶ್ವದ ಆರ್ಥಿಕ ರಚನೆಯೇ ವಿಜ್ಞಾನಪ್ರೇರಿತ ಔದ್ಯೋಗಿಕ ಕ್ರಾಂತಿಯಿಂದ ಸಂಪೂರ್ಣವಾಗಿ ಬದಲಿಸುತ್ತಿತ್ತು. ಸಾಹಸದಿಂದ ಮುನ್ನುಗ್ಗಿ ನಡೆದ ಪಾಶ್ಚಾತ್ಯ ಸಮಾಜಗಳು ಈ ಪರಿವರ್ತನೆಯ ಸೂತ್ರ ಧಾರಿಗಳಾದವು. ವಿಜ್ಞಾನದ ಮಹಾಶಕ್ತಿ ಆರ್ಥಿಕ ರಾಜಕೀಯ ನೂತನ ಸಂಘಟನೆಗಳಿಗೆ ಅಡಿಯಾಳಾಯಿತು. ಪ್ರಪಂಚದ ನೈಸರ್ಗಿಕ ಸಂಪನ್ಮೂಲ ಗಳಿಂದ ಹೇರಳ ಪ್ರಮಾಣದಲ್ಲಿ ಸೃಷ್ಟಿಯಾಗತೊಡಗಿದ ಆರ್ಥಿಕ ಸಂಪತ್ತು ಕೇವಲ ಕೆಲವು ಯೂರೋಪು ರಾಷ್ಟ್ರಗಳ ಬಂಡವಾಳದ ಗುರುತ್ವಾಕರ್ಷಣೆಯ ಕಡೆಗೇ ಹರಿಯ ತೊಡಗಿತು. ಸಂಪತ್ ಸೃಷ್ಟಿಯ ಮೂಲಕಾರಣವಾದ ಮಾನವ ದುಡಿಮೆಯೊಡನೆ ವಿಜ್ಞಾನ ಮೇಳವಿಸಲಿಲ್ಲ. ವಿಜ್ಞಾನ ತಂದುಕೊಟ್ಟ ವರ ಪ್ರಸಾದಗಳೆಲ್ಲ ಅತಿಸ್ವಲ್ಪಸಂಖ್ಯೆಯವರ ಸುಖಸಮಾಜ ನಿರ್ಮಾಣಕ್ಕೆ ನೆರ ವಾಯಿತು. ಅತ್ಯಗಾಧ ಪ್ರಮಾಣದ ದುಡಿಮೆಯ ಲೋಕ ಅಧೋಗತಿಯ ಇಳಿಜಾರಿನಲ್ಲಿ ಜಾರತೊಡಗಿತು. ಈ ವಿರೋಧಾಭಾಸದ ಪರಿಣಾಮವಾಗಿ ವರ್ಗಘರ್ಷಣೆ ತೀವ್ರವಾಯಿತು. ಕರ್ಕಶಮಯ ವಿದ್ವೇಷ ಉಲ್ಬಣವಾಗಿ ಹರಿದು ಕ್ರಾಂತಿಯ ಬುನಾದಿಯಾಯಿತು. ಆರ್ಥಿಕ ಸಮಾನತೆ ಎಲ್ಲ ಜನ ಸಮೂಹಗಳ ಕಾಂಕ್ಷಿತ ಗುರಿಯಾಯಿತು.

ವೈಜ್ಞಾನಿಕ ವಿಶ್ಲೇಷಣೆಯನ್ನೇ ಮೂಲಾಧಾರವನ್ನಾಗಿ ಅಂಗೀಕರಿಸಿ ಲೆನಿನ್ ಮಾರ್ಕ್ಸ್ ಸಿದ್ಧಾಂತದ ವಸ್ತುನಿಷ್ಠ ತತ್ವಜ್ಞಾನವನ್ನು ತನ್ನ ಗ್ರಂಥದಲ್ಲಿ ವಿವೇಚನೆ ಮಾಡಿ ವಿವರಿಸಿದ. "ನಮ್ಮ ಅರಿವಿಗೂ ಅನುಭವಕ್ಕೂ ಮೀರಿ ಭೌತಿಕ ವಸ್ತುವಿಶ್ವ ನಿಂತಿದೆ; ವಸ್ತುವಿಗೂ ಚೇತನಕ್ಕೂ ವಾಸ್ತವವಾಗಿ ಯಾವ ಭೇದವೂ ಇಲ್ಲ ; ಇರಲೂಲಾರದು. ಯಾವುದೂ ಜ್ಞಾನಾತೀತವಲ್ಲ. ಈಗ ನಮ್ಮ ಅರಿವಿಗೆ ನಿಲುಕಿರುವ ವಸ್ತುವಿಶೇಷ ಮತ್ತು ಇನ್ನೂ ನಮ್ಮ ಅರಿವಿ ನೊಳಗೆ ಬರಬೇಕಾಗಿರುವ ಪ್ರಪಂಚ ಇಷ್ಟೇ ವ್ಯತ್ಯಾಸ ; ವಿಜ್ಞಾನ ಮುಂದು ವರಿದಂತೆ ತಾರ್ಕಿಕ ವೈಜ್ಞಾನಿಕತೆ ಬೆಳೆದಂತೆ ನಿಗೂಢ ವಿಶ್ವವೆಲ್ಲ ನಮ್ಮ ಜ್ಞಾನ ಭಂಡಾರದ ಎಲ್ಲೆಯೊಳಗೆ ಸೇರುತ್ತದೆ. ಅಜ್ಞಾನ ಕರಗುತ್ತಾ ಜ್ಞಾನ ವೃದ್ಧಿ ಯಾಗುತ್ತಾ ಹೋಗುವ ಪ್ರಕ್ರಿಯೆ ಮಾನವ ಇತಿಹಾಸದ ಪರಂಪರಾನುಗತ

ಬೌದ್ಧಿಕ ಭಂಡಾರವಾಗುತ್ತದೆ. ಅಪೂರ್ಣಜ್ಞಾನ ಪೂರ್ಣವಾಗುತ್ತಾ ಸಾಗಿದ ಹಾಗೆ ನಮ್ಮ ಮನೋಕ್ಷಿತಿಜ ಪರಿವರ್ತಿತವಾಗಬೇಕು. ಸಮಾಜ ಪರಿವರ್ತನೆ ತರ್ಕಬದ್ಧ ಭೌತವಾದದ ಆಧಾರದಮೇಲೆ ನಿಯಂತ್ರಿತವಾಗುವುದು ಅನಿವಾರ್ಯ. ಇದನ್ನು ಸಿದ್ಧಮಾಡಿಕೊಡುವುದು ವಿಜ್ಞಾನದ ಪ್ರಥಮಗುರಿ. ಮಿಕ್ಕೆಲ್ಲವೂ ಮಿಥ್ಯಾವಾದ" ಎಂದು ಲೆನಿನ್ ಒಂದು ನೂತನ ತತ್ವಸರಣಿಯನ್ನು ಪ್ರಭಾವ ಪೂರ್ಣವಾಗಿ ತನ್ನ "ವಸ್ತುವಾದದ ವಿಮರ್ಶೆ" ಯಲ್ಲಿ ಪ್ರತಿಪಾದಿಸಿದ.

ಐತಿಹಾಸಿಕ ಹಿನ್ನಲೆ, ಕಾಲಾನುಗುಣ ಮಹತ್ವಾಕಾಂಕ್ಷೆಗಳು, ಮಾನವ ಸಮಾಜದಲ್ಲಿದ್ದ ಅಸಹನೀಯ ವಿಷಮತೆ, ಪಾಶ್ಚಾತ್ಯ ವೈಜ್ಞಾನಿಕ ಪ್ರಗತಿ ಇವು ಗಳ ಸಮಗ್ರ ವಿಚಾರಮಂಥನದ ಪರಿಣಾಮವಾಗಿಯೇ ತಾರ್ಕಿಕ ವಸ್ತುವಾದ (ಡಯಲೆಕ್ಟಿಕಲ್ ಮೆಟೀರಿಯಲಿಸಂ) ಒಂದು ಮಹತ್ವದ ತತ್ವಜ್ಞಾನವಾಗಿ ನಿಂತಿತು. ಲೆನಿನ್ನನ ವಿಭೂತಿಶಕ್ತಿ ಅದಕ್ಕೊಂದು ಕ್ರಿಯಾತ್ಮಕ ಸಂಘಟನಾ ಚೈತನ್ಯ ವನ್ನೊದಗಿಸಲು ಸಮರ್ಥ ಸಾಧನವಾಯಿತು. 1905 ರ ವಿಫಲ ಕ್ರಾಂತಿ ಯಿಂದ ಮುಂದೆ ಹತ್ತುವರ್ಷಗಳು ಲೆನಿನ್ ಅಜ್ಞಾತವಾಸದಲ್ಲಿ ದೇಶಭ್ರಷ್ಟನಾಗಿ ಸಂಚರಿಸಿದ. ಅಪರಿಮಿತ ಧೈರ್ಯೋತ್ಸಾಹಗಳಿಂದ ಕ್ರಾಂತದರ್ಶಿಯ ಜ್ಞಾನಸಿದ್ಧಿ ಗಾಗಿ ಎಡಬಿಡದೆ ಅತ್ಯುಗ್ರ ತಪಸ್ಸನ್ನೆ ಆಚರಿಸಿದ. ಅವನ ಪತ್ನಿ ಕೃಪ್ಸ್ಕಯಾ ತನ್ನ 'ಜೀವನ ಸ್ಮೃತಿ'ಗಳಲ್ಲಿ ಈ ಮಹತ್ವಪೂರ್ಣ ದಿನಗಳನ್ನು ಹೃದಯಂಗಮ ವಾಗಿ ವರ್ಣಿಸಿದ್ದಾಳೆ.

1910 ರಲ್ಲಿ ಲೆನಿನ್ ತನ್ನ ತಾಯಿಯನ್ನು ನೋಡಲು ಸ್ಟಾಕ್‌ಹೋಮ್‌ಗೆ ಬಂದ. ತಾಯಿ ಮಗನ ಸಮಾಗಮವಾಗಿ ಮೂರು ವರ್ಷಗಳಾಗಿತ್ತು. ರಷ್ಯದಲ್ಲಿ ಕಾಲಿಡಲು ಲೆನಿನ್‌ಗೆ ಸಾಧ್ಯವಿರಲಿಲ್ಲವಾಗಿ ಪರದೇಶದಲ್ಲಿ ಅವರ ಭೇಟಿಯಾಗಬೇಕಾಯಿತು. ಈ ಸಿಡಿಲಿನ ಮನುಷ್ಯ ಅತ್ಯಂತ ಮಾರ್ದವ ಮಮತೆ ಯನ್ನಾಸ್ವಾದಿಸುವ ಹಸುಗೂಸಿನಂತೆ ತಾಯಿಯನ್ನಾಲಂಗಿಸಿದ. ಅದೊಂದು ಹೃದಯಸ್ಪರ್ಶಿ ನಿಮಿಷ" ಎಂದಿದ್ದಾಳೆ ಕೃಪ್ಸ್ಕಯಾ. "ಹಡಗಿನಲ್ಲಿ ಹೊರಟ ತಾಯಿಯನ್ನು ಬೀಳ್ಕೊಡುವಾಗ ಹನಿಗಣ್ಣಿನಿಂದ ಆಕೆ ಕಣ್ಮರೆಯಾಗುವವರೆಗೂ ದಿಟ್ಟಿಸುತ್ತ ನಿಂತ ಲೆನಿನ್. ಬಹುಶಃ ಆ ಕೊನೆಯ ಭೇಟಿಯ ಭವಿಷ್ಯವಾಗಿ ಅವನ ಅಂತರ್ಯದಲ್ಲಿ ಸ್ಪಂದಿತವಾಗಿದ್ದಿರಬಹುದು. ಏಳು ವರ್ಷಗಳ ನಂತರ ಸ್ವದೇಶಕ್ಕೆ ಹಿಂತಿರುಗಿದಾಗ ಮೇರಿಯಾ ಅಲೆಕ್ಸಾಂಡ್ರೊವ್ನ ತೀರಿಕೊಂಡಿದ್ದಳು."

೧೧

ಲಿಯೋ ಟಾಲ್‌ಸ್ಟಾಯ್ 1910 ರಲ್ಲಿ ಮರಣ ಹೊಂದಿದನು. ಸಾಮ್ಯ ವಾದೀ ಕ್ರಾಂತಿನಾಯಕರಂತೆ ರಾಜಕೀಯ ಬಂಡಾಯಗಳಿಗೆ ಕಾರಣನಾಗದಿದ್ದರೂ ಟಾಲ್‌ಸ್ಟಾಯ್ ತನ್ನ ಅಸಾಧಾರಣ ತತ್ವಬೋಧೆಯಿಂದ ದುಡಿಮೆಯ ಜೀವನದ ಶ್ರೇಷ್ಠತೆಯನ್ನೂ ಸಾರ್ಥಕತೆಯನ್ನೂ ಯುವಜನರಲ್ಲಿ ಬೇರೂರುವಂತೆ ತನ್ನ ಬರವಣಿಗೆಗಳಿಂದ ಪ್ರಚಾರ ಮಾಡಿದ್ದನು. ಸಮಾಜನ್ಯಾಯಕ್ಕಾಗಿ ಹೋರಾಟ ಪ್ರಾರಂಭವಾಗಿತ್ತು. ವಿದ್ಯಾರ್ಥಿಗಳೂ ವಿದ್ಯಾವಂತ ಯುವಕರೂ ದೀನದಲಿತರ ಬಗ್ಗೆ ವಿಚಾರಮಾಡುವಂತಾಗಿತ್ತು. ಹೊಸ ಆದರ್ಶಗಳು ಒಡಮೂಡಿದ್ದುವು; ರಷ್ಯಾದೇಶದಲ್ಲೆಲ್ಲಾ ಪ್ರಚಂಡವಾಗಿ ಹಬ್ಬುತ್ತಿದ್ದ ಕ್ರಾಂತಿಕಿಡಿಗೆ ಅಧ್ಯಾತ್ಮಿಕ ಮೌಲ್ಯಗಳನ್ನೂ ಧಾರ್ಮಿಕ ಸಂಯಮವನ್ನೂ ವೈಯಕ್ತಿಕ ಪಾರಿಶುದ್ಧತೆಯನ್ನೂ ತುಂಬಿಕೊಡಲು ಟಾಲ್‌ಸ್ಟಾಯ್ ಆಗಾಧ ಪ್ರಯತ್ನ ಮಾಡಿದ್ದನು. ಬಂಡವಾಳ ವರ್ಗದ ಮೌಢ್ಯ ಮೂರ್ಖತನ ಹಾಗೂ ಕೂಲಿಗಾರ ವರ್ಗದ ಆವೇಶ ಆತುರಗಳಿಂದ ಕ್ರಾಂತಿಪಥದಲ್ಲಿ ಟಾಲ್‌ಸ್ಟಾಯ್ ಮಹರ್ಷಿಯ ವಿವೇಕವಾಣಿ ಹಿಂದೆಬಿತ್ತು. ಆದರೂ ಆತನ ಮರಣವಾರ್ತೆಯಿಂದ ದುಃಖಿತರಾದ ಜನ ಪ್ರಚಂಡ ಮೆರವಣಿಗೆಗಳನ್ನು ನಡೆಸಿದರು. ಅಂದಿನ ಸರ್ಕಾರದ ಪ್ರತಿಬಂಧಕ ಗಳನ್ನು ತಿರಸ್ಕರಿಸಿ ಮುನ್ನುಗ್ಗಿದರು. ಹಬ್ಬುತ್ತಿದ್ದ ಸ್ವಾತಂತ್ರ್ಯ ಸಮರ, ಸಮಾನತೆಯ ಉದ್ಘೋಶ ಅಲ್ಲಿಂದ ಮುಂದೆ ಪ್ರಜ್ವಲಿಸಿ ಭೋರ್ಗರೆಯಿತು.

ಅಜ್ಞಾತದಲ್ಲೇ ಇದ್ದು ಸಮರನಿರ್ದೇಶನವನ್ನು ಕೈಗೊಂಡಿದ್ದ ಲೆನಿನ್ 1910 ರಿಂದ 1914 ರ ಮಹಾಯುದ್ಧದವರೆಗೆ ತನ್ನ ಸಂಗಡಿಗರ, ಅನುಯಾಯಿ ಗಳ ಕಾರ್ಮಿಕಜನತೆಯ ಮನಸ್ಸನ್ನು ಸತತವಾಗಿ ಉಜ್ವಲಗೊಳಿಸುತ್ತಾ ಪ್ರತಿಗಾಮೀ ಶಕ್ತಿಗಳನ್ನು ಅತ್ಯಂತ ಕಷ್ಟದಿಂದ ಎದುರಿಸಬೇಕಾಯಿತು. ಮಾಲ ಟೋವ್, ಸ್ಟಾಲಿನ್, ಟ್ರಾಟ್ಸ್ಕಿ ಮುಂತಾದ ಪ್ರಖ್ಯಾತ ಸಾಮ್ಯವಾದೀ ಯೋಧರು ಲೆನಿನ್‌ನ ನಿಕಟ ಅನುಯಾಯಿಗಳಾಗಿ ಕೆಲಸಮಾಡುತ್ತಿದ್ದರು. ರಷ್ಯ ದೇಶದಲ್ಲಿ ವ್ಯಾಪಕವಾಗಿ ಹರಡುತ್ತಿದ್ದ ವಿಚಾರ ಪರಿವರ್ತನೆಯನ್ನು ಸಾಮ್ಯ ವಾದೀ ಕ್ರಾಂತಿಯ ಕಡೆ ತಿರುಗಿಸಲು ಈ ಯುವಕ ಮೇಧಾವಿಗಳು ಅವಿಶ್ರಾಂತ ವಾಗಿ ಶ್ರಮಿಸಿದರು. ಪ್ರಖ್ಯಾತವಾಗಿರುವ 'ಪ್ರಾವ್ದಾ' (ಸತ್ಯ) ಪತ್ರಿಕೆ 1912 ರಲ್ಲಿ ಪ್ರಾರಂಭವಾಯಿತು. ಕೆಲವೇ ತಿಂಗಳುಗಳಲ್ಲಿ ಕ್ರಾಂತಿನಾಯಕತ್ವದ

ಈ ಅಧಿಕೃತ ಮುಖವಾಣಿ "ಪ್ರಾವ್ಡಾ" ಜನಮನವನ್ನು ಸೂರೆಗೊಂಡಿತು. ಲೆನಿನ್ ಎಡಬಿಡದೆ ಈ ಪತ್ರಿಕೆಗೆ ಬರೆಯತೊಡಗಿದ. ಸಾಮಾಜಿಕ ದಾಸ್ಯದ ಸರಪಣಿಗಳನ್ನು ಕಿತ್ತೊಗೆದು ಜಗತ್ತಿನ ಸ್ವಾಮ್ಯ ಬಹುಸಂಖ್ಯಾತ ದುಡಿಮೆಯ ವರ್ಗದ ಕೈ ಸೇರಲು ಪ್ರಥಮಕ್ರಾಂತಿ ಅನುವಾಗತೊಡಗಿತು. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಆಸ್ಟ್ರಿಯ, ಮುಂತಾದ ಮುಂದುವರೆದ ದೇಶಗಳಲ್ಲೆಲ್ಲಾ ಸ್ಪಷ್ಟವಾಗಿ ವರ್ಗಘರ್ಷಣೆಗಳಾರಂಭವಾದವು. ಅದಮನೀಯ ಶಕ್ತಿಯೊಂದು ಸಾಮಾಜಿಕ ಸಮತೆಯೆಡೆಗೆ ಭಯಂಕರ ಆವೇಶದಿಂದ ನುಗ್ಗಿ ಸಾಗುವ ಸೂಚನೆಗಳು ಕಂಡುಬಂದವು.

ಮೊದಲನೆಯ ಮಹಾಯುದ್ಧ ಪ್ರಾರಂಭವಾದಾಗ ಲೆನಿನ್ ಆಸ್ಟ್ರಿಯ ದೇಶದ ಪೊರೊನಿನೋ ನಗರದಲ್ಲಿದ್ದ. ಇಂಗ್ಲೆಂಡ್, ಫ್ರಾನ್ಸ್ ಮತ್ತು ರಷ್ಯಗಳು ಜರ್ಮನಿ ಮತ್ತು ಆಸ್ಟ್ರಿಯಗಳ ಮೇಲೆ ಯುದ್ಧವನ್ನು ಘೋಷಿಸಿದ್ದವು. ಆಸ್ಟ್ರಿಯ ಸರ್ಕಾರ ಲೆನಿನ್ನನನ್ನು ಗೂಢಚಾರನೆಂದು ಬಂಧಿಸಿತು. ಆತ ಯುದ್ಧ ವಿರೋಧಿ ಹಾಗೂ ರಷ್ಯದ ಜಾರ್ ಸರ್ಕಾರದ ಶತ್ರು ಎಂದರಿತ ಮೇಲೆ ಎರಡು ವಾರಗಳಲ್ಲೇ ಬಿಡುಗಡೆ ಮಾಡಿತು. ಅಲ್ಲಿಂದ ಸ್ವಿಟ್ಜರ್ಲೆಂಡಿಗೆ ಬರಲು ಅನುಮತಿ ದೊರೆತು ಆ ತಟಸ್ಥ ದೇಶದಲ್ಲಿ ಮೊದಲು ಬರ್ನ್‌ನಲ್ಲೂ ಆಮೇಲೆ ಜೂರಿಚ್‌ನಲ್ಲೂ 1917 ರ ವರೆಗೆ ಲೆನಿನ್ ವಾಸಿಸುತ್ತಿದ್ದ.

ಯುದ್ಧ ಘೋಷಣೆಯೊಡನೆ ಸರ್ವಾಧಿಕಾರ ಪ್ರಭುತ್ವಗಳು ಎಲ್ಲ ದೇಶಗಳಲ್ಲೂ ಏರ್ಪಟ್ಟವು. ಜನತೆಯ ಹಕ್ಕುಗಳೆಲ್ಲ ತಾತ್ಕಾಲಿಕವಾಗಿ ರದ್ದಾದವು. ರಷ್ಯದ ಜಾರ್ ಸರ್ಕಾರ ತನ್ನ ತೋರಿಕೆಯ ಪ್ರಜಾಧಿಪತ್ಯದ ಕುರುಹಾಗಿದ್ದ 'ಡೂಮಾ' ಸಭೆಯನ್ನು ವಿಸರ್ಜಿಸಿ ಅಲೆಕ್ಸಾಂಡರನ ಏಕನಾಯಕ ಪ್ರಭುತ್ವವನ್ನು ಘೋಷಿಸಿತು. ಜನತಾ ಚಳುವಳಿಗಳನ್ನೆಲ್ಲ ನಿರ್ದಯವಾಗಿ ತುಳಿದುಹಾಕುವ ಸುಸಮಯವೆಂದು ಯುದ್ಧಸಂದರ್ಭವನ್ನು ಪಯೋಗಿಸಿಕೊಂಡಿತು. ದೇಶ ರಕ್ಷಣೆಯ ಘೋಷದಿಂದ ವಿರೋಧವೆಲ್ಲ ಮುಳುಗಿಹೋಗಿತ್ತು. ಆದರೆ ಲೆನಿನ್ ಈ ಮಹಾಯುದ್ಧದ ಮೂಲಉದ್ದೇಶಗಳನ್ನೇ ಸಕಾರಣವಾಗಿ ತಿರಸ್ಕರಿಸಿ ತನ್ನ ದೇಶಬಾಂಧವರಿಗೆ ತಮ್ಮ ಸರ್ಕಾರವನ್ನು ಪ್ರತಿಭಟಿಸಿ ನಿಲ್ಲುವಂತೆ ಪ್ರೇರೇಪಿಸುತ್ತಿದ್ದನು. ಅವನ ಪ್ರತಿಭಾಪೂರ್ಣ ಲೇಖನಗಳು ರಕ್ತಮಯ ರಣರಂಗದ ಉದ್ವೇಗ ಮಧ್ಯದಲ್ಲೂ ತೂರಿಬಂದು ಜನತೆಯನ್ನು ಚುಚ್ಚಿ ಎಬ್ಬಿಸುತ್ತಿದ್ದವು.

"ಯುದ್ಧದ ಬಗ್ಗೆ ವಿಮರ್ಶಾ ವಿವೇಚನೆ" "ಯುದ್ಧ ಮತ್ತು ರಷ್ಯದ ಸಾಮ್ಯವಾದೀ ಪ್ರಜಾಪ್ರಭುತ್ವ" "ರಾಷ್ಟ್ರೀಯ ಪ್ರಶ್ನೆಯ ಬಗ್ಗೆ ಟೀಕೆ" "ರಾಷ್ಟ್ರಗಳ ಆತ್ಮನಿರ್ಣಯ ಹಕ್ಕು" ಮುಂತಾದ ಪ್ರಸಿದ್ಧ ಲೇಖನಗಳಲ್ಲಿ ಲೆನಿನ್ ಮಹಾಯುದ್ಧವನ್ನು "ಸಾಮ್ರಾಜ್ಯಶಾಹೀ ಸ್ವಾರ್ಥಸಾಧಕರ ರಾಕ್ಷಸೀ ಪ್ರವೃತ್ತಿ" ಎಂದು ತರ್ಕಬದ್ಧವಾಗಿ ವಾದಿಸತೊಡಗಿದ. "ಜಗತ್ತಿನ ಬಹುಭಾಗದ ಒಡೆತನಕ್ಕೆ ಔದ್ಯೋಗಿಕ ಬಂಡವಾಳಶಾಹೀ ರಾಷ್ಟ್ರಗಳು ಕಚ್ಚಾಡುತ್ತಿವೆ" ಎಂದು ವರ್ಣಿಸಿದ. "ದುಡಿಮೆಯ ಲೋಕವನ್ನು ಶಾಶ್ವತ ದಾಸ್ಯಕ್ಕೆ ನೂಕುವ ಒಳಸಂಚು" ಎಂದು ಎಚ್ಚರಿಸಿದ.

ಈ ಕಾಲಕ್ಕೆ ಎಲ್ಲ ಕಡೆಯ ಸಹಾಯವೂ ನಿಂತು ಲೆನಿನ್ ತನ್ನ ಜೀವನ ಸಾಗಿಸಲು ಅತಿ ಕಷ್ಟಪಡಬೇಕಾಯಿತು. ಯುದ್ಧವಿರೋಧಿ ಲೇಖನಗಳನ್ನೂ ಪುಸ್ತಕಗಳನ್ನೂ ಪ್ರಕಟಿಸಲು ಯಾರೂ ಮುಂದೆ ಬರುತ್ತಿರಲಿಲ್ಲ. ಕೇವಲ ಹೊಟ್ಟೆ ಬಟ್ಟೆಗಳಿಗೆ ಸರಿತೂಗುವಷ್ಟು ಕಾರ್ಪಣ್ಯಜೀವನವೂ ದುಸ್ತರವಾಗಿತ್ತು. ಸ್ನೇಹಿತನೊಬ್ಬನಿಗೆ ಬರೆಯುತ್ತಾ "ಸ್ವಂತ ವಿಷಯಕ್ಕೆ ಹೇಳಿಕೊಳ್ಳುವುದಾದರೆ ನನಗೀಗ ಸಂಪಾದನೆಯ ಅವಶ್ಯಕತೆ ಬಹಳವಾಗಿದೆ. ಇಲ್ಲದೇ ಹೋದಲ್ಲಿ ಈ ದೇಹವನ್ನೂ ಜೀವಂತವಾಗಿಡಲಾರೆ. ನಿಜವಾಗಿ ಜೀವನವೆಚ್ಚ ಪೆಡಂಭೂತ ಸದೃಶವಾಗಿ ಏರಿದೆ. ಬಾಳನ್ನು ಸಾಗಿಸಲು ನಮಗಾವ ಆಧಾರವೂ ಇಲ್ಲ" ಎಂದು ತನ್ನ ಅಳಲನ್ನು ತೋಡಿಕೊಂಡ. ಸತೀ ಕೃಪ್ಸ್‌ಕಯಾ ಈ ಕಾಲಕ್ಕೆ ಅವನ ನಿಜವಾದ ಧರ್ಮಚಾರಣಿಯಾಗಿ ಕಷ್ಟಕಾರ್ಪಣ್ಯಗಳಲ್ಲಿ ಅರ್ಧಾಂಗಿಯಾಗಿ ಈ ವಿಭೂತಿಪುರುಷನ ಯೋಗಕ್ಷೇಮವನ್ನು ನಿರ್ವಹಿಸಿದಳು. ಭೂಗತರಾಗಿ ತಲೆಮರೆಸಿಕೊಂಡು ಅಂತರ್ಗಾಮಿಗಳಾಗಿ ಅಪಾಯದ ಅಂಚಿನಲ್ಲೇ ಸುಳಿದಾಡುತ್ತಿದ್ದ ಬಾಲ್ಶವಿಕ್ ಪಕ್ಷದ ಕಾರ್ಯಕರ್ತರು ತಮ್ಮ ನಾಯಕನಿಗೆ ಆಪತ್ಕಾಲಗಳಲ್ಲಿ ನೆರವಾದರು. ಪ್ರಾಣಾಧಾರಸಾಧಕವಾಗುವಂತೆ ಹನಿಹನಿಯಾದ ಧನಸಹಾಯ ನುಸುಳಿಬರುವುದೇ ಬಹಳ ಪ್ರಯಾಸವಾಗಿತ್ತು. ಆದರೂ ಭವಿಷ್ಯದ ಬಗ್ಗೆ ಅವರ ಆದಮನೀಯ ಭರವಸೆ ಸತತವಾಗಿ ಮುನ್ನಡಸಿತು.

೧೨

ಮೊದಲನೆಯ ಮಹಾಯುದ್ಧ ಜಗತ್ತಿನ ಇತಿಹಾಸದಲ್ಲಿ ಒಂದು ಪ್ರಮುಖ ಘಟನೆ. ಸಾಮ್ರಾಜ್ಯವಾದಕ್ಕೆ ಯುದ್ಧ ಅನಿವಾರ್ಯ ರಕ್ಷಣೆ ಎಂಬ ಕಠೋರ

ಸತ್ಯ ಸಾಮಾನ್ಯ ಜನತೆಯಲ್ಲಿ ಸ್ಪಷ್ಟವಾಗಿ ಮೂಡಿತು. "ಬಂಡವಾಳವಾದದ ಸೀಮಾವಸ್ಥೆಯೇ ಸಾಮ್ರಾಜ್ಯವಾದ" ಎಂಬ ಪ್ರಸಿದ್ಧ ಗ್ರಂಥವೊಂದನ್ನು ಲೆನಿನ್ ಬರೆದ. ಅತ್ಯಗಾಧ ಅಧ್ಯಯನದಿಂದ ವಿದೇಶಗಳ ಸಾಮ್ರಾಜ್ಯವಿಸ್ತರಣಾ ಕ್ರಮಗಳನ್ನು ಮನನಮಾಡಿದ. ಪ್ರಪಂಚದ ಸಂಪನ್ಮೂಲಗಳನ್ನೂ ಮಾನವ ದುಡಿಮೆಯನ್ನೂ ಶಾಶ್ವತವಾಗಿ ಧನಶಕ್ತಿಯ ದಾಸ್ಯಕ್ಕೊಳಗುಮಾಡಲು ನಡೆಯುತ್ತಿದ್ದ ಸ್ಪರ್ಧೆಯೇ ಯುದ್ಧದ ಮೂಲ ಎಂಬ ವಿಚಾರ ಅವನಿಗೆ ಖಚಿತವಾಯಿತು. ಅನೇಕ ದೇಶಗಳ ಸಾಮಾಜಿಕ ಬೆಳವಣಿಗೆ, ರಾಜಕೀಯ ಆರ್ಥಿಕ ಸ್ಥಿತಿ, ಜನ ಜೀವನದೊಳಗಿನ ಸಮಸ್ಯೆಗಳು, ವಸಾಹತುಗಳ ಭೀಕರ ವಿಸ್ತರಣೆ, ಎಚ್ಚರಗೊಳ್ಳುತ್ತಿದ್ದ ಕಾರ್ಮಿಕಲೋಕ, ದಾಸ್ಯವಿಮೋಚನೆಗಾಗಿ ಏಷ್ಯಾ ಆಫ್ರಿಕಾದ ರಾಷ್ಟ್ರಗಳು ಕೈಗೊಳ್ಳುತ್ತಿದ್ದ ಪ್ರಯತ್ನಗಳು, ಇವೆಲ್ಲವೂ ಒಂದು ಏಕಸೂತ್ರತೆಯ ವಿಚಾರಧಾರೆಯಾಗಿ ಲೆನಿನ್ನನ "ಸಾಮ್ರಾಜ್ಯವಾದದ ಮೇಲಿನ ಟಿಪ್ಪಣಿಗಳು" ಎಂಬ ಲೇಖನಮಾಲೆಯಲ್ಲಿ ಪ್ರಕಟವಾದವು. ಪ್ರಧಾನವಾಗಿ ಪ್ರಪಂಚದ ಸಮಸ್ತ ರಾಷ್ಟ್ರಗಳಲ್ಲೂ ನೆಲೆಸಿದ್ದ ವ್ಯವಸಾಯ ಕಾರ್ಮಿಕರ ಭವಿಷ್ಯವನ್ನು ಕುರಿತು ಲೆನಿನ್ ಚಿಂತನೆಮಾಡಿದ. ತನ್ನ ಗುರು ಮಾರ್ಕ್ಸ್ ಯಂತ್ರೋದ್ಯೋಗಪ್ರಧಾನ ಬಂಡವಾಳಶಾಹೀ ರಾಷ್ಟ್ರಗಳಿಗೆ ಮಾತ್ರ ಅನ್ವಯಿಸಿ ವಿವೇಚನೆ ಮಾಡಿದ ಸಾಮ್ಯವಾದ ಸೂತ್ರಗಳು ಬದಲಾಯಿಸಲಾಗದ ಸಂಹಿತೆಯೆಂದಾಗಲೀ ಅಭೇದ್ಯ ಭವಿಷ್ಯವಾಣಿ ಎಂದಾಗಲೀ ಲೆನಿನ್ ಒಪ್ಪಲಿಲ್ಲ. ಮೂಲಸಿದ್ಧಾಂತದ ಸುಭದ್ರ ಅಡಿಗಲ್ಲಿನ ಮೇಲೆ ತನ್ನ ಕಾಲದ ಪರಿಸ್ಥಿತಿಯನ್ನನುಸರಿಸಿ ಸಮಾಜಪರಿವರ್ತನೆಯ ಕ್ರಾಂತಿಪಥ ನಿರ್ಮಾಣವಾಗುತ್ತಾ ಹೋಗಬೇಕು ಎಂದೇ ಅವನ ನಂಬಿಕೆ. ಸ್ವತಂತ್ರ ವಿವೇಚನೆಯಿಂದ ಮಾರ್ಕ್ಸ್ ಸಿದ್ಧಾಂತವನ್ನು ಮಾರ್ಕ್ಸ್‌ನ ತರುವಾಯ ರಾಕ್ಷಸ ಪ್ರಮಾಣದಲ್ಲಿ ಬೆಳೆದುನಿಂತ 'ಸಾಮ್ರಾಜ್ಯವಾದ' ಮತ್ತು 'ಸೈನ್ಯ ವಿಜ್ಞಾನ' ಗಳ ವಿಶ್ಲೇಷಣೆಗೆ ಅನ್ವಯಿಸಿ ನೂತನ ಸೂತ್ರಗಳನ್ನು ಪ್ರಭಾವಶಾಲಿಯಾಗಿ ಪ್ರತಿಪಾದಿಸಿದ. "ವಿಶ್ವದ ಸಮಸ್ತ ರಾಷ್ಟ್ರಗಳಲ್ಲೂ ಏಕಕಾಲದಲ್ಲಿ ಕೂಲಿಗಾರರ ಸರ್ವಾಧಿಕಾರ ಪ್ರಭುತ್ವಗಳು ಸ್ಥಾಪಿತವಾಗದೆ ಸಮಾಜವಾದ ಪ್ರತಿಷ್ಠಿತವಾಗಲಾರದು. ಮೊದಲು ಯಂತ್ರೋದ್ಯೋಗಪ್ರಧಾನವಾದ ಯೂರೋಪಿನ ಜನಾಂಗಗಳಲ್ಲೇ ಕ್ರಾಂತಿಯಾಗುವುದು ಖಚಿತ" ಎಂದು ಮಾರ್ಕ್ಸ್ ಪ್ರತಿಪಾದಿಸಿದ ವಾದವನ್ನು

ಲೆನಿನ್ ತನ್ನ ಹೊಸ ಸೂತ್ರಗಳಿಂದ ಬದಲಾಯಿಸಿದ. ಹಲವಾರು ಕಾರಣಗಳನ್ನು ಕೊಟ್ಟು ಕೇವಲ ಅಂಧಶ್ರದ್ಧೆಯ ಸಿದ್ಧಾಂತವಾದಿಗಳನ್ನು ನಿರಾಕರಿಸಿದ. ಪ್ರಗತಿ ಪಥದಲ್ಲಿ ಕ್ರಾಂತಿವಿಚಾರ ಮುನ್ನಡೆದು ಸಮಾಜವಾದ ವ್ಯಾವಹಾರಿಕವಾಗಿ ನೆಲೆಗೊಳ್ಳಲು ಕಾರಣನಾದ.

1915 ರಲ್ಲಿ ಯುರೋಪಿನ ಸಾಮ್ರಾಜ್ಯವಾದೀ ರಾಷ್ಟ್ರಗಳ ಒಕ್ಕೂಟದ ಮಾತು ನಡೆದಿತ್ತು. ಅಪಾಯಕಾರಿ ಎನಿಸಿದ ಈ "ಘೋಷಣೆ"ಯ ಅನೌಚಿತ್ಯವನ್ನು ಕುರಿತು ಲೆನಿನ್ ಹೀಗೆ ಬರೆದ.

"ಆರ್ಥಿಕ ಹಾಗೂ ರಾಜಕೀಯ ಬೆಳವಣಿಗೆಗಳಲ್ಲಿ ಅಸಮತೆಯೇ ಬಂಡವಾಳಶಾಹಿಯ ಪ್ರಧಾನ ಸಿದ್ಧಾಂತ. ಆದ್ದರಿಂದ ಮೊದಲು ಕೆಲವು ಬಂಡವಾಳಶಾಹೀ ರಾಷ್ಟ್ರಗಳಲ್ಲೋ ಅಥವಾ ಅಸಹನೀಯ ಅಸಮತೆಯ ಒಂದೇ ಒಂದು ರಾಷ್ಟ್ರದಲ್ಲೋ ಸಮಾಜವಾದದ ಜಯ ಸಾಧ್ಯ. ವಿಜಯಿಗಳಾದ ಆ ದೇಶದ ಕಾರ್ಮಿಕವರ್ಗ ಅಲ್ಲಿನ ಬಂಡವಾಳ ವರ್ಗವನ್ನು ನಿರ್ಮೂಲ ಮಾಡಿ ಸಮಾಜೀಕೃತ ಉತ್ಪಾದನಾ ವ್ಯವಸ್ಥೆಯನ್ನು ನೆಲೆಗೊಳಿಸುತ್ತದೆ. ವಿಶ್ವದ ಬಂಡವಾಳ ವ್ಯವಸ್ಥೆಯನ್ನೇ ಅದು ಪ್ರತಿಭಟಿಸಿ ನಿಲ್ಲುತ್ತದೆ. ಜಗತ್ತಿನ ದಲಿತ ಜನಾಂಗಗಳನ್ನು ಆಕರ್ಷಿಸಿ ಅವರವರ ರಾಷ್ಟ್ರಗಳಲ್ಲೇ ಜಾಗೃತರಾಗಿ ಎದ್ದು ನಿಲ್ಲಲು ಕಾರಣವಾಗುತ್ತದೆ. ಶೋಷಕರಾಷ್ಟ್ರಗಳೆನ್ನದುರಿಸಲು ಸೈನ್ಯ ಶಕ್ತಿಯ ಅವಶ್ಯಕತೆಯೊದಗಿಸಿದರೆ ಶೋಷಿತ ದಾಸ್ಯರಾಷ್ಟ್ರಗಳ ಸಹಾಯಕ್ಕೆ ಅಂಥ ಬೆಂಬಲವನ್ನು ಒದಗಿಸಿಕೊಡಲು ಸಮರ್ಥವಾಗುತ್ತದೆ." ಮುಂದಿನ ಇತಿಹಾಸ ಈ ಪಥದಲ್ಲೇ ಸಾಗಿತು.

"ಮೊದಲನೆಯ ಮಹಾಯುದ್ಧ ಅನಿರೀಕ್ಷಿತ ಅದ್ಭುತ ಕ್ರಾಂತಿಯೊಂದಕ್ಕೆ ಕಾರಣವಾದೀತೆಂದು ಯುದ್ಧದಲ್ಲಿ ತೊಡಗಿದ್ದ ಯಾವ ರಾಷ್ಟ್ರವೂ ನಿರೀಕ್ಷಿಸಿರಲಿಲ್ಲ. ರಷ್ಯದ ಕ್ರಾಂತಿ ಯುದ್ಧದ ಪರಿಸ್ಥಿತಿಯ ಮೇಲೆ ಅಗಾಧ ಪರಿಣಾಮ ಮಾಡಿದುದಷ್ಟೇ ಅಲ್ಲ ಅದೊಂದು ಐತಿಹಾಸಿಕ ಮಹತ್ವಪೂರ್ಣ ಅಭೂತಪೂರ್ವ ಘಟನೆಯಾಯಿತು. ಆ ರೀತಿಯ ಮೊದಲ ಕ್ರಾಂತಿ ಅದು. ಆದರೂ ಮುಂದೆ ಅದು ಏಕೈಕ ಕ್ರಾಂತಿಯಾಗುಳಿಯಲಾರದು. ಇತರ ರಾಷ್ಟ್ರಗಳಿಗೂ ಅದೊಂದು ಸಾಹಸದ ಸವಾಲಾಗಿ ನಿಲ್ಲುತ್ತದೆ. ಅನೇಕ ಕ್ರಾಂತಿನಾಯಕರು ಈ ಮಾರ್ಗದಿಂದ ಪ್ರಭಾವಿತರಾಗುತ್ತಾರೆ. ರಾಜಕಾರಿಣಿಗಳಿಗೆ ಅಂದು

ಅದು ಅನಿರೀಕ್ಷಿತವಾದರೂ ರಷ್ಯದ ಚಾರಿತ್ರಿಕ ಹಾಗೂ ಆರ್ಥಿಕ ಪರಿಸ್ಥಿತಿ ಯುದ್ಧದ ಮಹಾಜ್ವಾಲೆಯಿಂದ ಉತ್ಕಟ ಸಂಕಟಕ್ಕೆ ಗುರಿಯಾದುದರ ಪರಿಣಾಮ. ಆ ಸನ್ನಿವೇಶವನ್ನು ಕ್ರಾಂತಿಪಥದ ಸಾಧನವಾಗಿ ಮಾರ್ಪಡಿಸಿದ ಪ್ರತಿಭಾವಂತ ವಿಭೂತಿಪುರುಷ ಲೆನಿನ್" ಎಂದಿದ್ದಾರೆ ಜವಹರಲಾಲರು ತಮ್ಮ 'ವಿಶ್ವ ಇತಿಹಾಸ' ದಲ್ಲಿ.

"ಜಗತ್ತಿನ ಎಲ್ಲ ರಾಷ್ಟ್ರಗಳೂ ಕಟ್ಟಕಡೆಗೆ ಅನಿವಾರ್ಯವಾಗಿ ಸಮಾಜವಾದ (ಸೋಷಿಯಲಿಸಂ) ವನ್ನೇ ಅಂಗೀಕರಿಸುತ್ತವೆ. ಆದರೆ ಯಾರೊಬ್ಬರ ಆಗ್ರಹ ಪೂರ್ವಕ ಆಜ್ಞೆಯಿಂದಾಗಲೀ, ವ್ಯಕ್ತಿಗತ ಸಂಕಲ್ಪದಿಂದಲಾಗಲೀ ಅದು ನೆರ ವೇರದು. ವಿವಿಧ ರಾಷ್ಟ್ರಗಳಲ್ಲಿ ವಿವಿಧ ಕಾಲಗಳಲ್ಲಿ ಸಮಾಜವಾದ ಅರಳುತ್ತ ಹೋಗುತ್ತದೆ. ಪ್ರತಿರಾಷ್ಟ್ರವೂ ಅದಕ್ಕೊಂದು ವಿಶಿಷ್ಟಗುಣವನ್ನು ಸೇರಿಸು ತ್ತದೆ. ಜಗತ್ತಿನ ಪರಿವರ್ತನಾ ಹೆಜ್ಜೆಗಳು ಅದರಿಂದಲೇ ನಿರ್ಣಯಿತವಾಗು ತ್ತದೆ" ಎಂದಿದ್ದಾನೆ ಲೆನಿನ್. ಈ ತರ್ಕಸರಣಿ ಕಾರ್ಮಿಕ ವರ್ಗಕ್ಕೆ ವಿಶೇಷ ಸ್ಫೂರ್ತಿನೀಡಿ ರಾಷ್ಟ್ರೀಯ ಪ್ರಯತ್ನಗಳಿಗೆ ಹೊಸ ಜೀವ ತುಂಬಿತು. ಜಗತ್ತಿನ ಇತಿಹಾಸವೂ ಆತನ ಸ್ಪಷ್ಟ ದರ್ಶನಕ್ಕೆ ಸಾಕ್ಷಿಯಾಗಿಯೇ ಸಾಗಿತು.

೧೩

ಸಾವಿರದೊಂಭೈನೂರ ಹದಿನೇಳು ! ಕ್ರಾಂತಿಘೋಷ ರಷ್ಯದ ಜನತಾ ಗರ್ಭದಿಂದ ಆಸ್ಫೋಟಿಸಿ ಪಾಂಚಜನ್ಯದಂತೆ ಮೊಳಗಿದ ವರ್ಷ. ಮಾರ್ಚಿ ಹದಿಮೂರರಂದು ಪೆಟ್ರೋಗ್ರಾಡ್ (ಹಿಂದೆ ಸೆಂಟ್ ಪೀಟರ್ಸ್‌ಬರ್ಗ್ ಎಂದೂ ಮುಂದೆ ಲೆನಿನ್‌ಗ್ರಾಡ್ ಎಂದೂ ಪ್ರಸಿದ್ಧವಾದ ನಗರ) ತನ್ನ ಕೋಟಿ ಕಂಠ ಗಳಿಂದ ಕೋಟ್ಯಾಂತರ ಬಾಹುಗಳಿಂದ ಬೃಹದ್ ಪ್ರಮಾಣದ ಪ್ರಚಂಡ ಕಾರ್ಮಿಕ ಪ್ರದರ್ಶನವೊಂದನ್ನು ನಡೆಸಿತು. "ಯುದ್ಧವನ್ನು ನಾವು ವಿರೋಧಿ ಸುತ್ತೇವೆ" "ಸಾಮ್ರಾಜ್ಯಶಾಹಿಗಳ ರಾಕ್ಷಸೀ ಕೃತ್ಯಗಳಿಗೆ ನಮ್ಮ ಧಿಕ್ಕಾರ" "ಶಾಂತಿ, ನೆಮ್ಮದಿ, ಸ್ವಾತಂತ್ರ್ಯ ಇವುಗಳನ್ನು ರಕ್ಷಿಸಿ" "ನಿರಂಕುಶಾಧಿಕಾರವನ್ನು ನಿರ್ಮೂಲಮಾಡಿ"...ಈ ಮಹಾ ಘೋಷಣೆಗಳು ಭೋರ್ಗರೆದುವು. ಒಂದಾದ ಮೇಲೊಂದರಂತೆ ಕಾರ್ಮಿಕ ಮಹಾಸಭೆಗಳೂ, ಪ್ರಚಂಡ ಪ್ರದರ್ಶನಗಳೂ, ಅಸಹಕಾರದ ಸಂಪುಗಳೂ, ಜಾರ್ ಸರ್ಕಾರಕ್ಕೆ ಪ್ರತಿಭಟನೆಗಳೂ ರಷ್ಯದ

ಔದ್ಯೋಗಿಕ ನಗರಗಳಲ್ಲಿ ಮಹಾಜ್ವಾಲೆಯಂತೆ ಹತ್ತಿಕೊಂಡು ಉರಿಯತೊಡಗಿ ದವು. ಅಶಾಂತಿಯು ಅನಾಯಕಪರಿಸ್ಥಿತಿ ಎಲ್ಲೆಲ್ಲೂ ಪಸರಿಸಿನಿಂತಿತು. ಆಳರಸರ ಆಕ್ರೋಶ, ಸೈನ್ಯಾಧಿಕಾರಿಗಳ ಅರ್ಭಟ, ಬಾಲಬಡಕ ಅಧಿಕಾರೀವರ್ಗದ ಕ್ರೂರ ದಮನ ಎಲ್ಲವೂ ನಿಷ್ಫಲವಾದುವು. ಸೈನ್ಯದ ಬಹುಭಾಗ ಅರ್ಥಹೀನ ಯುದ್ಧ ದಲ್ಲಿ ಬೆಂದು ಬೇಸತ್ತುಹೋಗಿತ್ತು. ಜನತೆಯ ಮಹಾಪೂರದೊಡನೆ ಸೈನಿಕರೂ ಸೇರಿಬಿಟ್ಟರು. ಕ್ಷಾಮ. ನಿರುದ್ಯೋಗ, ಕೊನೆಯಿಲ್ಲದ ದುಡಿಮೆ ಇವುಗಳನ್ನು ತಂದುಕೊಟ್ಟ ಯುದ್ಧ ಎಲ್ಲರಿಗೂ ಬೇಡವಾಗಿತ್ತು. ರಾಜರ ಹಾಗೂ ಧನಿಕರ ಸ್ವಾರ್ಥ ಪಿಡುಗಿನಂತೆ ಹಬ್ಬಿ ನಿಶ್ಶಸ್ತ್ರ ಜನಸಮೂಹವನ್ನು ಹತ್ತಿಕ್ಕಲು ಪ್ರಯತ್ನಿ ಸಿತು. ಕೇವಲ ಎರಡು ವಾರಗಳಲ್ಲಿ ನಿರಂಕುಶಾಧಿಕಾರ ಹಿಮ್ಮೆಟ್ಟಿತು. ಹಲವು ಶತಮಾನಗಳಿಂದ ಅಜೇಯವಾಗಿ ನಿಂತಿದ್ದ ಜಾರ್ ಮನೆತನ ಉರುಳಿಬಿತ್ತು.

ದೊರೆತನದ ಅವನತಿ ಕಾಲಗತಿಯಲ್ಲಿ ವೇಗದಿಂದ ಸಾಗಿತ್ತು. ಹೆಸರಾಂತ ನಿರಂಕುಶ ಚಕ್ರಾಧಿಪತಿ, "ಪವಿತ್ರ ರಷ್ಯ" ದ "ಚಿಕ್ಕ ತಂದೆ"...ಜಾರ್, ಕಾಲಪ್ರವಾಹದ ಮಡುವಿನಲ್ಲಿ ಮುಳುಗಿಹೋದ. "ಇದೆಂತಹ ವಿಸ್ಮಯ ಕಾರಿ ಸತ್ಯ! ನಿಯೋಜಿತ ಉದ್ದೇಶಗಳು ಪೂರ್ಣವಾದೊಡನೆ ಮಾನವ ಸಮಾಜದ ಮಹಾಸಂಸ್ಥೆಗಳು ಹೆಸರಿಲ್ಲದೆ ಕರಗಿಹೋಗುತ್ತವೆ" ಎಂದಿದ್ದಾರೆ ನೆಹರು. ಪ್ರಾಚೀನ ರಾಜಧರ್ಮ ನಶಿಸಿ ಜಾರ್ ಮನೆತನ ನೈತಿಕ ಅಧೋ ಗತಿಗೆ ಜಾರಿತ್ತು. ವಿಷಯಲೋಲುಪರಾಗಿ ವಿಲಾಸಮಗ್ನರಾಗಿ, ಧನಿಕರ ಕೈ ಗೊಂಬೆಗಳಾಗಿ, ಮೋಸಗಾರರ ಆಶ್ರಯದಾತರಾಗಿ ಮತಾಂಧರ ಮಿತ್ರರಾಗಿ ರಾಜಮನೆತನದವರು ಹುಳುಬಿದ್ದ ಟೊಳ್ಳುಮರದಂತಾಗಿದ್ದರು. ಹೊಸ ಗಾಳಿ ಪ್ರಬಲವಾಗಿ ಬೀಸಿದೊಡನೆ ಆ ಸಂಸ್ಥೆ ಉರುಳಿಬಿದ್ದುದು ಆಶ್ಚರ್ಯವೆನಿಸಲಿಲ್ಲ. ಅಸಹ್ಯಕರ ದುರ್ಮಾರ್ಗಿಯೊಬ್ಬ ಜರೀನಾಳ ಆಶ್ರಯ ಪಡೆದು, ಪಾದ್ರಿಯ ವೇಶ ಹಾಕಿಕೊಂಡು ರಷ್ಯಾರಾಜ್ಯದ ಆಡಳಿತದಲ್ಲಿ ಕರಾಳ ಪ್ರಭಾವ ಬೆಳೆಸಿ ಖಳನಾಯಕನಂತೆ ಮೆರೆದ ಪ್ರಕರಣ ರಷ್ಯಾ ಜನತೆಯನ್ನು ರೊಚ್ಚಿಗೆಬ್ಬಿಸಿತ್ತು. 'ರಾಸ್‌ಪುಟಿನ್' ಅವನ ಹೆಸರು. ರಾಜನ ಬಂಧುವೊಬ್ಬ ಅವನನ್ನು ಗುಂಡಿಕ್ಕಿ ಕೊಂದ. ದೇಶದಲ್ಲಿ ಅಶಾಂತಿಯ ಅಲೆ ಎದ್ದಿದ್ದ ಕಾಲ ಅದು. ಜಾರನ ಆಜ್ಞೆಗಳನ್ನು ಅಧಿಕಾರಿಗಳು ಧಿಕ್ಕರಿಸಿದರು. ಜನತಾ ನಾಯಕರು ರಾಜತ್ವ ವನ್ನು ಧ್ವಂಸಮಾಡಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಪಣ ತೊಟ್ಟರು.

'ಡೂಮಾ' ಅಥವಾ ಪ್ರತಿನಿಧಿಸಭೆಗೆ ಅಧಿಕಾರ ಒಪ್ಪಿಸಿ ದೊರೆ ಜಾರ್ ರಾಜ್ಯತ್ಯಾಗ ಮಾಡಿದ. ಆದರೂ ಹಿಂದಿನ ಪ್ರತಿಷ್ಠಿತ ವರ್ಗಗಳೇ ನಾಯಕತ್ವ ವಹಿಸಿದ್ದವು. ಕಾರ್ಮಿಕವರ್ಗದ ಪ್ರತಿನಿಧಿಗಳಿಗೆ ಅಧಿಕಾರ ದೊರೆಯಲಿಲ್ಲ. ದುಡಿಮೆಗಾರರ ಒಕ್ಕೂಟಗಳು (ಸೋವಿಯಟ್ಟುಗಳು) ದಂಗೆಯೆದ್ದಿದ್ದವು. ರಾಜಕೀಯ ಪಕ್ಷಗಳು ಬಂಡವಾಳವರ್ಗದ ಹಿಂಬಾಲಕರಾಗಿಯೇ ಉಳಿದವು. ಯುದ್ಧ ಮುಂದುವರಿಯುತ್ತಲೇ ಇದ್ದುದರಿಂದ ಆಸಕ್ತ ರಾಜಕಾರಣಿಗಳು ಸಮಾಜವಾದೀ ಸರ್ಕಾರ ಸ್ಥಾಪನೆಗೆ ಅಡ್ಡಿಯಾದರು. ಜನತೆಯ ಆಶೋತ್ತರಗಳು ಸಿಡಿದು ಹೋಗುತ್ತಿದ್ದವು. ಮಹಾಯುದ್ಧದ ಭಯಾನಕ ಚಿತ್ರ ಜನನಾಯಕರನ್ನೂ ಅಧೀರರನ್ನಾಗಿ ಮಾಡಿದ್ದವು. ಕ್ರಾಂತಿಕಾರೀ ಪರಿವರ್ತನೆಗಳಿಗೆ ಅವರೂ ಹಿಂತೆಗೆಯುತ್ತಿದ್ದರು. ಈ ಪರ್ವಕಾಲದಲ್ಲಿ ಪ್ರಭಾವಯುತನಾಗಿ ಜನತೆಯನ್ನು ಸಂಘಟಿಸಿ ಶೋಷಕವರ್ಗವನ್ನು ನಿರ್ಮೂಲ ಮಾಡುವ ನಾಯಕನಿಗಾಗಿ ರಷ್ಯಾದ ಜನಕೋಟಿ ಪರಿತಪಿಸುತ್ತಿತ್ತು. ಆ ಸಮಯಕ್ಕೆ ಸರಿಯಾಗಿ ಲೆನಿನ್ ಸಾಹಸದಿಂದ ಸ್ವದೇಶಕ್ಕೆ ಹಿಂತಿರುಗಿದ. ಯುದ್ಧವಿರೋಧಿಯಾದುದರಿಂದ ತನ್ನ ಸರ್ಕಾರದೆದುರು ದಂಗೆಗಳನ್ನೆಬ್ಬಿಸುವನೆಂದೂ. ರಷ್ಯಾದ ಬಲ ಅವನಿಂದ ಕುಗ್ಗುವುದೆಂದೂ ತಿಳಿದು ಜರ್ಮನಿದೇಶವೇ ಲೆನಿನ್ನನಿಗೆ ಹಿಂತಿರುಗಲು ಸಹಾಯ ಮಾಡಿತು. 1917 ರ ಏಪ್ರಿಲ್ ಒಂಭತ್ತರಂದು ಸ್ವಿಟ್ಜರ್‌ಲೆಂಡನ್ನು ಬಿಟ್ಟು ಸ್ಟಾಕ್‌ಹೋಂ ಮೂಲಕ ರಷ್ಯವನ್ನು ಸೇರಿದನು.

ಪೆಟ್ರೋಗ್ರಾಡ್ ನಗರವನ್ನು ತಲುಪಿದೊಡನೆ ಕಾರ್ಮಿಕರ ಮಹಾಸಮೂಹ ಲೆನಿನ್‌ಗೆ ಅದ್ಭುತ ಸ್ವಾಗತ ನೀಡಿತು. ಅಮಿತೋತ್ಸಾಹದಿಂದ ಜನನಾಯಕನನ್ನು ಭುಜಗಳ ಮೇಲೆ ಹೊತ್ತು ಕುಣಿದುಬಿಟ್ಟರು. ಸಣ್ಣ ಪುಟ್ಟ ಹಗರಣಗಳನ್ನು ಮೆಟ್ಟಿನಿಲ್ಲುವ ಈ ಮಹಾವ್ಯಕ್ತಿ ದಿಟ್ಟತನದಿಂದ ಜನತಾ ಸ್ವಾತಂತ್ರ್ಯದ ಸಮರವನ್ನು ಹೊಸ ಮಜಲಿಗೆ ಕೊಂಡೊಯ್ಯುವನೆಂಬ ತುಂಬು ಭರವಸೆ ಕೋಟ್ಯಾಂತರ ಹೃದಯಗಳಲ್ಲಿ ನೆಲೆಸಿ ನಿಂತಿತು. ವಿಶ್ವಾಸ ಹೆಮ್ಮರವಾಗಿ ಬೆಳೆಯಿತು. ಸರ್ವಸಮ್ಮತ ನಾಯಕನಾಗಿ ಲೆನಿನ್ ಅದ್ಭುತ ಶಕ್ತಿಸಾಹಸಗಳಿಂದ ರಷ್ಯದ ಮಹಾಕ್ರಾಂತಿಯ ಏಕೈಕ ಅಧ್ವರ್ಯುವಾಗಿ ಜಗತ್ ಪ್ರಸಿದ್ಧನಾಗಿಬಿಟ್ಟ.

"ಅವನ ವಾಣಿ ನಮ್ಮನ್ನು ಒಂದುಗೂಡಿಸಿತು : ಕಾರ್ಯಕರ್ತರ ಕರ್ತವ್ಯಗಳನ್ನು ಸ್ಪಷ್ಟಪಡಿಸಿತು—ಮೂರುಸಾವಿರ ಸ್ವಾತಂತ್ರ್ಯ ಯೋಧರಿಗೆ ಲೆನಿನ್ನನ

ಸಂದೇಶವಾಕ್ಯಗಳು ಮಹಾಸ್ತ್ರಗಳಾದುವು. ಕಾರ್ಮಿಕರು, ಯೋಧರು, ನಾವಿಕರು ಸಾಮಾನ್ಯಜನ ಸರ್ವರಿಗೂ ಆತನ ಉನ್ನತ ವಿಚಾರಗಳು ಆಪ್ಯಾಯಮಾನ ವಾದವು. ಅವರ ಹೃದಯಗಳನ್ನು ಲೆನಿನ್ ಸೂರೆಗೊಂಡ "ಲೆನಿನ್ನನಿಂದ ಸ್ಫೂರ್ತಿಗೊಂಡು ನಾವು ಒಬ್ಬೊಬ್ಬರೂ ಜ್ವಲಂತ ಯುದ್ಧೋತ್ಸಾಹಿಗಳಾಗಿ ಮಹಾ ಸಮರದಲ್ಲಿ ಓತಪ್ರೋತವಾಗಿ ಧುಮುಕಲು ಅತ್ಯಂತ ಉತ್ಸುಕರಾದೆವು." ಎಂದು ಎಮೆಲ್ಯನೋವ್ ಎಂಬ ಸಾಮಾನ್ಯ ಕಾರ್ಮಿಕನೊಬ್ಬ ಸ್ಮರಿಸಿಕೊಂಡಿದ್ದಾನೆ. ರೈತನಿಗೆ ಭೂಮಿ, ಜನತೆಗೆ ಸ್ವಾತಂತ್ರ್ಯ. ರಾಷ್ಟ್ರಕ್ಕೆ ಯುದ್ಧರಹಿತ ಶಾಂತಿ ಇವು ಕ್ರಾಂತಿ ಪಥದ ಮಹಾಧ್ಯೇಯಗಳಾದುವು. ಸರ್ವಸಾಮಾನ್ಯರಿಗೂ ಗ್ರಾಹ್ಯ ವಾದ ಜೀವನೋದ್ದೇಶ ಒಡಮೂಡಿ ಉತ್ಸಾಹ ನೂರ್ಮಡಿಯಾಯಿತು. ಧ್ಯೇಯಗಳ ಪೂರ್ಣಸಾಧನೆಯಿಲ್ಲದೆ ಯಾವ ತಾತ್ಕಾಲಿಕ ಒಡಂಬಡಿಕೆಯೂ ಕೂಡದೆಂಬ ನಿರ್ಧಾರ ಹೆಪ್ಪುಗಟ್ಟಿತು. ಅಳ್ಳೆದೆಯ ಸ್ವಾರ್ಥಿಗಳೂ ರಾಜ ಕಾರಣದ ಧ್ಯೇಯರಹಿತ ಜಾಣಾಕ್ಷರೂ ಸಮಯ ಸಾಧಕರೂ ಈ ಕ್ರಾಂತಿಪಥದ ತ್ಯಾಗ ಬಲಿದಾನಗಳಿಗೆ ಹೆದರಿ ಹಿಮ್ಮೆಟ್ಟುವಂತಾಯಿತು. ನೆಹರೂ ಈ ಸನ್ನಿವೇಶವನ್ನು ಭವ್ಯವಾಗಿ ಚಿತ್ರಿಸುತ್ತಾ "—ಹೀಗೆ ಪ್ರಶಾಂತನಾಗಿ ಆದರೂ ಅಪ್ರತಿಹತನಾಗಿ ಯಾವುದೋ ಅನಿವಾರ್ಯ ವಿಧಿನಿರ್ಧಾರದ ಪ್ರತ್ಯಕ್ಷಸಾಧನವೋ ಎಂಬಂತೆ ಲೆನಿನ್. ಶೀತಲ ಮಂಜಿನಿಂದ ಆಚ್ಛಾದಿತವಾದ ಒಂದು ಮಹಾಜ್ವಾಲೆ ಸಿಖರವಾಗಿ ನಿಯೋಜಿತವಾದ ತನ್ನ ಗಮ್ಯಸ್ಥಾನವನ್ನು ಮುಟ್ಟಲು ಧಾವಿಸು ವಂತಾದ—" ಎಂದಿದ್ದಾರೆ.

ಲೆನಿನ್ನನ ಆಗಮನದೊಡನೆ ಕ್ರಾಂತಿಪಥ ಒಂದು ಹೊಸ ಮಜಲನ್ನು ಮುಟ್ಟಿತು. ಕ್ರಾಂತಿಯ ಮುಖಪತ್ರಿಕೆ 'ಪ್ರಾವ್ಡಾ' ಲೆನಿನ್ನನ ಪ್ರಖರ ಲೇಖನಿಗೆ ಆಗರವಾಯಿತು. ಆದರ ಕಾರ್ಯಾಲಯ ಪೋಲೀಸರ ಕ್ರೂರ ಧಾಳಿಗಳಿಗೆ ಒಳಗಾಯಿತು. ಆಕಸ್ಮಿಕವಾಗಿ ಮುನ್ಸೂಚನೆ ದೊರೆತು ಲೆನಿನ್ ಅಪಾಯದಿಂದ ಪಾರಾದ. ಅವನನ್ನು ಹಿಡಿದು ಕ್ರೂರವಾಗಿ ಶಿಕ್ಷಿಸುವಂತೆ ಅಪ್ಪಣೆಯಾಗಿತ್ತು. ಆದರೆ ರಷ್ಯದ ಜನಸ್ತೋಮ ಸಹಸ್ರ ಬಾಹುಗಳಿಂದ ತನ್ನ ನಾಯಕನನ್ನು ರಕ್ಷಿಸಿಕೊಂಡಿತು. ಹಲವು ವಾರಗಳು ಅಜ್ಞಾತದಲ್ಲಿ ಕಳೆಯಬೇಕಾಯಿತು. ನಿರ್ಗತಿಕ ರೈತನಂತೆ ದಿನವೆಲ್ಲ ಹೊಲದಲ್ಲಿ ದುಡಿಯುತ್ತಾ ಜೋಪಡಿಯೊಂದರಲ್ಲಿ ವಾಸಿಸುತ್ತಿದ್ದು ಅತಿಗೋಪ್ಯವಾಗಿ ಚಳುವಳಿಗೆ ಚಾಲನೆ

ಕೊಡುತ್ತಿದ್ದ. ಅದೇ ಕಾಲಕ್ಕೆ ನಡೆದ ರಷ್ಯದ ಸಾಮ್ಯವಾದೀ ಕಾಂಗ್ರೆಸ್ಸು ತನ್ನ ಅಧ್ಯಕ್ಷ ಸ್ಥಾನಕ್ಕೆ ಅಜ್ಞಾತದಲ್ಲಿದ್ದ ಲೆನಿನ್ನನನ್ನೇ ಆರಿಸಿತು. ನೂರಾರು ಸೋವಿಯಟ್‌ಗಳು ಒಕ್ಕೂಟವಾದವು. ರೈತರೂ ಕಾರ್ಮಿಕರೂ ಸಂಘಟಿತರಾದರು. ಸೈನಿಕವರ್ಗದ ಬಹುಪಾಲು ಹಾಗೂ ಪಟ್ಟಣದಲ್ಲಿನ ಮಧ್ಯಮ ವರ್ಗದ ವಿದ್ಯಾವಂತರೂ ಕ್ರಾಂತಿಯ ಸುಳಿಗೆ ಸಿಕ್ಕಿದರು. ನಿಸ್ಸೀಮ ಬಲಿದಾನಗಳಿಂದ ಜನತೆಯ ನೈತಿಕಶಕ್ತಿ ಮುಪ್ಪುರಿಗೊಂಡು ಅಜೇಯವಾಗುತ್ತಾ ಸಾಗಿತು.

ರಷ್ಯದ ಅಂದಿನ ಪ್ರಮುಖ ರಾಜಕಾರಣಿ ಕೆರೆನ್ಸ್ಕಿ ಅಧಿಕಾರ ಸೂತ್ರಗಳನ್ನು ಹಿಡಿದಿದ್ದ. ಅಸಾಧಾರಣ ವಾಕ್ಚಾತುರ್ಯ ವ್ಯವಸ್ಥಾ ದಕ್ಷತೆಗಳಿಂದ ಕ್ರಾಂತಿವಿರೋಧೀ ಶಕ್ತಿಗಳನ್ನು ಆಕರ್ಷಿಸಿದ. ಬಾಲ್ಷವಿಕ್ ಪಕ್ಷವನ್ನು ಅಳಿಸಿಬಿಡಬೇಕೆಂದು ಅವನ ಪ್ರಯತ್ನ. ಜರ್ಮನಿಯೊಡನೆ ಯುದ್ಧ ನಡೆದೇ ಇತ್ತು. ಗಡಿ ಪ್ರದೇಶಗಳು ಶಿಥಿಲವಾಗುತ್ತಿದ್ದವು. ಅದೇ ಸಮಯಕ್ಕೆ ರಾಷ್ಟ್ರರಕ್ಷಣೆಗೆ ಕರೆಕೊಡುತ್ತಾ ಕೆರೆನ್ಸ್ಕಿ ಲೆನಿನ್ನನನ್ನು "ಜರ್ಮನಿಯ ಪರವಾದ ರಾಷ್ಟ್ರದ್ರೋಹಿ" ಎಂದು ಅಪಪ್ರಚಾರ ಮಾಡಿದ. ಟ್ರಾಟ್ಸ್ಕಿ, ಮಲನೋವ್ಸ್ಕಿ ಮುಂತಾದವರನ್ನು ಸೆರೆಹಿಡಿಯಲಾಯಿತು. ಪತ್ರಿಕೆಗಳು ನಿರ್ಮೂಲವಾದವು. ಸಹಾನುಭೂತಿ ತೋರಿದ ಕೂಲಿಗಾರರು ಚಿತ್ರಹಿಂಸೆಗೊಳಗಾದರು. ಕೋರ್ನಿಲೇವ್ ಎಂಬ ಹಳೆಯ ಸೈನ್ಯಾಧಿಕಾರಿ ಜನತಾಚಳುವಳಿಯನ್ನು 'ಧ್ವಂಸ ಮಾಡಿಬಿಡುವೆ' ನೆಂದು ಒಂದು ಸೈನಿಕ ತಂಡದೊಡನೆ ಪೆಟ್ರೋಗ್ರಾಡ್‌ಗೆ ಹೊರಟ. ನಗರವನ್ನು ಸಮೀಪಿಸುತ್ತಿದ್ದ ಹಾಗೆ ಅವನ 'ಸೈನ್ಯ' ಕರಗಿಹೋಯಿತು. ಸೈನಿಕರೆಲ್ಲ ವಿರೋಧಿಗಳಾಗಿ ಜನತೆಯೊಡನೆ ಸೇರಿಬಿಟ್ಟರು. ನಿರಂಕುಶಾಧಿಕಾರದೊಡನೆ ಈ ಅಸಹಕಾರ ರಾಜ್ಯಾಡಳಿತದ ತಳಹದಿಯನ್ನೇ ಅಲ್ಲಾಡಿಸಿತು.

ಇತಿಹಾಸ ಪ್ರಸಿದ್ಧವಾದ ಅಕ್ಟೋಬರ್ ಕ್ರಾಂತಿ ನಡೆದದ್ದು ನವಂಬರ್ ಏಳರಂದು. ಅಂದಿನ ರಷ್ಯದ ಎಣಿಕೆಯಂತೆ ಅದು ಅಕ್ಟೋಬರ್ ಆಗಿತ್ತು. ಅಖಿಲ ರಷ್ಯದ ಸಾಮ್ಯವಾದೀ ಕಾಂಗ್ರೆಸ್ ನವಂಬರ್ ಆರರಂದು ಸಭೆಸೇರಿ ಪ್ರಚಂಡ ಜನತಾ ಬೆಂಬಲದೊಡನೆ ಸ್ವತಂತ್ರ ಕೂಲಿಕಾರ ಸರ್ಕಾರವನ್ನು ಘೋಷಿಸಿತು. ಲೋಕ ಸ್ತಬ್ಧವಾಗಿ ತಲ್ಲಣಿಸುತ್ತಿತ್ತು. ನಿರ್ಣೀತ ಯಂತ್ರದಂತೆ ಕ್ರಾಂತಿಕಾರ ಸೈನ್ಯಪಡೆ ಎಲ್ಲ ಆಡಳಿತ ಕಾರ್ಯಾಲಯಗಳನ್ನೂ ನವಂಬರ್ ಏಳರ ಮುಂಜಾವಿನಲ್ಲಿ ಆಕ್ರಮಿಸಿಬಿಟ್ಟಿತು. ಅಂಚೆಕಛೇರಿಗಳು, ರೈಲ್ವೆನಿಲ್ದಾಣಗಳು,

ಬ್ಯಾಂಕುಗಳು, ಕಛೇರಿಗಳು ಇಡೀ ರಾಷ್ಟ್ರದಲ್ಲಿ ಕ್ರಾಂತಿಪಕ್ಷದ ವಶವಾಗಿಬಿಟ್ಟವು. ಕೆರೆನ್ಸ್ಕಿಯ ತಾತ್ಕಾಲಿಕ ಸರ್ಕಾರ ಆ ಮಹಾಪ್ರವಾಹದಲ್ಲಿ ಕೊಚ್ಚಿಹೋಗಿ ನಿರ್ನಾಮವಾಯಿತು. "ಲೆನಿನ್ ಹೊಸ ಸರ್ಕಾರದ ಮಹಾಧ್ಯಕ್ಷ" "ಟ್ರಾಟ್ಸ್ಕಿ ವಿದೇಶಾಂಗ ಸಚಿವ" ಎಂಬ ಅಧಿಕೃತ ಘೋಷಣೆ ಪ್ರಪಂಚದ ಮೂಲೆ ಮೂಲೆಗಳಲ್ಲಿ ಪ್ರತಿಧ್ವನಿತವಾಯಿತು. ಯು.ಎಸ್.ಎಸ್.ಆರ್. ಅಥವಾ ಸೋವಿಯಟ್ ಸಾಮ್ಯವಾದೀ ಗಣರಾಜ್ಯದ ಒಕ್ಕೂಟ ಭೋರ್ಗರೆದು ಧರೆಗಿಳಿದು ಸುಪ್ರತಿಷ್ಠಿತವಾಯಿತು.

೧೪

ಜಗತ್ತಿನ ಪ್ರಥಮ ಸಮಾಜವಾದೀ ರಾಷ್ಟ್ರದ ಪ್ರಥಮ ಸರ್ಕಾರ ಸ್ಥಾಪಿತವಾಯಿತು. ಪತಾತ್ತನೆ ಬದಲಾದ ಪರಿಸ್ಥಿತಿಗೆ ಜೀವನವನ್ನು ಪರಿವರ್ತಿಸುವುದು ಸುಲಭವಾಗಲಿಲ್ಲ. ಯುದ್ಧದಿಂದ ವಿರಮಿಸಿ ನಿರ್ಮಾಣ ಕಾರ್ಯದಲ್ಲಿ ತೊಡಗಬೇಕಾಗಿತ್ತು. ಸಮಾಜೀಕರಣತತ್ವ ಇನ್ನೂ ಜನಸಾಮಾನ್ಯರೆಲ್ಲರಿಗೆ ಸ್ಪಷ್ಟವಾಗಿರಲಿಲ್ಲ. ಪಟ್ಟಭದ್ರಹಿತಗಳ ಪ್ರತಿಗಾಮೀ ಶಕ್ತಿ ಪ್ರಬಲವಾಗಿಯೇ ಇತ್ತು. ಪ್ರಪಂಚದ ಪ್ರಬಲರಾಷ್ಟ್ರಗಳಲ್ಲಿನ ಸಾಂಪ್ರದಾಯಿಕ ಪ್ರಭುತ್ವಗಳು ಸಮಾಜವಾದವನ್ನು ಘೋರ ವಿಪತ್ತೆಂದು ಭ್ರಮಿಸಿ ಬಾಲ್ಷವಿಕ್ ಸರ್ಕಾರವನ್ನು ಉರುಳಿಸಲು ಪಣತೊಟ್ಟವು. ಮಹತ್ವಾಕಾಂಕ್ಷೆಗಳನ್ನು ತುಂಬಿಕೊಂಡು ಕ್ರಾಂತಿಪಥ ತುಳಿದ ಜನತೆ ಅಸಂಖ್ಯಾತ ಕಷ್ಟಪರಂಪರೆಗಳಿಗೆ ಗುರಿಯಾಗಬೇಕಾಯಿತು. ನಿರಾಶೆ ತುಂಬಿಬರುತ್ತಿತ್ತು. ಎಲ್ಲ ಸಮಸ್ಯೆಗಳಿಗೂ ಆತ್ಮವಿಶ್ವಾಸದಿಂದ ಪರಿಹಾರ ಸೂಚಿಸಿ ಕಾರ್ಯಗತ ಮಾಡುವ ಧೀಶಕ್ತಿ ಲೆನಿನ್ನನಲ್ಲಿ ಉಕ್ಕಿ ಹರಿಯಿತು. ನಿರ್ಭೀತನಾಗಿ ಇಡೀ ಸಮಾಜದ ಬುನಾದಿಯನ್ನೇ ಬದಲಿಸುವ ಕಾನೂನುಗಳನ್ನು ಘೋಷಿಸಿದ. ಜರ್ಮನಿಯೊಡನೆ ಶಾಂತಿಕರಾರು, ಭೂಸಂಪತ್ತಿನ ಸಂಪೂರ್ಣ ರಾಷ್ಟ್ರೀಕರಣ, ವೈಯಕ್ತಿಕ ಒಡೆತನದ ನಿರ್ಮೂಲ, ದುಡಿಮೆಗಾರರ ಸಾಮೂಹಿಕ ಸ್ವಾಮ್ಯ, ಆಡಳಿತ ಯಂತ್ರದ ಆಮೂಲಾಗ್ರ ಪರಿವರ್ತನೆ; ಎಲ್ಲವೂ ಏಕಕಾಲಕ್ಕೆ ಜಾರಿಗೆ ಬಂದವು. ಸರಳಜೀವಿಗಳೂ ಅನುಭವಿಗಳೂ ಆದ ಜನನಾಯಕರು ಅಧಿಕಾರೀ ಸ್ಥಾನದಲ್ಲಿ ನಿಯಮಿತರಾದರು. ಸೈನ್ಯದ ಜವಾಬ್ದಾರಿಯನ್ನು ವಹಿಸಬೇಕಾಯಿತು. ಇಂಥ ಬೃಹದ್ ವ್ಯವಸ್ಥೆಯ ಕೇಂದ್ರ

ಶಕ್ತಿಯಾಗಿ ಲೆನಿನ್ ಅವ್ಯಾಹತವಾಗಿ ಅತಿ ತೀಕ್ಷ್ಣ ಜಾಗೃತಿಯಿಂದ ವ್ಯವಹರಿಸ ದಿದ್ದಿದ್ದರೆ ಸೋವಿಯಟ್ ರಾಜ್ಯ ಜಗತ್ತಿನಲ್ಲಿ ಉಳಿಯುವುದು ದುಸ್ತರವಾಗು ತ್ತಿತ್ತು. ಅಭಿಮನ್ಯುವಿನಂತೆ ಹೋರಾಡಿದ ಈ ನೂತನ ಮಹಾನಾಯಕ ದುರಂತ ಗಳಿಂದ ಪಾರಾಗಿ ಹೊಸ ಸಮಾಜವನ್ನು ಸಂಘಟಿಸಿದುದು ಜಗತ್ತಿನ ಇತಿಹಾಸದ ಒಂದು ಅದ್ಭುತ ಪವಾಡ. ಆರ್ಥಿಕ ಯೋಜನೆ, ಸಾಮಾಜಿಕ ಪುನರ್ರಚನೆ, ರಾಜಕೀಯ ಪುನರ್ವ್ಯವಸ್ಥೆ ಎಲ್ಲವೂ ಹೊಸ ಮೌಲ್ಯಗಳ ಬೆಳಕಿನಲ್ಲಿ ಸಾಗಿದವು. ಆತನ ವಿಚಾರಶಕ್ತಿ ವಿಶ್ವಕ್ಕೇ ಮಾರ್ಗದರ್ಶನ ಮಾಡಿತು.

ಇಷ್ಟಾದರೂ ವರ್ಗನಿರಾಕರಣೆಯ ಮಥನದಿಂದ ಹುಟ್ಟಿಬಂದ ಕರಾಳ ದ್ವೇಷ ಆರಲಿಲ್ಲ. ಹೆಚ್ಚು ರಕ್ತಪಾತವಿಲ್ಲದೆ ನಡೆದ ಕ್ರಾಂತಿ ಒಂದು ವರ್ಷ ದೊಳಗಾಗಿ ಕಾಡ್ಗಿಚ್ಚಿನಂತೆ ಹಬ್ಬಿದ ವಿಧ್ವಂಸಕ ಘರ್ಷಣೆಗಳಿಗೆಡೆಗೊಟ್ಟಿತು. ದೇಶದ್ರೋಹದ ಪ್ರಕರಣಗಳೆನ್ನೆದುರಿಸಲು ಅಸಂಖ್ಯಾತ ಜನರ ಕೊಲೆ ಯಾಯಿತು. ಬೇಟೆಗಾರರನ್ನೆದುರಿಸಿ ನಿಂತ ಮೃಗದಂತೆ ಕಟ್ಟಕಡೆಯ ಸಮರದಲ್ಲಿ ನಿಂತ ಕ್ರಾಂತಿಪಡೆ ರಾಕ್ಷಸೀ ಕ್ರೌರ್ಯದಿಂದ ವಿರೋಧಿಗಳನ್ನೆಲ್ಲ ಮೂಲೋತ್ಪಾಟನೆ ಮಾಡಿತು. ಈ ವಿದ್ವೇಷದ ತೀಕ್ಷ್ಣಜ್ವಾಲೆ ಹಬ್ಬಿ ಅನೇಕ ದಶಕಗಳ ಪರ್ಯಂತ ರಷ್ಯ ಸತತವಾಗಿ ಶೀತಲ ಸಮರವನ್ನೆದುರಿಸಬೇಕಾಯಿತು. ಉದ್ದೇಶಿತ ಶಾಂತಿ ಮರೀಚಿಕೆಯಂತೆ ಮಾಯವಾಗುತ್ತ ಪರಸ್ಪರ ಸಂಶಯ, ಭಯ, ಅಪಪ್ರಚಾರಗಳ ಅನಿಷ್ಟಪರಂಪರೆ ಸಮಾಜವಾದದ ಮೂಲ ಉದ್ದೇಶಗಳ ಸಾಫಲ್ಯಕ್ಕೆ ಕಂಟಕವಾಯಿತು. ಇಂಥ ವಾತಾವರಣದಲ್ಲೂ ಲೆನಿನ್ ತಾಳ್ಮೆ ಯಿಂದ ಧೃತಿಗೆಡದೆ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ತೊಡಗಿ ರಾಜ್ಯ ನೌಕೆ ಯನ್ನು ಸುದೃಢವಾಗಿ ರಚಿಸಿ ಸೋವಿಯಟ್ ದೇಶವನ್ನು ಮೇಲೆತ್ತಿದನು. ರಾಜ್ಯಶಕ್ತಿಯ ಮೂಲಕ ವಿರೋಧಶಕ್ತಿಗಳ ಕ್ರೂರದಮನ ಜಗತ್ತಿನ ದೃಷ್ಟಿಯಲ್ಲಿ ರಷ್ಯದ ಚಿತ್ರವನ್ನೇ ವಿರೂಪಗೊಳಿಸಿತು. ಭಯಾನಕ ಸ್ವರೂಪದ ಪೆಡಂ ಭೂತದಂತೆ ಸಾಮ್ಯವಾದೀ ರಾಷ್ಟ್ರವನ್ನು ಬಣ್ಣಿಸಿ ಅಪಪ್ರಚಾರ ಮಾಡಲು ಈ ರಕ್ತಪ್ರವಾಹ ಕಾರಣವಾಯಿತು. ಕ್ಷಿಪ್ರಕ್ರಾಂತಿಯಿಂದ ಪಡೆದ ರಾಜ್ಯ ವಿದ್ವೇಷದ ಬಡಬಾಗ್ನಿಯಲ್ಲಿ ಜನತೆಯನ್ನು ತಲ್ಲಣಗೊಳಿಸುತ್ತಿತ್ತು. ಮಹಾಶಯ ಲೆನಿನ್ ಈ ಅಪಾಯ ಪರಿಸ್ಥಿತಿಯಿಂದ ರಾಷ್ಟ್ರವನ್ನು ಉಳಿಸಲು ಅಗಾಧ ಪ್ರಯತ್ನ ಮಾಡಿದ. ಕ್ರೂರದಮನವನ್ನು ಕೂಡಲೆ ನಿಲ್ಲಿಸಿದ. ಆರ್ಥಿಕ

ಪುನರ್ರಚನೆಯ ಬೃಹತ್ ಪಾಂಚವಾರ್ಷಿಕ ಯೋಜನೆಯನ್ನು ದಿಟ್ಟತನದಿಂದ ರಾಷ್ಟ್ರದ ಮುಂದೆ ಮಂಡಿಸಿದ. 'ಆರ್ಥಿಕ ಸಮತೆ' ವ್ಯಾವಹಾರಿಕ ಸತ್ಯವಾಗಿ ದುಡಿಮೆಗಾರನ ಜೀವನ ಉತ್ತಮವಾಗದೆ ಶಾಂತಿ ಅಸಾಧ್ಯ ಎಂಬ ಧ್ಯೇಯದಿಂದ "ಹೊಸ ಆರ್ಥಿಕ ಧೋರಣೆ" (ನ್ಯೂ ಎಕನಾಮಿಕ್ ಪಾಲಿಸಿ ಅಥವಾ ಎನ್.ಇ.ಪಿ.) ಎಂಬ ಮೊಟ್ಟಮೊದಲನೆಯ ರಾಷ್ಟ್ರೀಕರಣ ಯೋಜನೆಗಳ ಪ್ರಯತ್ನ ಅಂದಿನಿಂದ ಪ್ರಸಿದ್ಧವಾಯಿತು. ಸಾಮ್ಯವಾದೀ ರಾಜ್ಯ ಹೊಸಧ್ಯೇಯವೊಂದರ ಬೆಳಕಿನಲ್ಲಿ ಸುಸಂಘಟಿತವಾಗುತ್ತಾ ಸಾಗಿತು. 1920 ರ ವೇಳೆಗೆ ರಷ್ಯದ ರಾಷ್ಟ್ರಜೀವನ ಮತ್ತೆ ಸುವ್ಯವಸ್ಥಿತವಾಗಿ ಶಾಂತಿ ಸಮೃದ್ಧಿಗಳ ಕಡೆಗೆ ನಡೆಯ ತೊಡಗಿತು.


೧೫

ಕ್ರಾಂತಿನಾಯಕನ ವಿರೋಧವಾಗಿ ಒಳಸಂಚುಗಳು ನಡೆಯುತ್ತಲೇ ಇದ್ದುವು. ಅಕ್ಟೋಬರ್ ಕ್ರಾಂತಿಯ ತರುಣದಲ್ಲೇ ಲೆನಿನ್‌ನ ಕೊಲೆಗೆ ಪ್ರಯತ್ನ ನಡೆಯಿತು. 1918 ರ ಆಗಸ್ಟ್ ಮೂವತ್ತರಂದು ಲೆನಿನ್ ತನ್ನ ಪಕ್ಷದ ಕಾರ್ಯಾಲಯ ದಿಂದ ಹೊರಬಂದು ಕಾರನ್ನು ಹತ್ತುತ್ತಿದ್ದಾಗ ಹಠಾತ್ತನೆ ಯುವತಿಯೊಬ್ಬಳು ಅವನ ಕಡೆಗೆ ಗುಂಡುಹಾರಿಸಿದಳು. ಕಾಪ್ಲಾನ್ ಎಂಬ ಆ ರಷ್ಯನ್ ಯುವತಿ ಕ್ರಾಂತಿವಿರೋಧಿ ಗುಂಪಿನ ಕೈ ಗೊಂಬೆಯಾಗಿದ್ದಳು. ವಿಷಸಿಂಚಿತ ಗುಂಡಿನೇಟಿಗೆ ತುತ್ತಾದ ಲೆನಿನ್ ಜೀವ ಮರಣಗಳ ಮಧ್ಯೆ ಸ್ವಲ್ಪ ಕಾಲ ತೂಗಾಡಿ ದೈವವಶಾತ್ ಉಳಿದುಕೊಂಡ. ಆದರೂ ಆ ಘಟನೆ ಆ ನೋವು ಶಾಶ್ವತ ಆಘಾತಮಾಡಿಬಿಟ್ಟಿತು. ಅಸಂಖ್ಯಾತ ಜನ ಕಣ್ಣೀರಿಟ್ಟರು. ಆದರೂ ಆತನ ಆರೋಗ್ಯ ಸ್ವಲ್ಪ ಸುಧಾರಿಸಿದ ಬಗ್ಗೆ ಸಮಾಧಾನಪಟ್ಟಿದ್ದರು.

ಮತ್ತೆ ಮೂರು ವರ್ಷಗಳು ಲೆನಿನ್ ರಷ್ಯದ ಅಪ್ರತಿಹತ ನಾಯಕ ನಾಗಿ ಕೆಲಸ ಮಾಡುತ್ತಿದ್ದ. ರಾಜ್ಯಶಕ್ತಿಯ ಆಕ್ರಮಣಕ್ಕೆ ತನ್ನ ಪಕ್ಷದಲ್ಲೇ ಸ್ಪರ್ಧೆಮೂಡಿ ಸಾಮ್ಯವಾದೀ ಮಹಾಸಂಸ್ಥೆ ಬಿರುಕು ಬಿಡುತ್ತಿದ್ದುದನ್ನು ಕಂಡು ಲೆನಿನ್ ದುಃಖಿತನಾದ. ಜೀವದ ಹಂಗು ತೊರೆದು ಹೊಸ ಆರ್ಥಿಕ ಯೋಜನೆಗಳ ಯಶಸ್ಸಿಗಾಗಿ ಟೊಂಕ ಕಟ್ಟಿ ನಿಂತ. ರಾಜಕೀಯ ಅಧಿಕಾರದ ಅಸಹ್ಯ ಸ್ಪರ್ಧೆಯನ್ನು ಖಂಡಿಸಿದ. ರಾಷ್ಟ್ರನಿರ್ಮಾಣದ ಆರ್ಥಿಕ ಸಾಮಾಜಿಕ ಕಾರ್ಯಕ್ರಮಗಳ ಕಡೆಗೆ ನಾಯಕರ ಹಾಗೂ ಜನತೆಯ ಪೂರ್ಣ ಗಮನವನ್ನು

ತಿರುಗಿಸಲೆತ್ನಿಸಿದ. ಆ ಕ್ಷಿಪ್ರಕಾಲದಲ್ಲಿ ಜಾರಿಗೆ ಬಂದ ಅಸಂಖ್ಯಾತ ಕಾನೂನು ಕಟ್ಟಳೆಗಳು ಸಮಾಜವಾದೀ ಸಮಾಜದ ಬುನಾದಿಯನ್ನು ಇಂದಿಗೂ ಸುಭದ್ರವಾಗಿ ನಿಲ್ಲಿಸಿವೆ.

1922ರ ಬೇಸಿಗೆಯಲ್ಲಿ ಲೆನಿನ್ ಮಾಸ್ಕೋ ನಗರದ ಸಮೀಪದ ಗಾರ್ಕಿ ಎಂಬ ಉಪನಗರದಲ್ಲಿ ವಾಸಿಸತೊಡಗಿದ. ಅವನ ಅನಾರೋಗ್ಯ ವಿಷಮಿಸುತ್ತಿತ್ತು. ಗಾಜ್ನಿಕ್ ಕಾರ್ಖಾನೆಯ ಕೂಲಿಗಾರ ಸಂಘವೊಂದು ತನ್ನ ಸರ್ವ ಸದಸ್ಯರ ಸಭೆಯಲ್ಲಿ "ನಮ್ಮ ನಾಯಕ ವ್ಲಾಡಿಮಿರ್ ಇಲಿಚ್‌ಗೆ ಮೂರು ತಿಂಗಳ ವಿಶ್ರಾಂತಿ ಕೊಡತಕ್ಕದ್ದು. ಆತ ಈ ಕೂಡಲೇ ವೈದ್ಯರ ಸಲಹೆ ಪಡೆದು ಕಟ್ಟುನಿಟ್ಟಾಗಿ ಅವರ ಚಿಕಿತ್ಸೆಯನ್ನು ತೆಗೆದುಕೊಳ್ಳಬೇಕು. ಕೂಲಿಗಾರರಿಗಾಗಿ ಈ ಮಹಾಜೀವ ಮತ್ತೆ ಚೇತರಿಸಿಕೊಳ್ಳಬೇಕೆಂದು ನಮ್ಮ ಹಾರೈಕೆ" ಎಂದು ನಿರ್ಣಯಮಾಡಿ ಲೆನಿನ್‌ಗೆ ಕಳುಹಿಸಿತು. ಈ ಅಪಾರ ಪ್ರೇಮ ಆ ಶಿಥಿಲ ದೇಹಕ್ಕೆ ಅದ್ಭುತ ಸಮಾಧಾನ ತಂದಿತು. ಮತ್ತೊಮ್ಮೆ ಗುಣಮುಖನಾಗುವ ಆಶಾಕಿರಣ ಮೂಡುತ್ತಿತ್ತು. ಮಾಸ್ಕೋ ನಗರಕ್ಕೆ ಹಿಂತಿರುಗಿ ಕಾರ್ಯೋನ್ಮುಖನಾಗಿದ್ದ. ಹಠಾತ್ತನೆ 1923ರ ಮಾರ್ಚಿಯಲ್ಲಿ ದೇಹಸ್ಥಿತಿ ಕುಸಿಯಿತು. ಗಾರ್ಕಿ ಗ್ರಾಮಕ್ಕೆ ಹಿಂತಿರುಗಿದ. ತೀವ್ರಗತಿಯಲ್ಲಿ ಖಾಯಿಲೆ ಉಲ್ಬಣವಾಗುತ್ತಿತ್ತು. ಮೃತ್ಯುವಿನೊಂದಿಗೆ ಹೋರಾಟ ನಡೆಸುವ ಉತ್ಸಾಹವೂ ಆ ಜೀವಕ್ಕೆ ಸ್ವಾಭಾವಿಕವಾಗಿಯೇ ಕಂಡಿತು. ನವಂಬರಿನಲ್ಲಿ ಶ್ರಮಜೀವಿಗಳ ತಂಡವೊಂದು ಅವನ ಭೇಟಿಗಾಗಿ ಬಂದಿತ್ತು. ಅದೇ ಅವನ ಕೊನೆಯ ಭೇಟಿ ಎಂಬ ಭಾಸವಾಗಿ ಲೆನಿನ್ ಆ ಗೆಳೆಯರನ್ನು ಅಪ್ಪಿಕೊಂಡ. ಮುದುಕ ಕೂಲಿಗಾರ ಕುಸ್ನಿಟ್ಸೋವ್ ಆ ಸ್ಪರ್ಶಕ್ಕೆ ಕರಗಿಹೋದ. ಕಣ್ಣುಗಳು ಧಾರಾಕಾರವಾಗಿ ನೀರು ಸುರಿಸುತ್ತಿದ್ದವು. "ನಾನೊಬ್ಬ ಕಮ್ಮಾರ ಲೆನಿನ್ ; ನೀನು ರೂಪಿಸಿಕೊಟ್ಟಿದ್ದೆಲ್ಲವನ್ನೂ ಕಟ್ಟಿ ನಿರ್ಮಾಣ ಮಾಡುತ್ತೇನೆ" ಎಂದು ತನ್ನ ನಾಯಕನನ್ನು ಗಾಢವಾಗಿ ಅಪ್ಪಿಬಿಟ್ಟ. ಅವರೆಲ್ಲ ಹೋದಮೇಲೆ ಸರಿರಾತ್ರಿಯಾದರೂ ಯಾವುದೋ ಸ್ವಪ್ನ ಪ್ರಪಂಚದಲ್ಲಿ ಲೆನಿನ್ ವಿಹರಿಸುತ್ತಾ ಅವರ ಕಾಗದಗಳನ್ನೋದುತ್ತ ಕುಳಿತುಬಿಟ್ಟ. 1924 ರ ಜನವರಿ 24 ರಂದು ಮಹಾಶಯ ಲೆನಿನ್ ಸಂಜೆಯ ಸೂರ್ಯನೊಡನೆ ಅಸ್ತಂಗತನಾದ. ಲೋಕ ವಿಖ್ಯಾತ ಕ್ರಾಂತಿನಾಯಕನ ಜೀವಜ್ಯೋತಿ ಅಮರವಾಯಿತು.



ಮಹಾತ್ಮ ಗಾಂಧೀ

ಮಹಾತ್ಮಾ ಗಾಂಧೀ

೧

ರಾಜಕಾರಣದ ಪರಂಪರಾನುಗತ ಚರಿತ್ರೆ ಹಿಂಸಾಶಕ್ತಿಯನ್ನೇ ಅವಲಂಬಿಸಿ ನಡೆದಂತೆ ಭಾಸವಾದರೂ ಮಾನವಸಮಾಜವನ್ನು ರಕ್ಷಿಸಿ ಬೆಳೆಸಿ ಬಾಳಿಸಿರುವುದು ಹಿಂಸೆಯಲ್ಲ, ಅಹಿಂಸೆ: ದ್ವೇಷ ಅಸೂಯೆಗಳಲ್ಲ ಪ್ರೇಮ ವಿಶ್ವಾಸಗಳು ; ಶಸ್ತ್ರಶಕ್ತಿ ಯುದ್ಧಕೌಶಲಗಳಲ್ಲ, ಆತ್ಮಜ್ಞಾನ ವಿಜ್ಞಾನಗಳು ; ರಾಜಕಾರಣ ಅರ್ಥಶಾಸ್ತ್ರಗಳಲ್ಲ, ಸಾಮಾಜಿಕ ಮತ್ತು ನೈತಿಕ ಧರ್ಮಪ್ರಜ್ಞೆ. ವಿಚಾರ ವಂತರಿಗೆ, ಸಾಧು ಸತ್ಪುರುಷರಿಗೆ ಈ ಸೂಕ್ಷ್ಮ ವಿಚಾರ ಮನದಟ್ಟಾದರೂ, ವೈಯಕ್ತಿಕ ಹಾಗೂ ಕೌಟುಂಬಿಕ ಜೀವನದಲ್ಲಿ ಪರಿಣಾಮಕಾರಿಯಾದಂತೆ ನೈತಿಕಶಕ್ತಿ ರಾಜಕಾರಣದಲ್ಲಿ ಶಕ್ತಿಯುತ ಪ್ರಭಾವವಾಗಲಾರದೆಂದೇ ನಂಬಿಕೆ ಯಿತ್ತು. ಹಿಂಸೆಗೆ ಪ್ರತಿಹಿಂಸೆ, ಶಸ್ತ್ರಕ್ಕೆ ಪ್ರತಿಶಸ್ತ್ರ, ವಿನಾಶವೃತ್ತಿಗೆ ಪ್ರತಿವಿನಾಶ ಇದೇ ಅನಿವಾರ್ಯ ಮಾರ್ಗವೆನಿಸಿತ್ತು. ಈ ಲೋಕಕಂಟಕ ಭ್ರಮೆಯನ್ನು ಮೊದಲಬಾರಿಗೆ ನಿರಸನಗೊಳಿಸಿ, ಜಗತ್ತಿನ ನೈತಿಕಚೇತನ ವನ್ನು ಸಾಮೂಹಿಕವಾಗಿ ಸಂಘಟಿಸಿ, ಭಾರತೀಯ ಮಹಾಕ್ರಾಂತಿಗೆ ಶಕ್ತಿಯುತ ಸತ್ಯಾಗ್ರಹ ಶಾಸ್ತ್ರವನ್ನೂ ಅದಕ್ಕೊಂದು ಆಚಾರಸಂಹಿತೆಯನ್ನೂ ರೂಪಿಸಿ ಕೊಟ್ಟ ಮಹಾನುಭಾವ ಲೋಕಪೂಜ್ಯ ಮಹಾತ್ಮಾ ಗಾಂಧೀ.

ಹದಿನೆಂಟನೆಯ ಶತಮಾನದಲ್ಲಿ ಭಾರತಕ್ಕೆ ವ್ಯಾಪಾರಕ್ಕಾಗಿ ಪೋರ್ಚು ಗೀಸರು, ಫ್ರೆಂಚರು, ಡಚ್ಚರು, ಮತ್ತು ಇಂಗ್ಲೀಷರು ಬಂದರು. ಬಹುಬೇಗ ಔದ್ಯೋಗಿಕ ಕ್ರಾಂತಿಯನ್ನು ಸಾಧಿಸಿ ಅರ್ಥಶಾಸ್ತ್ರ ಮತ್ತು ರಾಜಕಾರಣಗಳನ್ನು ಸಾಮ್ರಾಜ್ಯವಾದಕ್ಕೆ ಅಳವಡಿಸಿಕೊಂಡು ಚಕ್ರಾಧಿಪತ್ಯವನ್ನು ಕಟ್ಟಿದವರು ಚಾಣಾಕ್ಷರಾದ ಇಂಗ್ಲೀಷರು. ಭಾರತದ ದಾಸ್ಯದ ದುರಂತ ಕಥೆ ಆ ಶತಮಾನದ ಇತಿಹಾಸದಲ್ಲಿ ಎದ್ದುಕಾಣುತ್ತದೆ. ನಿರಂಕುಶ ಸ್ವಾರ್ಥಸಾಧಕ ಪಾಳೆಯಗಾರಿಕೆಯ ಅಸಂಖ್ಯಾತ ತುಣುಕು ರಾಜ್ಯಗಳಾಗಿ ಒಡೆದುಹೋಗಿತ್ತು ಈ ರಾಷ್ಟ್ರ. ಪರಸ್ಪರ ದ್ವೇಷಾಸೂಯೆಗಳನ್ನು ಉಲ್ಬಣಗೊಳಿಸಿ ಗುಂಡು ಮದ್ದು ಫಿರಂಗಿಗಳನ್ನು ಜೊತೆ

ಯಲ್ಲಿ ತಂದು ಇಡೀ ರಾಷ್ಟ್ರದ ಮೇಲೆ ಏಕೈಕ ಸರ್ವಾಧಿಕಾರವನ್ನು ಸ್ಥಾಪಿಸಿಕೊಂಡರು ಬ್ರಿಟಿಷ್ ಸಾಮ್ರಾಜ್ಯವಾದಿಗಳು. ಭಾರತದ ಆತ್ಮಾಭಿಮಾನ ಕೆರಳಿ ನಿಂತರೂ ಪಾಶ್ಚಾತ್ಯ ಶಸ್ತ್ರಾಸ್ತ್ರಗಳಿಂದ ಸಜ್ಜಿತವಾದ ಸೈನ್ಯಶಕ್ತಿಯನ್ನೆದುರಿಸಲು ಅಸಮರ್ಥವಾಯಿತು. ವೀರಾವೇಶದಿಂದ ಪರಕೀಯ ದಬ್ಬಾಳಿಕೆಯನ್ನೆದುರಿಸುತ್ತಾ ದಾಸ್ಯಜೀವನವನ್ನು ಧಿಕ್ಕರಿಸಿ ದಂಗೆಯೆದ್ದು ಆತ್ಮಾರ್ಪಣೆ ಮಾಡಿದ ವೀರಾಗ್ರಣಿಗಳು ಹಲವರಾಗಿ ಹೋದರು. ಕಟ್ಟಕಡೆಯ ನಿಸ್ಸೀಮ ಪ್ರಯತ್ನ 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಬರಸಿಡಿಲಿನ ಭಯಂಕರ ಕಂಪನದಲ್ಲಿ ಉಡುಗಿಹೋಯಿತು. ಭಾರತದ ಜನ ನಿರ್ವಿಣ್ಣರಾಗಿ ನಿಸ್ಸಹಾಯಕತೆಗೆ ಬಲಿಯಾಗಿ ಬ್ರಿಟಿಷ್ ಮಹಾಚಕ್ರಾಧಿಪತ್ಯದ ದಾಸ್ಯಶೃಂಖಲೆಗಳಿಗೆ ಸಂಪೂರ್ಣ ಶರಣಾಗತರಾಗಿಬಿಟ್ಟರು. ಏಷ್ಯಾ, ಆಫ್ರಿಕಾ ಖಂಡಗಳ ರಾಜಕೀಯ ಪತನ ಪಾಶ್ಚಾತ್ಯ ನಾಗರೀಕತೆಯ ವಿಶ್ವವ್ಯಾಪಕ ಶೋಷಣೆಗೆ ಬುನಾದಿಯಾಯಿತು. ಇತಿಹಾಸದ ತಿರುವು ಹೊಸ ಅಧ್ಯಾಯವೊಂದರ ನಾಂದಿಯಾಯಿತು.

ಸೈನ್ಯಶಕ್ತಿ ಸಾಮ್ರಾಜ್ಯ ಶಕ್ತಿಗಳು ವಿಜ್ಞಾನದ ಆಸರೆ ಪಡೆದು ಪಾಶ್ಚಾತ್ಯ ಸಾರ್ವಭೌಮತ್ವವನ್ನು ಸ್ಥಾಪಿಸುತ್ತಿದ್ದ ಕಾಲಕ್ಕೆ ಅದೇ ಸಮಾಜದ ಮತ್ತೊಂದು ಮುಖ ಅತಿ ಕ್ಷೀಣವಾದರೂ ಸುಸ್ಪಷ್ಟ ಧ್ವನಿಯಲ್ಲಿ ಸುಸಂಸ್ಕೃತ ಮಾನವೀಯ ಮೂಲಮೌಲ್ಯಗಳು ನಾಶವಾಗುತ್ತಿರುವುದನ್ನು ಖಂಡಿಸಿ ವಿಚಾರಕ್ರಾಂತಿಯನ್ನು ಘೋಷಿಸುತ್ತಿತ್ತು. ಇಂಗ್ಲೆಂಡಿನ ಪ್ರಸಿದ್ಧ ಸಾಹಿತಿ ರಸ್ಕಿನ್ ತನ್ನ "ಅನ್ ಟು ದಿಸ್ ಲಾಸ್ಟ್" (ಕಟ್ಟಕಡೆಯವನಿಗೂ ನ್ಯಾಯ) ಎಂಬ ಗ್ರಂಥವನ್ನು ಬರೆದು ಆಧುನಿಕ ಅರ್ಥಶಾಸ್ತ್ರದ ಅನರ್ಥಗಳನ್ನು ಎತ್ತಿ ತೋರಿಸಿದನು. ಅಮೇರಿಕದ ಹೆನ್ರಿ ಜಾರ್ಜ್ ಸ್ವತಃ ಅರ್ಥಶಾಸ್ತ್ರಪಂಡಿತ, ಹದಿನೆಂಟನೆಯ ಶತಮಾನದಲ್ಲೇ ತನ್ನ "ಪ್ರೋಗ್ರೆಸ್ ಅಂಡ್ ಪಾವರ್ಟಿ" (ಪ್ರಗತಿ ಹಾಗೂ ಬಡತನ) ಎಂಬ ಕೃತಿಯಲ್ಲಿ ಇಂದಿನ ಆರ್ಥಿಕ ವ್ಯವಸ್ಥೆ ಹೇಗೆ ಧನಿಕರನ್ನು ಬೆಳೆಸಿ ದರಿದ್ರರನ್ನು ತುಳಿಯುತ್ತದೆ ಎಂಬುದನ್ನು ವೈಜ್ಞಾನಿಕವಾಗಿ ವಿವರಿಸಿದನು. ದಾರ್ಶನಿಕ ಸಾಹಿತಿ ಹೆನ್ರಿ ಡೇವಿಡ್ ಥೋರೋ ಅಮೇರಿಕದ ಸಮಾಜದ ಘಾತಕ ಪ್ರವೃತ್ತಿಗಳನ್ನು ಪ್ರತಿಭಟಿಸಿ ತನ್ನ "ಸಿವಿಲ್ ಡಿಸೊಬಿಡಿಯನ್ಸ್" (ಅಹಿಂಸಕ ಅಸಹಕಾರ) ಎಂಬ ಪ್ರಸಿದ್ಧ ಲೇಖನದಿಂದ ಅಲ್ಲಿನ ವಿಚಾರಪರರನ್ನೆಲ್ಲ ಎಚ್ಚರಿಸಿದನು ರಷ್ಯದೇಶದ ಮಹರ್ಷಿ ಟಾಲ್‌ಸ್ಟಾಯ್ ಮಾನವೀಯ ಧರ್ಮಶ್ರದ್ಧೆಗೆ ಜೀವಂತ

ಮೌಲ್ಯಗಳನ್ನು ಅಳವಡಿಸಿ, ಸ್ವತಃ ಅನುಷ್ಠಾನ ಮಾಡಿ, ಸಿರಿವಂತಿಕೆಯ ದರ್ಪ ದೌರ್ಜನ್ಯಗಳನ್ನು ಪ್ರಖರ ಬರಹಗಳಿಂದ ಪ್ರತಿಭಟಿಸಿ ನಿಂತನು. ಔದ್ಯೋಗೀಕರಣದ ಯಾಂತ್ರಿಕ ನಾಗಾಲೋಟದಲ್ಲಿ ಮಾನವಕೋಟಿಯನ್ನು ಧನಶಕ್ತಿಯ ದಾಸ್ಯಕ್ಕೆ ನೂಕುತ್ತಿದ್ದ ಪಾಶ್ಚಾತ್ಯ ಸಮಾಜವ್ಯವಸ್ಥೆಯಲ್ಲಿನ ವರ್ಗ ಘರ್ಷಣೆಯನ್ನು ಗುರುತಿಸಿದ ಪ್ರಸಿದ್ಧ ದಾರ್ಶನಿಕ ಕಾರ್ಲ್‌ಮಾರ್ಕ್ಸ್ ಸಮತಾವಾದದ ಮಹಾಘೋಷಣೆಯನ್ನು ಮಾಡಿದ. ಫ್ರಾನ್ಸಿನ ರೋಮನ್ ರೋಲಾ, ಇಂಗ್ಲೆಂಡಿನ ಜೂಲಿಯನ್ ಹಕ್ಸ್‌ಲಿ, ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೀನ್, ಡಾಕ್ಟರ್ ಆಲ್ಬರ್ಟ್ ಷ್ವೈಟ್ಸರ್, ಬರ್ಟ್ರೆಂಡ್ ರಸೆಲ್ ಈ ಮಹಾಪರಂಪರೆ ಅವ್ಯಾಹತವಾಗಿ ಉಜ್ವಲವಾಗಿ ಈ ವಿಚಾರಧಾರೆಯನ್ನೇ ಎತ್ತಿ ಹಿಡಿಯಿತು. ಪಾಶ್ಚಾತ್ಯ ನಾಗರೀಕತೆಯ ಗರ್ಭದಲ್ಲೇ ಹುಟ್ಟಿಬಂದ ಈ ವಿವೇಕವಾಣಿ ಸ್ಪಷ್ಟವಾಗಿ ನುಡಿಯುತ್ತಿದ್ದರೂ ಸಾಹಸಜೀವನದ ಪ್ರಥಮ ಯಶಸ್ಸಿನ ಅಮಲಿನಲ್ಲಿ ದಾರಿತಪ್ಪಿದ್ದ ರಾಜಕಾರಣಕ್ಷೇತ್ರ ದುರಂತದಿಂದ ದುರಂತಕ್ಕೇ ಧಾವಿಸುತ್ತಿತ್ತು. ಅಗಾಧ ಪ್ರಮಾಣದ ಶೋಷಣೆ, ಹಿಂಸೆ, ದಬ್ಬಾಳಿಕೆಗಳ ತೊತ್ತಾಗಿ ವಿಜ್ಞಾನ ಕ್ಷೇತ್ರ ಬೆಳೆದುಬಂತು. ಕೊನೆಗೊಮ್ಮೆ ಅಣುಬಾಂಬಿನ ಸರ್ವನಾಶಕ ಸಾಧನೆಯನ್ನು ಬಳಸಿ ಭಸ್ಮಾಸುರನಂತೆ ಭಯಾನಕ ಆತ್ಮನಾಶದ ಅಂಚಿನಲ್ಲಿ ನಿಂತಿತು, ಕಗ್ಗತ್ತಲಿನ ಭವಿಷ್ಯವನ್ನು ಕಂಡು ಲೋಕ ಸ್ವಲ್ಪ ಹಿಮ್ಮೆಟ್ಟಿತು. ನಾಗರೀಕತೆಯ ಈ ಮಾಯಾಮೃಗದ ಬಸರಿನಿಂದೊಸರಿಬಂದ ಈ ಮಾರೀಚನನ್ನು ದಮನಮಾಡಿದರೆ ಪ್ರತಿಹಿಂಸೆಯ ಪಥದಿಂದ ವಿಮುಖವಾಗುವ ದಾರಿಕಾಣದೆ ಪರಿತಪಿಸುತ್ತಿತ್ತು.

ಈ ವಿಶ್ವಭೂಮಿಕೆಯ ಮಧ್ಯೆ ಭಾರತದ ಮೂಕಜನಕೋಟಿ ತನ್ನ ದೌರ್ಭಾಗ್ಯ ದಾಸ್ಯ ಅವನತಿಗಳ ವಿಮೋಚನೆಗಾಗಿ ಪ್ರಚಂಡ ಸಾಹಸ ಮಾಡುತ್ತಿತ್ತು. ಸಾಮ್ರಾಜ್ಯಶಾಹಿಯ ಆಶ್ರಯವನ್ನವಲಂಬಿಸಿ ಹೀನಸ್ಥಿತಿಯ ಇಳಿಜಾರಿನಲ್ಲಿ ಸಾಗುತ್ತಿದ್ದ ಭಾರತೀಯರಿಗೆ ಕಣ್ಣು ಕೋರೈಸಿ-ವಿಜೃಂಭಿಸುತ್ತಿದ್ದ ಶಸ್ತ್ರಶಕ್ತಿ ಎದುರಿಸಲಾಗದ ಅಜೇಯ ರಾಕ್ಷಸನಂತೆ ಕಂಡಿತು. ಎಲ್ಲೆಲ್ಲೂ ಬ್ರಿಟಿಷರ ಶಸ್ತ್ರಸಜ್ಜಿತ ಸೈನ್ಯಪಡೆ. ಅವರ ಆಶ್ರಯಪಡೆದು ದಾಸ್ಯವನ್ನಪ್ಪಿದ್ದ ರಾಜಮಹಾರಾಜರುಗಳು ; ಸ್ವಂತ ಲಾಭಕ್ಕಾಗಿ ದೇಶಹಿತವನ್ನು ಮಾರಿದ್ದ ವ್ಯಾಪಾರೀ ಸಂಸ್ಥೆಗಳು ; ಪಾಶ್ಚಾತ್ಯ ದಣಿಗಳ ಆಜ್ಞಾನುವರ್ತಿಗಳಾಗಿ ರಾಷ್ಟ್ರೀಯತೆಯನ್ನೇ ದಮನಮಾಡುತ್ತಿದ್ದ

ಅಧಿಕಾರಿವರ್ಗ ; ಈ ವಾತಾವರಣದಲ್ಲಿ ಸ್ವಾತಂತ್ರ್ಯದ ಆಕಾಂಕ್ಷೆಯೇ ಉಡುಗಿ ಹೋದಂತಿತ್ತು. ಅವಿಚ್ಛಿನ್ನವಾಗಿ ಸಾವಿರಾರು ವರ್ಷ ಹರಿದುಬಂದ ಭಾರತೀಯ ಸಂಸ್ಕೃತಿ ಯಾವುದೋ ಮರಳುಗಾಡನ್ನು ಹೊಕ್ಕು ಬತ್ತುವಂತಾಗಿತ್ತು. "ರಾಜಕೀಯ ದಾಸ್ಯಕ್ಕಿಂತ ರಾಷ್ಟ್ರದ ಆಂತರ್ಯಜೀವನಕ್ಕೆ ಕುಟ್ಟೆಹುಳುವಿನಂತೆ ಹತ್ತಿ ನಮ್ಮ ಸನಾತನ ಸಾಂಸ್ಕೃತಿಕ ಪರಂಪರೆಯನ್ನೇ ನಾಶಮಾಡುತ್ತಿದ್ದ ಪಾಶ್ಚಾತ್ಯ ಪ್ರಭಾವ ನಮ್ಮ ದಾಸ್ಯದ ದುರಂತವನ್ನು ನೂರ್ಮಡಿಸಿತು" ಎಂದರು ಒಮ್ಮೆ ಗಾಂಧೀಜಿ. ಹಲವು ದಶಕಗಳ ಪ್ರಮತ್ತ ಜಡತೆಯನ್ನು ನೀಗಿ ಎಚ್ಚೆತ್ತು ತಲೆಯೆತ್ತಿ ನಿಲ್ಲಬೇಕಾಗಿತ್ತು ಭಾರತ ಜನತೆ. ಅಸಂಖ್ಯಾತ ಹೃದಯಗಳ ನೀರವ ಕರೆಗೆ ಓಗೊಟ್ಟಂತೆ ಈ ಪುಣ್ಯಭೂಮಿಯಲ್ಲಿ ಯುಗ ಪ್ರವರ್ತಕ ಮೋಹನದಾಸ ಕರಮಚಂದ ಗಾಂಧೀ ಅವತರಿಸಿದರು.

೨

ಪೋರಬಂದರ್ ಗುಜರಾತ್ ಪ್ರಾಂತದ ಕಾಠೇವಾಡದ ಒಂದು ಚಿಕ್ಕ ಆಶ್ರಿತ ಸಂಸ್ಥಾನ. ಇನ್ನೂರು ವರ್ಷಗಳ ಕೆಳಗೆ ಗಾಂಧೀಜಿಯ ಪೂರ್ವಜರಾದ ಹರಜೀವನ ಗಾಂಧೀ ಅಲ್ಲಿ ಸಣ್ಣ ವ್ಯಾಪಾರಸ್ಥರು. ಅವರ ಮಗ ಉತ್ತಮಚಂದ್ ಆ ಸಣ್ಣ ಸಂಸ್ಥಾನದ ದಿವಾನರಾದರು. ರಾಜಮನೆತನದೊಡನೆ ಸ್ವಲ್ಪಕಾಲ ಅವರ ಬಾಂಧವ್ಯ ವಿಷಮಿಸಿ ಜುನಗಢಕ್ಕೆ ಬಂದರು. ಮತ್ತೊಮ್ಮೆ ಆ ಅಧಿಕಾರ ಇವರನ್ನೇ ಹುಡುಕಿ ಬಂದರೂ ನಿರಾಕರಿಸಿದರು. ಅವರ ಮಗ ಕರಮಚಂದ್ ಗಾಂಧಿ 1847 ರಲ್ಲಿ ಪೋರಬಂದರಿನ ದಿವಾನರಾಗಿ ಹಿಂದಿರುಗಿದರು. ಅವರ ನಾಲ್ಕನೆಯ ಹೆಂಡತಿ ಪುತಳೀಬಾಯಿ. ಅವರೂ ಪೋರಬಂದರಿನವರೇ. ಇವರ ಕಿರಿಯ ಮಗನಾಗಿ 1869 ನೆಯ ಅಕ್ಟೋಬರ್ ಎರಡರಂದು ಮೋಹನದಾಸ ಕರಮಚಂದ್ ಗಾಂಧಿ ಜನ್ಮತಾಳಿದರು. ಲಕ್ಷ್ಮೀದಾಸ್ ಮತ್ತು ಕರ್ಸನ್‌ದಾಸ್ ಇವರ ಅಣ್ಣಂದಿರು. ರಾಲೀತಾಬಹೆನ್ ಅವರ ಅಕ್ಕ. ಅವರದು ಅವಿಭಕ್ತ ದೊಡ್ಡ ಕುಟುಂಬ. ಭಾರತದ ಆರ್ಷೇಯ ಸಾಂಸ್ಕೃತಿಕ ಪರಂಪರೆಯಲ್ಲಿ ನಡೆದುಬರುತ್ತಿದ್ದ ಹಿಂದೂ ಸಂಪ್ರದಾಯಗಳ ಮನೆ. ದೇಶೀಯ ರಾಜಮನೆತನದ ಸಂಪರ್ಕದಿಂದ ತಕ್ಕಮಟ್ಟಿಗೆ ಶ್ರೀಮಂತರೆನಿಸಿಕೊಂಡಿದ್ದ ಮನೆತನ. ಈ ಆವರಣದಲ್ಲಿ ಅತಿ

ಸಾಮಾನ್ಯರಂತೆ ಜನಿಸಿ ನೂರಾರು ವರ್ಷಗಳ ಜಡತೆ ದಾಸ್ಯಗಳಿಂದ ಮಾತೃ ಭೂಮಿಯನ್ನು ವಿಮುಕ್ತ ಮಾಡಲು ಕಾಲಪುರುಷನ ಉಪಕರಣವಾಗಿ ಯಶೋ ರೂಪ ಪಡೆದ ಮಹಾಮಹಿಮ ಗಾಂಧೀಜಿ.

ಭಾರತದ ಪಶ್ಚಿಮ ಮುಖ ಕಾಥೇವಾಡ. ಅರಬ್ಬೀ ಸಮುದ್ರದೊಳಕ್ಕೆ ಚಾಚಿದ ಸುಂದರ ಭೂಭಾಗ ಅಲ್ಲಿಯದು. ಪಶ್ಚಿಮದ ಸಮುದ್ರ ಭೋರ್ಗರೆದು ಅಲೆ ಅಲೆಯಾಗಿ ಅಪ್ಪಳಿಸುವ ಕಡಲತೀರ. ಸಂಜೆಯ ಹೊತ್ತು ರಕ್ತಾಚ್ಛಾದಿತ ಕ್ಷಿತಿಜದ ಕಮಾನಿನಮೇಲೆ ಜಾರುತ್ತ ಜಾರುತ್ತ ಕೆಂಡದ ಗೋಳವಾಗಿ ಪಶ್ಚಿಮ ಸಮುದ್ರದೊಳಕ್ಕೆ ಲೀನವಾಗುತ್ತಿದ್ದ ಸೂರ್ಯ. ಈ ವರ್ಣರಂಜಿತ ಪಟಲದ ಹಿನ್ನೆಲೆಯಲ್ಲಿ ಅಲೆಗಳೊಡನೆ ಸರಸವಾಡುತ್ತಾ ಸುಭದ್ರವಾಗಿ ಕಡೆದು ನಿಂತಿದ್ದ ಸೋಮನಾಥ ದೇವಾಲಯ. ಹಲವು ಶತಮಾನಗಳ ಇತಿಹಾಸವನ್ನು ನೀರವ ಗಂಭೀರತೆಯಿಂದ ಅಚ್ಚೊತ್ತಿ ಸ್ಮೃತಿಪಥವನ್ನು ಹಠಾತ್ತನೆ ವೇಗವಾಗಿ ಹಿಂದಕ್ಕು ರುಳಿಸುತ್ತಿದ್ದ ಭವ್ಯ ಸಂಕೇತ. ಬಾಲಕ ಮೋಹನದಾಸನ ಚಿತ್ತವೃತ್ತಿಯನ್ನು ಮಹತ್ವಾಕಾಂಕ್ಷೆಗಳಿಂದ ಈ ಪ್ರದೇಶ ತುಂಬಿರಬೇಕು. ಆ ಕಡಲಿನ ಮೇಲೆಯೇ ತೇಲಿಬಂದ ಪಾಶ್ಚಾತ್ಯ ಪಾಶವೀಶಕ್ತಿಗಳು ಜನ್ಮಭೂಮಿಯ ದಾಸ್ಯಶೃಂಖಲೆ ಗಳನ್ನು ನಿರ್ಮಿಸಿ ಅಂಧಕಾರ ಕೂಪದಲ್ಲಿ ನೂಕಿಬಿಟ್ಟಿದ್ದ ದುರಂತಪ್ರಕರಣದ ನೆನಪು ಆ ಬಾಲಕನ ಚೇತನದಲ್ಲಿ ಅಲೆಯೆದ್ದು ಅಪ್ಪಳಿಸಿರಬೇಕು.

ಗಾಂಧೀ ಕುಟುಂಬ ರಾಜಕೋಟೆಗೆ ಬಂದು ನೆಲೆಸಿತು. ಹುಡುಗರ ವಿದ್ಯಾಭ್ಯಾಸಕ್ಕೆ ಇಲ್ಲಿ ಹೆಚ್ಚು ಅನುಕೂಲಗಳಿದ್ದವು. ತನ್ನ ಇಬ್ಬರು ಸಹೋದರರ ಜೊತೆಯಲ್ಲೇ ಪ್ರೌಢಶಾಲೆಯನ್ನು ಸೇರಿದರು ಗಾಂಧೀಜಿ. ಹದಿಮೂರನೆಯ ವಯಸ್ಸಿನಲ್ಲೇ ಮದುವೆ ಆಯಿತು. ಕರ್ತವ್ಯನಿಷ್ಠೆ, ನಿರ್ಮಲಚಾರಿತ್ರ್ಯ ಆತ್ಮ ನಿರೀಕ್ಷಣೆಯ ನಿಷ್ಠುರ ಅಭ್ಯಾಸ ಇವುಗಳಿಗೆ ಹೆಚ್ಚು ಬೆಲೆ ಕೊಟ್ಟ ಈ ಸಾಧಾರಣ ವಿದ್ಯಾರ್ಥಿ ಎಳೆಯ ವಯಸ್ಸಿನಲ್ಲೇ ಗೃಹಸ್ಥನಾದ. ಅದೇ ವಯಸ್ಸಿನ ಪತ್ನಿ. ಪತಿಪರಾಯಣೆ. ಆತ್ಮಾಭಿಮಾನಿ. ಅನಕ್ಷರಸ್ಥೆಯಾದರೂ ಸಾಂಪ್ರದಾಯಿಕ ಕೌಟುಂಬಿಕ ಶಿಕ್ಷಣದಿಂದ ಸುಸಂಸ್ಕೃತೆಯಾದವಳು. ಆದರೆ ಸಣ್ಣ ವಯಸ್ಸಿ ನಲ್ಲಿನ ಪರಸ್ಪರ ಸಲಿಗೆ ಕಾಮುಕತೆಗೆ ದಾರಿಯಾಗಿ ಗಾಂಧೀಜಿಯ ಅಂತರ್ಯವನ್ನು ಹಿಂಡುವಂತಹ ಕೆಲವು ದುರಂತಗಳು ನಡೆದುಹೋದವು. ತಂದೆ ಮರಣಶಯ್ಯೆ ಯಲ್ಲಿದ್ದಾಗಲೂ ಪತ್ನಿಯ ಸಂಗ ಬಿಡಲಾರದೆ ಕಾಮುಕನಾಗಿ ವರ್ತಿಸಿದ ಘಟನೆ

ಯನ್ನು ಗಾಂಧೀಜಿ ತಮ್ಮ ಆತ್ಮಕಥೆಯಲ್ಲಿ ಮನಬಿಚ್ಚಿ ವಿಶ್ಲೇಷಿಸಿದ್ದಾರೆ, ಅದೊಂದು ಅಕ್ಷಮ್ಯ ಅಪರಾಧ ಎಂದು ಆಜೀವಪರ್ಯಂತ ತಪಿಸಿದ್ದಾರೆ. ಹಾಗೆಯೇ ಆ ದಿನಗಳಲ್ಲಿ ಸಹವಾಸದೋಷದಿಂದ ಕೆಲವು ದುರಭ್ಯಾಸಗಳಿಗೆ ಒಳಗಾದರು. ಬಹುಬೇಗ ಪಶ್ಚಾತ್ತಾಪಪಟ್ಟು ತೀವ್ರ ವ್ಯಾಕುಲದಿಂದ ಸಂಕಟ ವನ್ನನುಭವಿಸಿದರು. ಗಂಭೀರ ಮನೋದಾರ್ಢ್ಯವನ್ನು ಗಳಿಸಿ ಕೀಳು ಲಾಲಸೆ ಗಳನ್ನೆಲ್ಲಾ ಮೆಟ್ಟಿ ಬರಬರುತ್ತ ಧೀರಸಾಧಕರಾದರು. ತಾಯಿ ಪುತಲೀಬಾಯಿ. ದಾದಿ ರಂಭಾ, ಪತ್ನಿ ಕಸ್ತೂರಿಬಾ ಈ ಸ್ತ್ರೀರತ್ನಗಳ ಅಮೂಲ್ಯ ಪ್ರಭಾವವನ್ನು ಗಾಂಧೀಜಿ ಸಂತತವಾಗಿ ಸ್ಮರಿಸುತ್ತಿದ್ದರು. ಸ್ವಾರ್ಥರಹಿತ ಮಹೋದ್ದೇಶ ಗಳಿಗಾಗಿ ಜೀವನವನ್ನು ಮುಡಿಪಾಗಿಡಬಲ್ಲ ಭಾರತಮಹಿಳೆ ಅವರ ಅಂತರ್ಯ ವನ್ನು ಸೂರೆಗೊಂಡಳು. ಯಾವ ಮಹಾಶಕ್ತಿಗಳ ಮೂರ್ತಸ್ವರೂಪರಾಗಿ ತಾಯಿ, ದಾದಿ, ಹೆಂಡತಿಯರು ಬಾಲಕ ಗಾಂಧಿಯನ್ನು ಪಾಲಿಸಿ ಬೆಳಸಿದರೋ ಅವೇ ಅವರ ಬಾಳಿನ ಬಾಳ್ದೀವಿಗೆಗಳಾಗಿ ಪ್ರಜ್ವಲಿಸಿ ಹರಿದ ಪ್ರೇಮ, ಅಭಯ. ಹಾಗೂ ಅಹಿಂಸಾವ್ರತಗಳು. ಸತ್ಯಾನ್ವೇಷಣೆ ಮತ್ತು ಅಹಿಂಸಾಧರ್ಮ ಅವರ ಬಾಳಿನ ಉಸಿರಾದವು.

ಗಾಂಧೀಜಿಗೂ ಅವರ ತಂದೆಗೂ ಐವತ್ತುವರ್ಷಗಳ ಅಂತರ. ಅವರ ಬಗ್ಗೆ ಮೋಹನದಾಸರಿಗೆ ಅನನ್ಯ ವಿಧೇಯಭಾವ. ಮಾತಾಪಿತೃಗಳ ಶ್ರದ್ಧಾ ಪೂರ್ಣಸೇವೆ ಅವರ ಮೊದಲ ಆಕಾಂಕ್ಷೆ. ತಾಯಿಯ ವಾತ್ಸಲ್ಯಪೂರ್ಣ ಪ್ರೇಮ ಅವರನ್ನು ಅಗಾಧವಾಗಿ ಸೆರೆಹಿಡಿದು ಪುಟಕೊಡುತ್ತಿತ್ತು. 1886 ರಲ್ಲಿ ತಂದೆ ಕಾಲವಾದಾಗ ಗಾಂಧೀಜಿಗೆ ಕೇವಲ ಹದಿನಾರುವರ್ಷ. ಅವರ ದೊಡ್ಡ ಅಣ್ಣ ಲಕ್ಷ್ಮೀದಾಸ ಗಾಂಧೀಯವರ ಪೋಷಣೆಯಲ್ಲಿ ಭಾವನಗರದ ಶ್ಯಾಮಲದಾಸ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ಅವರ ಕುಟುಂಬದಲ್ಲೇ ಉನ್ನತವ್ಯಾಸಂಗ ಮಾಡಿದ ಮೊದಲನೇ ಬಾಲಕನೆನಿಸಿ ಕೊಂಡರು. ಇಬ್ಬರು ಅಣ್ಣಂದಿರೂ ಪ್ರೌಢಶಾಲೆಯಲ್ಲಿ ತಮ್ಮ ಓದನ್ನು ಮುಗಿಸಿ ಜೀವನದಲ್ಲಿ ಕಾಲಿಟ್ಟಿದ್ದರು. ಕಾಲೇಜಿನ ಪ್ರಥಮ ಪರೀಕ್ಷೆಯಾದೊಡನೆಯೇ 1888 ರಲ್ಲಿ ಗಾಂಧೀಜಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿ ಬ್ಯಾರಿಸ್ಟರ್ ಪರೀಕ್ಷೆಯ ಶಿಕ್ಷಣಕ್ಕಾಗಿ ಸೇರಿಕೊಂಡರು. ಅವರ ಬಾಳಿನಲ್ಲಿ ಇದೊಂದು ಮಹಾಘಟ್ಟ. ಉನ್ನತ ವರ್ಗಗಳ ಭಾರತೀಯರಿಗೆ ಅಕ್ಕರಸರಾದ ಬ್ರಿಟಿಷರ ರೀತಿನೀತಿಗಳ

ಅನುಕರಣೆಯೇ ಪರಮ ಧ್ಯೇಯವಾಗಿದ್ದ ಆ ಕಾಲಕ್ಕೆ ಇಂಗ್ಲೆಂಡ್ ಪ್ರವಾಸ ಅತ್ಯಮೂಲ್ಯ ಅಸಾಮಾನ್ಯ ಸಾಧನೆ ಎಂದೇ ಪರಿಗಣಿತವಾಗಿತ್ತು. ಆದರೆ ಸಮುದ್ರಯಾನ ಜಾತಿಧರ್ಮದಲ್ಲಿ ನಿಷೇಧಿಸಲ್ಪಟ್ಟಿದ್ದುದರಿಂದ ಮೋದ್‌ಬನಿಯಾ ಜಾತಿಯ ಹಿರಿಯರು ಅವರಿಗೆ ಬಹಿಷ್ಕಾರ ಹಾಕಿದರು. ಗಾಂಧೀಜಿ ಅಣ್ಣನ ಬೆಂಬಲದಿಂದ ಅದನ್ನು ಧಿಕ್ಕರಿಸಿ ಹೊರಡುವ ಧೈರ್ಯ ಮಾಡಿದರು. ಭಾರತದ ಹೊರಗಡೆ ಇರುವ ಕಾಲದಲ್ಲಿ ಮದ್ಯ, ಮಾಂಸ ಮತ್ತು ಸ್ತ್ರೀ ಯಾವುದನ್ನೂ ಮುಟ್ಟುವುದಿಲ್ಲ ಎಂದು ತಾಯಿಯ ಮುಂದೆ ಪ್ರಮಾಣವಚನ ಸ್ವೀಕರಿಸಿ ಆಕೆಯ ಸಂಶಯಗಳನ್ನು ದೂರಮಾಡಿದರು. ಗ್ರಾಮಭಾರತದಿಂದ ಅಂತರ್ರಾಷ್ಟ್ರೀಯ ಮಹಾನಗರಕ್ಕೆ ಹೆಜ್ಜೆಯಿಟ್ಟ ಅವರ ಜೀವನ ಒಂದು ಹೊಸ ಮಜಲಿನಲ್ಲಿ ಕಾಲಿಟ್ಟಿತು.

1888 ರಿಂದ 1891 ರ ವರೆಗೆ ಗಾಂಧೀಜಿ ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಯಾಗಿದ್ದರು. ಹತ್ತೊಂಬತ್ತನೆಯ ಶತಮಾನದ ಕೊನೆಯ ದಿನಗಳವು. ಆ ಕಾಲಕ್ಕೆ ಇಂಗ್ಲೆಂಡ್ ಜಗತ್ತಿನ ಪ್ರಥಮ ರಾಷ್ಟ್ರ. ಅದ್ವಿತೀಯ ಸಾಮ್ರಾಜ್ಯದ ಒಡೆಯರು ಇಂಗ್ಲೀಷ್ ಜನಾಂಗ. ಶ್ರೀಮಂತನಾಗರೀಕತೆಗೆ ಇಂಗ್ಲೀಷ್ ಸಮಾಜ ಪ್ರಖ್ಯಾತವಾಗಿತ್ತು. ಪಶ್ಚಿಮ ಯುರೋಪ್ ರಾಷ್ಟ್ರಗಳ ಕೇಂದ್ರಬಿಂದುಗಳಾಗಿದ್ದ ಲಂಡನ್, ಪ್ಯಾರಿಸ್. ರೋಮ್ ಮತ್ತು ಬರ್ಲಿನ್ ನಗರಗಳು ಜಗತ್ತನ್ನೇ ತಮ್ಮ ಸುತ್ತ ತಿರುಗುವ ವೃತ್ತವನ್ನಾಗಿ ಪರಿಗಣಿಸಿದ್ದವು. ಭಾರತೀಯರು ಇಂಗ್ಲೆಂಡಿನ ಅನುಯಾಯಿಗಳಾಗಿ ಸಾಮಂತ ಪ್ರಜೆಗಳಾಗಿ ಪಾಶ್ಚಿಮಾತ್ಯ ವಿಲಾಸಭೋಗಗಳ ಆರಾಧಕರಾಗಿ ಆತ್ಮಗೌರವವನ್ನೂ ಕಡೆಗಣಿಸಿ ಈ ಮಹಾನಗರಗಳಲ್ಲಿ ಜೀವಿಸುತ್ತಿದ್ದುದನ್ನು ಕಂಡು ಗಾಂಧೀಜಿ ಮರುಗಿದರು. ಅಂಧಾನುಕರಣೆಯ ಅಸಂಸ್ಕೃತ ವರ್ತನೆ ಅವರಿಗೆ ಒಡಿಸಲಿಲ್ಲ. ಭಾರತದಲ್ಲಿದ್ದಾಗ ಅವರಲ್ಲಿ ಬೆಳೆದಿದ್ದ ಹಲವು ತಪ್ಪುಭಾವನೆಗಳನ್ನು ನಿರಾಕರಿಸಿ ಭಾರತೀಯನಂತೆಯೇ ಅವರ ಮಧ್ಯೆ ಬಾಳಿ ಗೌರವ ಸಂಪಾದಿಸುವ ವ್ರತತೊಟ್ಟರು. ಮಾಂಸಾಹಾರವನ್ನು ವರ್ಜಿಸಿ ಸಸ್ಯಾಹಾರಿ ಸಮಾಜವನ್ನೇ ಕಟ್ಟಿದರು. ಹಲವಾರು ಇಂಗ್ಲೀಷ್ ಸ್ನೇಹಿತರು ಈ ವಿಚಿತ್ರ ಮನೋಧರ್ಮದ ಹಠವಾದಿಯ ಸದ್ಗುಣಗಳಿಗೆ ಮಾರುಹೋದರು. ಗಾಂಧೀಜಿಗೆ ಭಗವದ್ಗೀತೆಯ ಪರಿಚಯವಾದದ್ದು ಇಂಗ್ಲೆಂಡಿನಲ್ಲಿ. ಅಲ್ಲಿನ ಪ್ರಸಿದ್ಧ ಕವಿ ಎಡ್ವಿನ್ ಆರ್ನಾಲ್ಡ್ ಭಾಷಾಂತರಿಸಿದ ಇಂಗ್ಲೀಷ್

ಕಾವ್ಯ "ದಿ ಸಾಂಗ್ ಸೆಲೆಸ್ಟಿಯಲ್" ಗ್ರಂಥದಿಂದ. ಆಮೇಲೆ ದೃಢಮನಸ್ಸಿನಿಂದ ಮೂಲಕೃತಿಯನ್ನು ಬಾಯಿಪಾಠ ಮಾಡಿದರು. ಸ್ವಭಾವತಃ ಬಹಳ ನಾಚಿಕೆಯ ಮನೋವೃತ್ತಿ ಆ ಕಾಲಕ್ಕೆ ಗಾಂಧೀಜಿಯಲ್ಲಿತ್ತು. ಯಾವ ಸಭೆ ಸಮಾರಂಭಗಳಿಗೂ ಅವರು ಹೋಗುತ್ತಿರಲಿಲ್ಲ. ಪ್ರಜಾಪ್ರಭುತ್ವ ಭಾವನೆಗಳಿಗೆ ತೌರೆನಿಸಿದ್ದ ಲಂಡನ್ ನಗರದಲ್ಲಿ ಅದೇ ಸಮಯದಲ್ಲಿ ಜಗತ್ತಿನ ಪ್ರಖ್ಯಾತ ರಾಜಕಾರಣ ತತ್ವಜ್ಞರು, ಕ್ರಾಂತಿಕಾರೀ ನಾಯಕರು, ದೇಶಭ್ರಷ್ಟರಾದ ರಾಜಕಾರಣಿಗಳು, ಹೊಸ ಹೊಸ ವಿಚಾರಮಾರ್ಗಗಳ ಅನ್ವೇಷಕರು, ಅಧ್ವರ್ಯುಗಳು ತುಂಬಿ ತುಳುಕುತ್ತಿದ್ದರು. ಲೆನಿನ್ ಅದೇ ಕಾಲಕ್ಕೆ ಭೂಗತಕ್ರಾಂತಿಕಾರೀ ನಾಯಕನಾಗಿ ಅಲ್ಲಿನ ವಿಚಾರಮಂಥನದ ಮೂಸೆಯಲ್ಲಿ ಮುಳುಗಿಬಿಟ್ಟಿದ್ದ. ಆದರೆ ಮುಂದೆ ಜಗತ್ತಿನ ಇತಿಹಾಸದಲ್ಲೇ ಕಂಡರಿಯದ ನೂತನ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ತತ್ವಜ್ಞಾನ ಪ್ರವಾಹವನ್ನು ಹರಿಯಬಿಟ್ಟ. ಗಾಂಧೀ ತನ್ನ ಸುತ್ತಲೂ ನಡೆಯುತ್ತಿದ್ದ ಈ ವೈಚಾರಿಕ ಮೂಸೆಯಿಂದ ದೂರವಾಗಿಯೇ ಇದ್ದುಬಿಟ್ಟರು. ಕಾರ್ಲೈಲ್ ಮಹಾಶಯನ "ವೀರರು ಮತ್ತು ವೀರಪೂಜೆ" (ಹಿರೋಸ್ ಅಂಡ್ ಹಿರೋವರ್ಷಿಪ್) ಗ್ರಂಥ, ಥಿಯಾಸಫಿ ವಿಚಾರಮಾರ್ಗದ ಸ್ಥಾಪಕಿ ಮಡಾಂ ಬ್ಲಾವಟ್‌ಸ್ಕಿಯ "ಥಿಯಾಸಫಿಯ ತಿರುಳು" (ಕೀ ಟು ಥಿಯಾಸಫಿ) ಹಾಗೂ ವಿಶ್ವವಿಖ್ಯಾತ ನಾಸ್ತಿಕವಾದಿ ಎನಿಸಿದ್ದ ಬ್ರಾಡ್ಲಾ ಮಹಾಶಯನ ಬರಹಗಳು ಇವುಗಳನ್ನು ಆಳವಾಗಿ ಅಧ್ಯಯನ ಮಾಡಿದರು ಗಾಂಧೀಜಿ. ಬೈಬಲ್ಲಿನ ಹಳೆಯ ಮತ್ತು ಹೊಸ ಒಡಂಬಡಿಕೆ (ಓಲ್ಡ್ ಮತ್ತು ನ್ಯೂ ಟೆಸ್ಟಮೆಂಟು) ಗಳನ್ನು ಆಸಕ್ತಿಯಿಂದ ಓದಿ ಮನನ ಮಾಡಿದರು. ಏಸುವಿನ "ಪರ್ವತ ಪ್ರಸಂಗ" (ಸರ್ಮನ್ ಆನ್ ದಿ ಮೌಂಟ್) ಈ ಸಂತಪ್ರವಯನ ಮೇಲೆ ಅಳಿಸಲಾಗದ ಅಚ್ಚನ್ನೊತ್ತಿತು. ಧಾರ್ಮಿಕ ಮನೋವೃತ್ತಿ ಹಾಗೂ ಆಧುನಿಕ ವೈಜ್ಞಾನಿಕ ನಾಗರಿಕತೆಗಳ ಸಮಾನಾಂತರ ಕಂಬಿಗಳು ಮೈತ್ರಿ, ಕರುಣೆ ಮತ್ತು ಮಾನವೀಯತೆಗಳ ಕ್ಷಿತಿಜದಲ್ಲಿ ಸುಂದರವಾಗಿ ಸಂಮಿಳಿತವಾಗುವ ಕನಸಿನ ಅಂಕುರ ಎಳೆವಯಸ್ಸಿನ ಯುವಕನಲ್ಲಿ ಹುಲುಸಾಗಿ ಕುಡಿಕೊಳ್ಳುತ್ತಿತ್ತು.

ಪ್ರಸಿದ್ಧ ಗುಜರಾತೀ ಸಾಹಿತಿ ನಾರಾಯಣ ಹೇಮಚಂದ್ರ ತಮ್ಮ ಇಳಿವಯಸ್ಸಿನಲ್ಲಿ ಲಂಡನ್ನಿಗೆ ಬಂದಿದ್ದರು. ಗಾಂಧೀಗೆ ಅವರ ಸ್ನೇಹವಾಯಿತು.

ಭಾರತೀಯ ಭಾಷೆಗಳಲ್ಲಿ ಪಂಡಿತರಾಗಿದ್ದ ಹೇಮಚಂದ್ರರಿಗೆ ಗಾಂಧೀಜಿ ಇಂಗ್ಲೀಷ್ ದುಭಾಷಿಯಾದರು. ನಿರ್ಭಯ ಪ್ರವೃತ್ತಿಯ ಅಚ್ಚ ಭಾರತೀಯ ವ್ಯಕ್ತಿತ್ವ ವನ್ನು ಬೆಳೆಸಿಕೊಂಡಿದ್ದ ಋಷಿಜೀವನ ಈ ಸಾಹಿತ್ಯಶ್ರೇಷ್ಠನದು. ಲಂಡನ್ನಿನ ನವನಾಗರೀಕತೆಯ ಶಿಷ್ಟಸಮಾಜಗಳಲ್ಲಿ ತಮ್ಮ ಉಡುಪು ತಮ್ಮ ನಂಬಿಕೆಗಳು ತಮ್ಮ ವಿಶಿಷ್ಟ ಅಭಿಪ್ರಾಯಗಳನ್ನು ಸಂಪೂರ್ಣ ಆತ್ಮವಿಶ್ವಾಸದಿಂದ ಸಾರು ತ್ತಿದ್ದ ಹೇಮಚಂದ್ರರ ಬಗೆಗೆ ಗಾಂಧೀಜಿಗೆ ಅಪಾರ ಗೌರವ ಬೆಳೆಯಿತು. ತನ್ನ ನಂಬಿಕೆಗಳಿಗನುಗುಣವಾಗಿ ಬಾಳುವ ಸತ್ಯನಿಷ್ಠ ಜೀವನದ ಸುಸ್ಪಷ್ಟ ಕಲ್ಪನೆ ಅವರಲ್ಲಿ ಮೂಡಿಬಂದಿತು. "ಮೆಲ್ಲಮೆಲ್ಲನೆ ನಾನು ನಿರ್ಭೀತ ಸತ್ಯಾನ್ವೇಷಿಯಾದೆ" ಎಂದು ಹೇಳಿಕೊಂಡಿದ್ದಾರೆ ಗಾಂಧೀಜಿ.

1891 ರ ಜೂನ್ ತಿಂಗಳಿನಲ್ಲಿ ಬ್ಯಾರಿಸ್ಟರ್ಆಗಿ ಗಾಂಧೀಜಿ ಭಾರತಕ್ಕೆ ಹಿಂತಿರುಗಿದರು. ವಿದ್ಯಾರ್ಹತೆಯ ಹೆಮ್ಮೆಗಿಂತ ಹೆಚ್ಚಾಗಿ ತಾಯಿಗೆ ಕೊಟ್ಟ ಭಾಷೆಯನ್ನುಳಿಸಿಕೊಂಡ ವ್ರತಸಾಧನೆಯ ಆನಂದದಿಂದ ಮಾತೃಹೃದಯವನ್ನು ತಣಿಸುವ ಆಶೆ ಅವರದು. ಆದರೆ ತಾಯ್ನಾಡಿಗೆ ಅವರು ಮರಳಿ ಬರುವ ಮುನ್ನವೇ ತಾಯಿ ಪುತಲೀಬಾಯಿ ದೈವಾಧೀನರಾಗಿದ್ದರು. ಈ ದುರಂತ ಗಾಂಧೀಜಿಯ ಹೃದಯವನ್ನು ಕಲಕಿತು. ಅಣ್ಣ ಲಕ್ಷ್ಮೀದಾಸಬಾಬು ಅವರನ್ನು ಸಮಾಧಾನಪಡಿಸಿದರು. ಬೊಂಬಾಯಿನಲ್ಲಿ ವಕೀಲಿ ವೃತ್ತಿಯನ್ನಾರಂಭಿಸಲು ಅವರ ಬಂಧುವರ್ಗ ಉಪದೇಶ ಮಾಡಿತು. ಸ್ವಲ್ಪಕಾಲ ಅಲ್ಲಿ ತಮ್ಮ ಕಾರ್ಯಾಲಯವನ್ನಾರಂಭಿಸಿ ಕೆಲಸ ಮಾಡಿದರು. ಹೆಚ್ಚು ಯಶಸ್ವಿಯಾಗಲಿಲ್ಲ. ಅಲ್ಲಿಂದ ರಾಜಕೋಟೆಗೆ ತಮ್ಮ ಕಾರ್ಯಾಲಯವನ್ನು ಬದಲಾಯಿಸಿದರು.

ಒಂದು ಸಾರಿ ಬ್ರಿಟಿಷ್ ಅಧಿಕಾರಿಯೊಬ್ಬನನ್ನು ಗಾಂಧೀಜಿ ಭೇಟಿಯಾದರು, ಇಂಗ್ಲೆಂಡಿನಲ್ಲಿ ಆತ ಪರಿಚಿತನಾಗಿದ್ದ. ತಮ್ಮ ಅಣ್ಣನ ಬಗ್ಗೆ ಆತ ಕುಪಿತ ನಾಗಿದ್ದನೆಂದು ತಿಳಿದು ವಾಸ್ತವಾಂಶವನ್ನು ಅವನಿಗೆ ತಿಳಿಸಲು ಹೋದರು. ಆದರೆ ಆ ಮದಾಂಧ ಅಧಿಕಾರಿ ಈ ಭಾರತೀಯ ಯುವಕನನ್ನು ಧಿಕ್ಕರಿಸಿ ಆಚೆಗೆ ನೂಕಿಸಿಬಿಟ್ಟ. ಅವರ ಸ್ವಾಭಿಮಾನ ಕೆರಳಿ ನಿಂತಿತು. ಕ್ರುದ್ಧರಾಗಿ ಆತನ ವಿರುದ್ಧ ನ್ಯಾಯಾಲಯದಲ್ಲಿ ಕಟ್ಟಳೆ ತೆಗೆದುಕೊಂಡು ಹೋಗ ಬೇಕೆಂದಿದ್ದರು. ಹಿರಿಯ ದೇಶಾಭಿಮಾನೀ ನಾಯಕರಾಗಿದ್ದ ಸರ್ ಫಿರೋಜ್‌ಷಹ ಮೆಹ್ತಾ ಅವರು ಗಾಂಧೀಜಿಗೆ "ದಾಸ್ಯ ಭಾರತದಲ್ಲಿ ಉನ್ನತ ಗೌರವಸ್ಥ

ವಕೀಲರೂ ಅನೇಕ ಸಾರಿ ಇಂಥ ಅವಮಾನವನ್ನು ಅನುಭವಿಸಬೇಕಾಗುತ್ತಿದೆ. ಏನುಮಾಡಲೂ ಸಾಧ್ಯವಿಲ್ಲ" ಎಂದರಂತೆ. "ಈ ಪ್ರಸಂಗ ನನಗೆ ವಿಷಕ್ಕಿಂತ ಕಹಿಯಾಯಿತು. ಆದರೂ ನುಂಗಿದೆ. ಮತ್ತೆ ಎಂದೆಂದಿಗೂ ಸ್ನೇಹವನ್ನು ಈ ರೀತಿ ಬಳಸಿಕೊಳ್ಳಬಾರದೆಂದು ಸಂಕಲ್ಪಮಾಡಿಬಿಟ್ಟೆ. ಅಂದಿನಿಂದಾಚೆ ಎಂದೂ ನಾನು ಈ ಸಂಕಲ್ಪವನ್ನು ಮುರಿಯಲಿಲ್ಲ" ಎಂದಿದ್ದಾರೆ ತಮ್ಮ ಆತ್ಮಕಥೆಯಲ್ಲಿ.

ಇಂಗ್ಲೆಂಡಿನಲ್ಲಿದ್ದಾಗಲೇ ವೃದ್ಧಪಿತಾಮಹ ದಾದಾಭಾಯಿನವರೋಜಿ ಅವರೂ ಭಾರತಕ್ಕೆ ಬಂದೊಡನೆ ಬೊಂಬಾಯಿನ ಫಿರೋಜ್‌ಷಾಮೆಹ್ತಾ ಮತ್ತು ಪ್ರಖ್ಯಾತ ನ್ಯಾಯವಾದಿ ಬದ್ರುದ್ದೀನ್ ತಯಾಬ್ಜಿ ಇವರುಗಳೂ ಗಾಂಧೀಜಿಯ ಗೌರವಾನ್ವಿತ ಮಾರ್ಗದರ್ಶಕರಾದರು. ಆದರೂ ವಕೀಲ ವೃತ್ತಿಯಲ್ಲಿ ಯಶಸ್ಸು ಮರೀಚಿಕೆಯಂತೆ ದೂರ ಓಡುತ್ತಿತ್ತು.

ವಕೀಲಿವೃತ್ತಿ ಗಾಂಧೀಜಿಯನ್ನು ದೂರದ ದಕ್ಷಿಣ ಆಫ್ರಿಕಾಖಂಡಕ್ಕೆ ಕರೆದೊಯ್ದಿತು. ಅಲ್ಲಿ ನೆಲೆಸಿದ್ದ ಪ್ರಸಿದ್ಧ ವ್ಯಾಪಾರೀಸಂಸ್ಥೆಯೊಂದರ ಪಾಲುಗಾರರ ನಡುವೆ ದೊಡ್ಡ ಮೊಖದ್ದಮೆ ನಡೆಯುತ್ತಿತ್ತು. ದಾದಾ ಅಬ್ದುಲ್ಲಾ ಮತ್ತು ತಯ್ಯಬ್‌ಸೇಟ್ ಇವರಿಬ್ಬರ ನಡುವೆ ನಲವತ್ತುಸಾವಿರ ಪೌಂಡಿನ ಆಸ್ತಿಯಬಗ್ಗೆ ವಿವಾದ ನಡೆದಿತ್ತು. ಗುಜರಾತಿನವರಾಗಿದ್ದ ದಾದಾ ಅಬ್ದುಲ್ಲಾ ತಮ್ಮ ಸ್ನೇಹಿತರೊಬ್ಬರಿಗೆ ಬರೆದು ತಮ್ಮ ಪರ ವಕಾಲತ್ತಿನಲ್ಲಿ ಸಹಾಯಕರಾಗಲು ಗಾಂಧೀಜಿಯವರನ್ನು ಕರೆಸಿಕೊಂಡರು. ಹೊಸ ಸಾಹಸಗಳನ್ನು ಅತ್ಯುತ್ಸಾಹದಿಂದ ಸ್ವಾಗತಿಸುತ್ತಿದ್ದ ಗಾಂಧೀಜಿ ಈ ಉದ್ಯಮವನ್ನು ಒಪ್ಪಿ ದರ್ಬಾನಿನಲ್ಲಿ ಬಂದಿಳಿದರು. ದಕ್ಷಿಣ ಆಫ್ರಿಕಾದ ಈ ಸಾಹಸದಿಂದ ತಮ್ಮ ಜೀವನದ ಮಹಾಕ್ಷೇತ್ರ ನೂತನ ದಿಗಂತಗಳಿಗೆ ಹಬ್ಬಿ ನಿಲ್ಲುವ ಅನುಭವಗಳ ಪರಂಪರೆಯನ್ನೇ ತಂದೀತೆಂದು ಆಗ ಅವರು ಭಾವಿಸಿಯೇ ಇರಲಿಲ್ಲ.

ಒಂದು ವರ್ಷದ ಪ್ರಾಮಾಣಿಕ ಪರಿಶ್ರಮದಿಂದ ಗಾಂಧೀಜಿ ದಾದಾ ಅಬ್ದುಲ್ಲಾರವರ ಮೊಖದ್ದಮೆಯನ್ನು ಯಶಸ್ವಿಯಾಗಿ ನಡೆಸಿದರು. ಇಂಗ್ಲೀಷ್ ವಿದ್ಯಾಭ್ಯಾಸ ಮಾಡಿದ್ದ ಈ ಬ್ಯಾರಿಸ್ಟರ್ ಅಲ್ಲಿನ ಭಾರತೀಯ ಜನಾಂಗದಲ್ಲಿ ಉನ್ನತ ಪದವಿಯನ್ನು ಗಳಿಸಿದರು. ಆದರೆ ಆಳರಸರಾಗಿದ್ದ ಯೂರೋಪಿಯನ್ ಸಮಾಜದಿಂದ ಅನೇಕ ರೀತಿಯಲ್ಲಿ ಅವಮಾನಗಳಿಗೊಳಗಾದರು. ಕರಿಯ

ಜನಾಂಗವನ್ನೇ ನಿಕೃಷ್ಟವೆಂದು ಭಾವಿಸಿದ್ದ ಬ್ರಿಟಿಷರು ಹೆಜ್ಜೆ ಹೆಜ್ಜೆಗೆ ಅಲ್ಲಿನ ಭಾರತೀಯರನ್ನೂ ಮೂಲನಿವಾಸಿಗಳಾದ ನೀಗ್ರೋ ಜನಾಂಗವನ್ನೂ ಗುಲಾಮ ಗಿರಿಯ ಅಧಃಪಾತಕ್ಕೆ ನೂಕುತ್ತಿದ್ದರು. ನಾಗರಿಕ ಪ್ರಜೆಗಳ ಹಕ್ಕುಬಾಧ್ಯತೆ ಗಳೆಲ್ಲ ಬಿಳಿಯರ ಮೀಸಲು ಸ್ವತ್ತಾಗಿತ್ತು. ಕೋರ್ಟಿನಲ್ಲಿ ಪೇಟೆಯಲ್ಲಿ ರೈಲು ಗಾಡಿಗಳಲ್ಲಿ ಸರ್ಕಾರೀ ಕಛೇರಿಗಳಲ್ಲಿ ಈ ಬಿಳಿ ಕರಿಗಳ ತಾರತಮ್ಯ ಅಸಹನೀಯ ವಾಗಿದ್ದುದನ್ನು ತಮ್ಮ ವೃತ್ತಿಯ ಕೆಲಸ ಕಾರ್ಯಗಳಲ್ಲಿ ಗಾಂಧೀಜಿ ತಾವೇ ಅನುಭವಿಸಿದರು. ಬಂದ ಕಾರ್ಯವನ್ನು ಮುಗಿಸುವವರೆಗೆ ಈ ಬಗ್ಗೆ ಯಾವ ನೇರ ಪ್ರತಿಭಟನೆಯನ್ನೂ ಅವರು ಮಾಡಲಿಲ್ಲ. ದಾದಾ ಅಬ್ದುಲ್ಲಾ ಅವರ ಪರ ಸಾಕ್ಷ್ಯಗಳು ಪ್ರಬಲವಾಗಿದ್ದು ಪಂಚಾಯಿತದಾರರು ಅವರ ಪರವಾಗಿಯೇ ತೀರ್ಪು ಕೊಟ್ಟರು. ಆದರೆ ಸೋತ ತಯಾಬ್ಜಿ ಸೇಟರ ಸಂಪೂರ್ಣ ದಿವಾಳಿಗೆ ಅವಕಾಶ ಕೊಡದೆ ಗಾಂಧೀಜಿ ಈ ದಾಯಾದಿಗಳ ಮಧ್ಯೆ ಮಧುರ ಬಾಂಧವ್ಯವನ್ನೇ ಕುದುರಿಸಿದರು. ವಿಜಯಗಳಿಸಿದ ಸಮಯ ದಲ್ಲಿ ವಿಶಾಲ ಹೃದಯದಿಂದ ವರ್ತಿಸುವಂತೆ ತಮ್ಮ ಕಕ್ಷಿಗಾರರನ್ನು ಪ್ರೇರೇಪಿ ಸಿದರು. ಪರಸ್ಪರ ನಾಶಕ್ಕಾಗಿ ಹೋರಾಡಿದವರು ಮಿತ್ರರಾದರು. ತಮ್ಮ ಆತ್ಮಕಥೆಯಲ್ಲಿ "ನಿಜವಾದ ನ್ಯಾಯದ ಆಚರಣೆಯನ್ನು ಕಲಿತಂತಾಯಿತು. ಮಾನವಸ್ವಭಾವದ ಉತ್ತಮ ಅಂಶಗಳನ್ನು ಕಂಡುಹಿಡಿಯಲು ಮಾನವ ಹೃದಯವನ್ನೇ ಹೊಗುವ ರೀತಿಯನ್ನು ಕಲಿತೆ. ವಿಭಿನ್ನಭಾವಗಳಿಂದ ವಿರೋಧಿಸುವ ಪಕ್ಷಗಳವರನ್ನು ಒಟ್ಟುಗೂಡಿಸುವುದೇ ವಕೀಲನ ನಿಜವಾದ ಕೆಲಸವೆಂದು ನನಗೆ ಅರಿವಾಯಿತು" ಎಂದಿದ್ದಾರೆ.

೩

"ಕರಿಯ ತೊಗಲಿನವನಾದ್ದರಿಂದ ಇಲ್ಲಿಂದ ತೊಲಗು. ನಿನ್ನ ಬಳಿ ಮೊದಲನೇ ತರಗತಿ ಟಿಕೆಟ್ ಇದ್ದರೂ ಬಿಳಿಯರೊಡನೆ ಕೂಡಲಾರೆ."

ರಾತ್ರಿಯ ರೈಲುಗಾಡಿಯಲ್ಲಿದ್ದಾಗ ಬ್ರಿಟಿಷ್ ಸೈನಿಕನೊಬ್ಬ ಮೆರಿಟ್ಸ್ ಬರ್ಗ್ ನಿಲ್ದಾಣದಲ್ಲಿ ಗಾಂಧೀಯವರನ್ನು ಕತ್ತುಹಿಡಿದು ಹೊರಕ್ಕೆ ತಳ್ಳಿಬಿಟ್ಟ. ರೈಲು ನೌಕರರೂ ಅವನಕಡೆಗೇ ವಾದಿಸಿದರು. ಕೊರೆವ ಛಳಿಯಲ್ಲಿ ಅವರನ್ನು ಬಿಟ್ಟು ರೈಲು ಮುಂದೆಸಾಗಿತು.

"ಏ ಕರಿಯ ಕೂಲಿ ! ಸೀಟಿನಿಂದಿಳಿದು ಕಾಲೊರಸಿನ ಮೇಲೆ ಕೂತುಕೋ" ಎಂದಬ್ಬರಿಸಿ ಕಿವಿಯಮೇಲಪ್ಪಳಿಸಿ ಹೊಡೆದುನೂಕಿದ ಚಾರ್ಲ್ಸ್‌ಟೌನಿನಲ್ಲಿ ಕೋಚ್‌ಗಾಡಿಯ ಬಿಳಿಯಸಾಹೇಬ.

ಗಾಂಧೀಜಿಯನ್ನು ಬರಮಾಡಿಕೊಂಡ ಉನ್ನತವರ್ಗದ ಭಾರತೀಯರೂ ಇಂಥ ನೂರಾರು ಅನುಭವಗಳನ್ನು ತೋಡಿಕೊಂಡರು. ಪ್ರಿಟೋರಿಯಾದಲ್ಲಿನ ಕೋರ್ಟಿನಲ್ಲಿ ಮೊಕದ್ದಮೆ ನಡೆದಿತ್ತು. ಅಲ್ಲಿನ ಕೆಲಸದೊಡನೆ ವರ್ಣವಿದ್ವೇಷದ ಭಯಾನಕ ಕಿಡಿಗಳಲ್ಲಿ ಬೇಯುತ್ತಿದ್ದ ತಾರತಮ್ಯ ಸಮಾಜವೊಂದರ ಅಸಹನೀಯ ದರ್ಶನವಾಯಿತು ಗಾಂಧೀಜಿಗೆ. ಆಳರಸರಾಗಿದ್ದ ಬಿಳಿಯರ ಅನಾಗರಿಕ ದರ್ಪ ಮಾನವನ ಆತ್ಮಗೌರವವನ್ನೇ ನುಚ್ಚು ನೂರುಮಾಡಿತ್ತು. ಇದನ್ನು ಪ್ರತಿಭಟಿಸಿನಿಂತು ಗೆಲ್ಲುವುದು ಹೇಗೆ ? ಗಾಂಧೀಜಿ ವಿಚಾರಮಂಥನದಲ್ಲಿ ಪರಿತಪಿಸಿ ತಲ್ಲಣಿಸಿದರು. ತಮ್ಮ ವಕೀಲಿ ಕೆಲಸದೊಂದಿಗೆ ಸಾರ್ವಜನಿಕ ಮಹಾರಂಗದಲ್ಲಿ ನಿಸ್ವಾರ್ಥ ಸೇವೆಗೂ ನಿಂತರು. ಸಾಮಾನ್ಯ ಮಾನವನ ಸ್ವಯಂಪ್ರೇರಿತ ನ್ಯಾಯವಾದಿಗಳಾಗಿ ಕೆಲಸಮಾಡತೊಡಗಿದರು.

ನಿಯೋಜಿತ ಕೆಲಸ ಮುಗಿದು ಭಾರತಕ್ಕೆ ಹೊರಡಬೇಕೆನ್ನುವ ಸಮಯಕ್ಕೆ ಸರಿಯಾಗಿ ದಕ್ಷಿಣ ಆಫ್ರಿಕದ ಸರಕಾರ ಭಾರತೀಯರ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಮಸೂದೆಯೊಂದನ್ನು ಪ್ರಕಟಿಸಿತು. ಅದರ ಪರಿಣಾಮಗಳನ್ನು ತಮ್ಮ ಭಾರತೀಯ ಮಿತ್ರರಿಗೆ ವಿವರಿಸಿ ಕಾನೂನು ಬದ್ಧವಾಗಿ ಇದನ್ನು ಪ್ರತಿಭಟಿಸಿರಿ ಎಂದು ಕರೆಕೊಟ್ಟರು ಗಾಂಧೀಜಿ. ನೀವೇ ಇದ್ದು ಅದನ್ನು ನಡೆಸಿಕೊಡಬೇಕು ಎಂದು ಆ ಜನ ಅಂಗಲಾಚಿದರು. ಹೊಸ ಅಧ್ಯಾಯವೊಂದು ಪ್ರಾರಂಭವಾಯಿತು.

ಇಲ್ಲಿಯವರೆಗೆ ಗಾಂಧೀಜಿ ತನ್ನ ವೃತ್ತಿ. ತನ್ನ ಏಳಿಗೆ. ತನ್ನ ಕುಟುಂಬ ಪೋಷಣೆ. ತನ್ನ ವೈಯಕ್ತಿಕ ಜೀವನ ಈ ಸಂಕುಚಿತ ಆವರಣದಲ್ಲೇ ಯೋಚಿಸುತ್ತಿದ್ದರು. ಈಗ ಆಫ್ರಿಕದ ಅನುಭವಗಳು ಈ ಬೇಲಿಯನ್ನು ಕಿತ್ತೊಗೆದು ಇಡೀ ಸಮಾಜದ ಮಹಾಸಂಸಾರದೊಡನೆ ಅವರ ಬಾಳು ಸಂಪೂರ್ಣ ವಿಲೀನವಾಗುವಂತೆ ಪ್ರೇರೇಪಿಸಿತು. 1893 ರಲ್ಲಿ ನಟಾಲದ ಜನ ಬೃಹತ್ ಪ್ರಮಾಣದ ಅಂಕಿಅಂಶಗಳನ್ನು ಶೇಖರಿಸಿ ಒಂದು ಸಾರ್ವಜನಿಕ ಮನವಿಯನ್ನು ಶಾಸನ ಸಭಾಧ್ಯಕ್ಷರಿಗೆ ಸಲ್ಲಿಸಿದರು. ಭಾರತದಲ್ಲಿ. ಇಂಗ್ಲೆಂಡಿನಲ್ಲಿ ಹಲವು ಪತ್ರಿಕೆಗಳು

ಭಾರತೀಯರ ಮತದಾನದ ಹಕ್ಕನ್ನು ಬೆಂಬಲಿಸಿ ಬರೆದವು. ಒಂದು ಹೊಸ ಚೇತನ ಅಸಂಖ್ಯಾತ ಹೃದಯಗಳಲ್ಲಿ ಸಂಚರಿಸಿತು. ಸಾವಿರಾರು ಸ್ವಯಂ ಸೇವಕರು ಸಾರ್ವಜನಿಕ ಸೇವೆಗೆ ಮುಂದೆ ಬಂದರು. ಸಂಘಟಿತ ಜನಶಕ್ತಿ ಅಪೂರ್ವ ತೇಜಸ್ಸಿನಿಂದ ಪ್ರಜ್ವಲಿಸಿತು. ಗಾಂಧೀ ಅದರ ಕೇಂದ್ರಬಿಂದುವಾದರು. ಅವರ ಬಾಳು ವ್ಯಾಪಕ ಅರ್ಥದಲ್ಲಿ ಜನಾಧಾರಿತವಾಯಿತು. ಖಾಸಗೀ ಕಂಪನಿಯೊಂದರ ನ್ಯಾಯಸಲಹೆಗಾರರಾಗಿ ಬಂದವರು ಜನಪ್ರಿಯ ಸಮಾಜ ಸೇವಕರಾದರು. ನಟಾಲದಲ್ಲಿ ನೆಲೆಸಿ ವಕೀಲ ವೃತ್ತಿಯನ್ನವಲಂಬಿಸಿ ಜೀವಿಸುತ್ತಾ ತಮ್ಮ ಸಮಯದ ಬಹುಭಾಗವನ್ನು ಸಾರ್ವಜನಿಕಸೇವೆಗೆ ಮುಡಿಪಾಗಿಟ್ಟರು. ನಟಾಲ್ ಇಂಡಿಯನ್ ಕಾಂಗ್ರೆಸ್ ಸ್ಥಾಪಿತವಾಯಿತು.

ದಕ್ಷಿಣ ಆಫ್ರಿಕಾಕ್ಕೆ ಬಂದು ಸಾರ್ವಜನಿಕ ಸೇವಕರಾಗಿ ನಿಂತ ಗಾಂಧೀಜಿ ಜೀವನಕ್ಕಾಗಿ ವೃತ್ತಿಯನ್ನು ಅವಲಂಬಿಸುತ್ತಿದ್ದರೂ ಅಲ್ಲಿನ ಕೂಲಿಯಾಳುಗಳಿಗೆ ದಯಾರ್ದ್ರ ಆಶ್ರಯದಾತರೂ ಅಭಯಪ್ರದಾಯಕರೂ ಆಗಿ ಅವರ ಮಧ್ಯೆ ಸಾಮಾಜಿಕ ಕಾರ್ಯದಲ್ಲಿ ನಿರತರಾದರು. ಬಿಳಿಯ ಧಣಿಗಳಿಂದ ಅವಮಾನಿತರಾಗಿ ದಬ್ಬಾಳಿಕೆಗೆ ಗುರಿಯಾಗುತ್ತಿದ್ದ ಕೂಲಿಯಾಳುಗಳ ಖಟ್ಲೆಗಳಲ್ಲಿ ವಕೀಲರಾಗಿ ನಿಂತು ನಿರ್ಭಯರಾಗಿ ಹೋರಾಡಿದರು. ಜೀತದಾಳುಗಳಮೇಲೆ ಆ ಸರಕಾರ ವಿಧಿಸಬೇಕೆಂದಿದ್ದ ತಲೆಗಂದಾಯದ ವಿರುದ್ಧ ಪ್ರಬಲ ಪ್ರತಿಭಟನೆಯನ್ನು ಸಂಘಟಿಸಿ ಯಶಸ್ವಿಯಾದರು. ಅಹಿಂಸಕ ಶಕ್ತಿಯ ಸಂಘಟಿತ ಪ್ರಭಾವ ಅವರ ಅನುಭವಕ್ಕೆ ಬರುತ್ತಿತ್ತು.

"ನನ್ನ ಆತ್ಮಸಾಕ್ಷಾತ್ಕಾರದ ಹಂಬಲ ನನ್ನನ್ನು ಸಮಷ್ಟಿಯ ಸೇವೆಯಲ್ಲಿ ತಲ್ಲೀನನಾಗುವಂತೆ ಪ್ರೇರೇಪಿಸಿತು. ಸೇವಾಧರ್ಮವನ್ನೇ ನನ್ನ ಪರಮ ಧರ್ಮವನ್ನಾಗಿ ಅಂಗೀಕರಿಸಿದೆ. ಈಶ್ವರಸಾಕ್ಷಾತ್ಕಾರಕ್ಕೆ ಸಮಾಜಸೇವೆ ಅತ್ಯಮೋಘ ಮಾರ್ಗ ಎಂದು ನಂಬಿದೆ. ಭಾರತೀಯನಾದುದರಿಂದ ಭಾರತದ ಸೇವೆಯೇ ಸಹಜಪ್ರಾಪ್ತ ಸೇವಾಕ್ಷೇತ್ರವಾಯಿತು. ಕಾಥೇವಾಡದ ಜೀವನದಲ್ಲಿ ಜಿಗುಪ್ಸೆಗೊಂಡು ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಂಡಿದ್ದೆ. ಆದರೆ ಆತ್ಮಸಾಕ್ಷಾತ್ಕಾರಕ್ಕಾಗಿ ಶ್ರಮಿಸುತ್ತಾ ಈಶ್ವರಾನ್ವೇಷಣೆಯ ಉತ್ಕಟಾಕಾಂಕ್ಷೆಯಿಂದ ನನ್ನ ಬಾಳು ತುಂಬಿ ನಿಂತಿತು" ಎಂದಿದ್ದಾರೆ ತಮ್ಮ ಆತ್ಮಕಥೆಯಲ್ಲಿ. ಆಫ್ರಿಕಾಖಂಡದ ಭಾರತೀಯ ಜೀತದಾಳುಗಳ ಜೀವನ ಸುಧಾರಣೆ ಅಲ್ಲಿಂದಾಚೆಗೆ ಅವರ ಪ್ರಧಾನ

ಧ್ಯೇಯವಾಯಿತು. ದಕ್ಷಿಣ ಆಫ್ರಿಕದಲ್ಲಿ ನೆಲೆಸಲು ನಿರ್ಧರಿಸಿ ಹೆಂಡತಿ ಮಕ್ಕಳನ್ನು ಕರೆತರಲು ಸ್ವದೇಶಕ್ಕೆ ಮರಳಿ ಬಂದರು.

ಭಾರತದಲ್ಲಿ ಗಾಂಧೀ ಇನ್ನೂ ಅಪರಿಚಿತರಾಗಿದ್ದರು. ಆಗಾಗ್ಗೆ ದಕ್ಷಿಣ ಆಫ್ರಿಕದ ಹೋರಾಟ ಜನನಾಯಕರ ಗಮನಕ್ಕೆ ಬರುತ್ತಿದ್ದರೂ ಈ ವಿಶಿಷ್ಟ ವ್ಯಕ್ತಿಯ ಪರಿಚಯ ಯಾರಿಗೂ ಆಗಿರಲಿಲ್ಲ. ಹೊರದೇಶಗಳಿಗೆ ವಲಸೆ ಹೋದ ಕೂಲಿಯಾಳುಗಳ ದಾರುಣಸ್ಥಿತಿಯನ್ನು ವಿವರಿಸಿ ಭಾರತದ ಅಂದಿನ ಪ್ರಖ್ಯಾತ ನಾಯಕರ ಬೆಂಬಲವನ್ನು ಗಳಿಸಿದರು. ಬೊಂಬಾಯಿನಲ್ಲಿ ಜಸ್ಟಿಸ್ ರಾನಡೆ, ಸರ್ ಫಿರೋಜ್ ಷಾ ಮೆಹ್ತಾ. ಬದ್ರುದ್ದೀನ್ ತಯಾಬ್ಜಿ : ಪೂನೆಯಲ್ಲಿ ಬಾಲ ಗಂಗಾಧರ ತಿಲಕ್. ಗೋಪಾಲಕೃಷ್ಣಗೋಖಲೆ. ಪ್ರೊ. ಬಂಢಾರಕರ್ : ಮದ್ರಾಸಿನ ಪತ್ರಿಕರ್ತರಾದ ಪರಮೇಶ್ವರನ್ ಪಿಳ್ಳೆ. ಜಿ. ಸುಬ್ರಹ್ಮಣ್ಯಯ್ಯರ್. ಜಿ. ಎ. ನಟೇಶನ್ : ಕಲ್ಕತ್ತದಲ್ಲಿ ಸುರೇಂದ್ರನಾಥಬ್ಯಾನರ್ಜಿ : ಈ ಮಹಾಮೇಧಾವೀ ನಾಯಕರ ನಿಕಟ ಸಂಪರ್ಕ ಪಡೆದು ದಕ್ಷಿಣ ಆಫ್ರಿಕದ ವರ್ಣೀಯರ ಗೌರವ ರಕ್ಷಣಾ ಹೋರಾಟಕ್ಕೆ ಪ್ರಚಂಡ ಬೆಂಬಲ ಗಳಿಸಿದರು. ಎಲ್ಲ ಕಡೆಯೂ ಸಭೆಗಳನ್ನು ನಡೆಸಿ ತಮ್ಮ ನಿಲುವನ್ನು ವಿವರಿಸಿದರು. ಅಲ್ಲಿನ ಪರಿಸ್ಥಿತಿಯನ್ನು ಕುರಿತ "ಹಸಿರು ಪುಸ್ತಕ" ಒಂದನ್ನು ಪ್ರಕಟಿಸಿದರು. ಸಾವಿರಾರು ಪ್ರತಿಗಳು ಮಾರಾಟವಾದುವು. ಈ ಮುಕ್ತಹೃದಯದ ಸಹಜಸ್ಫೂರ್ತಿಯ ಸರ್ವಾನುಮತ ಬೆಂಬಲ ಈ ಮಹಾನಾಯಕನಿಗೆ ಆತ್ಮವಿಶ್ವಾಸದ ಅಭೇದ್ಯ ರಕ್ಷಣೆಯನ್ನೊದಗಿಸಿ ಕಳುಹಿಸಿತು. ಅದೇ ಕಾಲಕ್ಕೆ ದಕ್ಷಿಣ ಆಫ್ರಿಕದ ಐರೋಪ್ಯರು ಈತನ ಕಾರ್ಯ ಚಟುವಟಿಕೆಗಳನ್ನು ಕಂಡು ವಿಪರೀತ ಸಿಟ್ಟಿಗೆದ್ದರು. ಅವರನ್ನು ಮತ್ತೆ ದಕ್ಷಿಣ ಆಫ್ರಿಕಾಕ್ಕೆ ಸೇರಿಸಕೂಡದೆಂದು ಪ್ರಬಲವಾದ ಧಾಳಿಮಾಡಲು ಅಣಿಯಾದರು. 1897 ರ ಡಿಸೆಂಬರ್‌ನಲ್ಲಿ ಪತ್ನೀಪುತ್ರಸಮೇತರಾಗಿ ಡರ್ಬಾನಿನಲ್ಲಿ ಬಂದಿಳಿದ ಗಾಂಧೀಜಿಗೆ ಭಾರತೀಯರ ಸ್ವಾಗತದೊಂದಿಗೆ ಬಿಳಿ ಜನರ ಕ್ರೂರ ಪ್ರತಿಭಟನೆ ಮತ್ತು ಪ್ರಬಲ ದೌರ್ಜನ್ಯಧಾಳಿಗಳು ಕಾದು ನಿಂತಿದ್ದುವು.

ದಕ್ಷಿಣ ಆಫ್ರಿಕದ ಯೂರೋಪಿಯನ್ ಜನಾಂಗವನ್ನು ಅವರ ವರ್ಣೀಯ ತಾರತಮ್ಯ ನೀತಿಗಾಗಿ ಗಾಂಧೀಜಿ ಕಟುವಾಗಿ ಟೀಕಿಸಿ ನುಡಿದ ಬರೆದ ಮಾತುಗಳು ಭಾರತದಲ್ಲೂ ಇಂಗ್ಲೆಂಡ್‌ನಲ್ಲೂ ಪ್ರಸಾರವಾಗಿದ್ದುವು. ತಮಗೆ ಅವಮಾನ ವಾಯಿತೆಂದು ಆ ಜನ ಉದ್ರೇಕಗೊಂಡಿದ್ದರು. ಡರ್ಬಾನಿನಲ್ಲಿ ಹಡಗ

ನಿಂದಿಳಿದೊಡನೆಯೇ ಬಿಳಿಯರ ದೊಡ್ಡಗುಂಪು ಹಠಾತ್ತನೆ ಅವರ ಮೇಲೆ ಬಿದ್ದಿತು. ಬೀದಿಯಲ್ಲೇ ಅವರನ್ನು ನೂಕಿ ಒದೆಯುತ್ತ ಕ್ರೂರ ಗೂಂಡಾ ವರ್ತನೆಗೆ ಗುರಿಮಾಡಿದರು. ಸಹೋದ್ಯೋಗಿ ಬ್ಯಾರಿಸ್ಟರ್ ಲಾಟನ್ ಜೊತೆಯಲ್ಲಿದ್ದರೂ ನಿಸ್ಸಹಾಯಕರಾದರು. ಆಕಸ್ಮಾತ್ತಾಗಿ ಅಲ್ಲಿನ ಪೋಲೀಸು ಸೂಪರಿಂಟೆಂಡೆಂಟರ ಪತ್ನಿ ಶ್ರೀಮತಿ ಅಲೆಕ್ಸಾಂಡರ್ ಆ ಮಾರ್ಗದಲ್ಲಿ ಹೋಗುತ್ತಿದ್ದವರು ದಿಟ್ಟತನದಿಂದ ಆ ಉದ್ರಿಕ್ತ ಗುಂಪಿಗೂ ಗಾಂಧೀಜಿಗೂ ಮಧ್ಯೆ ನಿಂತರು. ಅಷ್ಟರೊಳಗೆ ಪೋಲೀಸ್ ಪಡೆ ಬಂತು. ಸಿಟ್ಟಿಗೆದ್ದ ಗುಂಪು ಬರುಬರುತ್ತಾ ಹೆಚ್ಚಾಗುತ್ತಲೇ ಇತ್ತು. ಗಾಂಧೀಜಿಯ ಸಂಸಾರ ತಂಗಿದ್ದ ಸೇಠ್ ಅಬ್ದುಲ್ಲಾರವರ ಮನೆಗೆ ಬೆಂಕಿ ಹಚ್ಚಿ ಉರಿಸಿಬಿಡುತ್ತೇವೆಂದು ಮೇಲೆ ಬಿದ್ದು ಬಂದರು. ದಕ್ಷ ಪೋಲೀಸ್ ಅಧಿಕಾರಿ ಅಲೆಕ್ಸಾಂಡರ್‌ಗೆ ತಡೆಯುವುದೂ ದುಸ್ಸಾಧ್ಯವಾಯಿತು. ಉಪಾಯದಿಂದ ಗಾಂಧೀಯವರಿಗೆ ಪೋಲೀಸ್ ಪ್ಯಾದೆಯ ವೇಷಹಾಕಿ ಪೋಲೀಸ್ ಸ್ಟೇಷನ್ನಿಗೆ ಕಳುಹಿಸಿಬಿಟ್ಟು ಆ ವಿಷಘಳಿಗೆಯಿಂದ ಪಾರುಮಾಡಿಸಿದರು. ಈ ದೌರ್ಜನ್ಯ ಎಲ್ಲರಿಗೂ ಅಸಹನೀಯ ನೋವನ್ನುಂಟುಮಾಡಿತ್ತು. ಗೌರವಸ್ಥ ಬಿಳಿಯರು ತಲೆತಗ್ಗಿಸುವಂತಾಗಿತ್ತು. ತೀವ್ರಘಾಯಗಳಾಗಿ ಗಾಂಧೀಜಿ ಬಳಲಿದ್ದರು. ದೌರ್ಜನ್ಯಕಾರರನ್ನು ಹಿಡಿದು ಶಿಕ್ಷಿಸಲು ಎಲ್ಲಕಡೆಗಳಿಂದಲೂ ಪ್ರತಿಧಾಳಿ ಹೊರಟಿತು. ಬ್ರಿಟಿಷ್ ಸರಕಾರವೂ ಈ ಗೂಂಡಾಗಿರಿಯನ್ನು ಖಂಡಿಸಿ ಕೋರ್ಟಿಗೆ ದೂರು ಕೊಡಬೇಕೆಂದು ಗಾಂಧೀಜಿಗೆ ಸಲಹೆ ಮಾಡಿತು. ಉನ್ನತಾಧಿಕಾರಿಗಳು ಇವರ ಕಡೆಗೇ ಇದ್ದರು. ಎಲ್ಲೆಲ್ಲೂ ಪ್ರತೀಕಾರಕ್ಕಾಗಿ ಕೂಗೇಳುತ್ತಿತ್ತು. ಗಾಂಧೀಜಿ ಶಾಂತವಾಗಿ ಸೂಕ್ಷ್ಮವಾಗಿ ಮಾನವಸ್ವಭಾವವನ್ನು ಅರಿತು ತಮ್ಮ ಅಹಿಂಸಾತ್ಮಕ ಧ್ಯೇಯದಿಂದಲೇ ಪ್ರೇರಿತರಾಗಿ ನ್ಯಾಯಾಲಯಕ್ಕೆ ದೂರುಕೊಟ್ಟು ಅಪಾದಿತರನ್ನು ಶಿಕ್ಷಿಸಲು ನಿರಾಕರಿಸಿಬಿಟ್ಟರು.

"ಕೋಪವನ್ನು ಸಂಯಮದಿಂದ ಗೆದ್ದು ಆ ಉದ್ರಿಕ್ತ ಗುಂಪಿನ ಅಪರಾಧಗಳನ್ನು ಕ್ಷಮಿಸಿದ ನನ್ನ ಹೇಳಿಕೆಯಿಂದ ಇಡೀ ಯೂರೋಪಿಯನ್ ಜನಾಂಗ ಅವಮಾನಗೊಂಡಿತು. ತಮ್ಮ ವರ್ತನೆಗಾಗಿ ನಾಚಿಕೆಪಟ್ಟಿತು. ಪತ್ರಿಕೆಗಳು ನಾನು ನಿರಪರಾಧಿ ಎಂದು ಸಾರಿ ಜನಜಂಗುಳಿಯನ್ನು ಖಂಡಿಸಿತು. ಈ ದೌರ್ಜನ್ಯ ಕೃತ್ಯ ಪರೋಕ್ಷವಾಗಿ ನನ್ನ ಗೌರವವನ್ನೂ ಭಾರತೀಯ ಸಮಾಜದ

ಘನತೆಯನ್ನೂ ಪ್ರಭಾವಯುತವಾಗಿ ಹೆಚ್ಚಿಸಿತು. ನನ್ನ ಸಾರ್ವಜನಿಕ ಸೇವೆ ಇದರಿಂದ ಸುಗಮವಾಯಿತು" ಎಂದಿದ್ದಾರೆ ಗಾಂಧೀಜಿ.

ಡರ್ಬಾನಿನ ಈ ಘಟನೆ ಗಾಂಧೀಯವರನ್ನು ದಕ್ಷಿಣ ಆಫ್ರಿಕದ ವರ್ಣೀಯರ ಹಕ್ಕಿನ ಹೋರಾಟದ ಏಕೈಕ ಮಹಾನಾಯಕನ ಪಟ್ಟಕ್ಕೇರಿಸಿತು. ಆ ವೇಳೆಗೆ ಹೆಸರಾಂತ ಬ್ಯಾರಿಸ್ಟರೂ ಆಗಿದ್ದರು. ಆದರೆ ತಮ್ಮ ಹಿರಿಮೆಯಿಂದ ದೊರೆಯುತ್ತಿದ್ದ ಸಾಮಾಜಿಕ ಹಕ್ಕುಗಳನ್ನು ನಿಸಂಕೋಚವಾಗಿ ನಿರ್ಭಯರಾಗಿ ನಿರಾಕರಿಸಿದರು. ಸತ್ಯಾನ್ವೇಷಕನ ಅಸಿಧಾರಾ ವ್ರತದ ಕಠಿಣ ಜೀವನವನ್ನು ಸ್ವಲ್ಪಸ್ವಲ್ಪವಾಗಿ ಅಭ್ಯಾಸಿಸಲು ಪ್ರಾರಂಭಿಸಿದ್ದರು. ಆತ್ಮಗೌರವ ಮತ್ತು ಸ್ವಾತಂತ್ರ್ಯದಲ್ಲಿ ಅವರಿಗೆ ಪೂರ್ಣ ನಂಬಿಕೆ. ಇತರರಿಗೆ ದೊರೆಯದಿದ್ದ ಯಾವ ಪ್ರತ್ಯೇಕ ಸೌಲಭ್ಯವನ್ನೂ ಅವರು ಅಂಗೀಕರಿಸಲು ಸಿದ್ಧರಿರಲಿಲ್ಲ. ಮಕ್ಕಳಿಗೆ ಮನೆಯಲ್ಲೇ ವಿದ್ಯಾಭ್ಯಾಸ ಮಾಡಿಸಿದರು. ದಕ್ಷಿಣ ಆಫ್ರಿಕದಲ್ಲಿದ್ದಾಗಲೇ ಗಾಂಧೀಯವರ ಮೂರನೇ ಮತ್ತು ನಾಲ್ಕನೇ ಮಕ್ಕಳು ರಾಮದಾಸ್ ಮತ್ತು ದೇವದಾಸ್ ಜನಿಸಿದರು. ಹೀರಾಲಾಲ್ ಮತ್ತು ಮಣಿಲಾಲ್ ಈ ವೇಳೆಗಾಗಲೇ ಕ್ರಮವಾಗಿ ಒಂಬತ್ತು ಮತ್ತು ಐದು ವರ್ಷದವರಾಗಿದ್ದರು. ಕೌಟುಂಬಿಕ ಜೀವನ ತಮ್ಮ ಮಹಾಪ್ರಯತ್ನಗಳ ಆಧಾರಶಕ್ತಿಯಾಗುವಂತೆ ನೇರ್ಪಡಿಸಲು ಗಾಂಧೀಜಿಯ ಹಂಬಲ. ಸತ್ಯನಿಷ್ಠೆ ಸರಳತೆ, ಇಂದ್ರಿಯ ಸಂಯಮ, ಶ್ರಮಸಹಿಷ್ಣುತೆ, ನಿಃಸ್ವಾರ್ಥ ವಿಶ್ವಾಸ, ಭೇದರಹಿತ ಆತಿಥ್ಯ ಇವು ಹೆಜ್ಜೆಹೆಜ್ಜೆಯಾಗಿ ಗಾಂಧೀ ಸಂಸಾರವನ್ನು ಆವರಿಸಿ ನಿಲ್ಲುತ್ತಿದ್ದುವು. ಸಮಷ್ಟಿಯ ಸೇವೆಗೂ ಕೌಟುಂಬಿಕ ಸೌಖ್ಯಕ್ಕೂ ಎಂದೂ ವಿರಸವಿರಬಾರದೆಂದೇ ಅವರ ನಂಬಿಕೆ. ಸ್ವಾರ್ಥರಹಿತ ಸೇವೆಯೇ ಆನಂದದ ಆಧಾರ ಎಂಬ ಆತ್ಮವಿಶ್ವಾಸದಿಂದ ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಅವರು ತಲ್ಲೀನರಾಗಿಬಿಟ್ಟರು. ಸತೀ ಕಸ್ತೂರಿಬಾ ನಿಜವಾದ ಸಹಧರ್ಮಿಣಿಯಾದಳು. ಇಬ್ಬರೂ ಸ್ವಪ್ರೇರಣೆಯಿಂದ ಆಜೀವ ಬ್ರಹ್ಮಚರ್ಯ ವ್ರತವನ್ನು ಕೈಗೊಂಡರು. ಆ ವೇಳೆಗೆ ಅವರಿಗಿನ್ನೂ ನಲವತ್ತರ ವಯಸ್ಸು. ಬೊಂಬಾಯಿನ ಅವರ ಬಂಧು ರಾಯ್‌ಚಂದ್‌ಭಾಯಿ ತಮ್ಮ ಸ್ವಾನುಭವ ವಿವೇಕದಿಂದ ಆಧ್ಯಾತ್ಮಿಕ ಅನ್ವೇಷಣೆಯ ಅಭಿರುಚಿ ಉಂಟುಮಾಡಿದರು. ನೈತಿಕಶುದ್ಧಿ ಅವರ ಬಾಳಿನ ಅನಿವಾರ್ಯ ನಿಷ್ಠೆಯಾಯಿತು. ಊಟ, ಉಡಿಗೆ, ತೊಡಿಗೆ,

ವಸತಿ, ಆವರಣ, ಜನಸಂಪರ್ಕ, ಸಹವಾಸ ಎಲ್ಲವೂ ಅವರ ನೈತಿಕ ಮೌಲ್ಯಗಳ ನಿಷ್ಠುರ ಒರೆಗಲ್ಲಿಗೆ ಸಲ್ಲಬೇಕಾಯಿತು. ಆತ್ಮಪ್ರತ್ಯಯದೊಂದಿಗೆ ಭಗವಂತನ ಅನುಗ್ರಹ ಅಜೇಯ ರಕ್ಷಣೆಯಾಗಿ ಕಾಪಾಡುತ್ತದೆ ಎಂದು ನಂಬಿದರು. ಗೀತೆಯಲ್ಲಿನ ಸ್ಥಿತಪ್ರಜ್ಞನ ಚಿತ್ರ ಅವರ ಮನಸ್ಸನ್ನು ಸೆರೆ ಹಿಡಿಯುತ್ತಿತ್ತು.

"ವಿಷಯಾ ವಿನಿವರ್ತಂತೇ ನಿರಾಹಾರಸ್ಯದೇಹಿನಃ
ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ"

ಎಂಬ ಶ್ಲೋಕವನ್ನು ಆತ್ಮಕಥೆಯಲ್ಲಿ ಉದಹರಿಸಿದ್ದಾರೆ. ಅವರ ಮಾತಿನಲ್ಲೇ ಹೇಳುವುದಾದರೆ,

"ದಾರಿ ನನಗೆ ಗೊತ್ತು ಅದು ನೇರ ಮತ್ತು ಇಕ್ಕಟ್ಟು...ಕತ್ತಿಯ ಅಲುಗಿನಂತೆ. ಅದರಮೇಲೆ ನಡೆಯುವುದೆಂದರೆ ನನಗೆ ಉಲ್ಲಾಸ. ಜಾರಿದಾಗಲೆಲ್ಲ ಕಣ್ಣೀರಿಡುತ್ತೇನೆ. 'ನಮೇ ಭಕ್ತಃ ಪ್ರಣಶ್ಯತಿ' ಎಂದು ದೇವರ ವಚನವಿದೆ. ಆ ವಚನದಲ್ಲಿ ನನಗೆ ದೃಢವಾದ ನಂಬಿಕೆಯಿದೆ. ಆದ್ದರಿಂದ ನನ್ನ ದೌರ್ಬಲ್ಯಗಳ ಪರಿಣಾಮವಾಗಿ ಸಾವಿರಬಾರಿ ಸೋತರೂ ನಾನೆಂದಿಗೂ ಶ್ರದ್ಧೆಗೆಡುವುದಿಲ್ಲ. ಪ್ರತಿಯಾಗಿ ಇಂದಲ್ಲ ನಾಳೆ, ಸ್ವತಃ ಸಿದ್ಧವಾಗಿ ಕೈಗೂಡಲೇ ಬೇಕಾಗಿರುವ ಇಂದ್ರಿಯಜಯ ಲಭಿಸಿದಂದು ಬೆಳಕನ್ನು ಕಂಡೇ ಕಾಣುತ್ತೇನೆಂಬುದು ನನ್ನ ವಿಶ್ವಾಸ.

"ಏಕೆಂದರೆ, ಸಾವಿನ ನಡುವೆ ಬಾಳು, ಸುಳ್ಳಿನ ನಡುವೆ ಸತ್ಯ, ತಮಸ್ಸಿನ ನಡುವೆ ಜ್ಯೋತಿ ಚಿರಸ್ಥಾಯಿಯಾಗಿರುವುದನ್ನು ನಾನು ಕಾಣುತ್ತಿದ್ದೇನೆ. ಭಗವಂತನೇ ಪ್ರಾಣಶಕ್ತಿ, ಅವನೇ ಸತ್ಯ ಮತ್ತು ಜ್ಯೋತಿ ಎಂಬುದು ನನ್ನ ವಿಶ್ವಾಸ. ಆತ ಪ್ರೇಮಸ್ವರೂಪಿ ; ಆತನೇ ಪರಮ ಶ್ರೇಯಸ್ಸು."

೪

ಆಫ್ರಿಕಾ ನಿವಾಸಿಗಳಾದ ಬೋಯರ್ ಜನಾಂಗ 1899 ರಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದರು. ಅನೇಕ ವರ್ಷಗಳ ಅಸಹನೀಯ ಅವಮಾನಗಳನ್ನು ದೇಶೀಯ ನೀಗ್ರೋಗಳು ಸಹಿಸದೆ ಪ್ರತಿಭಟಿಸುವ ಚಿಹ್ನೆಗಳಲ್ಲಿ

ಇದೊಂದಾಗಿತ್ತು. ರಾಜಕೀಯ ದಮನದಿಂದ ಅವರು ಸಿಟ್ಟಿಗೆದ್ದಿದ್ದರು. ಭಯಂಕರ ಪ್ರತಿಹಿಂಸೆಯಿಂದ ಸರ್ಕಾರವನ್ನೇ ಉರುಳಿಸುವ ಅರಾಜಕತೆ ದೌರ್ಜನ್ಯಗಳ ಭಯ ಇಂಗ್ಲೀಷ್ ಆಳರಸರನ್ನು ಆವರಿಸಿತ್ತು. ದಕ್ಷಿಣ ಆಫ್ರಿಕದ ಭಾರತೀಯರೂ ತಮಗೆ ವಿರೋಧವಾಗುವರೆಂದು ಅವರು ಎಣಿಸಿದ್ದರು. ಆದರೆ ಗಾಂಧೀಜಿ ಈ ಪರೀಕ್ಷೆಯ ಸಮಯದಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಸಹಾಯಕರಾಗಿ ನಿಂತರು. ಯುದ್ಧರಂಗದಲ್ಲಿ ಗಾಯಗೊಂಡವರ ಶುಶ್ರೂಷಾ ಪಥಕವನ್ನು ಸಿದ್ಧಗೊಳಿಸಿದರು. 'ಸಾರ್ವಜನಿಕ ಹಕ್ಕುಬಾಧ್ಯತೆಗಳ ಹೋರಾಟದಲ್ಲಿ ವೈಯಕ್ತಿಕ ದ್ವೇಷ ಸರ್ವಥಾ ಸಲ್ಲದು. ರಾಜಕೀಯ ಹೋರಾಟ ದಾರಿತಪ್ಪಿದ ಪದ್ಧತಿಗಳ ಮೇಲೆ, ಅಂಧ ಪಂಥಗಳ ಮೇಲೆ, ವ್ಯಕ್ತಿಗಳ ಮೇಲಲ್ಲ' ಎಂಬ ಸಿದ್ಧಾಂತಕ್ಕೆ ಇದು ನಾಂದಿಯಾಯಿತು. ಇದರಿಂದ ಹಿಂದೂಸ್ತಾನಿಗಳ ಗೌರವ ಹೆಚ್ಚಿತು. ಡಾಕ್ಟರ್ ಬೂತ್‌ರವರಂತಹ ನಿರ್ಮಲ ಮನಸ್ಸಿನ ಇಂಗ್ಲೀಷ್ ಸ್ನೇಹಿತರು ದೊರೆತರು. ಗಾಂಧೀಜಿ ಕೇವಲ ದಂಗೆಕೋರ ನಾಯಕರಲ್ಲ ಎಂದವರಿಗೆ ಅರಿವಾಯಿತು.

ಡರ್‌ಬಾನಿನಲ್ಲಿ ವಕೀಲಿ ನಡೆಸುತ್ತಿದ್ದಾಗ ಗಾಂಧೀಜಿಯ ಮನೆಯಲ್ಲಿ ಗುಮಾಸ್ತರು, ಕಕ್ಷಿಗಾರರು, ಸೇವಕರು ಅತಿಥಿಗಳಾಗಿ ಉಳಿದುಕೊಳ್ಳುತ್ತಿದ್ದರು. ಎಲ್ಲರ ಸೇವೆಯನ್ನೂ ಸಮದೃಷ್ಟಿಯಿಂದ ಮಾಡಬೇಕೆಂದು ಕಸ್ತೂರಿಬಾ ಅವರಿಗೆ ಆಗ್ರಹದ ಅಪ್ಪಣೆಯಾಗಿತ್ತು. ಸಾಂಪ್ರದಾಯಕ ಹಿಂದೂ ಸ್ತ್ರೀ ಈ ಹೊಸ ಆವರಣಕ್ಕೆ ಹೊಂದಿಕೊಳ್ಳುವುದು ಅಷ್ಟೇನೂ ಸುಲಭವಾಗಿರಲಿಲ್ಲ. ಒಮ್ಮೆ ಒಬ್ಬ ಕ್ರಿಸ್ತಾನ ಗುಮಾಸ್ತ ಬಂದ. ಅವನ ತಂದೆ ತಾಯಿ ಅಂತ್ಯಜರು. ಪ್ರತಿಯೊಂದು ಕೋಣೆಯಲ್ಲಿದ್ದ ಮೂತ್ರ ಪಾತ್ರೆಯನ್ನು ಕಸ್ತೂರಿಬಾ ಅವರೇ ಸ್ವಚ್ಛ ಮಾಡಬೇಕಾಗಿತ್ತು. ಈತನ ಪಾತ್ರೆಗಳನ್ನು ತೊಳೆಯುವುದು ಆಕೆಗೆ ಅಸಹನೀಯವಾಯಿತು. ಕೋಪದಿಂದ ಕಿಡಿಯಾದರು, ಕಣ್ಣಿನಲ್ಲಿ ನೀರು ತುಂಬಿತು. ದುಃಖದಿಂದ ತಪ್ತರಾಗಿ ಕೆಲಸಮಾಡುತ್ತಿದ್ದುದನ್ನು ಕಂಡು ನಿಷ್ಠುರ ಗಾಂಧೀ ಹಠಾತ್ತನೆ ನುಡಿದರು. "ಇಂಥ ಹುಚ್ಚಾಟ ನನ್ನ ಮನೆಯಲ್ಲಿ ಸಹಿಸಲಾರೆ." ಈ ಮಾತು ಬಾಣದಂತೆ ಘಾಸಿಮಾಡಿತು. ಕಸ್ತೂರಿಬಾ ಹಿಂತಿರುಗಿ ನುಡಿದರು. "ನನ್ನನ್ನೇ ಹೊರೆದೂಡಿಬಿಡಿ." ಗಾಂಧೀ ಸಿಟ್ಟಿನಿಂದ ಹುಚ್ಚಾಗಿಬಿಟ್ಟರು. ದರದರನೆ ಆಕೆಯನ್ನು ಎಳೆದೊಯ್ದು ಬಾಗಿಲಿನಿಂದಾಚೆಗೆ ನೂಕಿಬಿಡಲು

ಹೊರತಂದರು. ಕಸ್ತೂರಿಬಾ ಸ್ಥೈರ್ಯಗೆಡೆದೆ ಪ್ರತಿಭಟಿಸಿ ನಿಂತರು. "ನಿಮಗೆ ನಾಚಿಕೆ ಬೇಡವೇ, ಅಸಹಾಯಕಳಾದ ಅಬಲೆ ಅಪರಿಚಿತ ದೇಶದಲ್ಲಿ ನಾನೆಲ್ಲಿ ಹೋಗಲಿ ? ನಾನು ಹೆಂಗಸು ಎಂಬ ಕಾರಣಕ್ಕಾಗಿಯೇ ಈ ದೌರ್ಜನ್ಯಕ್ಕೆ ಗುರಿಯಾಗಬೇಕೆ ? ಸ್ವಲ್ಪ ನಾಚಿಕೆ ತಂದುಕೊಂಡು ಬಾಗಿಲು ಮುಚ್ಚಿ !" ಎಂದು ನೇರವಾಗಿ ಛೀಮಾರಿ ಮಾಡಿಬಿಟ್ಟರು. ಕ್ರೋಧಾಂಧರಾಗಿದ್ದ ಗಾಂಧಿಜೀಗೆ ತಮ್ಮ ತಪ್ಪು ಅರಿವಾಯಿತು. ಪಶ್ಚಾತ್ತಾಪಪಟ್ಟರು. ಹೆಂಡತಿಯ ಮೇಲೆ ನಿರಂಕುಶ ಪ್ರಭುತ್ವ ಸಲ್ಲದು, ಆಕೆಯ ಒಲುಮೆಯ ಸೇವೆಯಿಲ್ಲದೆ ತಾನು ಬದುಕಲಾರೆ ಎಂದು ಅವರಿಗೆ ಗೊತ್ತಿತ್ತು. "ತನ್ನ ಎಣೆಯಿಲ್ಲದ ಸಹನೆ ಯಿಂದ ಕಸ್ತೂರಿಬಾ ನನ್ನನ್ನು ಯಾವಾಗಲೂ ಗೆದ್ದಿದ್ದಾಳೆ" ಎಂದಿದ್ದಾರೆ ಗಾಂಧೀಜಿ. ಸತ್ಯಾಗ್ರಹಜೀವನದ ದಿವ್ಯಪಥದಲ್ಲಿ ಕಸ್ತೂರಿಬಾ ತನ್ನ ಪತಿಯ ಗುರುವಾದರು.

ಹೀಗೆ ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಗಾಂಧೀಜಿಯ ಜೀವನ ದಲ್ಲಿ ವಿಕಾಸವಾಗುತ್ತಿದ್ದ ಅಹಿಂಸಾ ಪಥದ ಹೆಜ್ಜೆಗಳನ್ನು ಅವರ "ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ" ಎಂಬ ಗ್ರಂಥ ಹೃದಯಂಗಮವಾಗಿ ವಿವರಿಸುತ್ತದೆ. ಬೋಯರ್ ಯುದ್ಧದಲ್ಲಿ ನೆರವಾದುದಕ್ಕಾಗಿ ಬ್ರಿಟಿಷ್ ಪ್ರಭುತ್ವ ಯುದ್ಧ ಪ್ರಶಸ್ತಿಯನ್ನವರಿಗೆ ನೀಡಿತು. ಈ ವೇಳೆಗೆ ಅವರು ದಕ್ಷಿಣ ಆಫ್ರಿಕದಲ್ಲಿ ಆರು ವರ್ಷ ಕಳೆದಿದ್ದರು. ಅಲ್ಲಿಯ ಭಾರತೀಯ ಜನಾಂಗಕ್ಕೆ ಆತ್ಮಗೌರವದ ಪ್ರತಿಷ್ಠಿತ ಬಾಳಿನ ಹೊಸ ಚೈತನ್ಯವನ್ನು ತುಂಬಿದ್ದರು. ಸಾಮೂಹಿಕ ಸಂಕಲ್ಪ ಶಕ್ತಿ ಸಮಾಜದ ಸ್ವರೂಪವನ್ನೇ ಬದಲಿಸಬಲ್ಲುದೆಂಬ ನಂಬಿಕೆ ಬೇರೂರಿತು. ಆದರೆ "ಸಮಾಜದ ದೋಷಗಳನ್ನು ಮರೆಮಾಡಿ ಅಥವಾ ದೋಷಗಳನ್ನು ದೂರಮಾಡದೆಯೇ ಸಮಾಜದ ಹಕ್ಕುಗಳಿಗಾಗಿ ಪ್ರಯತ್ನಿಸುವುದು ನನಗೆಂದೂ ಸರಿದೋರಲಿಲ್ಲ" ಅಂದುಕೊಂಡರು. ತಕ್ಷಣದಲ್ಲಿಯೇ ವೈಯಕ್ತಿಕ ಹಾಗೂ ಸಾಮೂಹಿಕ ಸ್ವಚ್ಛತೆಯ ಕಾರ್ಯ ಕೈಗೊಂಡರು. ಮುಂದೆ ಸ್ವಚ್ಛತಾಕಾರ್ಯ ಅಥವಾ "ಸಫಾಯಿ" ಅವರ ಬಾಳಿನ ಮಹಾ ತತ್ವಗಳಲ್ಲಿ ಆಳವಾದ ಅರ್ಥ ಪಡೆಯಿತು. "ಕರ್ತವ್ಯನಿರ್ವಹಣೆ ಮೊದಲು, ಹಕ್ಕಿನ ಹೋರಾಟ ಆಮೇಲೆ" ಎಂದರು. ನೈರ್ಮಲ್ಯ ಭೌತಿಕವಾದುದಷ್ಟೇ ಆದರೆ ಸಾಲದು ನೈತಿಕ ಸ್ವಚ್ಛತೆಯೇ ಆತ್ಮವಿಶ್ವಾಸದ ತಳಹದಿ. ಕೇವಲ ವ್ಯಕ್ತಿನಿಷ್ಠ ನಿರ್ಮಲತೆ

ಸಾಲದು ಸಮಾಜಜೀವನವೇ ನಿರ್ಮಲವಾಗಬೇಕು ಎಂಬ ಹಂಬಲ ಬೇರೂರಿತು. ತಮ್ಮ ಸುತ್ತಲಿನ ಸಂಗಡಿಗರಲ್ಲಿ ಆಂತರಿಕ ಸುಧಾರಣೆ ತರಲು ಅವರು ತಾಳಿದ ಆಗ್ರಹ, ತೋರಿದ ಹುರುಪು ಅಧಿಕಾರಗಳ ಗೌರವವನ್ನೂ ಆಕರ್ಷಿಸಿತು.

ಭಾರತಕ್ಕೆ ಹಿಂತಿರುಗಲು ಗಾಂಧೀಜಿ ನಿರ್ಧರಿಸಿದರು. ದಕ್ಷಿಣ ಆಫ್ರಿಕದ ಸಂಗಾತಿಗಳು ತಾವು ಕರೆದೊಡನೆ ಬರಬೇಕೆಂಬ ಕರಾರು ಹಾಕಿ ಬೀಳ್ಕೊಟ್ಟರು. ಬೀಳ್ಕೊಡಿಕೆಯ ಸಭೆ ಸಮಾರಂಭಗಳಿಗೆ ಮಿತಿಯೇ ಇಲ್ಲದಾಯಿತು. ಬೆಲೆಬಾಳುವ ಚಿನ್ನ ಬೆಳ್ಳಿ ವಜ್ರ ಒಡವೆಗಳ ಉಡುಗೊರೆ ಗಾಂಧೀ ದಂಪತಿಗಳ ಮಡಿಲನ್ನು ತುಂಬಿ ಹರಿಯಿತು. ಗಾಂಧೀ ಯೋಚಿಸಿದರು. "ಯಾವಸೇವೆಗಾಗಿ ಈ ಜನರ ವಿಶ್ವಾಸ ಹೀಗೆ ಉಕ್ಕಿ ಹರಿಯುತ್ತಿದೆಯೋ ಅದು ಲಾಭಸಂಪಾದನೆಯ ಜೀವನ ವೃತ್ತಿಯಾಗಬಾರದು. ಇವೆಲ್ಲವೂ ಸಾರ್ವಜನಿಕ ಕಾರ್ಯಗಳಿಗೇ ಮೀಸಲಾದ ನಿಧಿಯಾಗಬೇಕು. ಸಮಾಜಸೇವಕನಿಗೆ ಈ ಸಂಯಮ ಅನಿವಾರ್ಯ. ಆದರ ಲೋಭ ಅತ್ಯಂತ ನೀಚ ಸ್ವರೂಪದ ಸ್ವಾರ್ಥವಾದೀತು. ಇದನ್ನು ಸಂಪೂರ್ಣ ವಾಗಿ ನಿರಾಕರಿಸಿ ಶ್ರೀ ರುಸ್ತುಂಜಿ ಅವರ ಹೆಸರಿನಲ್ಲಿ ಒಂದು ವಿಶ್ವಸ್ಥ ನಿಧಿಯನ್ನು ಸ್ಥಾಪಿಸಿ ನಿಶ್ಚಿಂತನಾಗಬೇಕು" ಅಂದುಕೊಂಡರು. ಮಕ್ಕಳನ್ನು ಒಪ್ಪಿಸಿದರು. ಸತೀ ಕಸ್ತೂರಿಬಾ "ಈ ಸಂಸಾರ ಜೀವನದ ನೌಕೆ ತ್ಯಾಗದ ಬಿರುಗಾಳಿಯಲ್ಲಿ ನುಚ್ಚುನೂರಾದೀತು. ವಿಶ್ವಾಸಪೂರ್ವಕವಾಗಿ ನೀಡಿದ ಉಡುಗೊರೆಯನ್ನು ಸ್ವೀಕರಿಸುವುದು ಎಂದಿಗೂ ಪಾಪವಾಗಲಾರದು" ಎಂದು ವಾದಿಸಿದರು. ಹಠ ಮಾಡಿದರು. "ನನಗಾಗಿ ಒಡವೆಯೂ ಬೇಡ; ನಿಮಗೂ ಬೇಡ: ಆದರೆ ನಾಳೆ ಸೊಸೆಯರು ಬಂದಾಗ್ಯೆ ಅವರ ಎಳೆಯ ಮನಸ್ಸು ನೋಯಬಾರದು" ಎಂದು ತರ್ಕಿಸಿದರು. ಗಾಂಧೀಜಿ ದೃಢಮನಸ್ಸಿನಿಂದ ಅಂದರು. "ಒಡವೆಯ ಆಸೆಯಿರುವ ಹೆಣ್ಣುಗಳನ್ನೇ ನಮ್ಮ ಹುಡುಗರಿಗೆ ತರುವುದು ಬೇಡ." ಯಾರ ಮಾತನ್ನೂ ಅವರು ಒಪ್ಪಲಿಲ್ಲ. ತಮ್ಮ ನಿರ್ಧಾರ ಸರಿಯೆಂಬ ಆತ್ಮವಿಶ್ವಾಸ ದಿಂದ ಸಾವಿರಾರು ರೂಪಾಯಿ ಬೆಲೆಯ ಆ ನಿಧಿಯನ್ನು ಸಾರ್ವಜನಿಕ ಸೇವೆಗೆ ಹಿಂತಿರುಗಿ ಅರ್ಪಿಸಿಬಿಟ್ಟರು. ಆತ್ಮಕಥೆಯಲ್ಲಿ ಈ ಸಂಗತಿಯನ್ನು ಬರೆಯುತ್ತಾ

"ನನ್ನ ಈ ಹೆಜ್ಜೆಗಾಗಿ ಎಂದೂ ನನಗೆ ಪಶ್ಚಾತ್ತಾಪವಾಗಿಲ್ಲ. ಕಾಲ ಕಳೆದಂತೆ ನನ್ನ ಹೆಂಡತಿಯೂ ಇದರ ಔಚಿತ್ಯವನ್ನು ಅರಿತುಕೊಂಡಿದ್ದಾಳೆ. ಎಷ್ಟೋ ಪ್ರಲೋಭನೆಗಳಿಂದ ನಮ್ಮನ್ನು ಇದು ಕಾಪಾಡಿದೆ. ಸಾರ್ವಜನಿಕ

ಕೆಲಸಗಾರರು ಬೆಲೆಬಾಳುವ ಕಾಣಿಕೆಗಳನ್ನು ತೆಗೆದುಕೊಳ್ಳಬಾರದೆಂದು ನನ್ನ ದೃಢಾಭಿಪ್ರಾಯ" ಎಂದಿದ್ದಾರೆ.

1901 ನೇ ಡಿಸೆಂಬರಿನಲ್ಲಿ ಕಲ್ಕತ್ತೆಯಲ್ಲಿ ಸೇರಿದ ಕಾಂಗ್ರೆಸ್ ಅಧಿವೇಶನಕ್ಕೆ ಹೋದರು. ಗಾಂಧೀಜಿ ಭಾರತಕ್ಕೆ ಹಿಂತಿರುಗಿದೊಡನೆ ಸ್ವಯಂಸೇವಕರಾಗಿ ಸ್ವಚ್ಛತಾ ಕಾರ್ಯವನ್ನು ಮನಮುಟ್ಟಿ ಮಾಡಿದರು. ಗೋಖಲೆಯವರ ನಿಕಟಬಾಂಧವ್ಯ ಬೆಳೆಯಿತು. ದಕ್ಷಿಣ ಆಫ್ರಿಕದ ಪರಿಸ್ಥಿತಿಯ ಬಗೆ ಕಾಂಗ್ರೆಸ್ ಗಾಂಧಿಯವರ ನಿರ್ಣಯವನ್ನು ಅಂಗೀಕರಿಸಿತು. ಗೋಖಲೆಯವರ ವರ್ಚಸ್ಸು ಇದಕ್ಕೆ ಪ್ರಮುಖ ಕಾರಣವಾಯಿತು. ಗಾಂಧೀಜಿಗೆ ಹಿಂದೂಸ್ಥಾನವನ್ನೆಲ್ಲ ಸುತ್ತಿಬರುವ ಹಂಬಲವಾಯಿತು. ಸರಳ ಸಾಮಾನ್ಯ ಭಾರತೀಯನಂತೆ ಅತ್ಯಂತ ಕನಿಷ್ಟ ದೆಜ್ಜೆದಲ್ಲಿ ಪ್ರಯಾಣ ಮಾಡುತ್ತಾ ಹಲವು ಮುಖ್ಯ ನಗರಗಳಿಗೆ ಭೇಟಿ ಕೊಟ್ಟರು. ವಾರಣಾಸಿಯಲ್ಲಿ ಅನಿಬಸೆಂಟರ ದರ್ಶನ ಪಡೆದರು. ಆ ವೃದ್ಧ ಆಂಗ್ಲ ಮಹಿಳೆ ತನ್ನೊಳಗೆ ತುಂಬಿಕೊಂಡಿದ್ದ ಭಾರತೀಯತೆಯ ಸೌರಭವನ್ನು ಕಂಡು ಬೆರಗಾದರು. ಅವರ ಆಶೀರ್ವಾದ ಪಡೆದರು.

1902 ರಲ್ಲಿ ಬೊಂಬಾಯಿನಲ್ಲಿ ನೆಲಸಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. ಅಷ್ಟರಲ್ಲೇ ದಕ್ಷಿಣ ಆಫ್ರಿಕದ ಕರೆ ಮತ್ತೆ ಬಂತು. ಚೇಂಬರಲೀನ್ ಎಂಬ ಬ್ರಿಟನ್ನಿನ ವಸಾಹತು ಅಧಿಕಾರಿ ದಕ್ಷಿಣ ಆಫ್ರಿಕಾಕ್ಕೆ ಬರುತ್ತಾರೆಂದೂ ಅಲ್ಲಿನ ಭಾರತೀಯರ ಸ್ಥಿತಿ ಮತ್ತೆ ಹದಗೆಟ್ಟಿದೆಯೆಂದೂ, ಕೂಡಲೇ ಹೊರಟು ಬರಬೇಕೆಂದೂ ಅಲ್ಲಿನ ಜನ ಆಗ್ರಹಪೂರ್ವಕ ತಂತಿ ಕಳುಹಿಸಿದ್ದರು. ಗಾಂಧೀಜಿ ತಮ್ಮ ಬೊಂಬಾಯಿ ಕಾರ್ಯಾಲಯವನ್ನು ಮುಚ್ಚಿ ಹೊರಟೇಬಿಟ್ಟರು. ಈ ವೇಳೆಗೆ ಇವರ ಪ್ರಭಾವಕ್ಕೊಳಗಾಗಿದ್ದ ಬಂಧು ಶ್ರೀ ಮಗನ್‌ಲಾಲ್ ಗಾಂಧಿ ಮತ್ತು ಇತರ ನಾಲ್ಕು ಸಂಗಡಿಗರು ಸೇರಿಕೊಂಡರು. ಸಾರ್ವಜನಿಕ ಸೇವಾರಂಗದ ಸಾಹಸಮಯ ಜೀವನದ ಆಕರ್ಷಣೆ ಭಾರತೀಯರಲ್ಲೂ ಮೈಗೂಡುತ್ತಿತ್ತು.

1904 ರಲ್ಲಿ ಗಾಂಧೀಜಿ 'ಇಂಡಿಯನ್ ಒಪಿನಿಯನ್' ಪತ್ರಿಕೆಯನ್ನು ಪ್ರಾರಂಭಿಸಿದರು. ಗೆಳೆಯರಾದ ಮದನಜಿತ್ ತಮ್ಮ ಮುದ್ರಣಾಲಯದಲ್ಲಿ ನೆರವನ್ನು ನೀಡಿದರು. ಮನಸುಖಲಾಲ್ ಸಂಪಾದಕರಾದರು. ಮುಂದೆ ಏಳು ವರ್ಷಗಳಲ್ಲಿ ಮೂರುಬಾರಿ ನಡೆದ ದಕ್ಷಿಣ ಆಫ್ರಿಕ ಸತ್ಯಾಗ್ರಹ ಚಳುವಳಿಗಳಲ್ಲಿ

ಈ ಪತ್ರಿಕೆಯೇ ಭಾರತೀಯ ಜನಾಂಗದ ಪ್ರಮುಖ ಮುಖವಾಣಿಯಾಯಿತು. ಅದು ಇಂಗ್ಲೀಷ್ ತಮಿಳು ಗುಜರಾತಿ ಮತ್ತು ಹಿಂದೀ ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು. ತಾವು ಅಲ್ಲಿಯವರೆವಿಗೂ ಉಳಿಸಿದ್ದ ಎರಡುಸಾವಿರ ಪೌಂಡುಗಳನ್ನು ಈ ಉದ್ಯಮಕ್ಕೆ ಧಾರೆಯೆರೆದರು. "ವಾರವಾರವೂ ನಾನು ನನ್ನ ಆತ್ಮವನ್ನೇ ಅದರಲ್ಲಿ ಹರಿಯಿಸುತ್ತಿದ್ದೆ. ಸತ್ಯಾಗ್ರಹದ ತತ್ವಾಚರಣೆಗಳನ್ನು ತಿಳಿಸುತ್ತಿದ್ದೆ. 1914 ರ ವರೆಗೂ ನಾನು ಏನಾದರೂ ಬರೆಯದ ಆ ಪತ್ರಿಕೆಯ ಸಂಚಿಕೆ ಒಂದೂ ಇಲ್ಲ" ಎಂದಿದ್ದಾರೆ.

ಜೊಹಾನ್ಸ್‌ಬರ್ಗಿನ ನೀಗ್ರೋ ವಸತಿಯಲ್ಲಿ ಹಠಾತ್ತನೆ ಘೋರವಾದ 'ಕರಾಳ ಪ್ಲೇಗ್' ಸಂಕ್ರಾಮಿಕರೋಗ ಹರಡಿಬಿಟ್ಟಿತು. ತಕ್ಷಣವೇ ಗಾಂಧೀಜಿ ತಮ್ಮ ನಾಲ್ಕು ಭಾರತೀಯ ಸಹೋದ್ಯೋಗಿಗಳೊಡನೆ ನಿರ್ಭಯರಾಗಿ ಅವರ ಸೇವೆಯಲ್ಲಿ ನಿರತರಾದರು. ಡಾ॥ ವಿಲಿಯಂ ಗಾಡ್‌ಫ್ರೆ ಸಹಾಯಕ್ಕೆ ನಿಂತರು. ಒಂದೇ ರಾತ್ರಿಯಲ್ಲಿ ಇಪ್ಪತ್ತೈದು ಸದೃಢ ಕಾರ್ಮಿಕರು ಈ ರೋಗಕ್ಕೆ ಬಲಿಯಾದರು. ಎಡೆಬಿಡದೆ ಅವರ ಶುಶ್ರೂಷೆಮಾಡುತ್ತಾ ಕಳೆದ ಆ ರಾತ್ರಿ "ನನ್ನ ಜೀವನದಲ್ಲಿ ಪವಿತ್ರತಮ ಘಟನೆ" ಎಂದು ಸ್ಮರಿಸಿದ್ದಾರೆ ಗಾಂಧೀಜಿ.

ಈ ಸಮಯಕ್ಕೆ ಆಪ್ತಗೆಳೆಯರಾಗಿ ಶ್ರೀ ಪೋಲಕ್ ಅವರು ದೊರೆತರು. ಅವರೂ ಶಾಕಾಹಾರಿ ಭೋಜನಾಲಯದ ಗೆಳೆಯರಾಗಿದ್ದರು. ಸರಳಜೀವಿ ಮತ್ತು ಉನ್ನತ ಧ್ಯೇಯವಾದಿ ಪೋಲಕ್. ಮುಂದೆ ಅವರೂ ಅವರ ಪತ್ನಿಯೂ ಗಾಂಧೀಯವರ ಆತ್ಮೀಯ ಬಳಗಕ್ಕೆ ಸೇರಿಹೋದರು. ನಟಾಲದಲ್ಲಿ ಇಂಡಿಯನ್ ಒಪಿನಿಯನ್ ಪತ್ರಿಕೆಯ ಕಾರ್ಯಾಲಯವನ್ನು ಪುನರ್ವ್ಯವಸ್ಥೆಗೊಳಿಸಲು ಜೊಹಾನ್ಸ್‌ಬರ್ಗಿನಿಂದ ಗಾಂಧೀಜಿ ಪ್ರಯಾಣ ಮಾಡಿದರು. ನಿಲ್ದಾಣದಲ್ಲಿ ಬೀಳ್ಕೊಡಲು ಶ್ರೀ ಪೋಲಕ್ ಬಂದಿದ್ದರು. ತಾವು ಓದಿ ಮುಗಿಸಿದ್ದ ಗ್ರಂಥವೊಂದನ್ನು ಗಾಂಧೀಯವರಿಗೆ ಕೊಟ್ಟು "ನೀವು ದಾರಿಯಲ್ಲಿ ಓದಿಕೊಳ್ಳಿ. ನಾನು ಇದರಿಂದ ತುಂಬ ಪ್ರಭಾವಿತನಾದೆ" ಎಂದರು. ಗಾಂಧೀಜಿಯ ಮನಸ್ಸಿನ ಮೇಲೆ 'ಅನ್ ಟು ದಿಸ್ ಲಾಸ್ಟ್' ಎಂಬ ಈ ಪುಟ್ಟ ಗ್ರಂಥ ಅತ್ಯಗಾಧ ಪರಿಣಾಮವನ್ನು ಮಾಡಿಬಿಟ್ಟಿತು. ಅದನ್ನು ಬರೆದ ಇಂಗ್ಲಿಷ್ ಸಾಹಿತಿ ದ್ರಷ್ಟಾರ ಜಾನ್ ರಸ್ಕಿನ್ ಕ್ರಿಸ್ತಬೋಧೆಯಿಂದ ಪ್ರೇರಿತನಾಗಿ ಕಟ್ಟಕಡೆಯವನಿಗೂ ನ್ಯಾಯ ಸಿಗುವಂತಹ ಮಾನವ ಸಮಾಜದ ರೂಪರೇಖೆಗಳನ್ನು ವಿವೇಚಿಸಿದ್ದ.

ನಿರ್ಧಾರವಾಣಿಯಿಂದ ಮೂರು ಮಹಾ ಸೂತ್ರಗಳನ್ನು ಮಂಡಿಸಿದ್ದ. ಗಾಂಧೀಜಿ ತಮ್ಮ ಅಂತರಾಳವಲ್ಲಿ ಅಡಗಿದ್ದ ಗಾಢವಿಶ್ವಾಸಗಳ ಸ್ಪಷ್ಟ ಪ್ರತಿಬಿಂಬವನ್ನು ಇಲ್ಲಿ ಕಂಡರು. ಮಾನವ ಹೃದಯದಲ್ಲಿನ ಕಲ್ಯಾಣ ಗುಣಗಳನ್ನು ಹೊರಸೆಳೆದ ಈ ಮಹಾಕಪಿಯು ದಿವ್ಯ ಕೃತಿಗೆ ಮಾರು ಹೋದರು. "ನನ್ನ ಬಾಳಿನಲ್ಲಿ ಕೂಡಲೇ ಮಹತ್ವದ ರಚನಾತ್ಮಕ ಪರಿವರ್ತನೆ ಮಾಡಿದ ಪುಸ್ತಕವೆಂದರೆ ಅದೊಂದೇ" ಎಂದರು. ಗುಜರಾತಿ ಭಾಷೆಗೆ ಅದನ್ನು ಭಾಷಾಂತರಿಸಿ ಅದಕ್ಕೆ "ಸರ್ವೋದಯ" ಎಂದು ಹೆಸರಿಟ್ಟರು. ರಸ್ಕಿನ್ನಿನ ಮೂರು ಮಹಾಸೂತ್ರಗಳನ್ನು ಗಾಂಧೀಜಿ ಹೀಗೆ ಕ್ರೋಢೀಕರಿಸಿದರು.

1. ಸಮಷ್ಟಿಯ ಕಲ್ಯಾಣದಲ್ಲಿ ವ್ಯಕ್ತಿಯ ಕಲ್ಯಾಣವೂ ಅಡಗಿದೆ.
2. ವಕೀಲನ ಕೆಲಸಕ್ಕೂ ನಾಯಿಂದನ ಕೆಲಸಕ್ಕೂ ಸಮಾನ ಬೆಲೆಯುಂಟು. ಏಕೆಂದರೆ ಬದುಕುವ ಹಕ್ಕು ಇಬ್ಬರಿಗೂ ಸಮಾನ.
3. ದುಡಿಮೆಗಾರನ ಅಂದರೆ ಬೇಸಾಯಗಾರನ, ಕೈ ಕಸುಬುಮಾಡುವವನ ಜೀವನವೇ ಸಾರ್ಥಕ ಜೀವನ.

"ಒಂದು ಪುಸ್ತಕ ಬೀರಿದ ಮೋಡಿ" ಎಂದು ತಮ್ಮ ಆತ್ಮಕಥೆಯಲ್ಲಿ ವಿವರಿಸುತ್ತಾ ಗಾಂಧೀಜಿ ಹೀಗೆ ಬರೆದರು.

"ಇದರಲ್ಲಿ ಮೊದಲನೆಯದು ನನಗೆ ಗೊತ್ತಿತ್ತು. ಎರಡನೆಯದನ್ನು ಮಸಕು ಮಸಕಾಗಿ ಕಂಡಿದ್ದೆ. ಮೂರನೆಯದು ಹೊಳದೇ ಇರಲಿಲ್ಲ. ಮೊದಲ ನೆಯದರಲ್ಲೇ ಇನ್ನೆರಡೂ ಸಮಾವೇಶಗೊಂಡಿವೆಯೆಂದು 'ಸರ್ವೋದಯ' ಸ್ಪಷ್ಟವಾಗಿ ನನಗೆ ತೋರಿಸಿಕೊಟ್ಟಿತು. ಬೆಳಕು ಹರಿಯಿತು. ಈ ಸಿದ್ಧಾಂತ ವನ್ನು ಆಚರಣೆಗೆ ತರಲು ಅಂದಿನ ಪ್ರಾತಃಸಮಯದಲ್ಲೇ ನಿರ್ಧರಿಸಿ ಎದ್ದೆ."

ರಸ್ಕಿನ್ನನ ನೀತಿ ಸೂತ್ರಗಳು ಅತ್ಯುತ್ಕೃಷ್ಟ ಸಾಧನೋಪಾಯಗಳು ಎಂದು ಅಂಗೀಕರಿಸಿ ಆ ಕೂಡಲೆ ತಮ್ಮ ಸಹೋದ್ಯೋಗಿಗಳೆಲ್ಲರನ್ನೂ ಒಂದೇ ಬೃಹತ್ ಕುಟುಂಬಕ್ಕೆ ಸೇರಿಸುವ ಮಹಾಪ್ರಯತ್ನ ಮಾಡಿದರು. ಡರ್‌ಬನ್ ಸಮೀಪದಲ್ಲಿ ವ್ಯವಸಾಯಯೋಗ್ಯ ಕ್ಷೇತ್ರವೊಂದನ್ನು ಕೊಂಡು 'ಫೀನಿಕ್ಸ್ ವಸತಿಸ್ಥಾನ' ವನ್ನು ಗೆಳೆಯರೊಂದಿಗೆ ತಾವೇ ನಿರ್ಮಾಣಮಾಡಿದರು. ಸ್ವಾತಂತ್ರ್ಯ, ಸಮಾನತೆ ಗಳು ಪೂರ್ಣ ಸೌಹಾರ್ದದ ತಳಹದಿಯ ಮೇಲೆ ನಿಂತಾಗ ಮಾನವಸಮಾಜ ಎಂಥ ಅವರ್ಣನೀಯ ವಿಕಾಸಶೀಲ ಸಮೃದ್ಧಿಯನ್ನು ತಂದು ಕೊಡಬಲ್ಲುದು

ಎಂಬ ಅನುಭವ ಅವರಿಗಾಯಿತು. 1904 ರಲ್ಲಿ ಸ್ಥಾಪಿತವಾದ ಈ ಪ್ರಯೋಗ ಶಾಲೆ ಮುಂದೆ ಅವರ ಅನೇಕ ಆಶ್ರಮಗಳಿಗೆ ಬುನಾದಿಯಾಯಿತು. ಸರಳವಾದ ಗುಡಿಸಲುಗಳು, ಭೇದರಹಿತ ಊಟ ಉಡಿಗೆ ವಿಶ್ವಾಸಪೂರ್ಣ ಪರಿಶ್ರಮ ಇವು ಮೈಗೂಡಿದವು. 'ಇಂಡಿಯನ್ ಒಪಿನಿಯನ್' ಪತ್ರಿಕೆ ಕಾರ್ಯಾಲಯ, ಮುದ್ರಣಾಲಯ, ಮಕ್ಕಳಶಾಲೆ. ವ್ಯವಸಾಯ, ಸ್ವಚ್ಛತೆ ಎಲ್ಲ ಕಾರ್ಯಭಾರವೂ ಅಲ್ಲೇ ಪ್ರಾರಂಭವಾದವು. ಜರ್ಮನ್ ಗೆಳೆಯ ಕಾಲೆನ್‌ಬಾಕ್ ಈ ಸಂಸಾರದಲ್ಲಿ ಸೇರಿಹೋದರು. "ಸರ್ವೋದಯ ವಿಚಾರ ಪ್ರಣಾಲಿ" ಮನೆಯ ಪರಿವರ್ತನೆ ಯಿಂದಲೇ ಮೊದಲಾಯಿತು. ಸ್ವಂತ ಪರಿಶ್ರಮದಿಂದ ಸ್ವಾವಲಂಬನೆ ಸಾಧಿಸು ವುದು ಸ್ವಾತಂತ್ರ್ಯದ ಮೊದಲನಿಯಮ. ಜೀವನದ ಅತ್ಯಾವಶ್ಯಕ ಮೂಲ ವಸ್ತುಗಳಿಗಾಗಿ ಪರಾವಲಂಬಿಗಳಾದಷ್ಟೂ ದಾಸ್ಯದ ಅಪಾಯವುಂಟು ಎಂಬ ಆಳವಾದ ಅನುಭವ ಅವರ ಸತ್ಯಾಗ್ರಹ ವಿಜ್ಞಾನದ ತಳಹದಿಯಾಯಿತು.

1906 ರಲ್ಲಿ ನಾತಾಲದಲ್ಲಿ ಝೂಲೂಗಳು ದಂಗೆಯೆದ್ದರು. ಮತ್ತೆ ಸರ್ಕಾರಕ್ಕೆ ಸಹಾಯವಾಗಿ ಸ್ವಯಂಸೇವಕ ದಳವನ್ನು ಕಟ್ಟಿದರು ಗಾಂಧೀಜಿ. ರಣರಂಗದಲ್ಲಿ ಶುಶ್ರೂಷಾ ಪಥಕವನ್ನು ವ್ಯವಸ್ಥೆ ಮಾಡಿದರು. ಅಸ್ಪೃಶ್ಯ ವರ್ಗ ಗಳಂತೆ ಪರಿಗಣಿಸಲ್ಪಡುತ್ತಿದ್ದ ಈ ಕಾಡುಜನರನೇಕರಿಗೆ ತಾವೇ ಘಾಯ ತೊಳೆದು ಉಪಚಾರ ಮಾಡಿದರು. ಈ ಅನಾವಶ್ಯಕ ನರಬೇಟೆಯನ್ನು ಕಣ್ಣಾರೆ ಕಂಡು ಗಾಂಧೀಜಿ ಮರುಕಗೊಂಡರು. ಫೀನಿಕ್ಸಿಗೆ ಹಿಂತಿರುಗಿದೊಡನೆಯೇ ಆಳವಾದ ಆಲೋಚನೆಯಲ್ಲಿ ಮಗ್ನರಾದರು. ಸಂಯಮ ಜೀವನದಲ್ಲಿ ಅಭಿರುಚಿ ಸೂರ್ಮ ಡಿಸಿತು. ಸಂಪೂರ್ಣ ಬ್ರಹ್ಮಚರ್ಯ ಒಂದು ಅದ್ಭುತಶಕ್ತಿದಾಯಕ ವ್ರತವೆಂದು ಕೈಗೊಂಡರು. ಇಂದ್ರಿಯ ನಿಗ್ರಹದ ನಿಯಮಗಳು ಪ್ರಬಲವಾದವು. ನೈಸರ್ಗಿಕ ಚಿಕಿತ್ಸಾ ಪ್ರಯೋಗಗಳನ್ನು ಎಲ್ಲರಮೇಲೂ ಪ್ರಯೋಗಿಸಿದರು. ಅಪಾಯದ ಅಂಚಿನಲ್ಲೂ ಆತ್ಮವಿಶ್ವಾಸದ ಅಭಯವನ್ನು ತುಂಬಿಕೊಳ್ಳುವ ಕಲೆ ಅವರಿಗೆ ಕರಗತವಾಗಿತ್ತು. ಆತ್ಮಶಕ್ತಿಯಿಂದ ಬರುವ ನಿರ್ಭಯತೆ ಸಂತತವಾಗಿ ಅವರನ್ನು ಕಾಪಾಡಿತು.

ಕಸ್ತೂರಿಬಾ ಈ ಸಮಯಕ್ಕೆ ಒಂದು ತೀವ್ರ ರಕ್ತಸ್ರಾವದ ರೋಗಕ್ಕೆ ತುತ್ತಾದರು. ಶಸ್ತ್ರಚಿಕಿತ್ಸೆಯಾಯಿತು. ವೈದ್ಯರು ಒಮ್ಮೆ ಅವರಿಗೂ ಗಾಂಧೀ ಜಿಗೂ ತಿಳಿಯದಂತೆ ಮಾಂಸದ ಕಷಾಯ ಕೊಟ್ಟರು. ಅವರಿಗೆ ಬೇರೆ ದಾರಿಯೇ

ಇಲ್ಲ ಎಂದನ್ನಿಸಿತ್ತು. ಈ ವ್ರತಭಂಗ ರೋಗಿಯನ್ನು ತಲ್ಲಣಿಸೀತು ಎಂದು ವೈದ್ಯರು ಭಾವಿಸಲಿಲ್ಲ. ಸದ್ಭಾವಪ್ರೇರಿತರಾದರೂ ಈ ವೈದ್ಯಮಿತ್ರರ ಚಿಕಿತ್ಸಾಕ್ರಮ ಗಾಂಧೀಜಿಗೆ ಅಸಹನೀಯವೆನಿಸಿತು. ಪ್ರತಿಭಟಿಸಿ ನುಡಿದರು, "ಆಕೆಗೆ ಪ್ರಜ್ಞೆಯಿಲ್ಲ ; ನನ್ನ ಒಪ್ಪಿಗೆಯಿಲ್ಲ ; ಸಾವು ಬಂದರೂ ಸರಿಯೆ, ಇದನ್ನು ಕೊಡಬೇಡಿ" ಎಂದರು. ವೈದ್ಯರಿಗೆ ವೇದನೆಯಾಯಿತು. "ನಿಮ್ಮ ತತ್ವಜ್ಞಾನ ನಿಮಗೇ ಸರಿ. ನನಗೆ ಸ್ವಾತಂತ್ರ್ಯ ಕೊಡದಿದ್ದರೆ ಈ ರೋಗಿಯನ್ನು ಈ ಕ್ಷಣದಲ್ಲಿ ಇಲ್ಲಿಂದ ಕರೆದೊಯ್ಯಿರಿ." ಆ ಸ್ನೇಹಮಯಿ ವೈದ್ಯರು ಅಶ್ರುಪೂರ್ಣರಾಗಿ ನುಡಿದರು. ನಿತ್ರಾಣಳಾಗಿದ್ದ ಕಸ್ತೂರಿಬಾಗೆ ಸ್ವಲ್ಪ ಪ್ರಜ್ಞೆ ಬರುತ್ತಿತ್ತು. ಅತಿ ಕ್ಷೀಣ ಧ್ವನಿಯಲ್ಲಿ ನಿರ್ಧರವಾಗಿ ಆಕೆ ಮಾಂಸದ ಕಷಾಯ ಕುಡಿಯಲು ನಿರಾಕರಿಸಿದರು. ಆತ್ಮಕಥೆಯಲ್ಲಿ ಬರೆಯುತ್ತಾ ಗಾಂಧೀಜಿ ಹೀಗೆ ನುಡಿದಿದ್ದಾರೆ :—

"ಆಕೆಗೆ ತಿಳಿಸಿ ಹೇಳಿದೆ, ನನ್ನಂತೆ ತಾನು ನಡೆಯಬೇಕಾಗಿಲ್ಲವೆಂದೆ. ವಿಷಮ ಸಮಯಗಳಲ್ಲಿ ಔಷಧಿಯಂತೆ ಮಾಂಸ ಸೇವಿಸಿದ ಹಿಂದೂ ಸ್ನೇಹಿತರ ದೃಷ್ಟಾಂತ ತಿಳಿಸಿದೆ. ಆದರೆ ಆಕೆ ದೃಢವಾಗಿದ್ದಳು. 'ಇಲ್ಲ, ಈಗಲೇ ನನ್ನನ್ನು ಕರೆದುಕೊಂಡು ಹೋಗಿ' ಎಂದಳು. ನನಗೆ ಬಹಳ ಹರ್ಷವಾಯಿತು. ಕರೆದೊಯ್ಯಲು ನಿರ್ಧರಿಸಿದೆ. ವೈದ್ಯರು ಕೋಪಗೊಂಡು, "ಎಂಥ ನಿಷ್ಕರುಣಿಗಳು ನೀವು ಆಕೆ ಅತ್ಯಂತ ಅಪಾಯಸ್ಥಿತಿಯಲ್ಲಿದ್ದಾಳೆ. ಈ ವಿಷಯ ಪ್ರಸ್ತಾಪ ಮಾಡಲು ನಿಮಗೆ ನಾಚಿಕೆಯಾಗಬೇಕು. ನೀವು ಹಠ ಸಾಧಿಸುವುದಾದರೆ ನಿಮ್ಮ ಇಷ್ಟ. ಆಕೆ ದಾರಿಯಲ್ಲಿ ಪ್ರಾಣ ಬಿಡಲೂಬಹುದು. ಆದರೆ ಮಾಂಸದ ರಸವನ್ನು ಕೊಡಬೇಡ ಎನ್ನುವುದಾದರೆ ಆಕೆ ಇಲ್ಲಿ ಇರಲಾಗದು" ಎಂದರು. ಕೂಡಲೇ ಅಲ್ಲಿಂದ ಹೊರಡಲು ತೀರ್ಮಾನಿಸಿದೆವು. ಹೊರಗೆ ಮಳೆ ಹನಿಯುತ್ತಿತ್ತು. ದೇವರ ಮೇಲೆ ಭಾರ ಹಾಕಿ ಆ ಅಪಾಯಕರ ಸ್ಥಿತಿಯಲ್ಲೇ ಆಕೆಯನ್ನು ಫೀನಿಕ್ಸಿಗೆ ಕರೆದೊಯ್ದೆ...ಕಸ್ತೂರಿಬಾಗೆ ಧೈರ್ಯ ಹೇಳಬೇಕಾಗಿರಲಿಲ್ಲ. ಅದರ ಬದಲು ತಾನೇ ನನಗೆ ಸಮಾಧಾನ ಹೇಳಿದಳು. 'ನನಗೇನೂ ಆಗುವುದಿಲ್ಲ, ಚಿಂತೆ ಮಾಡಬೇಡಿ'...ಫೀನಿಕ್ಸ್ ಸ್ಟೇಷನ್ನಿನಿಂದ ಜೋಲಿಯಲ್ಲಿ ಆಕೆಯನ್ನು ಮಲಗಿಸಿ ಎತ್ತಿಕೊಂಡು ಹೋದೆವು. ಅಲ್ಲಿ ಜಲಚಿಕಿತ್ಸೆಯಿಂದ ನಿಧಾನವಾಗಿ ಆಕೆಗೆ ಪ್ರಾಣಬಂತು."......

"ಶಸ್ತ್ರಚಿಕಿತ್ಸೆಯಿಂದ ಕಸ್ತೂರಿಬಾಗೆ ನಿಂತಿದ್ದ ರಕ್ತಸ್ರಾವ ಮತ್ತೆ ಹೆಚ್ಚಾಯಿತು. ಏನು ಮಾಡಿದರೂ ನಿಲ್ಲಲಿಲ್ಲ. ನನ್ನ ಚಿಕಿತ್ಸೆಯಲ್ಲಿ ಆಕೆಗೆ ವಿಶ್ವಾಸವೂ ಇರಲಿಲ್ಲ. ಹೊರಗಿನ ವೈದ್ಯಸಹಾಯ ಬೇಕೆನ್ನಲೂ ಇಲ್ಲ. ನನ್ನ ಉಪಚಾರವೆಲ್ಲ ವಿಫಲವಾದಾಗ ಉಪ್ಪು ಮತ್ತು ಬೇಳೆಗಳನ್ನು ಬಿಡು ಎಂದು ಆಕೆಯನ್ನು ಬೇಡಿಕೊಂಡೆ. ಆಕೆ ಒಪ್ಪಲಿಲ್ಲ. 'ನೀವು ಬಿಡಿ ನೋಡೋಣ' ಎಂದಳು. ನನ್ನ ಪ್ರೀತಿಯ ಪರೀಕ್ಷೆ ಎಂದುಕೊಂಡೆ. ವೈದ್ಯರು ಹೇಳದಿದ್ದರೂ ನಾನು ಇನ್ನು ಒಂದು ವರ್ಷ ಉಪ್ಪು, ಬೇಳೆಗಳನ್ನು ಬಿಟ್ಟುಬಿಡುತ್ತೇನೆ' ಎಂದು ದೃಢವಾಗಿ ಸಂತೋಷದಿಂದ ನುಡಿದೆ. ಆಕೆಗೆ ಘಾಸಿಯಾಯಿತು. "ನನ್ನನ್ನು ಕ್ಷಮಿಸಿ. ನಿಮ್ಮ ಸ್ವಭಾವ ತಿಳಿದೂ ತಿಳಿದೂ ನಾನು ಹೀಗೆನ್ನಬಾರದಿತ್ತು. ಉಪ್ಪು, ಬೇಳೆ ಬಿಡುತ್ತೇನೆ, ದಮ್ಮಯ್ಯ, ನಿಮ್ಮ ಮಾತು ಹಿಂದಕ್ಕೆ ತೆಗೆದುಕೊಳ್ಳಿ. ನನಗೆ ಅದು ದೊಡ್ಡ ಶಿಕ್ಷೆಯಾದೀತು" ಎಂದಳು.

"ನೀನು ಉಪ್ಪು ಬೇಳೆ ಬಿಟ್ಟರೆ ಒಳಿತೇ ಆಯಿತು. ಅದರಿಂದ ನಿನಗೆ ಗುಣವಾಗುತ್ತದೆ. ನಾನಂತೂ ಒಂದು ಸಲ ಮಾಡಿದ ಶಪಥವನ್ನು ಮುರಿಯುಲಾರೆ. ಮನುಷ್ಯನಿಗೆ ಸಂಯಮ ಲಾಭಕರ. ನಿನಗೆ ನನ್ನ ವ್ರತ ನಡೆಸಲು ಇದು ನೆರವು..." ಎಂದೆ. ಕಸ್ತೂರಿಬಾ ದುಃಖದಿಂದ "ನೀವು ಯಾರ ಮಾತನ್ನೂ ಕೇಳುವುದಿಲ್ಲ" ಎನ್ನುತ್ತ ಅತ್ತು ಸಮಾಧಾನ ಪಟ್ಟುಕೊಂಡಳು. ತನ್ನ ಮಾತು ಸಾಗದೆಂದು ಕೈಬಿಟ್ಟಳು.

"ಈ ಘಟನೆಯನ್ನು ಸತ್ಯಾಗ್ರಹ ಎನ್ನುತ್ತೇನೆ. ನನ್ನ ಜೀವನದ ಮಧುರ ಸ್ಮೃತಿಗಳಲ್ಲಿ ಇದೂ ಒಂದು. ಆಮೇಲೆ ಕಸ್ತೂರಿಬಾ ಬೇಗನೆ ಗುಣಮುಖಳಾದಳು."

ಪ್ರೇಮ ಇಂಥ ದೈವಿಕ ನೆಲೆಯನ್ನು ಮುಟ್ಟಿದಾಗ ಉಜ್ವಲವಾಗಿ ಪ್ರಜ್ವಲಿಸುತ್ತದೆ. ಆತ್ಮಪ್ರತ್ಯಯ ಧರೆಗಿಳಿದ ಪಾವನಗಂಗೆಯಂತೆ ದಾರುಣ ವ್ರಣಗಳನ್ನು ಅಮೃತಸಿಂಚನದಿಂದ ಚಿಕಿತ್ಸೆ ಮಾಡಬಲ್ಲದು. ಗಾಂಧೀ ಸಿದ್ಧಾಂತಕ್ಕೆ ಇಂಬುಗೊಟ್ಟ ಈ ಘಟನೆ ಚಿರಸ್ಮರಣೀಯವಾಯಿತು.

*

1906 ರ ಸೆಪ್ಟೆಂಬರ್ ಹನ್ನೊಂದು. ಜೊಹಾನ್ಸ್‌ಬರ್ಗಿನಲ್ಲಿ ಹಿಂದೀ ನಿವಾಸಿಗಳ ಗಂಭೀರ ಸಭೆ ನಡೆಯಿತು. ಆಗತಾನೇ ಜನರಲ್ ಸ್ಮಟ್ಸನ ಸರ್ಕಾರ

ಘೋಷಿಸಿ ಪ್ರಕಟಿಸಿದ್ದ ಕರಡು ಶಾಸನದ ಚರ್ಚೆ ನಡೆದಿತ್ತು. ಭಾರತೀಯ ರೆಲ್ಲರೂ ಮಕ್ಕಳು ಸಹಿತವಾಗಿ 'ರಿಜಿಸ್ಟ್ರೇಷನ್' ಮಾಡಿಸಿ ಅಧಿಕೃತ ಚೀಟಿಯನ್ನು ಪಡೆದಿರಬೇಕು ಎಂದು ಆಜ್ಞೆಯಾಗಿತ್ತು. ಮಾನವೀಯತೆಗೆ ತುಚ್ಛ ಅವ ಹೇಳನದ ಕರಾಳಶಾಸನ ಎಂದು ಆ ಸಭೆ ಆಕ್ರೋಶಗೊಂಡಿತ್ತು. ಗಾಂಧೀಜಿ ಕಡೆಗೇ ಬಂತು ಸವಾಲು. "ಜೀವನದ ಹಂಗು ತೊರೆದು ಆಜ್ಞೆಯನ್ನು ನಿರಾಕರಿಸಬೇಕು. ಅಂಗೀಕೃತ ಶಾಸನವಾದರೂ ಪ್ರತಿಭಟಿಸಿ ಅದರಿಂದ ಬಂದ ಕಷ್ಟಗಳನ್ನೆಲ್ಲಾ ಸೈರಿಸಬೇಕು. ಯಾವ ಸಮಯದಲ್ಲೂ ಯಾರ ಮೇಲೂ ವ್ಯಕ್ತಿಶಃ ದ್ವೇಷ ಕೂಡದು" ಎಂದರು.

ಸುದೃಢವಾಗಿ ಬಂತು ಸಭೆಯ ನಿರ್ಧಾರ. ಸಾಮೂಹಿಕ ಶಾಂತಿಯುತ ಶಾಸನೋಲ್ಲಂಘನೆಯ ಪ್ರಥಮ ಅಂಕುರವಾಯಿತು. ಶ್ರೀ ಮಗನಲಾಲ್ ಗಾಂಧೀ ಈ ಚಳುವಳಿಗೆ 'ಸದಾಗ್ರಹ' ಎಂದು ಕರೆದರು. ಗಾಂಧೀಜಿಗೆ ಅದು ಹಿಡಿಸಿತು. ಆದರೆ ಸ್ವಲ್ಪ ಪರಿವರ್ತಿಸಿ 'ಸತ್ಯಾಗ್ರಹ' ಎಂದು ಕರೆದರು. ಜಗತ್ತಿನ ಇತಿಹಾಸದಲ್ಲಿ ಅತಿ ನೂತನ ಕ್ರಾಂತಿ ಪಥವೊಂದು 'ಕತ್ತಲೆಯ ಖಂಡದ' ಮೂಲೆಯೊಂದರಲ್ಲಿ ಸಣ್ಣ ಕಿಡಿಯಾಗಿ ಅಂಕುರಿಸಿತು. ನಿಸ್ಸಹಾಯಕ ಜನಾಂಗ ದಮನಶಕ್ತಿಗಳ ಉಗ್ರವ್ಯಾಪಾರಗಳಿಗೆಲ್ಲ ಬಗ್ಗಿ ಬೆನ್ನು ತೋರಿಸುತ್ತಾ ಶೋಷಣೆಗಳಿಗೆ ಬಲಿಯಾಗಿ ಸಾಗಿದ್ದ ಸಮಯದಲ್ಲಿ ಹಠಾತ್ತನೆ ಆತ್ಮಶಕ್ತಿಯ ವಿಶ್ವರೂಪ ಅವರ ಅಂತರ್ಯದಲ್ಲಿ ವಿದ್ಯುತ್ಪ್ರವಾಹದಂತೆ ಹರಿಯಿತು. ನಿಶ್ಶಸ್ತ್ರ ರಾಗಿ ಎದೆಚಾಚಿ ನಿಂತು ಪಶುಬಲವನ್ನು ಪ್ರತಿಭಟಿಸಿದರು. ರಾಕ್ಷಸೀ ಸರ್ಕಾರವೂ ನಾಚಿ ನಿಲ್ಲುವ ಅದ್ಭುತ ಪವಾಡ ನಡೆದುಹೋಯಿತು. ಸಾವಿರಾರು ಜನ ಜೈಲಿಗೆ ಹೋದರು. 1908 ಜನವರಿ 10 ರಂದು ಗಾಂಧೀಜಿಗೆ ಎರಡು ತಿಂಗಳ ಶಿಕ್ಷೆಯಾಯಿತು. ಏಷಿಯನ್ನರ ರಿಜಿಸ್ಟ್ರೇಷನ್ ಕಾನೂನನ್ನು ಉಲ್ಲಂಘಿ ಸಿದ್ದರು. ಬೆದರಿಕೆಗಳೂ ಕಿರುಕುಳಗಳೂ ಕೊನೆಗೆ ಪ್ರತ್ಯಕ್ಷ ಹಿಂಸೆಯೂ ನಿಷ್ಫಲವಾದುದನ್ನು ಕಂಡು ಜನರಲ್ ಸ್ಮಟ್ಸ್ ವಿಸ್ಮಯಗೊಂಡು ನಾಯಕ ರನ್ನು ಸಂಧಾನಕ್ಕೆ ಕರೆದರು. ಗಾಂಧೀಜಿಯೇ ಆ ಜನಸ್ತೋಮದ ಏಕೈಕ ನಾಯಕರಾಗಿದ್ದರು. ಶಾಸನವನ್ನು ಜಾರಿಗೆ ತರುವುದಿಲ್ಲವೆಂದೂ ಸ್ವಂತ ಇಚ್ಛೆ ಯಿಂದಲೇ ಭಾರತೀಯರು ಗುರುತುಚೀಟಿ ಪಡೆಯಬೇಕೆಂತಲೂ ಒಪ್ಪಂದ ವಾಯಿತು.

ತಮ್ಮ ಮಾತಿನಂತೆ ಅತ್ಯಂತ ಸತ್ಯವಾಗಿ ನಡೆಯುವುದು ಚಳುವಳಿಯ ಮೊದಲ ನಿಯಮ. ಎಲ್ಲರನ್ನೂ ಒಪ್ಪಿಸಿ ಗಾಂಧೀಜಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದರು. ಕ್ರೋಧಗೊಂಡ ಕೆಲವು ಅನುಯಾಯಿಗಳು ಅವರ ಮೇಲೆ ಬಿದ್ದು ತೀವ್ರವಾಗಿ ಹೊಡೆದು ಒದ್ದು ಘಾಯಗೊಳಿಸಿದರು. ಅವರು ತಪ್ಪು ತಿಳುವಳಿಕೆಯಿಂದ ಗಾಂಧೀ ಪರಾಜಿತರಾದರೆಂದೇ ಭಾವಿಸಿದ್ದರು. ಉದ್ವೇಗದಿಂದ ಕಠೋರರಾಗಿದ್ದರು. ಕೆಳಗೆ ಬಿದ್ದ ಗಾಂಧಿಯವರನ್ನು ಇಂಗ್ಲಿಷ್ ಪಾದ್ರಿಗಳೂ ಮಿತ್ರರೂ ಆದ ಶ್ರೀಮತಿ ಮತ್ತು ಶ್ರೀ ಡೋಕ್ ಮನೆಯಲ್ಲಿಟ್ಟುಕೊಂಡು ಶುಶ್ರೂಷೆ ಮಾಡಿದರು. ಗಾಂಧೀಜಿ ದುರಾತ್ಮರನ್ನು ಕೋರ್ಟಿಗೆಳೆದು ಶಿಕ್ಷಿಸಲು ನಿರಾಕರಿಸಿ ಕ್ಷಮಿಸಿದರು. ತಪ್ಪನ್ನು ತಿಳಿದು ಅವರೇ ಪಶ್ಚಾತ್ತಾಪ ಪಟ್ಟರು. ಇಷ್ಟಾದರೂ ಜನರಲ್ ಸ್ಮಟ್ಸ್ ತನ್ನ ಮಾತಿನಂತೆ ಕಾನೂನನ್ನು ಹಿಂತೆಗೆದು ಕೊಳ್ಳಲಿಲ್ಲ. ಮತ್ತೂ ಕ್ರೂರವಾಗಿ ಹೊಸ ಶಾಸನಗಳು ಬಂದವು. ಸ್ವಯಂ ಪ್ರೇರಣೆಯಿಂದ ರಿಜಿಸ್ಟ್ರೇಷನ್ ಮಾಡಿಸಿದ ಪತ್ರಗಳೆಲ್ಲವನ್ನೂ ಭಾರತೀಯರು ಒಟ್ಟುಗೂಡಿಸಿ ಸುಟ್ಟುಬಿಟ್ಟರು. ಸತ್ಯಾಗ್ರಹದ ನೇರ ಕಾರ್ಯಕ್ರಮದಂತೆ ಸಾವಿರಾರು ಜನ ಕಾನೂನನ್ನು ಉಲ್ಲಂಘಿಸಿ ಶಿಕ್ಷೆಗೊಳಗಾದರು.

ಕಾಲೆನ್‌ಬಾಕ್ ಜೊಹಾನ್ಸ್‌ಬರ್ಗ್ ಬಳಿ ಒಂದು ಸಾವಿರ ಎಕರೆಯ ವ್ಯವಸಾಯ ಕ್ಷೇತ್ರವನ್ನು ಕೊಂಡು ಉಚಿತವಾಗಿ ಸತ್ಯಾಗ್ರಹಿಗಳ ವಸತಿಯೊಂದನ್ನು ನಡೆಸಲು ಕೊಟ್ಟರು. ಗಾಂಧೀ ಬಳಗ ಈ ವೇಳೆಗೆ ಬೃಹದಾಕಾರವಾಗಿ ಬೆಳೆದಿತ್ತು. ಹಕ್ಕಿನ ಹೋರಾಟಕ್ಕಾಗಿ ಜೀವನ ಪರ್ಯಂತ ದುಡಿಯಲು ಪಣತೊಟ್ಟ ತರುಣರು. ವಯಸ್ಕರು. ಮಹಿಳೆಯರು. ಮಕ್ಕಳು. ಸುಮಾರು ನೂರು ಜನರಿದ್ದರು. ಇವರ ಜೀವನ ನಿರ್ವಹಣೆ ಈ ವ್ಯವಸಾಯ ಕಾಯಕದಿಂದಲೇ ನಡೆಯಬೇಕೆಂದು ಸಂಕಲ್ಪ ಮಾಡಿದರು. ಆ ವೇಳೆಗೆ ಮಹರ್ಷಿ ಟಾಲ್‌ಸ್ಟಾಯ್‌ನ ವಿಚಾರಗಳು ಗಾಂಧೀಯವರಲ್ಲಿ ಮನೆಮಾಡಿದ್ದವು. ಸರ್ವೋದಯದ ಮೂರನೆಹೆಜ್ಜೆ ಸಾರ್ಥಕ ದುಡಿಮೆ ಜೀವನರಂಗಕ್ಕಿಳಿಯಿತು. ಫೀನಿಕ್ಸ್‌ವಸತಿ ಈ ಹೊಸ ಜಾಗಕ್ಕೆ ಬದಲಾಯಿಸಿತು. ಕಾಯಕದ ಮಹಾಶಕ್ತಿ ಆವಿರ್ಭಾವವಾದ ಈ ಕ್ಷೇತ್ರ 'ಟಾಲ್‌ಸ್ಟಾಯ್ ಫಾರಂ' ಎಂದು ಇತಿಹಾಸ ಪ್ರಸಿದ್ಧವಾಯಿತು. ಜೊಹಾನ್ಸ್‌ಬರ್ಗ್‌ಗೆ ನತಾಲದಿಂದ ವಲಸೆ ಬಂದ ಮಹಿಳೆಯರ ಗುಂಪೊಂದು ಪ್ರಬಲವಾದ ಬಿರುಗಾಳಿಯಂತೆ ಜನತೆಯನ್ನು

ಜಾಗೃತಗೊಳಿಸಿತು. ಸಂಘಶಕ್ತಿಯಲ್ಲಿ, ಅಹಿಂಸಕ ಅಸಹಕಾರದಲ್ಲಿ ನಂಬಿಕೆ ಹುಟ್ಟಿಸಿತು. ಗಣಿ ಕೆಲಸದ ಕೂಲಿಗಾರರು ಸಂಪುಹೂಡಿದರು. ಈ ಮೊದಲು ಗಾಂಧೀಜಿ ಸಂಧಾನ ಮಾರ್ಗಗಳನ್ನೆಲ್ಲ ಶೋಧಿಸಿ ಪ್ರಯತ್ನ ಮಾಡಿದ್ದರು. 1909ರಲ್ಲಿ ಇಂಗ್ಲೆಂಡಿಗೆ ಹೋಗಿ ದಕ್ಷಿಣ ಆಫ್ರಿಕದ ಪರಿಸ್ಥಿತಿಯನ್ನು ಬ್ರಿಟಿಷ್ ಸರ್ಕಾರದ ಗಮನಕ್ಕೆ ತಂದರು. ಅಲ್ಲಿನ ಶಾಸಕರ ಬೆಂಬಲ ಗಳಿಸಿದರು. ಭಾರತದ ಪ್ರಮುಖರು ಬೆಂಬಲಕೊಟ್ಟಿದ್ದರು. ಸ್ವತಃ ವೈಸರಾಯ್ ಲಾರ್ಡ್ ಹಾರ್ಡಿಂಜರೇ ದಕ್ಷಿಣ ಆಫ್ರಿಕದ ಅತ್ಯಾಚಾರಗಳನ್ನು ಖಂಡಿಸಿದರು. 1912 ರಲ್ಲಿ ಗೋಪಾಲಕೃಷ್ಣ ಗೋಖಲೆ ಭಾರತದ ಹಾಗೂ ಬ್ರಿಟಿಷ್ ಸಾಮ್ರಾಜ್ಯದ ಪರವಾಗಿ ಆಫ್ರಿಕದಲ್ಲಿ ಸಂಚರಿಸಿದರು. ಗಾಂಧೀಜಿಗೆ ಈ ಸಾರ್ವಜನಿಕಾಭಿಪ್ರಾಯದ ಬೆಂಬಲ ಅಮೋಘ ಸಾಧನವಾಯಿತು. ಗೋಖಲೆ ಮತ್ತು ಗಾಂಧೀ ನಿಕಟ ಅನುಯಾಯಿಗಳಾದರು. ಆ ಸ್ನೇಹದ ಅಭೂತಪೂರ್ವ ಪರಿಮಳ ಮುಂದೆ ಭಾರತ ಇತಿಹಾಸದಲ್ಲಿ ಅರಳಿನಿಂತ ಅಧ್ಯಾಯವಾಯಿತು.

ಅಹಿಂಸಕ ಸಮರದಲ್ಲಿ ದೀರ್ಘವಾದ ಸಾಮೂಹಿಕ ಯಾತ್ರೆಗೆ ಅತ್ಯಂತ ಮಹತ್ವವುಂಟು. ಬಹಿರಂಗವಾಗಿ, ನೇರವಾಗಿ, ಸತ್ಯನಿಷ್ಠವಾಗಿ, ಶಿಸ್ತಿಗೊಳಪಟ್ಟು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಪ್ರತಿಹಿಂಸೆ ಮಾಡದೆ ಶಿಕ್ಷೆಗಳನ್ನು ಆಹ್ವಾನಿಸುವುದು ಇದರ ಪ್ರಕ್ರಿಯೆ. ದಕ್ಷಿಣ ಆಫ್ರಿಕಾದಲ್ಲಿ ಮೊದಲಬಾರಿಗೆ ನ್ಯೂಕ್ಯಾಸಲಿನಿಂದ ಟ್ರಾನ್ಸ್‌ವಾಲಿನ ವೋಲ್ಕ್ಸ್‌ರಸ್ಟ್ ಎಂಬ ಊರಿಗೆ ಒಂದು ಪ್ರಚಂಡ ಪ್ರತಿಭಟನಾ ಮೆರವಣಿಗೆಯನ್ನೇರ್ಪಡಿಸಿದರು ಗಾಂಧೀಜಿ. 2037 ಗಂಡಸರು 127 ಹೆಂಗಸರು 57 ಚಿಕ್ಕಮಕ್ಕಳೂ ಕೂಡಿದ ಈ ಮಹಾಯಾತ್ರೆ ಗಾಂಧೀ ಯುಗದ ಒಂದು ಮಹಾಘಟನೆ. ಈ ಶಾಂತಿಸೇನೆ ದಿನಕ್ಕೆ 20–24 ಮೈಲಿ ನಡೆದು ಎರಡುದಿನಗಳಲ್ಲಿ ಟಾಲ್‌ಸ್ಟಾಯ್ ಫಾರಂ ಸೇರಬೇಕಾಗಿತ್ತು. ಜನಸ್ತೋಮ ಈ ಅದ್ಭುತ ಪ್ರದರ್ಶನವನ್ನು ಕಂಡು ದಿಗ್ಭ್ರಮೆಗೊಂಡಿತು. 1913 ರ ಅಕ್ಟೋಬರ್‌ನಲ್ಲಿ ಹೊರಟ ಈ ಮಹಾಯಾತ್ರೆಗೆ ಸೇರಿದ ಸತ್ಯಾಗ್ರಹಿಗಳ ಅಮಿತೋತ್ಸಾಹ ಸಾಂಕ್ರಾಮಿಕವಾಯಿತು. ದಾರಿಯಲ್ಲಿ ಗಾಂಧೀಜಿ ಮೂರುಸಾರಿ ಬಂಧಿತರಾದರು. ಕೊನೆಗೊಮ್ಮೆ ಒಂಭತ್ತು ತಿಂಗಳ ಕಠಿಣ ಶಿಕ್ಷೆಗೆ ಗುರಿಯಾದರು. ಈ ಮಹಾಪೂರ ಜನರಲ್ ಸ್ಮಟ್ಸರ ಸರಕಾರವನ್ನು ನೈತಿಕವಾಗಿ ಪೂರ್ಣಪರಾಭವಗೊಳಿಸಿಬಿಟ್ಟಿತು. ಭಾರತೀಯರಲ್ಲಿ ತೇಜೋಪೂರ್ಣಶಕ್ತಿ ಸಂಚಯನವಾಯಿತು.

ತಮ್ಮ ಆತ್ಮಕಥೆಯ ಪುಟಗಳಲ್ಲಿ ತುಂಬಿದ ಹೃದಯದಿಂದ ಗಾಂಧೀಜಿ ಈ ಮಹಾಸಮರದ ರೋಮಾಂಚಕಾರಿ ಘಟನೆಗಳ ತ್ಯಾಗವೀರರ ಕಥೆಗಳನ್ನು ಸ್ಮರಿಸಿದ್ದಾರೆ. ನಿರಕ್ಷರ ಕುಕ್ಷಿಯಾದರೂ ಪ್ರಚಂಡ ಧೀಶಕ್ತಿಯಿಂದ ಪ್ರಾಣಾರ್ಪಣೆ ಮಾಡಿದ ಹದಿನಾರು ವರ್ಷದ ಕೂಲಿಗಾರ ಹೆಣ್ಣು ವಲ್ಲಿಯಮ್ಮ ಅವರ ಮನೋಹೃದಯಗಳನ್ನು ಸೂರೆಗೊಂಡಳು. ಸ್ತ್ರೀ ಶಕ್ತಿಯ ವಿಶ್ವರೂಪ ದರ್ಶನ ಮಾಡಿಸಿದಳು. ಹೀಗೆಯೇ ರಾಮಸುಂದರಂ, ನಾರಾಯಣಸ್ವಾಮಿ, ಹಾಜಿಹಬೀಬ್‌ಸೇಟ್, ಆಂಡ್ರೂಸ್, ಪಿಯರ್‌ಸನ್ ಈ ಹೆಸರುಗಳು ಆ ಕಾಲಕ್ಕೆ ಅವರ ಪವಿತ್ರಸ್ಮರಣೆಯಲ್ಲಿ ಸೇರಿಹೋದವು.

ಜೈಲುವಾಸದಲ್ಲಿ ಜನರಲ್ ಸ್ಮಟ್ಸರಿಗಾಗಿ ಒಂದು ಜೊತೆ ಪಾದರಕ್ಷೆಯನ್ನು ಹೊಲಿದರು ಗಾಂಧೀಜಿ. ತನ್ನ ಜೀವನದ ಕಡೆಯವರೆಗೆ ಆತ ಈ ಹೃದಯಸ್ಪರ್ಶಿ ಘಟನೆಯನ್ನು ಮರೆಯಲಾರದಾದ. ಮುಂದೆ ಪ್ರಿಟೋರಿಯಾ ಸಂಧಾನದ ಪರಿಣಾಮವಾಗಿ ಭಾರತೀಯರ ಅಂದಿನ ಬೇಡಿಕೆಗಳನ್ನೆಲ್ಲ ದಕ್ಷಿಣ ಆಫ್ರಿಕದ ಸರಕಾರ ಈಡೇರಿಸಿತು. ಅವಮಾನಗಳಿಂದ ಮಣಿದಿದ್ದ ಜನಾಂಗವೊಂದು ಆತ್ಮಗೌರವದಿಂದ ತಲೆಯೆತ್ತಿ ನಿಲ್ಲುವಂತಾಯಿತು. ಈ ಪುಣ್ಯಕ್ಷೇತ್ರಕ್ಕೆ ಬಳುವಳಿಯಾಗಿ ಗಾಂಧೀಜಿ ತಮ್ಮ ಎರಡನೇ ಮಗ ಮಣಿಲಾಲನನ್ನೇ ಧಾರೆಯೆರೆದು ಬಿಟ್ಟರು. 'ಇಂಡಿಯನ್ ಒಪಿನಿಯನ್' ಆತನ ಸಂಪಾದಕತ್ವದಲ್ಲಿ ಬಹಳಕಾಲ ನಡೆದುಬಂತು.

ದಕ್ಷಿಣ ಆಫ್ರಿಕದ ಸತ್ಯಾಗ್ರಹ ಮಹಾತ್ಮಾಗಾಂಧೀಜಿಯ ಪೂರ್ಣವ್ಯಕ್ತಿತ್ವವನ್ನು ಕಡೆದು ನಿಲ್ಲಿಸಿತು. ಇಪ್ಪತ್ತೊಂದು ವರ್ಷಗಳು ಅಲ್ಲಿ ನಿಂತು ಅವರು ಜೀವನದ ಮಹತ್ವಪೂರ್ಣ ಪರಿವರ್ತನೆಯನ್ನು ಸಾಧಿಸಿಕೊಂಡರು. ಮುಂದೆ ವಿಶ್ವವ್ಯಾಪಕ ವಿರಾಡ್ರೂಪ ತಳೆದು ನಿಂತ ಈ ಮಹಾಮಹಿಮನ ಅಂತರ್ಯ ಪರಿಪಕ್ವವಾದುದು ಈ ಮೂಸೆಯಲ್ಲಿ. ಜೀವನ ಧ್ಯೇಯಗಳಾದ ಅಹಿಂಸಾ, ಸತ್ಯ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ, ಶರೀರಶ್ರಮ, ಅಸ್ವಾದ, ಅಭಯ, ಸರ್ವಧರ್ಮ ಸಮಭಾವ, ಸ್ವದೇಶೀವ್ರತ, ಅಸ್ಪೃಶ್ಯತಾ ನಿವಾರಣೆ ಈ ಏಕಾದಶ ವ್ರತಗಳು ಅವರಲ್ಲಿ ದಿವ್ಯಜ್ಯೋತಿಗಳಾಗಿ ಪ್ರಜ್ವಲಿಸಿದವು. 1909 ರಲ್ಲೇ ಇಂಗ್ಲೆಂಡಿನಿಂದ ದಕ್ಷಿಣ ಆಫ್ರಿಕಾಕ್ಕೆ ಬರುವ ದಾರಿಯ ಹಡಗಿನಲ್ಲಿ 'ಹಿಂದ್ ಸ್ವರಾಜ್ಯ' ಎಂಬ ಸಣ್ಣ ಪುಸ್ತಕ ಬರೆದಿದ್ದರು ಗಾಂಧೀಜಿ. ಈ ವಿವರಣಾತ್ಮಕ ಲೇಖನ ಅವರ ಜೀವನ

ತತ್ವ ಪ್ರಣಾಲಿ. ಆ ಕಾಲಕ್ಕೆ ಬರೆದ ಮತ್ತೊಂದು ಮಹತ್ವಪೂರ್ಣ ಲೇಖನ "ಆರೋಗ್ಯಮಾರ್ಗ". ಒಂದು ಬಹಿರಂಗ ಶುದ್ಧಿಯ ಸೂತ್ರ ಮತ್ತೊಂದು ಅಂತರಂಗ ಶುದ್ಧಿಯ ದ್ಯೋತಕ. ಈ ಗಾಲಿಗಳ ಮೇಲೆ ಅವರ ಬಾಳರಥ ಹೆದ್ದಾರಿಯಲ್ಲಿ ಹರಿದ ಕಥೆ ಸೂರ್ಯ ಪ್ರಭೆಯಂತೆ ನಿತ್ಯ ನಿಚ್ಚಳ.

೬

1914 ರಲ್ಲಿ ಮೊದಲನೆಯ ಮಹಾಯುದ್ಧ ಪ್ರಾರಂಭವಾಯಿತು. ಅಂತರ್ರಾಷ್ಟ್ರೀಯ ರಾಜಕಾರಣ ಅಂದು ಇಂಗ್ಲೆಂಡ್ ಫ್ರಾನ್ಸ್ ಮತ್ತು ಜರ್ಮನಿಗಳ ಸಾಮ್ರಾಜ್ಯಶಾಹೀ ಪಗಡೆಯಾಟವಾಗಿತ್ತು. ವಸಾಹತು ದೇಶದ ದಾಸ್ಯ ಭಾರತೀಯರನ್ನು ವಿಶ್ವದಿಂದಲೇ ಪ್ರತ್ಯೇಕಿಸಿಬಿಟ್ಟಿತ್ತು. ಇಂಗ್ಲೆಂಡಿನ ಆಜ್ಞಾಪಾಲನೆ ಬಿಟ್ಟರೆ ಭಾರತಕ್ಕೆ ಬೇರಾವ ರಾಜಕಾರಣವೂ ಇರಲಿಲ್ಲ. ದೇಶವು ಸಂಪೂರ್ಣವಾಗಿ ನಿಶ್ಶಸ್ತ್ರವಾಗುವಂತೆ ಕಾನೂನು ಕಟ್ಟಾಜ್ಞೆಗಳ ದಬ್ಬಾಳಿಕೆ ನಡೆದಿತ್ತು. ಭಾರತದ ವಿಮೋಚನೆ ಹೇಗಾದೀತು ? ಜನತೆಯ ಸ್ವಾಭಿಮಾನ ಸ್ವಾತಂತ್ರ್ಯಾಕಾಂಕ್ಷೆಗಳು ಹೇಗೆ ಉದ್ದೀಪನಗೊಂಡು ಸಂಘಟಿತ ಶಕ್ತಿಯಾದಾವು ? ಅಹಿಂಸಾಪಥದ ಅಗ್ನಿಪರೀಕ್ಷೆ ಇಲ್ಲಿ ಆಗಬೇಕಾಗಿತ್ತು. ಈ ತಪೋಕ್ಷೇತ್ರ ನಿಸ್ಸೀಮ ಸಾಹಸಿ ಗಾಂಧೀಜಿಯನ್ನು ಕೂಗಿ ಕರೆಯಿತು. 1914 ರಲ್ಲಿ ಅವರು ದಕ್ಷಿಣ ಆಫ್ರಿಕವನ್ನು ಬಿಟ್ಟು ಇಂಗ್ಲೆಂಡಿಗೆ ತೆರಳಿ ಗುರು ಗೋಖಲೆಯವರನ್ನು ಭೇಟಿಯಾದರು. 1915 ಕ್ಕೆ ಭಾರತಕ್ಕೆ ಹಿಂತಿರುಗಿದರು.

ಶತಮಾನಗಳ ದಾಸ್ಯದಿಂದ ಕಂಗೆಟ್ಟು ಕಂಗಾಲಾದರೂ ಭಾರತದ ಯಾವುದೊ ಅಜೇಯ ಅಂತಃಶಕ್ತಿ ಅಂತರ್ಗಂಗೆಯಂತೆ ಹರಿಯುತ್ತಿತ್ತು. ತೇಜಃಪುಂಜ ಪಂಜುಗಳಂತೆ ಅಲ್ಲಲ್ಲಿ ಅರಳಿನಿಂತ ಮಹಾವ್ಯಕ್ತಿಗಳು ಈ ಶತಮಾನದಲ್ಲಿ ಮತ್ತೆ ಭಾರತದ ಸುಪ್ತ ಚೇತನವನ್ನು ಎಚ್ಚರಿಸುತ್ತಿದ್ದರು. ಆಧ್ಯಾತ್ಮ ಶಕ್ತಿಯನ್ನುದ್ಧರಿಸಿ ದರಿದ್ರನಾರಾಯಣನ ಸೇವಾದೀಕ್ಷೆಯನ್ನು ಕೊಟ್ಟ ಧೀಮಂತ ಸಂನ್ಯಾಸಿ ಸ್ವಾಮಿವಿವೇಕಾನಂದ ; ಸ್ಫೂರ್ತಿಕೊಟ್ಟವರು ಭಗವಾನ್ ರಾಮಕೃಷ್ಣರು. ಆರ್ಯ ಸಂಸ್ಕೃತಿಯ ಆಳಕ್ಕೆ ಮುಳುಗಿ ಎದ್ದು ನಿಂತ ಕಡುಗಲಿ ದಯಾನಂದಸರಸ್ವತಿ. ಭಾರತೀಯ ಆದರ್ಶಗಳ ಪುನರುತ್ಥಾನಕ್ಕೆ ದುಡಿದ ಪಾಶ್ಚಾತ್ಯ ಸೋದರಿ ಅನಿಬಸೆಂಟ್. ದಾಸ್ಯಶೃಂಖಲೆಗಳನ್ನು ಪ್ರತಿಭಟಿಸಿ ನಿಂತ ಲೋಕಮಾನ್ಯತಿಲಕ್,

ಗೋಖಲೆ, ರಾನಡೆ, ಲಾಲಾ ಲಜಪತರಾಯ್. ಮದನಮೋಹನ ಮಾಳವೀಯ, ರವೀಂದ್ರನಾಥಠಾಕೂರರು ಮತ್ತು ಬಿಸಿನೆತ್ತರಿನ ದೇಶಭಕ್ತ ಯುವಕರನೇಕರ ಪರಂಪರೆ ಭಾರತದ ದೀರ್ಘದಾಸ್ಯದ ಜಡತ್ವವನ್ನು ಸ್ವಲ್ಪಸ್ವಲ್ಪವಾಗಿ ಕಳಚು ತ್ತಿತ್ತು. ಸಾಮೂಹಿಕ ಜನಶಕ್ತಿ ಸ್ವಾತಂತ್ರ್ಯಸಂಗ್ರಾಮಕ್ಕೆ ಅಣಿಯಾಗಲು ಹಾತೊರೆಯುತ್ತಿತ್ತು.

ಭಾರತಕ್ಕೆ ಬಂದೊಡನೆ ಅಹಮದಾಬಾದಿನ ಬಳಿ ಸಬರಮತಿಯ ದಂಡೆಯ ಮೇಲೆ ತಮ್ಮ ಆಶ್ರಮವನ್ನು ಸ್ಥಾಪಿಸಿದರು ಗಾಂಧೀಜಿ. ಸತ್ಯಾಗ್ರಹದ ಪ್ರಯೋಗಗಳೇ ಅವರ ಮುಖ್ಯಗುರಿ. ತೀವ್ರ ಧ್ಯೇಯವಾದಿಗಳಾದ ಹಲವು ಗೆಳೆಯರ ಗುಂಪೊಂದು ಅವರ ಸುತ್ತ ಕಟ್ಟಿಕೊಂಡಿತು. ಗೋಖಲೆಯವರ ಸಲಹೆಯಂತೆ ಒಂದು ವರ್ಷ ದೇಶವನ್ನೆಲ್ಲ ಸುತ್ತಾಡಿ ಪರಿಸ್ಥಿತಿಯ ಪರಿಚಯ ಪಡೆದರು. ಸಾಮಾನ್ಯರಂತೆ ಯಾವಾಗಲೂ ಮೂರನೇದರ್ಜೆ ಗಾಡಿಯಲ್ಲಿ ಪ್ರಯಾಣ. ಸಾಮಾನ್ಯರಲ್ಲಿ ವಾಸ. ಸರಳರಲ್ಲಿ ಸರಳವಾಗಿ ಬೆರೆತುಹೋದರು. ಅಂತ್ಯಜರಲ್ಲಿ ಅಂತ್ಯಜರಾದರು. ಅಸ್ಪೃಶ್ಯತೆಯ ಕಳಂಕವನ್ನು ವೈಯಕ್ತಿಕವಾಗಿ ತೊರೆದರು. ಆಶ್ರಮಕ್ಕೆ ಸೇರಿದ ಮೊದಲ ಹರಿಜನ ದೂದಾಭಾಯಿಯ ಸಂಸರ್ಗವನ್ನು ಬಹಿಷ್ಕರಿಸಿದ ಗೆಳೆಯರನ್ನು ಪರಿವರ್ತಿಸಿದರು. ಬಂದ ಕಿರುಕುಳ ಸಂಕಟಗಳನ್ನು ತಾಳ್ಮೆಯಿಂದ ಸಹಿಸಿದರು. ಮಾನವೀಯತೆಗೇ ಕಳಂಕವೆನಿಸುವ ಅಸ್ಪೃಶ್ಯತೆಯನ್ನು ನಿವಾರಿಸಿದ್ದಲ್ಲದೆ ಹಿಂದೂ ಸಮಾಜ ಉದ್ಧಾರವಾಗದು ಎಂಬ ಮೊದಲ ಪಾಠವನ್ನು ಆಚರಿಸಿ ಕಲಿಸಿದರು.

1919 ಕಾಶೀ ವಿಶ್ವವಿದ್ಯಾಲಯದ ಉದ್ಘಾಟನಾ ಮಹಾಸಮಾರಂಭ. ಸೋದರಿ ಅನಿಬೆಸೆಂಟ್ ಅಂದಿನ ಅಧ್ಯಕ್ಷರು. ರಾಜ ಮಹಾರಾಜರುಗಳು. ಮಠಾಧಿಪತಿಗಳು, ಜಮೀನುದಾರ ಸಾಹುಕಾರರೆಲ್ಲ ನೆರೆದಿದ್ದರು. ಕಣ್ಣು ಕೋರೈ ಸುವ ವಜ್ರವೈಢೂರ್ಯಗಳ ಪ್ರದರ್ಶನ ಸಾಲುಗಟ್ಟಿ ಬೊಂಬೆಗಳಂತೆ ಅಲಂಕೃತ ರಾಗಿ ಕುಳಿತಿದ್ದ ಈ ಸಭಾಸದರಲ್ಲಿ ಎದ್ದು ಕಾಣುತ್ತಿತ್ತು. ಗಾಂಧೀಜಿಗೆ ಈ ಅಟ್ಟ ಹಾಸದ ಪ್ರದರ್ಶನ ಹಿಡಿಸಲಿಲ್ಲ. ಭಾಷಣ ಮಾಡಲು ಅವರನ್ನು ಆಹ್ವಾನಿಸ ಲಾಗಿತ್ತು. ಎದ್ದು ನಿಂತವರೇ "ಪ್ಯಾರಿಸ್ಸಿನ ಜವಾಹರಿ ವ್ಯಾಪಾರಿಗಳನ್ನೇ ಬೆರಗು ಗೊಳಿಸುವ ಈ ಆಡಂಬರಾಲಂಕೃತ ವೈಭವವನ್ನು ದೇಶದ ದಟ್ಟದಾರಿದ್ರ್ಯ ದೊಂದಿಗೆ ಹೋಲಿಸಿ ನೋಡಿ ! ಈ ಆಭರಣಗಳ ಹೊರೆಯನ್ನು ಕಿತ್ತಿಟ್ಟು ನಿಮ್ಮ

ಇಡೀ ಸಂಪತ್ತನ್ನು ವಿಶ್ವಸ್ಥನಿಧಿಯಂತೆ ದೇಶಸೇವೆಗೆ ಧಾರೆಯೆರೆಯದೆ ವಿಮೋಚನೆ ಯಿಲ್ಲ. ದಾರಿದ್ರ್ಯವನ್ನು ಕುರಿತಾದ ನಿಮ್ಮ ಕನಿಕರ ಕೇವಲ ಹಾಸ್ಯಾಸ್ಪದ ವಾದೀತು" ಎಂದು ಗುಡುಗಿದರು. "ನಮ್ಮ ಹೇಡಿತನವೇ ದಾಸ್ಯದ ಶೃಂಖಲೆಗಳಾಗಿ ಬಿಗಿದುಕಟ್ಟಿರುವ ಹಲವು ದಾರುಣ ಕಗ್ಗಂಟುಗಳನ್ನು ನಾವೇ ನಿವಾರಿಸಿಕೊಳ್ಳುವತನಕ ನಮ್ಮ ರಾಷ್ಟ್ರ ಸ್ವಾಭಿಮಾನದಿಂದ ಎಂದೂ ಎದ್ದು ನಿಲ್ಲಲಾರದು" ಎಂದು ಎಚ್ಚರಿಸಿದರು.

ಈ ಭಾಷಣ ದೇಶದ ಕ್ರಾಂತಿಶಕ್ತಿಯನ್ನೇ ಹೊಡದೆಬ್ಬಿಸುವಂತೆ ಯುವ ಜನರ ವಿದ್ಯಾರ್ಥಿಗಳ ಹೃದಯುಗಳಲ್ಲಿ ಪ್ರತಿಸ್ಪಂದಿಸಿತು. ಆ ಕಾಲಕ್ಕೆ ವಾರಣಾಸಿ ಯಲ್ಲಿ ಸಂಸ್ಕೃತ ವ್ಯಾಸಂಗ ನಿರತರಾಗಿದ್ದ ಎಳೆವಯಸ್ಸಿನ ವಿನೋಬಾಭಾವೆ ಈ ಭಾಷಣದ ವರದಿಯನ್ನೋದಿ ಪ್ರಬಲವಾಗಿ ಗಾಂಧಿಯವರ ಕಡೆ ಆಕರ್ಷಿತ ರಾದರು. ಕೂಡಲೇ ಅವರಿಗೊಂದು ಪತ್ರ ಬರೆದು ಸಬರ್ಮತಿಗೆ ಧಾವಿಸಿದರು. ಈ ವಿಚಿತ್ರ ಮನೋಧರ್ಮದ ಮಹಾತ್ಮ ಶತಮಾನಗಳ ಘನೀಭೂತ ಕಿಲುಬು ಗಳನ್ನು ತೊಳೆದು ನವ್ಯ ಚೇತನವೊಂದನ್ನು ಜನತೆಯ ಅಂತರಾಳದಿಂದ ಸೃಷ್ಟಿಸು ತ್ತಿರುವಂತೆ ಭಾಸವಾಯಿತು. ಬ್ರಿಟಿಷ್ ಆಳರಸರ ಕೃಪಾಪೋಷಿತ ಶೋಷಕ ವರ್ಗ ಪಸರಿಸಿ ಬಿಗಿದಿದ್ದ ಸರಪಣಿಗಳ ಕೊಂಡಿಗಳು ಕಳಚಿಬೀಳುತ್ತಾ ರಾಷ್ಟ್ರೀಯ ನಿಚ್ಚಳ ಬೆಳಕು ಹರಿಯತೊಡಗಿತು. "ನಿರ್ಭೀತರಾಗಿ ಸ್ವತಂತ್ರ ಮನೋ ಧರ್ಮವನ್ನು ಬೆಳೆಸಿರಿ ; ಸವಿನಯ ಅಸಹಕಾರದ ಮನೋದಾರ್ಢ್ಯ ನೆಲೆಯೂರಿ ನಿಲ್ಲಲಿ ; ದೇಶದ ವಿಮೋಚನೆ ಅಸಂಖ್ಯಾತ ಕೃಷಿಕರಿಂದಲೇ ಹೊರತು ಅನುಕರಣ ಶೀಲ ಆಧುನಿಕ ಪಟ್ಟಣಿಗ ವರ್ಗಕ್ಕೆ ಅಸಾಧ್ಯ." ಈ ಧ್ಯೇಯ ವಾಕ್ಯಗಳು ಜನಶಕ್ತಿಗೆ ದಾಸ್ಯವಿಮೋಚನೆಯ ದೀಕ್ಷೆಯನ್ನು ತೊಡಿಸಿದುವು.

ನೇರವಾಗಿ ಹಲವು ಸಮಸ್ಯೆಗಳನ್ನು ಎದುರಿಸಿ ಅಸಹಕಾರ ಚಳುವಳಿಗಳನ್ನು ನಡೆಸಿ ರೈತರು, ಕೂಲಿಗಾರರು, ಕಾರ್ಮಿಕರು ಇವರನ್ನು ಜಾಗೃತಗೊಳಿಸ ಬೇಕಾಗಿತ್ತು. ಆರ್ಥಿಕ ಸಾಮಾಜಿಕ ಮತ್ತು ಧಾರ್ಮಿಕ ಶೋಷಣೆಗಳಿಗೆ ತುತ್ತಾಗಿದ್ದ ಅಸಂಖ್ಯಾತ ದುಡಿಮೆಗಾರರಲ್ಲಿ ಆತ್ಮಾಭಿಮಾನವನ್ನೂ ಜೀವನೋ ತ್ಸಾಹವನ್ನೂ ತುಂಬಬೇಕಾಗಿತ್ತು. ಮೂರು ಸೀಮಿತ ಕ್ಷೇತ್ರಗಳಲ್ಲಿ ಸತ್ಯಾಗ್ರಹ ಸಮರದ ಪ್ರಯೋಗ ಮಾಡಿದರು ಗಾಂಧೀಜಿ. ವಿದ್ಯಾವಂತ ಯುವಕರಿಗೆ ದೇಶಭಕ್ತಿಯ ಉಜ್ವಲ ಶಿಕ್ಷಣದ ನೂತನ ಕ್ಷೇತ್ರಗಳೇ

ನಿರ್ಮಿತವಾದವು. ದಂತದ ಸೌಧಗಳಲ್ಲಿ ವಿಹರಿಸುತ್ತಾ ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋಗಿದ್ದ ಬುದ್ಧಿಜೀವಿಗಳನ್ನು ಹೊರಸೆಳೆದು ಅಹಿಂಸಕ ಕ್ರಾಂತಿಸಮರಕ್ಕೆ ಸಿದ್ಧಮಾಡಿದರು. ಸವಿನಯ ಶಾಸನೋಲ್ಲಂಘನೆ. ಅಹಿಂಸಕ ಅಸಹಕಾರ, ನಿಸ್ಸೀಮ ಬಲಿದಾನದ ದೀಕ್ಷೆ. ಇವು ಸಾವಿರಾರು ಭಾರತೀಯ ಯುವಕರನ್ನು ಆಕರ್ಷಿಸಿತು. 1917ರಲ್ಲಿ ಬಿಹಾರದ ಚಂಪಾರಣ್ಯದಲ್ಲಿ ನೀಲಿತೋಟಗಳ ಕೂಲಿಗಾರರ ಮತ್ತು ರೈತರ ದಾರುಣ ಸಮಸ್ಯೆಗಳನ್ನು ಎದುರಿಸಿ ಸತ್ಯಾಗ್ರಹ ಹೂಡಿದರು. ನ್ಯಾಯರಹಿತ ಏಕಸ್ವಾಮ್ಯ ಶಾಸನಗಳನ್ನು ಪ್ರತಿಭಟಿಸಿ ನಿಂತರು. ಸಾಮೂಹಿಕ ಅಸಹಕಾರ ಚಳುವಳಿ ಬಿರುಸಿನಿಂದ ನಡೆಯಿತು. ಅಂದಿನ ಪ್ರಖ್ಯಾತ ಬ್ಯಾರಿಸ್ಟರ್ ರಾಜೇಂದ್ರಬಾಬು. ಪ್ರೊಫೆಸರ್ ಕೃಪಲಾನಿ, ರಾಜ ಕುಮಾರ ಶುಕ್ಲ, ಬ್ರಜಕಿಶೋರಬಾಬು ಮುಂತಾದ ಬಿಹಾರದ ಪ್ರಮುಖ ವ್ಯಕ್ತಿಗಳು ಗಾಂಧೀ ವಿಚಾರಮಾರ್ಗಕ್ಕೆ ಮಾರುಹೋದರು. ಲೌಕಿಕ ಲಾಭ ದಾಯಕ ವೃತ್ತಿಗಳಲ್ಲಿ ಶ್ರೀಮಂತಿಕೆಯನ್ನೇರುತ್ತಿದ್ದ ಈ ಮೇಧಾವೀ ಯುವಕರು ಹಠಾತ್ತನೆ ಸರಳಜೀವನದ ಗಾಂಧೀ ಅನುಯಾಯಿಗಳಾಗಿಬಿಟ್ಟರು. ಭಯಭೀತ ರಾಗಿದ್ದ ರೈತರ ನಡುವೆ ನಿಂತು ಹೋರಾಟದ ಕೆಚ್ಚನ್ನು ತುಂಬಿದರು. ದಬ್ಬಾಳಿಕೆ ಯಲ್ಲಿ ತೊಡಗಿ ಅಧಿಕಾರಶಾಹಿಯ ಕತ್ತಿಯನ್ನು ಝಳಪಿಸುತ್ತಾ ಜನತೆಯ ದುಡಿಮೆಯನ್ನು ಶೋಷಿಸುತ್ತಿದ್ದ ಪಾಶ್ಚಾತ್ಯ ಮಾಲೀಕರಿಗೆ ಈ ಮೃದುತನದ ನಿರ್ಭೀತ ನಿಶ್ಶಸ್ತ್ರ ಪ್ರತಿಭಟನೆ ಪ್ರಚಂಡ ಬಿರುಗಾಳಿಯಂತಾಯಿತು. ಸಾವಿರಾರು ಜನ ಜೈಲಿನ ಶಿಕ್ಷೆಯನ್ನೂ, ಪೋಲೀಸರ ಧಾಳಿಯನ್ನೂ ಅಧಿಕಾರಿಗಳ ಕೋಪೋ ದ್ರೇಕವನ್ನೂ ಶಾಂತಿಯಿಂದೆದುರಿಸಿ ನಿಂತರು. ತಾಳ್ಮೆಯಿಂದ ಅನುಭವಿಸಿದರು. ಆರುತಿಂಗಳೊಳಗಾಗಿ ವಾತಾವರಣವೇ ಬದಲಿಸಿಬಿಟ್ಟಿತು. ತಮ್ಮ ಉಳಿವಿ ಗಾಗಿಯೇ ಮಾಲೀಕರೂ ಸರ್ಕಾರವೂ ಕೂಲಿಗಾರ ರೈತರೊಡನೆ ಒಪ್ಪಂದಕ್ಕೆ ಬಂದರು. ಚಂಪಾರಣ್ಯದಲ್ಲಿ 'ತೀನ್ ಕಠಿಯಾ' ಕಾನೂನು ರದ್ದಾಯಿತು. ನ್ಯಾಯಬದ್ಧ ಒಪ್ಪಂದಗಳ ಮೇಲೆ ಗೌರವಪೂರ್ಣ ಸಂಬಂಧಗಳು ಏರ್ಪಟ್ಟವು.

ಬಿಹಾರದ ಅನುಭವ ಗ್ರಾಮಭಾರತದ ಭೀಕರ ಆರ್ಥಿಕ ಸ್ಥಿತಿಯನ್ನು ಗಾಂಧೀಜಿಯ ನೇರ ದೃಷ್ಟಿಗೆ ಪ್ರಖರವಾಗಿ ಚಿತ್ರಿಸಿತು. ಅಜ್ಞಾನ, ದಾಸ್ಯ, ದಾರಿದ್ರ್ಯ ಈ ಮಹಾರೋಗಗಳು ಹಿಂಡಿ ಹಿಪ್ಪೆಮಾಡುತ್ತಿದ್ದ ಜನಸ್ತೋಮ ಅವರ ಚಿತ್ತಭಿತ್ತಿಯಲ್ಲಿ ಅಗ್ನಿಜ್ವಾಲೆಯನ್ನೆಬ್ಬಿಸಿತು.

ಗುಜರಾತಕ್ಕೆ ಹಿಂತಿರುಗಿದೊಡನೆ ಅಹಮದಾಬಾದಿನ ಗಿರಣಿ ಕಾರ್ಮಿಕರು ಹೆಚ್ಚಿನ ಕೂಲಿಗಾಗಿ ನಡೆಸಿದ ಮುಷ್ಕರದಲ್ಲಿ ಧುಮಿಕಿದರು. ಕೂಲಿಗಾರರ ವಜ್ರಸಂಕಲ್ಪ ಯಾವ ದಬ್ಬಾಳಿಕೆಗೂ ಮಣಿಯದೆ ಯಾವ ಹಿಂಸೆಗೂ ಕೈಹಾಕದೆ ಸ್ವಯಂಪ್ರೇರಿತ ಶಿಕ್ಷೆಯನ್ನನುಭವಿಸುತ್ತಾ ಸಂಪೂರ್ಣ ಹರತಾಳವನ್ನನುಸರಿಸಿ ನಡೆಯಿತು. ಗಿರಣಿ ಮಾಲೀಕರು ಗಾಂಧೀಜಿಯ ಆಪ್ತ ಸ್ನೇಹಿತರಾಗಿದ್ದರು. ಈ ಪ್ರೇಮಪೂರ್ಣ ಅಸಹಕಾರ ಗಾಂಧೀ ಶಕ್ತಿಯನ್ನು ನಿರೂಪಿಸಿತು.

ಮಧ್ಯೆ ದುಷ್ಟಶಕ್ತಿಗಳ ಗುಪ್ತ ಒತ್ತಡಗಳಿಂದ ಸಂಕಟ ಸಹಿಸುವ ಶಕ್ತಿ ಕಾರ್ಮಿಕರಲ್ಲಿ ಶಿಥಿಲವಾಗಿ ಅನೈತಿಕ ಪ್ರಭಾವಗಳು ಕಾಣಿಸಿಕೊಂಡಾಗ ಗಾಂಧೀಜಿ ಉಪವಾಸ ವ್ರತ ಕೈಗೊಂಡರು. ಶಿಸ್ತುಸಂಯಮಗಳು ಮತ್ತೆ ಸುಪ್ರತಿಷ್ಠಿತ ವಾದುವು. ಕೂಲಿಗಾರರ ಬೇಡಿಕೆಗಳೆಲ್ಲ ಸಲ್ಲುವಂತಾಗಿ ಧನಿಕರಿಗೂ ದುಡಿಮೆ ಗಾರರಿಗೂ ಮಧ್ಯೆ ಮಧುರ ಬಾಂಧವ್ಯ ಉಳಿಯುವಂತಾಯಿತು. ಸಾಮಾನ್ಯ ಮಾನವನ ಸಂಕಲ್ಪಶಕ್ತಿಯಲ್ಲಿ ಗಾಂಧೀಜಿಗೆ ಅಗಾಧ ಭರವಸೆಯುಂಟಾಯಿತು. ಈ ಕಾರ್ಮಿಕವರ್ಗದ ಸಂಘಟನೆಯಲ್ಲಿ ಗಾಂಧೀಗುಂಪಿನ ಪ್ರಭಾವ ಅಗಾಧವಾಗಿ ಬೆಳೆಯಿತು. ಯಶಸ್ವೀ ಸತ್ಯಾಗ್ರಹದಲ್ಲಿ ಯಾವ ಕಹಿಯೂ ಉಳಿಯಬಾರದು. ಇದಕ್ಕೆ ಸೂತ್ರಗಳನ್ನು ಹೀಗೆ ರೂಢಿಸಿಕೊಟ್ಟರು ಗಾಂಧೀಜಿ. (1) ಹಿಂಸೆಯನ್ನು ಎಂದಿಗೂ ಮಾಡಬಾರದು (2) ತಪ್ಪಿ ನಡೆದವರನ್ನು ಪೀಡಿಸಬಾರದು (3) ತಿರುಪೆಯನ್ನು ನಂಬಬಾರದು (4) ಮುಷ್ಕರ ಎಷ್ಟು ದೀರ್ಘಕಾಲ ನಡೆದರೂ ದೃಢವಾಗಿ ನಿಂತು ಆ ಕಾಲದಲ್ಲಿ ಪ್ರಾಮಾಣಿಕವಾದ ದುಡಿತದಿಂದ ಹೊಟ್ಟೆ ಹೊರೆಯಬೇಕು. ಮುಖಂಡರು ಈ ನಿಯಮಗಳನ್ನು ಅರ್ಥಮಾಡಿಕೊಂಡು ಒಪ್ಪಿದರು. ಅನುಸೂಯಾಬೆನ್, ಸರಳಾದೇವಿ, ಆನಂದಶಂಕರ ಧ್ರುವ ರಂತಹ ಶ್ರೀಮಂತ ಸಾತ್ವಿಕ ಸತ್ಯಾಗ್ರಹಿಗಳೂ, ಗುಲ್ಜಾರಿಲಾಲನಂದಾ ಇಂದು ಲಾಲ್ ಯಾಜ್ಞಿಕ್‌ರಂತಹ ತರುಣ ಕಾರ್ಮಿಕ ಮುಖಂಡರೂ ಈ ಸಂಗ್ರಾಮ ದಲ್ಲಿ ಗಾಂಧೀಕುಟುಂಬಕ್ಕೆ ಸೇರಿಹೋದರು.

1918 ರ ಮಾರ್ಚಿಯಲ್ಲಿ ಗುಜರಾತಿನ ಖೇಡಾಜಿಲ್ಲೆಯಲ್ಲಿ ಭಯಂಕರ ಬರಗಾಲ ಬಂತು. ಆ ಕಾಲಕ್ಕೆ ರೈತರು ಕಂದಾಯ ಮನ್ನಾಮಾಡಲು ಬೇಡಿ ಕೊಂಡರು. ಸರ್ಕಾರ ಒಪ್ಪಲಿಲ್ಲ. ಜನನಾಯಕರು ಬಂಡಾಯವೆದ್ದರು. ಗಾಂಧೀಜಿ ಮತ್ತೆ ಸಮರದಲ್ಲಿ ಧುಮುಕಿದರು. ಗುಜರಾತಿನ ಧೀಮಂತ ಪುತ್ರ

ಸರ್ದಾರ್ ವಲ್ಲಭಭಾಯಿ ಈ ಸಮರದ ನಾಯಕರಾದರು. ಪ್ರವರ್ಧಮಾನದ ತುದಿಗೇರಿ ಪ್ರತಿಭಾವಂತ ವಕೀಲರಾಗಿ. ಸಾವಿರಗಟ್ಟಲೆ ಸಂಪಾದನೆಯಲ್ಲಿ ನಿರತರಾಗಿ, ಪಾಶ್ಚಾತ್ಯರಂತೆಯೇ ನಿತ್ಯಜೀವನವನ್ನು ನಡೆಸುತ್ತಿದ್ದ ಪಟೇಲರು ಎಲ್ಲವನ್ನೂ ತ್ಯಾಗಮಾಡಿ ರೈತರೊಡನೆ ರೈತರಾಗಿಬಿಟ್ಟರು. ಗಾಂಧೀಜಿಯ ಈ ಘವಾಡ ಜನಹೃದಯವನ್ನು ಮಿಂಚಿನಂತೆ ಕೋರೈಸಿತು. ಪಟೇಲ್ ಸಹೋದರರಲ್ಲದೆ ಈ ಸಮರದಲ್ಲಿ ಗಾಂಧೀಜಿಯ ಅತಿ ನೆಚ್ಚಿನ ಆಪ್ತ ಅನುಯಾಯಿ ಮಹದೇವ ದೇಸಾಯ್ ಕೂಡಿಕೊಂಡರು. ಕರನಿರಾಕರಣೆಯ ಚಳುವಳಿ ಅತ್ಯಗಾಧ ಪ್ರಮಾಣದಲ್ಲಿ ನಡೆಯಿತು. ಹಳ್ಳಿಹಳ್ಳಿಗಳೇ ಹರಾಜಾದರೂ ಧೃತಿಗೆಡದೆ ನಿಂತರು ಖೇಡಾದ ವ್ಯವಸಾಯಗಾರರು. ಅಧಿಕಾರಿಗಳು ಏನೇ ಪ್ರಲೋಭನೆಗಳನ್ನೊಡ್ಡಿದರೂ ರೈತರ ಜಮೀನುಗಳನ್ನು ಹರಾಜಿನಲ್ಲಿ ಕೊಳ್ಳಲು ಒಬ್ಬರೂ ಬರುತ್ತಿರಲಿಲ್ಲ. ಒಬ್ಬರೂ ಕಂದಾಯವನ್ನೂ ಕೊಡಲಿಲ್ಲ. ರಾಕ್ಷಸೀ ದಬ್ಬಾಳಿಕೆಯೇ ನಡೆದು ಹೋಯಿತು. ಸಂತೋಷವಾಗಿ ಬಂದುದನ್ನೆಲ್ಲ ಅನುಭವಿಸಿದರು ಜನ. ಜಫ್ತಿಗಳು, ಮುಟ್ಟುಗೋಲುಗಳು, ದಂಡಗಳು ಯಾವುದಕ್ಕೂ ಜಗ್ಗಲಿಲ್ಲ. ಕೊನೆಗೆ ಶ್ರೀಮಂತ ರೈತರನ್ನು ಬಿಟ್ಟು ಸಾಮಾನ್ಯರೈತರಿಗೆ ಆ ವರ್ಷ ಕಂದಾಯವನ್ನು ಮನ್ನಾಮಾಡತಕ್ಕದ್ದೆಂದು ಒಪ್ಪಂದವಾಯಿತು. ಸತ್ಯಾಗ್ರಹ ಕೊನೆಗೊಂಡಿತು. ಈ ಸಮರದಿಂದಾದ ಜಾಗೃತಿ ಇಡೀ ಗುಜರಾತ ರಾಜ್ಯವನ್ನೇ ಎಚ್ಚರಿಸಿತು. ಸಹಸ್ರಾರು ಯುವಕರು ಸ್ವಯಂಸೇವಕರಾಗಿ ಹಳ್ಳಿಗಳಲ್ಲಿ ದುಡಿಯಲು ಮುಂದೆ ಬಂದರು. ಬುದ್ಧಿಜೀವಿಗಳ ಪ್ರವಾಹ ಹಳ್ಳಿಗಳ ಕಡೆಗೆ ಹರಿಯತೊಡಗಿತು. ತ್ಯಾಗ ಬಲಿದಾನಗಳ ಹೊನಲು ಪಸರಿಸಿ ನಿಂತಿತು.

ಈ ಮೂರು ಸೀಮಿತ ಕ್ಷೇತ್ರಗಳಲ್ಲಿ ನಡೆದ ಸತ್ಯಾಗ್ರಹಪ್ರಯೋಗಗಳು ಭಾರತದ ಜನತೆಗೆ ಹೊಸ ಬೆಳಕನ್ನು ತಂದುಕೊಟ್ಟು, ಗಾಂಧೀಜಿಯ ನಾಯಕತ್ವ ಪ್ರಭಾವಯುತವಾಗಿ ಬೆಳೆಯುವಂತಾಯಿತು. ಇಡೀ ರಾಷ್ಟ್ರದ ಬೃಹತ್ ಸಮಸ್ಯೆಗಳನ್ನೆದುರಿಸಲು ಅವರು ಅನುವಾದರು. ಕಾಲ ಹಣ್ಣಾಗಿ ನಿಂತಿತ್ತು. ದೇಶ ಸ್ವಾತಂತ್ರ್ಯಾಕಾಂಕ್ಷೆಯನ್ನು ತುಂಬಿಕೊಳ್ಳುತ್ತಿತ್ತು. ಜನ ಸರ್ವತ್ಯಾಗಕ್ಕೂ ಸಿದ್ಧರಾಗುತ್ತಿದ್ದರು. ಕ್ರಾಂತಿಯ ಕಿಡಿ ವಿಶ್ವಕ್ಕೇ ಬೇಕಾಗುವ ಹೊಸ ಪ್ರಕ್ರಿಯೆಯ ಕವಚವನ್ನು ತೊಟ್ಟು ಭಾರತದ ಸ್ವಾತಂತ್ರ್ಯ ಸುಪ್ರಭಾತಕ್ಕೆ ಅಣಿಮಾಡಿತು.

೭

ಮೊದಲನೆಯ ಮಹಾಯುದ್ಧ ನಡೆಯುತ್ತಿತ್ತು. ಬ್ರಿಟನ್ನಿನ ಪರಿಸ್ಥಿತಿ ಒಂದು ವಿಷಮಘಟ್ಟದಲ್ಲಿತ್ತು. ಭಾರತದಲ್ಲಿ ಅಶಾಂತಿ ಹರಡೀತೇ ಎಂದು ಶತ್ರು ರಾಷ್ಟ್ರಗಳು ಕಾಯುತ್ತಿದ್ದವು. ವಿಧ್ವಂಸಕ ಕ್ರಾಂತಿಪಥದ ಭಾರತೀಯ ಯುವಕರನೇಕರು ಬ್ರಿಟಿಷ್ ಆಡಳಿತವನ್ನು ಕೊನೆಗಾಣಿಸಲು ಇದು ಸುಸಮಯ ಎಂದು ಭಾವಿಸಿದ್ದರು. ಗಾಂಧೀಜಿ ಹಾಗೆ ವಿಚಾರ ಮಾಡಲಿಲ್ಲ. ಬ್ರಿಟಿಷ್ ಸರ್ಕಾರ ಇತರ ಸಾಮ್ರಾಜ್ಯವಾದೀ ಸರ್ಕಾರಗಳಿಗಿಂತ ಸ್ವಲ್ಪ ಉತ್ತಮವಾಗಿತ್ತೆಂದೇ ಅವರು ಭಾವಿಸಿದ್ದರು. ಒಂದಲ್ಲ ಒಂದು ದಿನ ಸ್ನೇಹವನ್ನುಳಿಸಿ ಕೊಂಡೇ ಬ್ರಿಟಿಷರು ಭಾರತವನ್ನು ಬಿಟ್ಟು ಹೊರಡುವರೆಂದು ನಂಬಿದ್ದರು. ಅಂತೆಯೇ ಅವರ ಪರೀಕ್ಷಾಸಮಯದಲ್ಲಿ ದುರ್ಲಾಭ ಪಡೆಯುವುದು ಸತ್ಯಾಗ್ರಹಿಗೆ ಸಲ್ಲದು ಎಂದು ಘೋಷಿಸಿ ಎಲ್ಲ ಪ್ರತಿಭಟನಾ ಚಳುವಳಿಗಳನ್ನೂ ನಿಲ್ಲಿಸಿದರು. ಅಷ್ಟೇ ಅಲ್ಲದೆ ನೇರವಾಗಿ ಸೈನ್ಯಕ್ಕೆ ಭಾರತೀಯರನ್ನು ಭರ್ತಿ ಮಾಡುವ ಕೆಲಸದಲ್ಲಿ ಸ್ವಯಂಸೇವಕರಾಗಿ ದುಡಿದರು. ಖೇಡಾದ ಸತ್ಯಾಗ್ರಹಿಗಳನ್ನೇ ಒಲಿಸಿದರು. ಸಾವಿರಾರು ಯುವಕರು ಯುದ್ಧೋತ್ಸಾಹದಿಂದ ಬ್ರಿಟಿಷರಿಗೆ ನೆರವಾಗುವಂತೆ ದುಡಿದರು. ವೈಸರಾಯರೂ ಬ್ರಿಟನ್ನಿನ ರಾಜಕಾರಣಿಗಳೂ ಈ ನಿಲುವನ್ನು ಕೃತಜ್ಞತೆಯಿಂದ ಸ್ಮರಿಸಿ ಶಾಂತಿಕಾಲಿನ ನಂತರ ಕೈಸರ್–ಇ–ಹಿಂದ್ ಪದಕವನ್ನು ಗಾಂಧೀಯವರಿಗೆ ಕೊಟ್ಟು ಗೌರವಿಸಿದರು.

ಯುದ್ಧದಲ್ಲಿ ವಿಜಯಿಗಳಾದ ಮಿತ್ರರಾಷ್ಟ್ರಗಳು ಭಾರತದ ಸ್ವಯ ಮಾಡಳಿತದ ಬೇಡಿಕೆಯನ್ನು ಧಿಕ್ಕರಿಸಿದುದು ಗಾಂಧೀಜಿಯ ಮಹದಾಸೆಗಳನ್ನು ನುಚ್ಚುನೂರು ಮಾಡಿತು. ಎಂದಿಗಿಂತ ನೂರ್ಮಡಿಯಾಗಿ ರಾಷ್ಟ್ರೀಯ ಚಳುವಳಿಯನ್ನು ದಮನಮಾಡುವ ಉಗ್ರಶಾಸನಗಳು ಜಾರಿಯಾದವು. ಪ್ರಸಿದ್ಧವಾದ ರೌಲಟ್ ಶಾಸನ 1919 ರಲ್ಲಿ ಜಾರಿಗೆ ಬಂತು. ನಾಗರೀಕರ ಹಕ್ಕುಗಳಿಗೇ ಕೊಡಲಿಪೆಟ್ಟು ಕೊಡುವಂತಹ ಕರಾಳ ಕಾನೂನುಗಳು ಪ್ರಕಟವಾದವು. ಆಗ ಗಾಂಧೀಜಿ ಮದ್ರಾಸಿನಲ್ಲಿ ಪ್ರವಾಸ ಮಾಡುತ್ತಿದ್ದರು. ಕೂಡಲೇ ತಮ್ಮ ಸಂಗಡಿಗರ ಸಭೆ ಕರೆದರು. ರಾಜಾಜಿಯವರು ಆಗತಾನೆ ಪ್ರಮುಖ ವಕೀಲರೆಂದು ಪ್ರಸಿದ್ಧರಾಗಿದ್ದರು. ಅವರೊಡನೆ ಸಮಾಲೋಚಿಸಿದರು. ಈ ಸ್ನೇಹದಿಂದ ಗಾಂಧೀ ಗುಂಪಿಗೆ ಮತ್ತೊಂದು ಅನರ್ಘ್ಯರತ್ನ ಪ್ರಾಪ್ತವಾಯಿತು.

ರಾಷ್ಟ್ರಶಕ್ತಿ ಹೇಗೆ ನಿರ್ಮಾಣವಾಗಬೇಕೆಂದು ತೀವ್ರವಾಗಿ ಇಬ್ಬರೂ ಆಲೋಚಿಸಿದರು. ಆಳವಾದ ತೀಕ್ಷ್ಣ ಆತ್ಮಶೋಧನೆಯ ಗರ್ಭದಿಂದುಕ್ಕಿಬಂತು ಮೊದಲನೆಯ ರಾಷ್ಟ್ರೀಯ ಸತ್ಯಾಗ್ರಹದ ಚಿಲುಮೆ. ತಮ್ಮ ಅಂತರ್ವಾಣಿಯನ್ನು ಗೆಳೆಯರಲ್ಲಿ ನಿವೇದಿಸಿದರು ಗಾಂಧೀಜಿ.

"ಸತ್ಯಾಗ್ರಹ ಆತ್ಮಶುದ್ಧಿಯ ಮಾರ್ಗ. ನಮ್ಮದು ಧರ್ಮಯುದ್ಧ. ಧರ್ಮಕಾರ್ಯವನ್ನು ಶುದ್ಧಿಯಮೂಲಕ ಮಾಡುವುದು ಸರಿ ಎನಿಸುತ್ತದೆ. ಆದುದರಿಂದ ಭಾರತದ ಜನತೆಯೆಲ್ಲವೂ ಹರತಾಳ ಮಾಡುವಂತೆ ಸೂಚನೆ ಕೊಡಬೇಕು ಆದಿನ ತಮ್ಮ ಕೆಲಸಕಾರ್ಯಗಳನ್ನು ತಡೆದಿಟ್ಟು ಉಪವಾಸ, ಪ್ರಾರ್ಥನೆ ಮಾಡಲಿ" ಎಂದರು.

ರಾಜಾಜಿ ಮತ್ತು ಇತರ ಮಿತ್ರರೂ ಒಂದು ಚಿಕ್ಕ ಟಿಪ್ಪಣಿಯನ್ನು ಸಿದ್ಧಗೊಳಿಸಿದರು. ಇತಿಹಾಸಪ್ರಸಿದ್ಧವಾದ ಸ್ವಾತಂತ್ರ್ಯ ಸಪ್ತಾಹ ಏಪ್ರಿಲ್ 6 ರ ರಿಂದ 13 ರ ವರೆಗೆ ನಡೆಯತಕ್ಕದೆಂದು. ಎಲ್ಲಕಡೆಯೂ ಸಭೆ ಮೆರವಣಿಗೆ ಮತ್ತು ಹರತಾಳಗಳನ್ನಾಚರಿಸಬೇಕೆಂದೂ ತಮ್ಮ ಸಂದೇಶವನ್ನು ಸಾರಿದರು. ದೇಶದಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ತಮ್ಮ ಆತ್ಮಕಥೆಯಲ್ಲಿ ಈ ಅಗಾಧ ಅನಿರೀಕ್ಷಿತ ಜನತಾ ಪ್ರತಿಕ್ರಿಯೆಯನ್ನು ಕಂಡು ಬೆರಗಾಗಿ ಹೀಗೆ ಬರೆದರು.

"ಹೇಗೆ ಅದೆಲ್ಲವೂ ವ್ಯವಸ್ಥೆಯಾಯಿತೋ ಯಾರಿಗೆ ಗೊತ್ತು ? ಈ ಮೂಲೆಯಿಂದ ಆ ಮೂಲೆಯವರೆಗೆ ಹಳ್ಳಿಗಳೂ ಪಟ್ಟಣಗಳೂ, ಇಡೀ ಹಿಂದೂಸ್ಥಾನದಲ್ಲಿ ಆದಿನ ಸಂಪೂರ್ಣ ಹರಿತಾಳವನ್ನು ಆಚರಿಸಿದವು. ಆ ದೃಶ್ಯ ಬಹಳ ಭವ್ಯವಾಗಿತ್ತು."

ಗಾಂಧೀಜಿ ಅಂದಿನಿಂದ ಅಖಿಲಭಾರತದ ರಾಷ್ಟ್ರೀಯ ರಾಜಕಾರಣದ ಪ್ರಧಾನ ಸೂತ್ರಧಾರಿಗಳಾದರು. ಭಾರತ ಸರ್ಕಾರ ತನ್ನ ಸರ್ವಶಕ್ತಿಯನ್ನೂ ಪ್ರಯೋಗಿಸಿ ಅವರ ಕಾರ್ಯಚಟುವಟಿಕೆಗಳನ್ನೆಲ್ಲಾ ದಮನ ಮಾಡಲು ಸಂಕಲ್ಪಿಸಿತು. ಜನರ ಉದ್ರೇಕ ಬಲವಾಗಿ ಬೀಸತೊಡಗಿತು. ಅಲ್ಲಲ್ಲಿ ಪೋಲೀಸರಿಗೂ ಜನರಿಗೂ ಘರ್ಷಣೆಗಳಾದವು. "ಸತ್ಯಾಗ್ರಹ ಮುಖ್ಯವಾಗಿ ಸತ್ಯಸಂಧರ ಅಸ್ತ್ರ. ಸತ್ಯಾಗ್ರಹಿಗೆ ಅಹಿಂಸೆ ಒಂದು ವ್ರತ, ಶಪಥ. ಕಾಯಾ ವಾಚಾ ಮನಸಾ ಜನರು ಅಹಿಂಸೆಯನ್ನು ಪಾಲಿಸದಿದ್ದರೆ ನಾನು ಸಾಮೂಹಿಕ ಸತ್ಯಾಗ್ರಹವನ್ನು

ನಡೆಸಲಾರೆ" ಎಂದು ಬಹಿರಂಗ ಸಭೆಗಳಲ್ಲಿ ಘೋಷಿಸಿದರು ಗಾಂಧೀಜಿ. ಆದರೆ ಸಿಟ್ಟಿನಿಂದ ಕುರುಡಾದ ಅಧಿಕಾರಶಾಹಿ, ಭಯ ಮತ್ತು ಉದ್ವೇಗಗಳಿಂದ ಹುಚ್ಚಾಗಿದ್ದ ಜನಜಂಗುಳಿ ಇವೆರಡರ ಮಧ್ಯೆ ಹಿಂಸಾಕೃತ್ಯಗಳು ನಡೆದು ಹೋದವು. ಅಹಮದಾಬಾದಿನ ಕಾರ್ಮಿಕರು ದೊಂಬಿ ನಡೆಸಿಬಿಟ್ಟರು. ಕೆಲವು ಕಡೆ ಕೊಲೆಗಳಾದವು. ಅವರ ಅಪರಾಧದಲ್ಲಿ ತಾವೂ ಭಾಗಿ ಎಂಬ ತೀವ್ರವೇದನೆಯಿಂದ ಗಾಂಧೀಜಿ ಮೂರುದಿನ ಉಪವಾಸ ಮಾಡಿದರು. ಆ ಕೂಡಲೇ ಸತ್ಯಾಗ್ರಹವನ್ನು ನಿಲ್ಲಿಸಿಬಿಟ್ಟರು. ಬಹಿರಂಗವಾಗಿ "ನಾನು ಹಿಮಾಲಯದಂತಹ ಪ್ರಮಾದವನ್ನೆಸಗಿದ್ದೇನೆ. ಸವಿನಯ ಶಾಸನಭಂಗ ಮಾಡಲು ಅಧಿಕಾರ ಪಡೆಯುವ ಮುನ್ನ ಅಂತರಾರ್ಥವನ್ನರಿಯಬೇಕು. ಈ ಶಿಕ್ಷಣಕ್ಕಾಗಿ ಒಂದು ನಿಃಸ್ವಾರ್ಥ ಜನಸೇವಕರ ಸ್ವಯಂಸೇವಕದಳವನ್ನೇ ನಿರ್ಮಿಸಿದಲ್ಲದೆ ಸಾಮೂಹಿಕ ಸತ್ಯಾಗ್ರಹ ಯಶಸ್ವಿಯಾಗದು" ಎಂದರು.

ದೇಶಕ್ಕೆ ಸತ್ಯಾಗ್ರಹದ ಶಿಕ್ಷಣ ಕೊಡುವುದಕ್ಕೆಂದೇ 'ನವಜೀವನ' 'ಯಂಗ್ ಇಂಡಿಯಾ' ಪತ್ರಿಕೆಗಳು ಜನ್ಮತಾಳಿದವು. ವಾರ ವಾರವೂ ಮಹಾತ್ಮಾಗಾಂಧೀ ವಿಚಾರಧಾರೆ ಅವಿರತವಾಗಿ ನೇರವಾಗಿ ಭಾರತೀಯ ಜನತೆಯ ಹೃದಯಾಂತರಾಳವನ್ನು ಮುಟ್ಟಿ ಮನೆಮಾಡಿತು. ಸ್ವಯಂಸೇವಕದಳ ನಾಗಾಲೋಟದಲ್ಲಿ ಬೆಳೆಯತೊಡಗಿತು. ಮೇರುಸದೃಶರಾದ ಮಹಾವ್ಯಕ್ತಿಗಳನೇಕರಲ್ಲಿ ಗಾಂಧೀ ಮಾರ್ಗ ನೂತನ ದಿವ್ಯ ಚೇತನವನ್ನೇ ನಿರ್ಮಾಣ ಮಾಡಿತು. ದೇಶಬಂಧು ಚಿತ್ತರಂಜನದಾಸ್, ಸರೋಜಿನಿನಾಯಿಡು, ಮದನಮೋಹನ ಮಾಳವೀಯ, ಅಲಿಸಹೋದರರು, ಪಂಜಾಬಿನ ಸಿಂಹ ಲಾಲಾಲಜಪತ್‌ರಾಯ್. ಮೋತಿಲಾಲ್ ನೆಹರೂ ಈ ದಿಗ್ಗಂತಿಗಳ ದೀಪಮಾಲೆ ರಾಷ್ಟ್ರೀಯ ಕಾಂಗ್ರೆಸ್ಸಿನ ಅಗ್ರಪಂಕ್ತಿಯ ನಾಯಕಪಟ್ಟಿಯಲ್ಲಿ ಸೇರಿಹೋಯಿತು.

ಜಲಿಯನ್‌ವಾಲಾಬಾಗ್ ಅಮೃತಸರದ ಒಂದು ಭಾಗ. 1919 ರ ಏಪ್ರಿಲ್ 13 ರಂದು ಅಲ್ಲಿ ರಾಷ್ಟ್ರೀಯ ಸಪ್ತಾಹದ ಸಾರ್ವಜನಿಕ ಸಭೆ ನಡೆಯಿತು. ಸುತ್ತಲೂ ಗೋಡೆಗಳಿಂದ ಆವೃತವಾಗಿದ್ದ ಸಣ್ಣ ಸ್ಥಳ ಅದು. ವೈಶಾಖೀ ಹಬ್ಬದ ದಿನ ಗುಂಪು ಕಿಕ್ಕಿರಿದು ಸೇರಿತ್ತು. ಈ ಸಭೆಯನ್ನು ಚದುರಿಸಲು ಜನರಲ್ ಡೈಯರ್ ಎಂಬ ಬ್ರಿಟಿಷ್ ಅಧಿಕಾರಿ ಸೈನ್ಯಪಡೆಯೊಂದನ್ನು ಹಠಾತ್ತನೆ ಗುಂಪಿನಮೇಲೆ ಎರಗಿಸಿ ನಾಲ್ಕೂ ದಿಕ್ಕುಗಳಿಂದ ಎಡಬಿಡದೆ ಗುಂಡಿನ ಮಳೆಯನ್ನೇ

ಸುರಿಸಿಬಿಟ್ಟ. ಬೋನಿನಲ್ಲಿ ಸಿಕ್ಕ ಮೂಕಜಂತುಗಳ ಸಮೂಹದಂತೆ ಸಾವಿರಾರು ಜನ ಹೆಂಗಸರೂ ಮಕ್ಕಳೂ ಗುಂಡಿನೇಟಿಗೆ ತುತ್ತಾಗಿ ಮಡಿದರು. ಇತಿಹಾಸದಲ್ಲೇ ಕಂಡರಿಯದ ಈ ನರಹತ್ಯೆ, ಕಗ್ಗೊಲೆ ರಾಷ್ಟ್ರವನ್ನೆಲ್ಲಾ ತಲ್ಲಣಿಸಿ ಬಿಟ್ಟಿತು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಈ ರಾಕ್ಷಸೀಕೃತ್ಯ ಬರಸಿಡಿಲಿನಂತೆ ಗಾಂಧೀಜಿಯ ಅಂತರಾಳವನ್ನೇ ಕಂಪಿಸಿಬಿಟ್ಟಿತು. ಬ್ರಿಟಿಷ್ ಸರ್ಕಾರದಲ್ಲಿ ಅವರು ಇಟ್ಟುಕೊಂಡಿದ್ದ ಭರವಸೆಯೆಲ್ಲ ಸಂಪೂರ್ಣವಾಗಿ ನಾಶವಾಯಿತು. ಕವಿ ರವೀಂದ್ರರು ಪ್ರತಿಭಟಿಸಿ ತಮ್ಮ 'ಸರ್' ಪದವಿಯನ್ನು ನಿರಾಕರಿಸಿಬಿಟ್ಟರು. ಗಾಂಧಿಯವರು ತಮ್ಮ ಕೈಸರ್-ಇ-ಹಿಂದ್ ಪದಕವನ್ನು ವೈಸರಾಯರಿಗೆ ಹಿಂತಿರುಗಿಸಿದರು. ಸಂಪೂರ್ಣ ಸ್ವಾತಂತ್ರ್ಯ ಅಂದಿನಿಂದ ದೇಶದ ನಾಯಕ ರೆಲ್ಲರ ಏಕೈಕ ಗುರಿಯಾಯಿತು.

೮

ಸಬರ್ಮತಿಯ ಸತ್ಯಾಗ್ರಹ ಆಶ್ರಮ ಅಖಿಲಭಾರತೀಯ ರಾಜಕಾರಣದ ಕೇಂದ್ರಸ್ಥಾನವಾಯಿತು. ಆಶ್ರಮದ ನಿಯಮಗಳು, ಸಾಮೂಹಿಕ ಪ್ರಾರ್ಥನೆ, ಆತ್ಮನಿರೀಕ್ಷಣೆಯ ನಿಷ್ಠುರ ಕ್ರಮಗಳು, ಪ್ರಾಯಶ್ಚಿತ್ತರೂಪದ ಉಪವಾಸ ವ್ರತಗಳು, ಸ್ವಯಂಪ್ರೇರಿತ ಬಡತನದಲ್ಲಿ ಅಭಿರುಚಿ ಇವು ದೇಶದ ಸಹಸ್ರಾರು ಸುಶಿಕ್ಷಿತ ಮೇಧಾವೀ ಯುವಕರನ್ನು ಪ್ರಭಾವಯುತವಾಗಿ ಆಕರ್ಷಿಸಿದುವು. ಬಾಳಿಗೆ ಒಂದು ಹೊಸ ನಂಬಿಕೆ, ಜೀವನಕ್ಕೆ ಒಂದು ಉದಾತ್ತ ಧ್ಯೇಯ, ಸಮಾಜಕ್ಕೊಂದು ದಿವ್ಯ ಆದರ್ಶ, ವ್ಯಕ್ತಿಜೀವನಕ್ಕೊಂದು ಸೇವಾದೀಕ್ಷೆ ಒಮ್ಮೆಲೇ ಸ್ಫುರಿಸಿದಂತಾಯಿತು. ದೇಶನಾಯಕರೆಲ್ಲ ಒಂದಲ್ಲ ಒಂದು ರೀತಿಯಲ್ಲಿ ನೂರಾರು ಆಶ್ರಮರೀತಿಯ ಸಂಸ್ಥೆಗಳನ್ನು ಕಟ್ಟಿದರು. ಜನಜೀವನದಲ್ಲಿ ಸ್ವಾತಂತ್ರ್ಯದ ಹೊಂಬೆಳಗು ದೇದೀಪ್ಯಮಾನವಾಗುತ್ತಿತ್ತು. ಪ್ರೇಮಪಥವೊಂದನ್ನು ಗಾಂಧೀಜಿ ಅನಾವರಣಮಾಡಿ ನಿಶ್ಶಸ್ತ್ರ ದುರ್ಬಲ ಭಾರತೀಯರಲ್ಲಿ ಉಜ್ವಲ ಧೀಶಕ್ತಿ ತುಂಬಿದರು.

ನವೋನವವೂ ಸಾಂಪ್ರದಾಯಿಕ ಕ್ರಾಂತಿಸಾಧನಗಳಿಗೆ ತೀರ ಭಿನ್ನವೂ, ಭಾರತೀಯ ಸಂಸ್ಕೃತಿಗೆ ಸ್ವಭಾವ ಸಹಜವೂ ಆದ ಮಾರ್ಗವೊಂದು ಮೂಕ ಜನಕೋಟಿಗೆ ಚೈತನ್ಯ ತುಂಬಿ ನಡೆಸಹತ್ತಿತು. ಉಗ್ರವಾದಿಗಳನೇಕರು ಈ ಪ್ರಭಾವಕ್ಕೆ ಮಾರುಹೋದರು. ಸತ್ಯಾಗ್ರಹ ಭಾರತ ಸ್ವಾತಂತ್ರ್ಯ ಸಮರದ

ಏಕೈಕ ಸಾಧನವಾಯಿತು. ಈ ಕಾಲಕ್ಕೆ ಭಾರತರತ್ನ ಜವಹರಲಾಲರು ಬಿಸಿ ರಕ್ತದ ಮೇಧಾವೀ ಯುವಕ. ಆಗತಾನೇ ಪಾಶ್ಚಾತ್ಯ ವಿದ್ಯಾಭ್ಯಾಸದಲ್ಲಿ ವಿಜೇತರೆನಿಸಿ ಭಾರತಕ್ಕೆ ಹಿಂತಿರುಗಿದ್ದರು. ತೀವ್ರವಾದ ರಾಷ್ಟ್ರೀಯತೆ ಅವರಲ್ಲಿ ಜಾಗೃತವಾಗಿತ್ತು. ದೂರದಿಂದ ಕೇವಲ ಗ್ರಾಮೀಣ ಹಠಮಾರಿತನದ ಕಗ್ಗಲ್ಲಿನಲ್ಲಿ ಕಡೆದ ಸಾಧು ಸಂತಸಂತೆ ಕಂಡ ಈ ಮಹಾತ್ಮ ಅತ್ಯಾಧುನಿಕ ರಾಜಕಾರಣ ಪಟುವೂ ಹೌದು ಎಂದು ಅತಿ ನಿಕಟ ಸಾಮೀಪ್ಯದಿಂದ ಅರಿತರು ಜವಹರಲಾಲರು.

'ವಿಶ್ವ ಇತಿಹಾಸದ ಇಣುಕು ನೋಟ'ದ ಪುಟಗಳಲ್ಲಿ ಭಾರತದ ಕ್ಷಿತಿಜದಲ್ಲಿ ಉದಯಿಸಿ ನಿಂತ ಈ ನೂತನ ತೇಜಸ್ವೀ ನಾಯಕನನ್ನು ಕುರಿತು ಅವರು ಹೀಗೆ ಬರೆದರು.

"ಈ ವಾಣಿ ಇತರರಿಗಿಂತ ಏಕೋ ಭಿನ್ನವಾಗಿ ಕೇಳಿಸಿತು. ಕ್ಷೀಣವಾದ ಕಿರುದನಿಯ ನಿನಾದವಾದರೂ ಜನಜಂಗುಳಿಯ ಗದ್ದಲವನ್ನು ಮೀರಿ ಕೇಳಿಸುತ್ತಿತ್ತು. ಮೆಲುದನಿಯ ಕೋಮಲತೆಯ ಅಂತರಾಳದಲ್ಲಿ ಯಾವುದೋ ಉಕ್ಕಿನ ಶಕ್ತಿ ಅಡಗಿದ್ದಂತೆ ಭಾಸವಾಗುತ್ತಿತ್ತು. ವಿನಯಪೂರ್ಣ ಪ್ರಾರ್ಥನಾರೂಪದ ಮಾತುಗಳಾದರೂ ಯಾವುದೋ ಗಂಭೀರ ಸುದೃಢ ಧ್ವನಿ ತುಂಬಿ ಬರುತ್ತಿತ್ತು......ಅವರ ವಾಣಿಯ ಹಿಂದೆ ಅಗಾಧ ಶ್ರದ್ಧೆ ಇತ್ತು. ಆ ಪ್ರಶಾಂತ ಸೌಹಾರ್ದತೆಯ ಗರ್ಭದಲ್ಲಿ ಅಗಾಧ ಕರ್ಮಶಕ್ತಿಯ ಛಾಯೆ ಕಾಣಿಸುತ್ತಿತ್ತು. ಅನ್ಯಾಯಕ್ಕೆ ಎಂದಿಗೂ ಮಣಿಯದೆ ನಿಲ್ಲುವ ಸಂಕಲ್ಪ ಮೈವೆತ್ತು ನಿಂತಿರುತ್ತಿತ್ತು. ಇಂದು ನಮಗೆಲ್ಲ ಚಿರಪರಿಚಿತವಾಗಿರುವ ಈ ಗಾಂಧೀವಾಣಿ 1919 ರಲ್ಲಿ ಅಷ್ಟೇನೂ ಜನಜನಿತವಾಗಿರಲಿಲ್ಲ. ಆದರೂ ನಾವು ಈ ಧ್ವನಿಯಿಂದ ರೋಮಾಂಚಿತರಾದೆವು. ಖಂಡನೆ ಮಂಡನೆಗಳ ಸಭೆ ಭಾಷಣಗಳ ತುಮುಲ ರಾಜಕೀಯಕ್ಕಿಂತ ಇದು ಬೇರೆಯಾಗಿತ್ತು. ಕ್ರಿಯಾತ್ಮಕ ರಾಜಕಾರಣ ಇಲ್ಲಿ ಒಡಮೂಡಿತ್ತು. ಸತ್ಯ ಮತ್ತು ಪ್ರೇಮಗಳ ಬುನಾದಿಯ ಮೇಲೆ ಒಂದು ಹೊಸ ರಾಜ್ಯಶಾಸ್ತ್ರವೇ ರಚನೆಯಾಗುತ್ತಿತ್ತು..."

ಹೀಗೆ ಹೊರಸೂಸಿ ಹೊಮ್ಮಿ ಹರಡಿದ ಗಾಂಧೀಶಕ್ತಿ ಸತತವಾಗಿ ದಿಗ್ವಿಜಯಗಳನ್ನು ಸಾಧಿಸುತ್ತಾ ಮುಂದೆ ಸಾಗುತ್ತಿತ್ತು. ಭಾರತದ ಏಳು ಲಕ್ಷ ಹಳ್ಳಿಗಳ ಮೂವತ್ತುಕೋಟಿ ಹೃದಯಗಳನ್ನು ಮುಟ್ಟಿ ನಿಲ್ಲುತ್ತಿತ್ತು. ಆರ್ಥಿಕ ಸಾಮಾಜಿಕ ಪುನರ್ರಚನೆಯ ಓಮಾಲಯ ಪ್ರಯತ್ನಗಳನ್ನೇ ಕೈಗೊಂಡರು

ಗಾಂಧೀಜಿ. ಖಾದಿ ಗ್ರಾಮೋದ್ಯೋಗಗಳ ಪುನರುತ್ಥಾನ. ಜಾತೀಯ ಐಕ್ಯತೆ. ಆರ್ಥಿಕ ಸಮತೆ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿರೋಧ. ಮಹಿಳೆಯರ ಏಳಿಗೆ. ರಾಷ್ಟ್ರಭಾಷಾ ಪ್ರಚಾರ, ಮೂಲಶಿಕ್ಷಣ. ಗ್ರಾಮನೈರ್ಮಲ್ಯ ಮುಂತಾದ ಹದಿನೆಂಟು ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿದರು. ಸರ್ವೋದಯ ಸಮಾಜದ ಸಂಪೂರ್ಣ ಚಿತ್ರವನ್ನು ಕಟ್ಟಿ ನಿಲ್ಲಿಸಿದರು.

"ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು" ಎಂದರು ಲೋಕಮಾನ್ಯತಿಲಕ್. "ಸ್ವಾವಲಂಬನೆಯೇ ಸ್ವರಾಜ್ಯದ ತಿರುಳು. ಸ್ವಪ್ರಯತ್ನದಿಂದಲೇ ಭಾರತೀಯರಾದ ನಾವು ಅದನ್ನು ಸಾಧಿಸಬೇಕು. ಸಾಮ್ರಾಜ್ಯಶಾಹಿಯೊಡನೆ ಸಂಪೂರ್ಣ ಸವಿನಯ ಅಸಹಕಾರ ನಮಗಿರುವ ಏಕೈಕ ಮಾರ್ಗ" ಎಂದರು ಗಾಂಧೀಜಿ. ಲೋಕಮಾನ್ಯರು 1920 ರಲ್ಲಿ ಬೊಂಬಾಯಿನಲ್ಲಿ ನಿಧನರಾದರು. ಅದಕ್ಕೆ ಮುಂಚೆಯೇ ಗೋಖಲೆಯವರು ಕಾಲವಾಗಿದ್ದರು. ದೇಶದ ದಿಗಂತದಲ್ಲಿ ಜನಮನದ ಪ್ರಧಾನ ಪ್ರೇರಕ ಶಕ್ತಿಯಾದರು ಗಾಂಧೀಜಿ. ಕಾಂಗ್ರೆಸ್ ಮಹಾಸಂಸ್ಥೆಯ ಸೂತ್ರಧಾರಿಗಳೂ ಆದರು.

ದಾಸ್ಯ ಮತ್ತು ದಾರಿದ್ರ್ಯ ದೇಶದ ಹೃದಯವನ್ನು ಹಿಂಡುತ್ತಿತ್ತು. ಸಂಸ್ಕೃತಿಯ ನೆಲೆಯನ್ನು ನಾಶಮಾಡುತ್ತಿತ್ತು. ಸ್ವಾಭಿಮಾನದ ಬೇರುಗಳನ್ನು ಕೀಳುತ್ತಿತ್ತು. ವಿದ್ಯಾವಂತವರ್ಗ ವಿದೇಶೀ ಸಾಮ್ರಾಟರ ಬಾಲಬಡಕ ಪರಿಚಾರಿಕೆಗಳನ್ನು ಸಂತೋಷದಿಂದ ಕೈಗೊಳ್ಳುವುದನ್ನು ನೋಡಿ ಗಾಂಧೀಜೀ ಪ್ರಬಲವಾಗಿ ಪ್ರತಿಭಟಿಸಿದರು. ಪಾಶ್ಚಾತ್ಯ ಪ್ರಭಾವಗಳನ್ನು ಪೂರ್ಣವಾಗಿ ಹಿಮ್ಮೆಟ್ಟಿಸಿ ಭಾರತೀಯತೆಯ ಅಡಿಗಲ್ಲುಗಳನ್ನು ಸರಿಪಡಿಸದಿದ್ದರೆ ಪೂರ್ಣನಾಶ ಖಂಡಿತ ಎಂದು ಎಚ್ಚರಿಸಿದರು. ಅಸಹಕಾರ ಚಳುವಳಿ 1920 ರ ಆಗಸ್ಟ್‌ನಲ್ಲಿ ಪ್ರಾರಂಭವಾಗಬೇಕೆಂದು ಘೋಷಿಸಲ್ಪಟ್ಟಿತ್ತು. ಹಠಾತ್ತನೆ ಲೋಕಮಾನ್ಯ ತಿಲಕರು ನಿಧನರಾದುದರಿಂದ ಅದು ಮುಂದೆ ಹೋಯಿತು. ತುರ್ಕಿ ದೇಶಕ್ಕೆ ಆಗ ಆಗಿದ್ದ ಅನ್ಯಾಯದ ಬಗ್ಗೆ ಇಂಗ್ಲೆಂಡಿನ ಮೇಲೆ ಕ್ರೋಧಗೊಂಡಿದ್ದ ಭಾರತೀಯ ಮುಸ್ಲಿಮರು ಖಿಲಾಫತ್ ಚಳುವಳಿಯನ್ನು ಗಾಂಧೀಜಿಯವರ ನಾಯಕತ್ವದಲ್ಲೇ ಪ್ರಾರಂಭಿಸಿದರು. ದೇಶಾದ್ಯಂತ ಹಿಂದೂ ಮುಸ್ಲಿಂ ಐಕ್ಯತೆಯ ಭಾವಪ್ರವಾಹ ಉಕ್ಕಿ ಹರಿದುದನ್ನು ಕಂಡು ಬ್ರಿಟಿಷ್ ಸಾಮ್ರಾಟರು ದಿಗ್ಭ್ರಮೆಗೊಂಡರು. ಈ ಐಕ್ಯವನ್ನು ಮುರಿಯದಿದ್ದರೆ ತಮ್ಮ ಇಡೀ ಸಾಮ್ರಾಜ್ಯ

ಮುಳುಗಿಹೋಗುವುದೆಂದು ಚಾಣಾಕ್ಷ ಬ್ರಿಟಿಷರು ಹಿಂದೂಮುಸಲ್ಮಾನರ ಮಧ್ಯೆ ಸಾವಿರರೀತಿಯ ಭೇದದ ಬೆಣೆಗಳನ್ನು ಪ್ರಬಲವಾಗಿ ಹೊಡೆದು ನಿಲ್ಲಿಸಿದರು. ಅಲ್ಪಸಂಖ್ಯಾತರ ಹಕ್ಕುಬಾಧ್ಯತೆಗಳು ಪ್ರತ್ಯೇಕವೆಂದು ಪರಿಗಣಿಸಲ್ಪಟ್ಟವು. ಅವರ ಮತೀಯ ಪ್ರಭೇದಗಳನ್ನು ಒತ್ತಿ ಪ್ರಚಾರಮಾಡಿದರು. ಹಲವಾರು ಪ್ರಚಾರಕರನ್ನು ಪ್ರಲೋಭನೆಗಳಿಂದ ಆಕರ್ಷಿಸಿ 'ಇಸ್ಲಾಂಧರ್ಮದ ನಾಶ ವಾಗುತ್ತಿದೆ' ಎಂದು ಹೂಲಿ ಎಬ್ಬಿಸಿದರು. ಸನಾತನಿ ಹಿಂದುಗಳ ಅಂಧ ಸಂಪ್ರದಾಯಗಳಿಗೂ ಇತರ ಮತಗಳು ಪ್ರತ್ಯೇಕವಾಗಿ ಸಂಘಟಿತವಾಗು ವಂತಹ ಸಾಂಪ್ರದಾಯಿಕ ಸಂಸ್ಥೆಗಳಿಗೂ ವಿಶೇಷ ಪ್ರೋತ್ಸಾಹ ಕೊಟ್ಟರು. ಮುಂದೆ ಹತ್ತು ಹದಿನೈದು ವರ್ಷಗಳೊಳಗಾಗಿ ಭಾರತದ ಮುಸ್ಲಿಮರು ತಾವು ಪ್ರತ್ಯೇಕ ರಾಷ್ಟ್ರವನ್ನೇ ಇಸ್ಲಾಂಧರ್ಮದ ತಳಹದಿಯ ಮೇಲೆ ಕಟ್ಟಬೇಕೆಂಬ ಸಂಕಲ್ಪ ಮಾಡಿದರು. ಹಿಂದೂ ಸಂಸ್ಕೃತಿಯ ವಿಕಲ್ಪರೂಪವನ್ನೇ ಪ್ರಪಂಚದಲ್ಲಿ ಪ್ರಚಾರಮಾಡುತ್ತಿದ್ದ ಕ್ರಿಶ್ಚಿಯನ್ ಪಾದ್ರಿಗಳಿಗೆ ಸರ್ಕಾರದ ಬೆಂಬಲ ಸಿಕ್ಕಿತು. ಅಸ್ಪೃಶ್ಯತೆಯ ದಾರುಣ ವ್ರಣವನ್ನು ಹಿಂದೂ ಸಮಾಜದಿಂದ ತೊಡೆದು ಹಾಕಲು ಅಗಾಧ ಪ್ರಯತ್ನ ಕೈಗೊಂಡಿದ್ದ ಗಾಂಧೀಜಿಗೆ ಈ ಕಾರ್ಯದಲ್ಲಿ ನೂರಾರು ಅಡಚಣೆಗಳನ್ನು ದೇಶೀಯರಿಂದಲೇ ರಚಿಸಿದರು. ಕೊನೆಗೆ ಎಂಟುಕೋಟಿ ಹರಿಜನರನ್ನು ಪ್ರತ್ಯೇಕ ಜಾತಿಯೆಂದೇ ಭಾವಿಸಲು ರಾಜಕೀಯ ಕುಟಿಲ ನೀತಿಯಿಂದ ಅವರ ನಾಯಕರನ್ನು ಹುರಿದುಂಬಿಸಿ ಎತ್ತಿಕಟ್ಟಿದರು. ಆದರೆ ಆಮರಣಾಂತ ಉಪವಾಸಗಳ ವ್ರತತೊಟ್ಟು ಪ್ರಾಣಾರ್ಪಣೆಗೆ ಸಿದ್ಧರಾದ ಮಹಾತ್ಮರ ನಿಸ್ಸೀಮ ಸಾಹಸದಿಂದ ರಾಷ್ಟ್ರ ಅವರ ಹಿಂದೆ ಒಕ್ಕೂಟವಾಗಿಯೇ ನಿಂತು ಸಂಗ್ರಾಮಕ್ಕೆ ಸನ್ನದ್ಧವಾಯಿತು.

ಅಸಹಕಾರ ಚಳುವಳಿ ಜೀವನದ ಸಮಸ್ತ ರಂಗಗಳನ್ನೂ ವ್ಯಾಪಿಸಿ ನಿಲ್ಲುತ್ತಿತ್ತು. ಪಂಡಿತ ಮೋತಿಲಾಲ್ ನೆಹರೂ, ದೇಶಬಂಧು ಚಿತ್ತರಂಜನ ದಾಸ್, ಪಂಡಿತ ಮಾಳವೀಯ. ರಾಜೇಂದ್ರ ಪ್ರಸಾದ್, ಮೌಲಾನಾ ಅಜಾದ್, ರಾಜಾಜಿ ಈ ಸೀಮಾ ಪುರುಷರ ಅದ್ಭುತ ತ್ಯಾಗ ಜನರ ಕಣ್ಣು ಕೋರೈಸುವಂತೆ ಪ್ರಜ್ವಲಿಸಿತು. ಲಕ್ಷಾಂತರ ರೂಪಾಯಿ ಗಳಿಕೆಯ ವಕೀಲವೃತ್ತಿಯನ್ನೂ ಬ್ರಿಟಿಷ್ ಅಧಿಕಾರಿಗಳೊಡನೆ ಸಂಪರ್ಕ ಸಹಕಾರಗಳನ್ನೂ ಪೂರ್ಣವಾಗಿ ತ್ಯಜಿಸಿ ಬಿಟ್ಟರು. ಜನಾಧಾರಿತ ಸರಳ ಜೀವನದ ಸಾಧುಗಳಾಗಿ ಗಾಂಧೀಜಿಯ ಬೆನ್ನು

ಹಿಂದೆ ಸಾಲುಗಟ್ಟಿ ನಿಂತರು. ಲಕ್ಷಾಂತರ ಜನ ಕೋರ್ಟು ಕಛೇರಿಗಳಿಗೆ ಬಹಿಷ್ಕಾರ ಹಾಕಿದರು. ವಿದ್ಯಾರ್ಥಿಗಳು ತಂಡತಂಡವಾಗಿ ಸರ್ಕಾರೀ ಶಾಲೆಗಳನ್ನು ತ್ಯಜಿಸಿದರು. ಬ್ರಿಟಿಷ್ ಸರ್ಕಾರದ ಬಿರುದುಗಳನ್ನು ಅನೇಕರು ಬಿಸುಟರು. ಚುನಾವಣೆಗಳನ್ನು ಬಹಿಷ್ಕರಿಸಿದರು. ರಾಜೀನಾಮೆಗಳ ಸುರಿಮಳೆಯಾಯಿತು. ಸ್ವದೇಶೀ ಚಳುವಳಿ, ಪರದೇಶೀ ವಸ್ತ್ರದಹನ, ಖಾದೀ ಪ್ರಚಾರ. ಗ್ರಾಮ ಸ್ವಾವಲಂಬನ ಸಂಕಲ್ಪ ಇವುಗಳು ಅಸಹಕಾರದ ಸಾವಿರ ಮುಖಗಳನ್ನು ಬೆಳೆಸಿದವು.

ಎರಡುವರ್ಷ ಆರೋಹಣದ ಪ್ರಗತಿಪಥದಲ್ಲಿದ್ದ ಪ್ರಚಂಡ ಸತ್ಯಾಗ್ರಹ ಹಠಾತ್ತನೆ ಹಿಂಸಾತ್ಮಕ ವಿಧ್ವಂಸಕ ಘೋರ ಘಟನೆಗಳಕಡೆ ಧಾವಿಸಿಬಿಟ್ಟಿತು. ಉತ್ತರ ಪ್ರದೇಶದ ಚೌರಿ ಚೌರ ಎಂಬ ಸಣ್ಣ ಹಳ್ಳಿಯಲ್ಲಿ ಉದ್ರೇಕಗೊಂಡ ಜನಸಮೂಹವೊಂದು ಪೋಲೀಸ್‌ಠಾಣೆಯೊಂದರಲ್ಲಿ ಹಲವು ಪೋಲೀಸರನ್ನೇ ಕೂಡಿ ಬೆಂಕಿಹತ್ತಿಸಿ ಸುಟ್ಟುಬಿಟ್ಟಿತು. ಈ ಅಮಾನುಷ ಪಾಪಕೃತ್ಯ ಗಾಂಧೀಜಿಯ ಅಂತರಾಳವನ್ನು ಕಲಕಿತು. ಅದರ ಸೊಂಕು ಮಿಕ್ಕಕಡೆಯೂ ಹಬ್ಬುವ ಸೂಚನೆಗಳನ್ನು ಕಂಡು ಆ ಕೂಡಲೇ ಯಾವ ಅಡ್ಡದಾರಿಗೂ ಆಸ್ಪದಕೊಡದಂತೆ ಸತ್ಯಾಗ್ರಹ ಸಮರವನ್ನೇ ನಿಲ್ಲಿಸಿಬಿಟ್ಟರು. ಸಹಸ್ರಾರು ಮಹಾ ನಾಯಕರು ಸೆರೆಯಲ್ಲಿದ್ದರು. ದೇಶವೆಲ್ಲ ಸಮರೋತ್ಸಾಹದಿಂದ ತುಂಬಿ ತುಳುಕುತ್ತಿತ್ತು. ಸ್ವರಾಜ್ಯದ ಸವಿಗನಸು ನನಸಾಗುವ ಆಶಾಕಿರಣ ಉದಯವಾಗುತ್ತಿತ್ತು. "ಆದರೆ ದ್ವೇಷ ಹಿಂಸೆ ಲೂಟಿ ದಂಗೆಗಳ ರಾಕ್ಷಸೀಪಥದಲ್ಲಿ ಜಯ ಲಭಿಸಿದರೂ ಅದೊಂದು ನರಕವೇ ಆದೀತು" ಎಂದರು ಗಾಂಧೀಜಿ. ಅಹಿಂಸೆ ಹಾಗೂ ವಿಶ್ವಪ್ರೇಮದ ಗಂಭೀರ ರಥ ಆಕಸ್ಮಿಕವಾಗಿ ರಕ್ತದ ಕೆಸರಿನಲ್ಲಿ ಹೂತು ಹೋಯಿತು. 1922 ರ ಫೆಬ್ರುವರಿಯಲ್ಲಿ ಕಾಯಿದೆಭಂಗ ಚಳುವಳಿಯನ್ನು ನಿಲ್ಲಿಸಿ ಗಾಂಧೀಜಿ ಐದು ದಿನಗಳ ಉಪವಾಸ ಕೈಗೊಂಡರು. ಆದರೂ ಸೇಡಿನಿಂದ ಕುರುಡರಾಗಿದ್ದ ಅಧಿಕಾರವರ್ಗ ದೇಶದ್ರೋಹದ ಅಪರಾಧಗಳನ್ನು ಅವರ ಮೇಲೆ ಹೊರಿಸಿ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಬರೆದ ಮೂರು ಲೇಖನಗಳಿಗಾಗಿ ಆರುವರ್ಷ ಕಠಿಣಸಜ ವಿಧಿಸಿತು. ಇತಿಹಾಸ ಪ್ರಸಿದ್ಧವಾದ ಈ ಮೊಕದ್ದಮೆಯಲ್ಲಿ ನ್ಯಾಯಾಧೀಶ ಬ್ರೂಮ್‌ಫೀಲ್ಡ್ ಈ ಲೋಕವಂದ್ಯ 'ಅಪರಾಧಿ'ಗೆ ಕೊಡುವ 'ಶಿಕ್ಷೆ' ಯಿಂದ ತಾವೇ ಪರಾಜಿತರಾದರೆಂದು

ಭಾವಿಸಿದರು. ಇಡೀ ಬ್ರಿಟಿಷ್ ಚಕ್ರಾಧಿಪತ್ಯ ಲೋಕದ ನೈತಿಕನ್ಯಾಯಾಲಯದಲ್ಲಿ ಪರಾಭವ ಹೊಂದಿತು. ಗಾಂಧೀಪ್ರಭಾವ ಸಾವಿರಪಟ್ಟು ಉಜ್ವಲಗೊಂಡಿತು.

೯

ಮುಂದೆ ಎಂಟು ವರ್ಷಗಳ ಕಾಲ ದೇಶದ ಸತ್ವಪರೀಕ್ಷೆಯಾಗತೊಡಗಿತು. ಬ್ರಿಟಿಷ್ ವೈಸರಾಯರಾಗಿ ಬಂದವರೆಲ್ಲರೂ ರಾಷ್ಟ್ರೀಯ ಭಾವನೆಗಳನ್ನೆಲ್ಲ ಕ್ರೂರವಾಗಿ ದಮನ ಮಾಡತೊಡಗಿದರು. ಸೆರೆಮನೆಯಲ್ಲಿದ್ದ ಗಾಂಧೀಜಿಗೆ ತೀವ್ರವಾದ ಕರುಳುರೋಗ ಬಂದಿತು. ಪುಣೆಯ ಸೈನ್ಯಾಧಿಕಾರಿ ವೈದ್ಯರಾಗಿದ್ದ ಕರ್ನಲ್ ಮೆಡಾಕ್ ಶಸ್ತ್ರಚಿಕಿತ್ಸೆಮಾಡಿದರು. ದೇಶವೆಲ್ಲ ಕಾತುರದಿಂದ ಪರಿತಪಿಸಿತು. ಬಂಧನದಲ್ಲಿದ್ದಾಗಲೇ ಈ ಘಟನೆಗಳು ನಡೆದು ಜನರಲ್ಲಿ ಅನೇಕ ವದಂತಿಗಳು ಹರಡಿ ಬ್ರಿಟಿಷರ ಕ್ರೌರ್ಯವೇ ಕಾರಣವೆಂದು ಪ್ರಚಲಿತವಾಗಹತ್ತಿತು. ಸತ್ಯವ್ರತರಾದ ಗಾಂಧೀಯವರೇ ಸರ್ಕಾರದ ಗೌರವ ರಕ್ಷಣೆ ಮಾಡಿದರು. 1924 ರಲ್ಲಿ ಅವರನ್ನು ಬಿಡುಗಡೆಮಾಡಿ ಆರೋಗ್ಯ ಸುಧಾರಿಸಿಕೊಳ್ಳಲು ಅವಕಾಶ ಕೊಟ್ಟಾಗ ತಮ್ಮ ಚಿಕಿತ್ಸೆಯ ಜವಾಬ್ದಾರಿ ಹೊತ್ತು ಸೇವೆಮಾಡಿದ ಸೈನ್ಯಾಧಿಕಾರಿಗಳನ್ನೂ ಬಂದೀಖಾನೆಯ ಅಧಿಕಾರಿಗಳನ್ನೂ ವಂದಿಸಿದರು. ಅವರ ಧೀರ ಗಂಭೀರ ವ್ಯಕ್ತಿತ್ವ ಮತ್ತಷ್ಟು ಎತ್ತರಕ್ಕೇರಿತು. ಸೆರೆಮನೆಯಿಂದ ಹೊರಗಿದ್ದರೂ ತಮ್ಮ ವಾಗ್ದಾನದಂತೆ ಮುಂದಿನ ಆರು ವರ್ಷಗಳನ್ನು ಕೇವಲ ರಚನಾತ್ಮಕ ಕಾರ್ಯ ಚಟುವಟಿಕೆಗಳಲ್ಲೇ ಕಳೆದರು. ಸ್ವದೇಶೀ ವ್ರತ ಅವರ ಪ್ರಧಾನ ಆಸಕ್ತಿಯ ಕಾರ್ಯಕ್ರಮವಾಯಿತು. ಖಾದಿ ಗ್ರಾಮೋದ್ಯೋಗ ಸಂಘ ಮತ್ತಿತರ ಅಖಿಲಭಾರತ ನಿರ್ಮಾಣಕಾರ್ಯ ಸಂಘಗಳು ರಚಿತವಾದವು. ದೇಶದಲ್ಲೆಲ್ಲಾ ಸಂಚರಿಸಿ ಈ ಕಾರ್ಯಕ್ಕೆ ನಿಧಿಯನ್ನು ಶೇಖರಿಸಿದರು. ಭಾರತದ ಪೂರ್ಣಶಕ್ತಿಯ ಸಂಕೇತವಾಗಿ ತ್ರಿವಿಕ್ರಮ ಸ್ವರೂಪಕ್ಕೆ ಬೆಳೆದು ನಿಂತರು ಮಹಾತ್ಮಾ ಗಾಂಧೀ. ಅವರ ಅಜೇಯ ಅದ್ಭುತ ಅಸಾಧಾರಣ ತೇಜಸ್ಸು ಕೋಟ್ಯಾಂತರ ಭಾರತೀಯರ ಆಶಾಕಿರಣದಂತೆ ವ್ಯಾಪಿಸಿ ಹರಿಯತೊಡಗಿತು. 'ಭಾರತ ಎಂದರೆ ಗಾಂಧೀ, ಗಾಂಧೀ ಎಂದರೆ ಭಾರತ' ಎನ್ನುವುದು ಲೋಕರೂಢಿಯಾಯಿತು.

"ಈ ಅರಬೆತ್ತಲೆಯ ಸನ್ಯಾಸಿ ಬ್ರಿಟಿಷ್ ಸಾಮ್ರಾಜ್ಯದ ಅತ್ಯುನ್ನತ ಪ್ರತಿನಿಧಿಯಾದ ವೈಸರಾಯರೊಂದಿಗೆ ತನ್ನ ರಾಷ್ಟ್ರಪ್ರತಿನಿಧಿಯಂತೆ ಭೇಟಿಯಾಗುವುದನ್ನು ನಾನು ನೋಡಿ ಸಹಿಸಲಾರೆ" ಎಂದೊಮ್ಮೆ ಬ್ರಿಟಿಷ್ ಪ್ರಧಾನಿ ಚರ್ಚಿಲ್ ಉದ್ಗಾರ ತೆಗೆದರು. ಆದರೆ ಭಾರತದ ಸೌಮ್ಯತೇಜಸ್ಸು ಈ ಪ್ರತಿನಿಧಿಯ ಪ್ರತೀಕದಲ್ಲಿ ಅಚಲವಾಗಿ ನೆಲೆಸಿಬಿಟ್ಟಿತ್ತು. 'ಬ್ರಿಟಿಷ್ ಸಿಂಹ' ದ ಘರ್ಜನೆ ಈ ಶೀತಲ ಹಿಮಾಲಯವನ್ನು ಎಂದಿಗೂ ನಡುಗಿಸಲಾರದೆ ಹೋಯಿತು. ಅಲೆ ಅಲೆಯಾಗಿ ಉಕ್ಕಿಬಂದ ಸತ್ಯಾಗ್ರಹ ಸಮರಗಳ ಪರಂಪರೆಗೆ ಅತ್ಯುನ್ನತ ಅಧಿಕಾರಶಾಹಿಯೂ ಮಣಿಯಬೇಕಾಯಿತು.

1924 ರಲ್ಲಿ ಗಾಂಧೀಜಿ ಕರ್ನಾಟಕದ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾದರು. ಅತಿ ಚಿಕ್ಕ ಭಾಷಣ ಮಾಡಿದರು. ಸ್ವದೇಶೀ ಪ್ರಚಾರ, ಪರದೇಶೀ ವಸ್ತುಗಳ ಬಹಿಷ್ಕಾರ ಮತ್ತು ಶಾಸನ ಸಭೆಗಳಲ್ಲಿ ಕಾಂಗ್ರೆಸ್ ಸದಸ್ಯರ ಪ್ರವೇಶ ಇವು ದೇಶಕ್ಕೆ ಅವರು ಕೊಟ್ಟ ಕಾರ್ಯಕ್ರಮ. ತಿರುವಾಂಕೂರಿನಲ್ಲಿ ಹರಿಜನರ ದೇವಾಲಯ ಪ್ರವೇಶಕ್ಕಾಗಿ ಸತ್ಯಾಗ್ರಹ, ಮದ್ರಾಸಿನ ನೀಲ್ ಪ್ರತಿಮೆಯ ಸತ್ಯಾಗ್ರಹ ಮತ್ತು ಬಾರ್ದೋಲಿಯ ಕರ ನಿರಾಕರಣ ಚಳುವಳಿಗಳು ಕ್ರಮವಾಗಿ ದೇಶವನ್ನು ಹುರಿದುಂಬಿಸಿದವು. ಮೆಲ್ಲ ಮೆಲ್ಲನೆ ಗಾಂಧೀಮಾರ್ಗ ನಿಚ್ಚಳವಾಗತೊಡಗಿತು. ಕ್ರೌರ್ಯಹಿಂಸೆಗಳ ಆಸುರೀ ಶಕ್ತಿಗಳು ತಲೆದೋರಿ ನೈತಿಕ ಆತ್ಮ ಬಲವನ್ನು ಕುಗ್ಗಿಸದಂತೆ ಜನ ಎಚ್ಚರಗೊಳ್ಳುತ್ತಿದ್ದರು. ಚರಕದ ಗುರುತು ಸ್ವಾತಂತ್ರ್ಯ ಸಂಗ್ರಾಮದ ಪ್ರಧಾನ ಸಂಕೇತವಾಯಿತು. ಆರ್ಥಿಕ ಪುನರ್ರಚನೆಯ ಕೇಂದ್ರ ಬಿಂದುವೂ ಆಯಿತು. ಜವಹರಲಾಲರೆಂದಂತೆ ಖಾದಿ 'ಸ್ವಾತಂತ್ರ್ಯದ ಪವಿತ್ರಲಾಂಛನ' ವೆನಿಸಿತು. "ಏಳು ಲಕ್ಷ ಹಳ್ಳಿಗಳಲ್ಲಿ ಹರಡಿಹೋಗಿ ದಟ್ಟದಾರಿದ್ರ್ಯದ ಘವಣೆಗೆ ಸಿಕ್ಕಿ ನುಚ್ಚುನೂರಾಗುತ್ತಿದ್ದ ಅತಿ ಕನಿಷ್ಠ ಭಾರತೀಯನೊಡನೆಯೂ ತಾದಾತ್ಮ್ಯವನ್ನು ಗಾಢವಾಗಿ ಬೆಳೆಸಿಕೊಳ್ಳುವ ಸಾಧನ" ಎಂದರು ಗಾಂಧೀಜಿ. ಆ ವೇಳೆಗೆ ಮಹಾಸಂಗ್ರಾಮವೊಂದರ ಅಂಚಿಗೆ ಮತ್ತೆ ಬಂದು ನಿಂತಿತ್ತು ಭಾರತದ ಜನಸ್ತೋಮ.

1929 ರಲ್ಲಿ ಪಂಡಿತ ಜವಹರಲಾಲರ ಅಧ್ಯಕ್ಷತೆಯಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನ ಇತಿಹಾಸ ಪ್ರಸಿದ್ಧವಾಯಿತು. "ಸಂಪೂರ್ಣ ಸ್ವಾತಂತ್ರ್ಯವೇ ದೇಶದ ಖಚಿತ ಬೇಡಿಕೆ" ಎಂದು ಅಲ್ಲಿ ಘೋಷಿಸಲಾಯಿತು. ಹರಕು ಮುರುಕು

ಸುಧಾರಣೆಗಳ ಮಾತು ನಿರಾಕರಿಸಲ್ಪಟ್ಟಿತು. ಬ್ರಿಟಿಷ್ ಸರ್ಕಾರ ಕಳುಹಿಸಿದ ಸೈಮನ್ ಕಮಿಷನ್ ದೇಶದ ಪ್ರತಿಭಟನೆಯನ್ನು ಎದುರಿಸಲಾರದೇ ಹಿಂತಿರುಗಿತು. ದೇಶದಲ್ಲೆಲ್ಲಾ ಸಾರ್ವತ್ರಿಕ ಹರತಾಳಗಳು ನಡೆದವು. ದಬ್ಬಾಳಿಕೆಯನ್ನು ಎದುರಿಸಲಾಯಿತು. ದೇಶದ ತುಂಬ ಯುವಕಸಂಸ್ಥೆಗಳು ಸಂಘಟಿತವಾದವು. ಭಗತ್‌ಸಿಂಗ್ ಜಿತೇಂದ್ರನಾಥದಾಸ್ ಮುಂತಾದ ತರುಣರು ಅತ್ಯುತ್ಕಟ ದೇಶಭಕ್ತಿಯಿಂದ ಪ್ರೇರಿತರಾಗಿ ಸಂಘಟಿತ ಪ್ರತಿಹಿಂಸೆಗೂ ಕೈ ಹಾಕಿದರು. ಆ ನೆಪದಿಂದ ಬ್ರಿಟಿಷರು ಅವರನ್ನು ಗಲ್ಲಿಗೇರಿಸಿದರು. ದೇಶದ ಧೃಢನಿಶ್ಚಯ ಬಲವಾಗಿ ಬೇರೂರಿತು. ತ್ಯಾಗಬಲಿದಾನಗಳ ಸಮರ ದೀಕ್ಷೆಗೆ ಮಹಿಳೆಯರೂ ಸಿದ್ಧರಾದರು. 1930 ರ ಮಾರ್ಚಿ 12 ರಂದು ಗಾಂಧೀಜಿ ಸಾಬರಮತಿ ತೀರದಲ್ಲಿ ನಿಂತು ಅಖಿಲಭಾರತ ಉಪ್ಪಿನ ಸತ್ಯಾಗ್ರಹದ ಪಾಂಚಜನ್ಯವನ್ನೂದಿದರು. ಅಲ್ಲಿಂದ ಇನ್ನೂರು ಮೈಲಿ ಭೋರ್ಗರೆವ ಮಹಾನದಿಯಂತೆ 'ದಂಡಿಯಾತ್ರೆ' ನಡೆಯಿತು. ಸಮುದ್ರತೀರದ ದಂಡಿಯಲ್ಲಿ ಶಾಸನ ಭಂಗದ ಸಂಕೇತವಾಗಿ ಉಪ್ಪನ್ನು ತಯಾರಿಸಿದರು. ಸರೋಜಿನಿನಾಯ್ಡು ಅವರು ಜೊತೆಯಲ್ಲಿದ್ದರು. ಅವರ ಕವಿವಾಣಿ ದೇಶದ ಮೂಲೆಮೂಲೆಗಳಲ್ಲಿ ಈ ಅಹಿಂಸಾತ್ಮಕ ಸ್ವಾತಂತ್ರ್ಯ ಸಮರದ ಸಂದೇಶವನ್ನು ಸಾರಿತು. ಲಕ್ಷಾಂತರ ಭಾರತೀಯ ಮಹಿಳೆಯರು ಮುನ್ನುಗ್ಗಿ ಭಾಗವಹಿಸಿದರು.

ಅಹಿಂಸಾತ್ಮಕ ಸಮರಕ್ಕಾಗಿ ಅಗಾಧ ಸಿದ್ಧತೆ ಸ್ವಯಂಸೇವಕ ಶಿಕ್ಷಣ ಶಿಬಿರಗಳಲ್ಲಿ ನಡೆಯುತ್ತಿತ್ತು. ಅನಕ್ಷರಸ್ಥ ಗ್ರಾಮಸ್ಥರಿಂದ ಹಿಡಿದು ಅತ್ಯುನ್ನತ ಪದವೀಧರರವರೆಗೆ ಸಹಸ್ರಾರು ಸತ್ಯಾಗ್ರಹಿಗಳು ಸೆರೆಮನೆ ಸೇರತೊಡಗಿದರು, ನಲವತ್ತುಕೋಟಿ ಜನಸಂಖ್ಯೆಯ ಬೃಹದ್ದೇಶದ ಮೂಲೆಮೂಲೆಗಳಲ್ಲಿ ಅಹಿಂಸಕ ಸವಿನಯ ಶಾಸನಭಂಗದ ಪ್ರತಿಧ್ವನಿ ಕೇಳಿಬಂದಿತು. ಮೆರವಣಿಗೆಗಳು, ಮುಷ್ಕರಗಳು, ರಾಜೀನಾಮೆಗಳು, ಶಾಲಾ ಕಾಲೇಜುಗಳಿಗೆ ಬಹಿಷ್ಕಾರಗಳು, ಅವ್ಯಾಹತವಾಗಿ ನಡೆದವು. ಒಂದು ಲಕ್ಷಕ್ಕಿಂತ ಹೆಚ್ಚು ಜನರು ಸೆರೆಮನೆಯ ಶಿಕ್ಷೆಗೊಳಗಾದರು. ಲಾಠೀಪ್ರಹಾರಗಳು, ಮದ್ದುಗುಂಡುಗಳ ಹೊಡೆತ, ತಿರಸ್ಕಾರದ ದಬ್ಬಾಳಿಕೆಗಳಿಗೆ ದೇಶಭಕ್ತರು ತುತ್ತಾದರು. ಅಸಾಧಾರಣ ತಾಳ್ಮೆಯಿಂದ ಸಹಿಸುತ್ತಿದ್ದ ಸಾಮಾನ್ಯ ಸ್ತ್ರೀಪುರುಷ ಸಮೂಹಗಳ ಪ್ರತಿಶಕ್ತಿಯೆದುರು ಜಗತ್ತಿನ ಮಹಾಸಾಮ್ರಾಜ್ಯದ ಶಸ್ತ್ರಶಕ್ತಿ ನಾಚಿ ಹಿಮ್ಮೆಟ್ಟಿತು.

ಸವಿನಯ ಶಾಸನಭಂಗ ಚಳುವಳಿ ಎಲ್ಲಾ ಕ್ಷೇತ್ರಗಳನ್ನೂ ಆವರಿಸಿತು. ಗಡಿನಾಡಿನ ವೀರ ಪಠಾಣರು ಖಾನ್ ಅಬ್ದುಲ್‌ಗಫಾರ್ ಖಾನರ ನೇತೃತ್ವದಲ್ಲಿ ಅಹಿಂಸಾ ದೀಕ್ಷೆತೊಟ್ಟು ಸೈನ್ಯದ ಕ್ರೌರ್ಯವನ್ನು ಶಾಂತರಾಗಿ ಎದುರಿಸಿದರು. 'ಧೀರರ ಅಹಿಂಸೆ ಇದು' ಎಂದರು ಗಾಂಧೀಜಿ. ಗಾರ್‌ವಾಲಿಯ ಸೈನಿಕರು ತಮ್ಮ ಅಧಿಕಾರಿಗಳ ರಾಕ್ಷಸೀ ಆಜ್ಞೆಗಳನ್ನು ನಿರಾಕರಿಸಿ ನಿಶ್ಯಸ್ತ್ರ ನಿರಪರಾಧೀ ಜನರ ಗುಂಪಿನಮೇಲೆ ಗುಂಡುಹಾರಿಸದೆ ನಿಂತುಬಿಟ್ಟರು. ಅವರಿಗೆಲ್ಲ 10-14 ವರ್ಷಗಳ ಕಠಿಣ ಶಿಕ್ಷೆಯಾಯಿತು.

ಪರದೇಶೀ ವಸ್ತುಗಳ ಬಹಿಷ್ಕಾರ ಉತ್ಕಟ ಸ್ಥಿತಿಗೇರಿತು. ಮದ್ಯಪಾನ ನಿರೋಧ. ಅರಣ್ಯಶಾಸನಗಳ ಉಲ್ಲಂಘನೆ. ಸುಂಕಗಳ ನಿರಾಕರಣೆ. ಕೋರ್ಟುಗಳ ಮುಂದೆ ಅಡ್ಡಕಟ್ಟೆಗಳು. ಇಂಥ ಸಾಮೂಹಿಕ ಸತ್ಯಾಗ್ರಹಗಳಲ್ಲಿ ಲಕ್ಷಾಂತರ ಮಹಿಳೆಯರೂ ವಿದ್ಯಾರ್ಥಿಗಳೂ ಹಳ್ಳಿಗರೂ ಒಂದಾಗಿ ಹೋರಾಡಿದರು. ದೇಶದಲ್ಲಿ ಉಕ್ಕಿಹರಿಯುತ್ತಿದ್ದ ಸ್ವಾತಂತ್ರ್ಯಾಕಾಂಕ್ಷೆ ತಡೆಯಲಸಾಧ್ಯವೆನಿಸಿತು ವಿದೇಶೀ ಪ್ರಭುಗಳಿಗೆ. ಆದರೂ ಹಲವಾರು ದೇಶೀಯ ಪ್ರತಿಗಾಮೀ ಶಕ್ತಿಗಳಿಗೆ ಪ್ರೋತ್ಸಾಹ ಕೊಟ್ಟು ಒಡಕುಗಳನ್ನುಂಟುಮಾಡಿದರು. ಪ್ರಧಾನವಾಗಿ ಅನೇಕ ದೊಡ್ಡ ನಗರಗಳಲ್ಲಿ ಹಿಂದೂ ಮುಸಲ್ಮಾನ ದಂಗೆಗಳು ಉಲ್ಬಣವಾಗಹತ್ತಿದ್ದವು. ಈ ದಾರುಣ ಸಮಸ್ಯೆ ಸಂತತವಾಗಿ ದೇಶವನ್ನು ಕೊರೆದು ತಿನ್ನುತ್ತಿತ್ತು. ಈ ವ್ರಣದ ಚಿಕಿತ್ಸೆ ಗಾಂಧೀಜಿಯ ಪ್ರಥಮ ಪ್ರಯತ್ನವಾಯಿತು. ಉಪ್ಪಿನ ಸತ್ಯಾಗ್ರಹದ ಕಾಲಕ್ಕೆ ಸುಮಾರು ಹನ್ನೆರಡುಸಾವಿರ ಮುಸ್ಲಿಮರು ಸೆರೆಮನೆ ಸೇರಿದ್ದರು. ಆದರೂ ಮುಸಲ್ಮಾನ್ ಬಾಂಧವರ ಪ್ರತ್ಯೇಕ ಸಂಸ್ಥೆಗಳಿಗೆ ಸರ್ಕಾರದ ವಿಶೇಷ ಪ್ರೋತ್ಸಾಹ ದೊರೆತು ಮತೀಯ ಭಿನ್ನತೆ ಬೆಳೆಯುತ್ತಲೇ ಹೋಯಿತು.

ಗಾಂಧೀಜಿ. ಮೋತಿಲಾಲ್‌ನೆಹರೂ. ಜವಹರಲಾಲರು ಸೆರೆಮನೆಗಳನ್ನು ಸೇರಿದ್ದರು. ಸಂಧಾನದ ಪ್ರಯತ್ನಗಳು ಕಾಂಗ್ರೆಸ್ಸೇತರ ವಲಯಗಳಲ್ಲೂ ಭಾರತದ ವಿದೇಶೀ ಸ್ನೇಹಿತರ ಮೂಲಕವೂ ನಡೆಯುತ್ತಿದ್ದವು. ಮೊದಲನೇ ದುಂಡುಮೇಜಿನ ಪರಿಷತ್ತನ್ನು ಬ್ರಿಟಿಷ್ ಸರ್ಕಾರ ಏರ್ಪಡಿಸಿತು. ಕಾನೂನು ಬಾಹಿರವೆಂದು ಘೋಷಿಸಲ್ಪಟ್ಟಿದ್ದ ಕಾಂಗ್ರೆಸ್ ಸಂಸ್ಥೆ ಅದರಲ್ಲಿ ಭಾಗವಹಿಸಲು ನಿರಾಕರಿಸಿತು. 1931 ರಲ್ಲಿ ನಾಯಕರೆಲ್ಲರ ಬಿಡುಗಡೆಯಾಗಿ ಅಂದಿನ

ವೈಸರಾಯರಾಗಿದ್ದ ಇರ್ವಿನ್‌ರಿಗೂ ಗಾಂಧೀಜಿಗೂ ಮಧ್ಯೆ ಒಪ್ಪಂದವಾಯಿತು. 'ಗಾಂಧೀ ಇರ್ವಿನ್ ಒಪ್ಪಂದ'ದಿಂದ ಅನೇಕ ನ್ಯಾಯರಹಿತ ಕಾನೂನುಗಳು ಸಡಿಲವಾದವು. ಎರಡನೇ ದುಂಡುಮೇಜಿನ ಪರಿಷತ್ತಿಗೆ ಕಾಂಗ್ರೆಸ್ಸಿನ ಏಕೈಕ ಪ್ರತಿನಿಧಿಯಾಗಿ ಗಾಂಧೀಜಿ ಹೋದರು. ಲಂಡನ್ನಿನ ಜನತೆಯ ಹೃದಯವನ್ನು ಸೂರೆಗೊಂಡ ಗಾಂಧೀಜಿ ಇಂಗ್ಲಿಷ್ ಆಡಳಿತಗಾರರ ರಾಜ್ಯದಾಹವನ್ನು ಮಾತ್ರ ನಿವಾರಿಸದಾದರು. ರ್‍ಯಾಂಸೆ ಮ್ಯಾಕ್ಡೊನಾಲ್ಡ್ ಆಗ ಬ್ರಿಟಿಷ್ ಪ್ರಧಾನಿ. ಚಕ್ರಗೋಷ್ಠಿಯಲ್ಲಿ ಸಂಧಾನ ಪ್ರಯತ್ನಕ್ಕಿಂತ ಭಾರತದ ಆಂತರಿಕ ಭಿನ್ನತೆಗಳನ್ನೇ ಎತ್ತಿದ್ದರಿಂದ "ನೀವು ಸ್ವಾತಂತ್ರ್ಯಕ್ಕೆ ಅರ್ಹರಲ್ಲ" ಎಂಬ ಪ್ರತಿಪಾದನೆಗೆ ಮಹತ್ವ ಸಿಕ್ಕಿಬಿಟ್ಟಿತು. ಪಂಡಿತ ಮದನಮೋಹನ ಮಾಳವೀಯ, ಸರೋಜಿನಿ ನಾಯ್ಡು, ಮಹದೇವ ದೇಸಾಯ್, ರಂಗಸ್ವಾಮಿ ಐಯ್ಯಂಗಾರ್ ಇವರೆಲ್ಲರ ಪ್ರಯತ್ನಗಳೂ ನಿಷ್ಫಲವಾದವು. ಬರಿಗೈಯಿಂದಲೇ ಗಾಂಧೀಜಿ ಭಾರತಕ್ಕೆ ಹಿಂತಿರುಗಿದರು.

ದಾರಿಯಲ್ಲಿ ಫ್ರಾನ್ಸಿನ ಮಹಾಸಂತ ರೊಮೇನ್ ರೋಲಾನ ಭೇಟಿಯಾಯಿತು. ಮಹಾತ್ಮನ ಸಾನ್ನಿಧ್ಯದಲ್ಲಿ ಆ ಅಪೂರ್ವ ಪಶ್ಚಿಮದ ಪ್ರತಿಭೆ ದಿವ್ಯವಾಗಿ ಅರಳಿತು. ರೊಮೇನ್ ರೋಲಾ ಭಾರತೀಯ ಸಂಸ್ಕೃತಿಗೆ ಮಾರು ಹೋದರು. ತಾವೇ ಭಾರತಕ್ಕೆ ಬರಲಾಗದಿದ್ದರೂ ತಮ್ಮ ಪ್ರತಿನಿಧಿಯಂತೆ ಇಂಗ್ಲಿಷ್ ಮಹಿಳೆಯೊಬ್ಬಳನ್ನು ಗಾಂಧೀಜಿಯ ಆಶ್ರಮಕ್ಕೆ ಕಳುಹಿಸಿದರು. ಮಿಸ್ ಮ್ಯಾಡಲೀನ್ ಸ್ಲೇಡ್ ಮುಂದೆ ಭಾರತೀಯರ ಹೃದಯವನ್ನು ಗೆದ್ದುನಿಂತು ತ್ಯಾಗ ತಪಸ್ಸುಗಳಿಂದ ಮೀರಾಬೆನ್ ಆದಳು. ಆಕೆಯ ರೋಮಾಂಚಕಾರೀ ಅನುಭವಗಳನ್ನು "ನನ್ನ ಅಂತಃಶಕ್ತಿಯ ಯಾತ್ರೆ" (ಸ್ಪಿರಿಟ್ಸ್ ಪಿಲಿಗ್ರಿಮೇಜ್) ಎಂಬ ಗ್ರಂಥದಲ್ಲಿ ನಿವೇದಿಸಿದ್ದಾಳೆ. ಈ ಸ್ಫಟಿಕ ನಿರ್ಮಲತೆಯ ಸೇವಾಪರಾಯಣೆಯನ್ನು ಸೃಷ್ಟಿಸಿದ ಪವಾಡ ಗಾಂಧೀಜಿಯ ಪ್ರಚಂಡ ಪ್ರಭಾವಕ್ಕೆ ಜೀವಂತ ಸಾಕ್ಷಿ.

1932 ರಲ್ಲಿ ಮತಭೇದದ ಆಧಾರದ ಮೇಲೆ ಪ್ರತ್ಯೇಕ ನಾಗರಿಕ ಹಕ್ಕುಗಳ ಕರಾಳಶಾಸನ ತರಲು ಸರ್ಕಾರ ನಿರ್ಧರಿಸಿತ್ತು. ಹಿಂದೂ ಸಮಾಜದಿಂದ ಹರಿಜನರನ್ನು ಒಡೆದು ದೇಶದಲ್ಲಿ ಮೂರನೇ ಮತೀಯ ಗುಂಪನ್ನು ರಾಜಕೀಯಕ್ಕೆ ಪ್ರವೇಶ ಮಾಡಿಸುವ ಸಂಚು ನಡೆಯಿತು. ಅದನ್ನು ವಿರೋಧಿಸಿ ಗಾಂಧೀಜಿ

ಆಮರಣಾಂತ ಉಪವಾಸ ಪ್ರಾರಂಭಿಸಿದರು. ಡಾ॥ ಅಂಬೇಡ್ಕರ್‌ರೊಡನೆ ಸಂಧಾನ ನಡೆದು ಕೊನೆಗೆ ಸರ್ಕಾರ ಈ ನಿರ್ಧಾರವನ್ನು ಬದಲಿಸಬೇಕಾಯಿತು. ಆ ಪ್ರಸಂಗದಿಂದಾದ ತೀವ್ರ ವೇದನೆಯನ್ನು ರಚನಾತ್ಮಕ ಪಥಕ್ಕೆ ತಿರುಗಿಸಿ ಗಾಂಧೀಜಿ ದೇಶದಲ್ಲೆಲ್ಲಾ ಅಸ್ಪೃಶ್ಯತಾ ನಿವಾರಣೆಯ ಆಂದೋಲನವನ್ನು ಪ್ರಾರಂಭಿಸಿದರು. ಕೇರಳದ ಗುರುವಾಯೂರಿನಲ್ಲಿ ದೇವಾಲಯ ಪ್ರವೇಶಕ್ಕಾಗಿ ಕೇಳಪ್ಪನ್‌ರೊಡನೆ ಪ್ರಾಯೋಪವೇಶದ ಸಂಕಲ್ಪತೊಟ್ಟರು. ಅಪ್ಪಾ ಸಾಹೇಬರೊಡನೆ ಭಂಗಿ ಕೆಲಸಕ್ಕೆ ತಾವೇ ಸ್ವತಃ ನಿಂತರು. ಥಕ್ಕರ್‌ಬಾಪಾ ಅವರನ್ನು ಸೇರಿ ಅಖಿಲ ಭಾರತ ಹರಿಜನ ಸೇವಕ ಸಂಘ ಸ್ಥಾಪಿಸಿದರು. "ಹರಿಜನ" ವಾರಪತ್ರಿಕೆ ಅದರ ಮುಖವಾಣಿಯಾಗಿ ಹೊರಟಿತು. ಯಾವ ಕಾರಣದಿಂದಲೋ ಶತಮಾನಗಳ ಕಾಲ ಬೆಳೆದುಬಂದಿದ್ದ ಕಳಂಕಪ್ರಾಯವಾದ ಈ ಸಾಮಾಜಿಕ ಸಮಸ್ಯೆಯನ್ನು ನೇರವಾಗಿ ನಿರ್ಭಯವಾಗಿ ಅಹಿಂಸಾಯುತವಾಗಿ ಎದುರಿಸಿದ ಶಾಶ್ವತಕೀರ್ತಿ ಮಾನವಕುಲದ ಈ ಸತ್ಯಾಗ್ರಹ ಪ್ರವಾದಿಗೆ ಕಿರೀಟಪ್ರಾಯವಾಯಿತು. ಮುಂದೆ ಭಾರತ ಸ್ವತಂತ್ರವಾದೊಡನೆಯೇ ಸಂವಿಧಾನವ ಮಹಾಘೋಷಣೆಯಿಂದ ಅಸ್ಪೃಶ್ಯತೆ ಶಿಕ್ಷಾರ್ಹ ಅಪರಾಧವಾಯಿತು.

ರಾಜಕೀಯ ಆಂದೋಳನ ಮೇಲುನೋಟಕ್ಕೆ ಶಿಥಿಲವಾದಂತಿದ್ದರೂ ದೇಶದ ಆಂತರ್ಯದಲ್ಲಿ ರಚನಾತ್ಮಕ ಶಕ್ತಿಗಳ ಸಂಘಟನೆ ತೀವ್ರಗತಿಯಿಂದ ನಡೆಯುತ್ತಿತ್ತು. "ಸತ್ಯಾಗ್ರಹಿಗೆ ಎಂದೂ ಸೋಲೆಂಬುದಿಲ್ಲ" ಎಂದರು ಗಾಂಧೀಜಿ. ತಮ್ಮ ಸಮರದ ಪ್ರಕ್ರಿಯೆಯಲ್ಲಿ ಗೆಲವು ಸೋಲುಗಳಿಗೆ ಹೊಸ ಮೌಲ್ಯಗಳನ್ನೇ ಕಟ್ಟಿದರು. ಒಂದೊಂದು ಸಾರಿ ಜನತಾ ಚಳುವಳಿ ನಡೆದಾಗಲೂ ಬ್ರಿಟಿಷ್ ಮಹಾಸಾಮ್ರಾಜ್ಯಕ್ಕೆ ಒಂದೊಂದು ನೈತಿಕ ಅಪಘಾತವಾದುದನ್ನು ಅವರೇ ಗುರ್ತಿಸಿಕೊಳ್ಳುತ್ತಿದ್ದರು. ವಿಶ್ವದ ರಾಜಕೀಯದಲ್ಲೇ ಒಂದು ನಿತ್ಯ ನೂತನ ಸಮರವಿಧಾನ ಸಂತತವಾಗಿ ಬೆಳೆದು ನಿಲ್ಲುತ್ತಿತ್ತು ಗಾಂಧೀಯವರ ಪ್ರಭಾವದಿಂದ. ಅತ್ಯಂತ ಪ್ರಬಲ ವಿರೋಧಿಯೂ ಸತ್ಯಾಗ್ರಹದ ಅವೈರದ ಆತ್ಮನಿಷ್ಠೆಗೆ, ನೈತಿಕ ನೈರ್ಮಲ್ಯಕ್ಕೆ ಬೆಲೆಕೊಡುವಂತೆ ಪ್ರೇರಿತನಾಗುತ್ತಿದ್ದ. ಹಿಂಸೆಯನ್ನು ವರ್ಜಿಸಿ ಮಾನವೀಯ ಸಂಧಾನದಿಂದ ಎಂಥ ರಾಜಕೀಯ ಕ್ಲಿಷ್ಟ ಸಮಸ್ಯೆಯನ್ನಾದರೂ ಬಗೆಹರಿಸಿಕೊಳ್ಳಬಹುದೆಂಬ ಭರವಸೆ ಜಗತ್ತಿಗೆ ದೊರಕಿತು. ಕ್ರೌರ್ಯ ಹಿಂಸೆಗಳ ದುರಂತ ಮಾರ್ಗ ಬಿಟ್ಟು

ಬೇರೆ ಹಾದಿಯನ್ನು ಹುಡುಕುತ್ತಿದ್ದ ರಾಜಕಾರಣಕ್ಕೆ ಒಂದು ಹೊಸ ಅನುಭವವಾಗತೊಡಗಿತು. ಸರ್ವೋದಯದ ಮಹಾತತ್ವದಲ್ಲಿ ಅತ್ಯಂತ ಕ್ರೂರ ಶಕ್ತಿಯೂ ಮಾನವೀಯತೆಯ ಪ್ರಭಾವದಿಂದ ಪರಿವರ್ತಿತವಾಗಬಲ್ಲುದು ಎಂದು ಗಾಂಧೀಜಿ ತಮ್ಮ ವಿಶಿಷ್ಟ ಪ್ರಯೋಗಗಳಿಂದ ತೋರಿಸಿಕೊಟ್ಟರು.

೧೦

"ಗ್ರಾಮಜೀವನವೇ ಭಾರತದ ಜೀವ ಜೀವಾಳ. ಶ್ರೀಸಾಮಾನ್ಯನ ಬಾಳು ಸ್ವಾವಲಂಬನೆ ಸ್ವಾಭಿಮಾನಗಳನ್ನು ತುಂಬಿಕೊಳ್ಳದೆ ಸ್ವರಾಜ್ಯ ಕೇವಲ ಹುಸಿಗನಸು. ಅಹಿಂಸಕ ಅರ್ಥಶಾಸ್ತ್ರದಿಂದಲೇ ಇದು ಸಾಧ್ಯ" ಎಂದರು ಗಾಂಧೀಜಿ. "ಪ್ರತ್ಯಕ್ಷವೂ ಜೀವಂತವೂ ಆದ ಮಾನವೀಯ ಮೌಲ್ಯಗಳು ಅರ್ಥಾರಜನೆಯ ಆಧಾರವಾಗಬೇಕು. ಜಗತ್ತಿನ ಬಹುಸಂಖ್ಯಾತರು ಈಗಲೂ ಗ್ರಾಮಸ್ಥರೇ. ಚೈತನ್ಯಮಯ ಪ್ರಕೃತಿಯೊಡನೆ ಸಂಪೂರ್ಣ ಸಮರಸವನ್ನು ಸಾಧಿಸುವ ಕಲೆ ಮಾನವನಿಗೆ ಇನ್ನೂ ಕರಗತವಾಗಬೇಕಾಗಿದೆ. ಯಂತ್ರಾರೂಢ ಅರ್ಥವ್ಯವಸ್ಥೆ ಅದರ ಪರಿಣಾಮವಾಗಿ ರೂಪಿತರಾಗಿರುವ ಕೃತಕ ಸಂಸ್ಕೃತಿ, ಕೇಂದ್ರೀಕೃತ ರಾಜ್ಯಶಕ್ತಿ ಎಲ್ಲವೂ ಸರ್ವೋದಯ ಸಮಾಜಕ್ಕೆ ಕಂಟಕಗಳಾಗಿ ನಿಂತಿವೆ. ಸುಸಂಸ್ಕೃತ ಸುವ್ಯವಸ್ಥಿತ ಸ್ವಯಂಪೂರ್ಣ ಸ್ವಾವಲಂಬೀ ಗ್ರಾಮಗಳೇ ಜಗತ್ತಿನ ಬಾಳನ್ನು ಶಾಂತಮಯ ನೆಮ್ಮದಿಯೆಡೆಗೆ ಕರೆದೊಯ್ಯಬಲ್ಲದು. ದುಡಿಮೆ, ಜ್ಞಾನ, ಪ್ರೇಮ, ಸಂಪತ್ತು ಎಲ್ಲವೂ ಸಮಾಜಾಭಿಮುಖವಾಗಬೇಕು. ಸರ್ವಸಾಮಾನ್ಯರಿಗೂ ಇವೆಲ್ಲದರ ಪೂರ್ಣಫಲ ದೊರಕುವಂತಾಗಬೇಕು. ಭಾರತೀಯ ಪ್ರಾಚೀನ ಗ್ರಾಮಸಮಾಜ ಇಂಥ ಆದರ್ಶಕ್ಕೆ ಹತ್ತಿರವಾಗಿತ್ತು. ಇಂದಿಗೂ ಅದರ ಛಾಯೆ ಭಾರತೀಯನ ಬಾಳಿನಲ್ಲಿ ಕಾಣುತ್ತದೆ. ಆಧುನಿಕ ವಿಜ್ಞಾನಯುಗಕ್ಕೆ ಭಾರತೀಯ ಆಧ್ಯಾತ್ಮಿಕ ಜೀವನಮಾರ್ಗವನ್ನು ಸಮ್ಮಿಳನ ಗೊಳಿಸುವ ಸ್ವತಂತ್ರ ಸಮಾಜ ಗ್ರಾಮಸ್ವರಾಜ್ಯ." ಈ ಕನಸನ್ನು ಬಾಳಿನ ಕ್ಷಿತಿಜದೊಳಗೆ ತರುವ ಭಗೀರಥ ಪ್ರಯತ್ನ ಮಾಡಿದರು ಗಾಂಧೀಜಿ. ಭೌಗೋಳಿಕ ವಾಗಿ ಭಾರತದ ಮಧ್ಯಬಿಂದುವಾದ ವರ್ಧಾ ಜಿಲ್ಲೆಯ ಸೇವಾಗ್ರಾಮ 1935 ರಿಂದ ಅವರ ವಾಸಸ್ಥಳವಾಯಿತು. ಮುಂದೆ ಅವರು ಬದುಕಿರುವವರೆಗೂ ಈ ಜೋಪಡಿಗಳ ಜೀವಂತಗ್ರಾಮ ಭಾರತ ರಾಜಕೀಯ ಜೀವನದ ಅನಧಿಕೃತ

ರಾಜಧಾನಿಯೇ ಆಯಿತು. ಜಗತ್ತಿನ ಮಹಾವ್ಯಕ್ತಿಗಳ ಸಾಲಿನಲ್ಲಿ ಈ ಸೇವಾಗ್ರಾಮದ ಸಂತ ಯಾವುದೋ ವಿಲಕ್ಷಣ ತೇಜಸ್ಸಿನಿಂದ ಪ್ರಜ್ವಲಿಸುವ ಜ್ಯೋತಿಯಾದ. ಸೇವಾಗ್ರಾಮ ಸಮಗ್ರ ಗ್ರಾಮಜೀವನವನ್ನು ಪುನರ್ರಚಿಸುವ ಯಜ್ಞಭೂಮಿಯಾಯಿತು. ಅಹಿಂಸಕ ಕ್ರಾಂತಿಪಥದ ಕುಲಾಲಚಕ್ರದ ಪೂರ್ಣ ವೃತ್ತಕ್ಕೆ ಈ ಚಿಕ್ಕಹಳ್ಳಿಯೇ ಅಕ್ಷವಾಯಿತು. ಅದೇ ವರ್ಷ ರಾಷ್ಟ್ರೀಯ ಕಾಂಗ್ರೆಸ್ಸು ಫೈಜಪುರ ಎಂಬ ಹಳ್ಳಿಯಲ್ಲಿ ಸಮಾವೇಶಗೊಂಡಿತು. ಗ್ರಾಮಗಳ ಕಡೆಗೆ ಬುದ್ಧಿಜೀವಿಗಳ ಗಮನವನ್ನು ಪ್ರಬಲವಾಗಿ ಸೆಳೆದಂತೆಯೇ ಗ್ರಾಮೀಣ ಜನಕೋಟಿಯಲ್ಲಿಯೂ ಪ್ರಜಾತಂತ್ರದ ಮಹತ್ವಾಕಾಂಕ್ಷೆಗಳನ್ನು ಮೂಡಿಸಿದರು ಗಾಂಧೀಜಿ. ಬಹುಸಂಖ್ಯಾತ ಅನಕ್ಷರಸ್ಥರಾಗಿದ್ದರೂ ಭಾರತದ ಜನಸ್ತೋಮ ತಮ್ಮ ಸಾಂಸ್ಕೃತಿಕ ಪರಂಪರೆಯಿಂದ ಮೈಗೂಡಿಸಿಕೊಂಡಿದ್ದ ವ್ಯಾವಹಾರಿಕ ವಿವೇಕ ಹಾಗೂ ನೈತಿಕ ಪ್ರಜ್ಞೆಗಳಿಂದ ಯಶಸ್ವೀ ಪ್ರಜಾಪ್ರಭುತ್ವವನ್ನು ಸ್ಥಾಪಿಸಬಲ್ಲರು ಎನ್ನುವುದನ್ನು ಸಿದ್ಧಮಾಡಿದರು. 1935 ರಲ್ಲಿ ರಾಜಕೀಯ ಚೌಕಾಸಿ ನಡೆಸಿ ಬ್ರಿಟಿಷರು ಭಾರತದ ಪ್ರಾಂತಗಳಲ್ಲಿ ರಾಜ್ಯಶಾಸನಸಭೆಗಳನ್ನು ಚುನಾಯಿಸಿಕೊಳ್ಳುವ ಹಕ್ಕನ್ನು ಘೋಷಿಸಿದರು. ಗಾಂಧೀಜಿಯ ನೇತೃತ್ವದಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಚುನಾವಣೆಗಳಲ್ಲಿ ಸ್ಪರ್ಧಿಸಿ ಪ್ರಚಂಡ ವಿಜಯ ಗಳಿಸಿತು. ಹನ್ನೊಂದು ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಳಗಳೇರ್ಪಟ್ಟವು. ದೇಶದಲ್ಲಿ ದೇಶೀಯ ರಾಜ್ಯಾಧಿಕಾರದ ಪ್ರತ್ಯಕ್ಷಾನುಭವದಿಂದ ರಾಷ್ಟ್ರೀಯ ನಿರ್ಮಾಣದ ಮಹತ್ವಾಕಾಂಕ್ಷೆಗಳು ಬೆಳೆದು ನಿಂತವು. ಪೂರ್ಣಸ್ವಾತಂತ್ರ್ಯದ ಮುಂಬೆಳಗು ಸ್ವಚ್ಛವಾಯಿತು. ಅಹಿಂಸಕ ಅಸಹಕಾರ ಚಳುವಳಿಗಳ ದೀರ್ಘ ಪ್ರವಾಸದ ಮೂಸೆಯಲ್ಲಿ ಪುಟಹೊಂದಿದ ರಾಷ್ಟ್ರಚೈತನ್ಯ ಗಾಂಧೀಪ್ರಣೀತ ಸರ್ವೋದಯದರ್ಶನದ ಸ್ಫೂರ್ತಿಚಿಲುಮೆಯಾಯಿತು. ಕ್ರಾಂತಿಪಥ ಪೂರ್ಣಸಿದ್ಧಿಗಾಗಿ ಹಾತೊರೆಯುತ್ತಿತ್ತು.

ಪಠಾತ್ತನೆ ಜಗತ್ತಿನ ಎರಡನೆಯ ಮಹಾಯುದ್ಧ ಸಿಡಿದೊಡೆಯಿತು. 1937ರಲ್ಲಿ ಇಂಗ್ಲೆಂಡಿನ ವಸಾಹತು ಚಕ್ರಾಧಿಪತ್ಯವೇ ಯುದ್ಧದಲ್ಲಿ ನೂಕಲ್ಪಟ್ಟಿತು. ತಾವೇ ಬಂಧನದ ಪಂಜರದೊಳಗಿದ್ದ ಭಾರತೀಯರು ಇಂಗ್ಲೆಂಡಿನ ಸ್ವಾತಂತ್ರ್ಯ ರಕ್ಷಣೆಗಾಗಿ ಬಲಿದಾನಕ್ಕೆ ಸಿದ್ಧವಾಗಬೇಕಾಯಿತು. ಈ ವಿರೋಧಾಭಾಸದ ವಿಡಂಬನೆಯನ್ನು ಟೀಕಿಸಿ ಗಾಂಧೀಜಿ ಇಂಗ್ಲೀಷ್ ಆಳರಸರಿಗೆ ನೇರ ಮನವಿ

ಮಾಡಿದರು. "ಆತ್ಮಗೌರವದಿಂದ ಸ್ವತಂತ್ರ ರಾಷ್ಟ್ರವಾಗಿ ನಾವು ನಿಮ್ಮ ಪರೀಕ್ಷಾ ಸಮಯದಲ್ಲಿ ಭುಜಕ್ಕೆ ಭುಜ ಕೊಟ್ಟು ನಿಲ್ಲುವೆವು. ಭಾರತಕ್ಕೆ ಸ್ವಾತಂತ್ರ್ಯ ನೀಡಿ" ಎಂದರು. "ಅಧಿಕಾರ, ದರ್ಪ, ದಬ್ಬಾಳಿಕೆಗಳಿಂದ ರಾಷ್ಟ್ರದ ಆತ್ಮೀಯ ಬೆಂಬಲವನ್ನೆಂದೂ ಗಳಿಸಲಾರಿರಿ. ಬದಲಾಗಿ ಪ್ರಬಲವಾದ ವಿರೋಧೀ ಶಕ್ತಿಗಳು ಬೆಳೆದುನಿಲ್ಲುತ್ತವೆ" ಎಂದು ಎಚ್ಚರಿಸಿದರು. ಸುತ್ತಲೂ ಹಿಂಸಾಕೃತ್ಯಗಳ ದಳ್ಳುರಿ ಹರಡಿ ನಿಲ್ಲುತ್ತಿತ್ತು. ಶಸ್ತ್ರಸಜ್ಜಿತ ತುಮುಲಗಳ ಭಯಂಕರಧ್ವನಿಯೆದ್ದು ಅಹಿಂಸಾತ್ಮಕ ಮನೋಧರ್ಮವೇ ನಾಶವಾಗಿಬಿಡು ವುದೋ ಎಂಬ ಭಯ ಜನಸಾಮಾನ್ಯರನ್ನು ಆವರಿಸುತ್ತಿತ್ತು. ಯುದ್ಧದ ಅಸಹ ನೀಯ ಕಾಳ್ಗಿಚ್ಚು ದೇಶದ ಮೂಲೆಮೂಲೆಗಳಲ್ಲೂ ಹಬ್ಬಿ ಜನಜೀವನವನ್ನು ಹಿಂಡುತ್ತಿತ್ತು. ವಿಪತ್ತಿಗೆ ಸಿಕ್ಕಿದ ಬ್ರಿಟಿಷ್ ಚಕ್ರಾಧಿಪತ್ಯವನ್ನು ಉರುಳಿಸುವ ಸಮಯಸಾಧಕ ರಾಜಕೀಯ ವಿಪ್ಲವಕ್ಕೆ ಇದು ಸುಸಮಯ ಎಂದು ಹಲವು ಗುಂಪುಗಳು ದೇಶದಲ್ಲಿ ತಲೆಯೆತ್ತುತ್ತಿದ್ದವು. ಅಹಿಂಸಾಮೂರ್ತಿ ಗಾಂಧೀಜಿಯ ಪರೀಕ್ಷಾ ಸಮಯವೂ ಸನ್ನಿಹಿತವಾದಂತಿತ್ತು. ಅವರು ವಿಪುಲವಾಗಿ ಬರೆದು ಬೋಧಿಸಿ ಅಹಿಂಸಕ ಮಹಾಕ್ರಾಂತಿಯ ಕೊನೆಯ ನಿಸ್ಸೀಮ ಘಟ್ಟಕ್ಕೆ ನಾಡಿನ ಚೇತನವನ್ನು ಹೊಡೆದೆಬ್ಬಿಸಿದರು. ಗಡಿನಾಡಿನ ವೀರ ಪಠಾಣರು ಖಾನ್ ಅಬ್ದುಲ್ ಗಫಾರ್‌ಖಾನರ ಸ್ಫೂರ್ತಿಯಿಂದ ಅಹಿಂಸಕ ವೀರ ಯೋಧರಾಗಿ ಗಾಂಧೀಜಿಯ ಹಿಂಬಾಲಕರಾದರು. ದೇಶೀಯಸಂಸ್ಥಾನಗಳ ಸ್ವಾತಂತ್ರ್ಯ ಹೋರಾಟಕ್ಕೆ ಪುಟಕೊಡಲು ರಾಜಕೋಟೆಯ ರಾಜಕೀಯದಲ್ಲಿ ಗಾಂಧೀಜಿ ಪ್ರವೇಶಿಸಿದರು. ಕಸ್ತೂರಿಬಾ, ಸರ್ದಾರಪಟೇಲ್ ಅವರಿಗೂ ಅಲ್ಲಿನ ಮಹಾ ರಾಜರಿಗೂ ಆದ ಒಪ್ಪಂದವನ್ನು ರಾಜರು ಮುರಿದರು. ಗಾಂಧೀಜಿ ಅಲ್ಲಿ 1939 ರ ಮಾರ್ಚಿಯಲ್ಲಿ ಆಮರಣಾಂತ ಉಪವಾಸ ಪ್ರಾರಂಭಿಸಿದರು. ಮತ್ತೊಮ್ಮೆ ದೇಶದಲ್ಲಿ ವಿದ್ಯುತ್ ಸಂಚಾರವಾಯಿತು. ಯುದ್ಧೋದ್ಯಮಕ್ಕೆ ಧಕ್ಕೆಬರುವುದೆಂಬ ಭೀತಿಯಿಂದ ವೈಸ್‌ರಾಯರೇ ಈ ರಾಜಕ್ಕೆ ಪ್ರವೇಶಿಸಿ ಒಪ್ಪಂದಮಾಡಿಸಿದರು. ದೇಶೀಯ ರಾಜರುಗಳ ನಿರಂಕುಶ ಪ್ರಭುತ್ವಕ್ಕೆ ತೇಜೋ ಭಂಗವಾಗಿ ಜನತಾ ಸ್ವಾತಂತ್ರ್ಯ ಚಳುವಳಿಗಳು ಬೆಳೆದವು. ನಾಲ್ಕೇದಿನದಲ್ಲಿ ಉಪವಾಸ ಮುಕ್ತಾಯವಾಯಿತು. ರಾಷ್ಟ್ರೀಯ ಚಳುವಳಿ ಹೊಸಪ್ರಕಾಶ ದಿಂದ ಪ್ರಜ್ವಲಿಸಿತು.

ಅಂತರ್ರಾಷ್ಟ್ರೀಯ ರಾಜಕಾರಣದಲ್ಲಿ ಹಿಂಸಾ ಮನೋವೃತ್ತಿ ಮತ್ತು ನಿರಂಕುಶಾಧಿಕಾರ ಪ್ರವೃತ್ತಿಗಳು ಬೆಳೆದು ನಿಲ್ಲುತ್ತಿದ್ದವು. ಯುದ್ಧದ ಕರಾಳಛಾಯೆ ಅದಕ್ಕನುಕೂಲವಾಯಿತು. ಶಾಂತಿಪ್ರಿಯರೆಲ್ಲರೂ ತಾಳ್ಮೆಗೆಡುತ್ತಿದ್ದರು. ತಮ್ಮ ಆತ್ಮಬಲದ ಧೀಶಕ್ತಿಯನ್ನು ಕ್ರೋಢೀಕರಿಸಿಕೊಂಡು ಗಾಂಧೀಜಿ ಜಗತ್ತಿನ ಮಹಾನಾಯಕರುಗಳಿಗೆಲ್ಲ ನಿರ್ಭಯರಾಗಿ ಧ್ವನಿಯೆತ್ತಿ ಹೇಳಿದರು. "ಈ ಆತ್ಮ ನಾಶದ ರಾಕ್ಷಸೀ ಪ್ರವೃತ್ತಿಯನ್ನು ನಿಲ್ಲಿಸಿ. ಮಾನವೀಯತೆಯ ಮಾರ್ದವತೆಯನ್ನು ತುಳಿದು ನಾಶಮಾಡುವ ಬೀಭತ್ಸ ಯುದ್ಧೋದ್ಯಮವನ್ನು ವರ್ಜಿಸಿಬಿಡಿ" ಎಂದರು. ಹಿಟ್ಲರನಿಗೆ ಬಹಿರಂಗಪತ್ರ ಬರೆದರು. ಡಾ॥ ಬೆನಿಸ್ ಅವರಿಗೆ ಬೋಧಿಸಿದರು. "ಪ್ರತಿಯೊಬ್ಬ ಬ್ರಿಟನ್ನನಿಗೆ" ಎಂಬ ಲೇಖನ ಬರೆದರು. ಪೋಲೆಂಡಿನ ಜನರ ನಿಸ್ಸೀಮ ಧೈರ್ಯತ್ಯಾಗಗಳನ್ನು ಶ್ಲಾಘಿಸಿದರು. ಜಪಾನಿನ ಸಮಯಸಾಧಕ ಕುಟಿಲತೆಯನ್ನು ಖಂಡಿಸಿದರು. ದೇಶದೊಳಗೆ ಅಶಾಂತಿಯ ಕಾರ್ಮೋಡಗಳು ಜಲಿಸುತ್ತಿದ್ದವು. ವಿದೇಶೀ ಸರ್ಕಾರದ ಬೆಂಬಲಿಗ ಲಾಭಬಡಕರು ಹೆಚ್ಚಿಕೊಂಡರು. ಮತೀಯ ವಿದ್ವೇಷ ಉಲ್ಬಣಗೊಳ್ಳುತ್ತಿತ್ತು. ಮುಸಲ್ಮಾನರು ಜಿನ್ನಾರವರ ನೇತೃತ್ವದಲ್ಲಿ ಪ್ರತ್ಯೇಕಪಾಕಿಸ್ಥಾನದ ಬೇಡಿಕೆಯನ್ನು ಮಂಡಿಸಿದರು. ಭಾರತದ ವಿಭಜನೆಯ ಮಾತು ಅನಿರೀಕ್ಷಿತ ಸಿಡಿಲಿನಂತೆರಗಿತು. ಗಾಂಧೀಜಿ ಅತ್ಯಂತ ವ್ಯಾಕುಲಗೊಂಡರು. ಹಿಂದೂ ಮುಸಲ್ಮಾನ ಐಕ್ಯತೆ ಶಕ್ತಿರಾಜಕೀಯದ ಕೈಗೊಂಬೆಯಾಗಿ ಬಿರುಗಾಳಿಗೆ ಸಿಕ್ಕಿತು. ರಾಜ್ಯಾಧಿಕಾರದ ದುರಾಸೆ ಐಕ್ಯತೆಯ ಧ್ಯೇಯವನ್ನು ಸೀಳಿ ಛಾವಿಸುತ್ತಿತ್ತು. ಸಂಧಾನ ಪ್ರಯತ್ನಗಳು ನಿಷ್ಫಲವಾದುವು.

ಸಶಸ್ತ್ರ ಯುದ್ಧದ ಪ್ರತ್ಯಕ್ಷ ಧಾಳಿಯೆನ್ನೆದುರಿಸುವ ರಾಷ್ಟ್ರೀಯ ಪ್ರಮಾಣದ ಸಚೇತನ ಅಹಿಂಸಕ ಸಂಘಟನೆ ಇನ್ನೂ ಸಾಧ್ಯವಾಗಿರಲಿಲ್ಲ. ಗಾಂಧೀಜಿಯ ಸತ್ಯಶೋಧನೆಯ ಅಗ್ನಿಪಥ ಕಾಂಗ್ರೆಸ್ಸಿಗೂ ಶಕ್ತಿಮೀರಿದ ಸಾಧನವೆನಿಸಿತು. ರೂಢಮೂಲ ವಿಧಾನಗಳಿಂದ ತೀರ ಭಿನ್ನವಾದ ಅಹಿಂಸಕ ಅಂತರ್ರಾಷ್ಟ್ರೀಯ ರಾಜಕೀಯವನ್ನು ಯುದ್ಧಭೂಮಿಯಲ್ಲಿ ಪ್ರಯೋಗಿಸುವ ಧೀಶಕ್ತಿ ಜನತೆಯಲ್ಲಿ ಮೂಡುವುದು ಅಸಾಧ್ಯವೆನಿಸಹತ್ತಿತು. ತಾವು ಮೂವತ್ತು ವರ್ಷಗಳಿಂದ ಪೋಷಿಸಿ ಬೆಳೆಸಿದ ಕಾಂಗ್ರೆಸ್ ಸಂಸ್ಥೆಯನ್ನು ಪೇಚಿಗೆ ಸಿಕ್ಕಿಸದಂತೆ ಗಾಂಧೀಜಿ ತಾವೇ ಆದರದಿಂದ ದೂರವಾದರು. ಆದರೆ ಗಾಂಧೀಶಕ್ತಿಯ ಆಶ್ರಯವಿಲ್ಲದೆ ಯಾವ

ಜನತಾ ಚಳುವಳಿಯೂ ಅಸಾಧ್ಯವೆನಿಸಿತು. ಹಾಗೆಯೇ ಗಾಂಧೀನಾಯಕತ್ವದ ಸಹಾಯವಿಲ್ಲದೆ ಯಾವ ಶಾಂತಿಯುತ ಸಂಧಾನವೂ ಭಾರತೀಯ ರಾಜಕೀಯದಲ್ಲಿ ಒಡಮೂಡಲಾರದು ಎನ್ನಿಸಿತು ಸಾಮ್ರಾಜ್ಯಶಾಹೀ ಪ್ರಭುತ್ವಕ್ಕೆ. ಮತ್ತೆ ಗಾಂಧೀಜಿಯನ್ನೇ ಆರಿಸಿ ಬಂತು ರಾಜಕೀಯ ನಾಯಕತ್ವ.

1940 ರ ಆಗಸ್ಟಿನಲ್ಲಿ ವೈಸ್‌ರಾಯರು ರಾಜಕೀಯ ಸುಧಾರಣೆಗಳನ್ನು ಘೋಷಿಸಿದರು. ದೇಶದ ಎಲ್ಲ ಪಕ್ಷಗಳೂ ಅವನ್ನು ತಿರಸ್ಕರಿಸಿದುವು. ಯುದ್ಧೋದ್ಯಮಕ್ಕಾಗಿ ದೇಶದಲ್ಲಿ ನಡೆಯುತ್ತಿದ್ದ ದಾರುಣ ಶೋಷಣೆ, ಬಲಾತ್ಕಾರದ ಒತ್ತಡ ಮತ್ತು ಸ್ವಾತಂತ್ರ್ಯದ ಸರ್ವಮುಖ ದಮನ ಇವು ಅಸಹನೀಯವಾದವು. ಅದೇ ವರ್ಷ ಅಕ್ಟೋಬರಿನಲ್ಲಿ ಗಾಂಧೀಜಿ ಯುದ್ಧ ವಿರೋಧೀ ಸತ್ಯಾಗ್ರಹವನ್ನು ಘೋಷಿಸಿದರು. ಅದರ ಸವಿನಯ ಸ್ವರೂಪ ಎಂಥ ಪ್ರಬಲ ಪ್ರತಿಘಾತಿಗೂ ಮಣಿಯದಂತೆ ಕಾಪಾಡಿಕೊಳ್ಳಲು ವ್ಯಕ್ತಿ ವ್ಯಕ್ತಿಗಳನ್ನಾರಿಸಿ ಸಾಂಕೇತಿಕ ಪ್ರತಿಭಟನೆಯನ್ನು ಪ್ರಾರಂಭಿಸಿದರು. ಸಾಮೂಹಿಕ ಸಂಘರ್ಷಣೆಯನ್ನು ತಡೆಹಿಡಿದು ಸಂಪೂರ್ಣ ಶಾಂತಿಯುತ ಅಸಹಕಾರದಿಂದ ಯುದ್ಧಪ್ರಯತ್ನಗಳನ್ನೆಲ್ಲ ನಿಷ್ಫಲಗೊಳಿಸಲು ಕರೆಯಿತ್ತರು. ಆಚಾರ್ಯ ವಿನೋಬಭಾವೆ ಈ ನೈತಿಕ ಮಹಾಸಮರದ ಪ್ರಥಮ ಸತ್ಯಾಗ್ರಹಿ. ಜವಹರಲಾಲರು ಎರಡನೆಯವರು. ಈ ಪಟ್ಟಿ ಅಗಾಧವಾಗಿ ಬೆಳೆಯಿತು. 25 ಸಾವಿರ ಸತ್ಯಾಗ್ರಹಿಗಳು ಬಂಧಿತರಾದರು.

ಜಪಾನಿನ ಧಾಳಿ 1941 ರಲ್ಲಿ ಭಾರತದ ಗಡಿಯಲ್ಲೇ ಬಂದು ನಿಂತಿತು. ಗಾಂಧೀಯವರ ಸಂಯಮಪೂರ್ಣ ಸತ್ಯನಿಷ್ಠ ಅಹಿಂಸಾಧರ್ಮ ಈ ಉತ್ಕಟ ಸಮಯದಲ್ಲಿ ಆಂತರಿಕ ಅರಾಜಕತೆಯನ್ನು ಪ್ರಭಾವಯುತವಾಗಿ ತಡೆಗಟ್ಟಿತು. "ಯುದ್ಧವಿರೋಧಿಯಾಗಿರಿ, ಆದರೆ ಎಂದೆಂದಿಗೂ ಜಪಾನಿನ ನಿರಂಕುಶಾಧಿಕಾರೀ ಪ್ರಭುತ್ವಕ್ಕೆ ಶರಣಾಗಬೇಡಿ. ಕಡೆಯ ಭಾರತೀಯನ ರಕ್ತವಿರುವವರಿಗೂ ಜಪಾನಿನ ಸೈನಿಕ ಭಾರತದಲ್ಲಿ ಹೆಜ್ಜೆಯಿಡಲಾಗದು. ನಿಶ್ಶಸ್ತ್ರರಾಗಿ ನಿರ್ಭಯರಾಗಿ ಕ್ರೂರತಮ ಧಾಳಿಯನ್ನೂ ಎದುರಿಸಿ. ಆತ್ಮಸ್ವಾತಂತ್ರ್ಯವನ್ನೂ ನಾಡಿನ ಗೌರವವನ್ನೂ ಕಾಪಾಡಲು ಬಲಿದಾನಕ್ಕೆ ಸಿದ್ಧರಾಗಿ" ಎಂದು ಕರೆಯಿತ್ತರು. ಜಗತ್ತನ್ನೇ ವ್ಯಾಪಿಸಿದ್ದ ಹಿಂಸಾತ್ಮಕ ಕಾರ್ಗತ್ತಲೆಯಲ್ಲಿ ಈ ಮಿಂಚಿನ ರೇಖೆ ಅಪೂರ್ವವಾಗಿ ಪ್ರಜ್ವಲಿಸಿತು.

ಬ್ರಿಟಿಷ್ ಸರ್ಕಾರ ಕ್ರಿಪ್ಸ್ ನಿಯೋಗವನ್ನು ಭಾರತಕ್ಕೆ ಕಳುಹಿಸಿತು. ಅವರ ಸಂಧಾನ ಸೂತ್ರಗಳು ಜಾತೀಯ ವಿಭಜನೆಯ ಅಡ್ಡಹಾದಿಯನ್ನೇ ಹಿಡಿದವು. ಕ್ಷಿಪ್ರವಾಗಿ ಮುರಿದುಬಿದ್ದ ಈ ಕುಟಿಲ ಪ್ರಯತ್ನ ಜಾತೀಯ ಪ್ರತ್ಯೇಕತೆಯನ್ನು ರಾಜಕೀಯ ಕಗ್ಗಂಟನ್ನಾಗಿ ಮಾಡಿಬಿಟ್ಟಿತು. ಭಾರತೀಯ ಮುಸಲ್ಮಾನರ ಮನೋಧರ್ಮ ಸಿಡಿದೊಡೆದು ಸ್ವಾತಂತ್ರ್ಯ ಚಳುವಳಿಯಿಂದ ಅವರ ನಾಯಕರು ಪ್ರತ್ಯೇಕವಾಗುಳಿದುಬಿಟ್ಟರು. ತಮ್ಮ ಎಪ್ಪತ್ತೆರಡನೆಯ ಜಯಂತಿಯಂದು ಜಗತ್ತಿನ ನಮನವನ್ನು ಸ್ವೀಕರಿಸಿದ ಗಾಂಧೀಜಿ ತಮ್ಮ ಪೂರ್ಣ ಅಹಿಂಸೆಯ ಸ್ವರ್ಣಸ್ವಪ್ನ ಸತ್ಯವಾಗುವಂತೆ ತಮ್ಮನ್ನೇ ಅರ್ಪಿಸಿಕೊಂಡರು. ಜನಮನದ ಹಗೆತನದ ಹಾಲಾಹಲದಲ್ಲಿ ಹಾಲುದಿಸುವಂತೆ ಧರ್ಮಶಕ್ತಿಯ ರಕ್ಷಕರಾದರು.

"ಈ ಕೂಡಲೇ ಭಾರತವನ್ನು ಬಿಟ್ಟು ಹೊರಡಿ. ಮೊದಲು ನಮ್ಮ ಬೆನ್ನಮೇಲಿಂದ ಇಳಿದುಬಿಡಿ. ನಾವಿನ್ನು ದಾಸ್ಯವನ್ನು ಒಂದರೆಕ್ಷಣವೂ ಸಹಿಸ ಲಾರೆವು." 1942 ರ ಆಗಸ್ಟ್‌ನಲ್ಲಿ ಅಖಿಲಭಾರತ ಕಾಂಗ್ರೆಸ್ ಬ್ರಿಟಿಷ್ ಸಾಮ್ರಾಜ್ಯವನ್ನು ಧಿಕ್ಕರಿಸಿ ಸ್ವಾತಂತ್ರ್ಯ ಸಂಗ್ರಾಮದ ಕೊನೆಯ ಮಹಾ ಸಮರವನ್ನು ಘೋಷಿಸಿತು. ಗಾಂಧೀಜಿಯೇ ಈ ಗೊತ್ತುವಳಿಯನ್ನು ಮಂಡಿಸಿದರು. ಯುದ್ಧಕುಂಡದಲ್ಲಿ ಆಕ್ರೋಶಗೊಂಡಿದ್ದ ಬ್ರಿಟನ್ ಸಿಂಹ ದಂತೆರಗಿ ಭಾರತೀಯ ನಾಯಕರೆಲ್ಲರನ್ನೂ ಸೆರೆಹಿಡಿದುಬಿಟ್ಟಿತು. ಕ್ರೂರತಮ ದಮನದಿಂದ ಭಾರತ ಅಗ್ನಿಪರ್ವತದಂತೆ ಕುದಿಯಿತು. ತಾಳ್ಮೆಯ ಕಟ್ಟೆ ಒಡೆದು ರಾಷ್ಟ್ರಶಕ್ತಿ ಲಕ್ಷಾಂತರ ಆವೇಶಪೂರ್ಣ ಪ್ರತಿಭಟನಾ ಮಾರ್ಗಗಳಲ್ಲಿ ಹುಚ್ಚೆದ್ದು ಹರಿದುಬಿಟ್ಟಿತು. ಜನ ತಮಗೆ ತಾವೇ ನಾಯಕರಾದರು. ಸಾಮ್ರಾಜ್ಯಾಧಿಕಾರದ ನೆಲಗಟ್ಟುಗಳು ಒಡೆದು ನುಚ್ಚುನೂರಾದವು. 1943 ರ ಫೆಬ್ರುವರಿಯಲ್ಲಿ ಗಾಂಧೀಜಿ ಇಪ್ಪತ್ತೊಂದು ದಿನಗಳ ಮಹೋಪವಾಸವನ್ನು ಸೆರೆಮನೆಯಲ್ಲೇ ಕೈಗೊಂಡರು. ದೇಶದ ಉಸಿರುಕಟ್ಟಿತು. ಪ್ರಭುತ್ವದ ಕೀಲು ಗಳು ಮುರಿದುಹೋದವು. ಈ ಯಜ್ಞಕುಂಡದ ಅಗ್ನಿಜ್ವಾಲೆ ಕಲ್ಲನ್ನೂ ಕರಗಿಸಿ ಬಿಟ್ಟಿತು. ಆಗಾಖಾನರ ಅರಮನೆ ಬಂದೀಖಾನೆಯಾಗಿತ್ತು. ಗಾಂಧೀಯವರ ದೇಹಾರ್ಧವಂತಿದ್ದ ಪ್ರಿಯಕಾರ್ಯದರ್ಶಿ ಮಹದೇವಭಾಯಿ ಜೈಲಿನೊಳಗೇ ನಿಧನರಾದರು. ಸತಿ ಕಸ್ತೂರಿಬಾ ಅಲ್ಲಿಯೇ ಪತಿಮಡಲಿನಲ್ಲಿ ಪ್ರಾಣಾರ್ಪಣೆ

ಮಾಡಿದರು. ವೃದ್ಧ ಗಾಂಧೀಜಿ ಸ್ಥಿತಪ್ರಜ್ಞರಾಗಿದ್ದರು. ದೇಶದ ಸ್ವಾತಂತ್ರ್ಯವೇ ಅವರ ಏಕೈಕ ಧ್ಯಾನವಸ್ತುವಾಗಿತ್ತು. 1944 ರ ಮೇ ನಲ್ಲಿ ಆರೋಗ್ಯ ನಿಮಿತ್ತ ಅವರ ಬಿಡುಗಡೆಯಾಯಿತು. ನೇರವಾಗಿ ಸೇವಾಗ್ರಾಮಕ್ಕೆ ಮರಳಿ ಮತ್ತೆ ಸಂಧಾನದ ಸತ್ಯಾಗ್ರಹಪಥಹಿಡಿದು ಹೆಜ್ಜೆಯಿಟ್ಟರು. ಹರಿಜನ ಪತ್ರಿಕೆಯಲ್ಲಿ ಅವರ ಅಳಲಿನ ಶ್ರೋತ ಅವ್ಯಾಹತವಾಗಿ ಹರಿಯತೊಡಗಿತು.

ದೇಶವಿಭಜನೆಯುನು ತಡೆಗಟ್ಟಲು ಗಾಂಧೀ ಅವಿಶ್ರಾಂತವಾಗಿ ದುಡಿದರು. ಜಿನ್ನಾರವರ ಬಾಗಿಲಿಗೆ ಬಂದು ಭವಿಷ್ಯದ ದುರಂತವನ್ನು ತಪ್ಪಿಸಲು ಬೇಡಿದರು. ಸಾಧ್ಯವಾಗಲಿಲ್ಲ. 1945 ರಲ್ಲಿ ಬಂದ ಪಾರ್ಲಿಮೆಂಟರಿ ನಿಯೋಗ ವಿಭಜನೆಯನ್ನು ದೃಢೀಕರಿಸಿತು. ಇಂಗ್ಲೆಂಡಿನ ರಾಜಕೀಯದಲ್ಲಿ ಚರ್ಚಿಲ್ಲರ ಪತನವಾಗಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂದಿತ್ತು. ಆಟ್ಲಿಯವರು ಪ್ರಧಾನಿಯಾದರು. ಭಾರತಕ್ಕೆ ಸ್ವರಾಜ್ಯಕೊಡದೆ ಗತ್ಯಂತರವಿರಲಿಲ್ಲ. ಯುದ್ಧದಲ್ಲಿ ವಿಜಯಿಗಳಾಗಿ ಪ್ರಜಾಪ್ರಭುತ್ವ ಹಾಗೂ ಸ್ವಾತಂತ್ರ್ಯ ಘೋಷಣೆಗಳನ್ನೆತ್ತಿಹಿಡಿದ ಇಂಗ್ಲೆಂಡ್ ಭಾರತದಿಂದ ಕಾಲ್ತೆಗೆಯುವುದು ಅನಿವಾರ್ಯವಾಯಿತು. ಲಾರ್ಡ್ ಮೌಂಟ್ ಬೇಟನ್ನರು ಕೊನೆಯ ವೈಸರಾಯರಾಗಿ ಬಂದರು. ಮುಸ್ಲಿಂಲೀಗ್ ಮತ್ತು ಕಾಂಗ್ರೆಸ್‌ಗಳ ಸಮ್ಮಿಶ್ರ ಮಂತ್ರಿಮಂಡಳ ಜವಹರಲಾಲರ ನೇತೃತ್ವದಲ್ಲಿ ರಚಿತವಾಯಿತು.

ಆದರೆ ಉನ್ಮತ್ತ ಜಾತಿವಾದಿಗಳ ದಾರುಣ ದಾನವತೆಗೆ ದೇಶ ಬಲಿಯಾಯಿತು. ಹಿಂದೆಂದೂ ಕಂಡರಿಯದ ರಕ್ತದ ಕಾಲುವೆ ಹರಿಯತೊಡಗಿತು. ಗಾಂಧೀಜೀ ವಿಹ್ವಲರಾಗಿ ಭಗ್ನಹೃದಯದಿಂದ ಪ್ರಾಣವನ್ನೇ ಪಣವಾಗಿಟ್ಟು ಈ ಅಗ್ನಿಜ್ವಾಲೆಯಲ್ಲಿ ಧುಮುಕಿದರು. ನವಖಲಿಯ ಶಾಂತಿಯಾತ್ರೆ, ಕಲ್ಕತ್ತದ ಉಪವಾಸ, ಬಂಗಾಳದ ನರಮೇಧವನ್ನು ತಡೆಗಟ್ಟಿದ ಪವಾಡಗಳನ್ನು ಕಂಡು ಲೋಕ ವಿಸ್ಮಯಗೊಂಡಿತು. ಹಿಂದೂಮುಸ್ಲಿಮರ ರುದ್ರಭಯಂಕರ ದ್ವೇಷದ ಕರಾಳ ಪ್ರವಾಹವನ್ನು ಹರಿಬಿಟ್ಟ ಆ ದುರಂತ ದಿನಗಳಲ್ಲಿ ಮಾನವೀಯತೆಯ ಏಕೈಕ ಪ್ರಚಂಡ ಶಮನಶಕ್ತಿಯಾಗಿ ನಿಂತರು ಗಾಂಧೀಜಿ. ಈ ಪವಾಡವನ್ನು ಕಂಡ ಲಾರ್ಡ್ ಮೌಂಟ್‌ಬ್ಯಾಟನ್ನರು "ಈ ಮಾನವಶ್ರೇಷ್ಠ ನಮ್ಮ ರಕ್ಷಣೆಯ ಏಕೈಕ ಭರವಸೆಯ ಆಸರೆಯಾದ" ಎಂದರು. ಆದರೆ ರಾಜಕೀಯ ಚದುರಂಗದಲ್ಲಿ ದೇಶವಿಭಜನೆ ಅನಿವಾರ್ಯವಾಯಿತು.

1947 ರ ಆಗಸ್ಟ್ ಹದಿನೈದರ ಮಧ್ಯರಾತ್ರಿ. ಜಗತ್ತು ನಿದ್ರಿಸುತ್ತಿರುವಾಗ ಸ್ವತಂತ್ರಭಾರತ ಎಚ್ಚರವಾಯಿತು. ನೂರೈವತ್ತು ವರ್ಷಗಳು ಅವ್ಯಾಹತವಾಗಿ ಆಳಿದ ಬ್ರಿಟಿಷ್ ಬಾವುಟ ದೆಹಲಿಯ ಕೆಂಪುಕೋಟೆಯಿಂದ ಕೆಳಕ್ಕಿಳಿಯಿತು. ಚಕ್ರವರ್ತಿಯ ಪ್ರತಿನಿಧಿ ತಾನೇ ಸ್ವತಂತ್ರ ಭಾರತದ ತ್ರಿವರ್ಣವನ್ನು ಮೇಲೇರಿಸಿದ ರೋಮಾಂಚಕಾರಿ ಘಟನೆ ಇತಿಹಾಸಪ್ರಸಿದ್ಧವಾಯಿತು. ರಕ್ತದ ಮಡುವಿನಲ್ಲಿ ತೊಯ್ದು ಬಂದರೂ ಭಾರತ ತಪಸ್ವಿನಿಯ ಧವಳ ಮುಕುಟ ಶಾಂತಿಜ್ಯೋತಿಯ ಗೌರೀಶಂಕರದಂತೆ ವಿರಾಜಮಾನವಾಗಿ ಲೋಕಪೂಜ್ಯವಾಯಿತು.

ಲಾರ್ಡ್ ಮೌಂಟ್‌ಬೇಟನ್ನರೇ ಸ್ವತಂತ್ರ ಭಾರತದ ಪ್ರಥಮ ಗೌರ್ನರ್ ಜನರಲ್ಲರಾಗಿ ಪ್ರತಿಜ್ಞಾ ವಚನ ಸ್ವೀಕರಿಸಿದರು. ಈ ಸೌಹಾರ್ದದ ವಿಜಯವನ್ನು ಕಂಡು ಲೋಕ ಬೆರಗಾಯಿತು. ಭಾರತದ ಮುಕುಟಮಣಿ ಜವಹರಲಾಲರು ಪ್ರಧಾನಿಯಾದರು. ಆದರೆ ಆ ಮಹೋತ್ಸವದ ದಿನ ಸ್ವಾತಂತ್ರ್ಯ ಕನ್ಯೆಯನ್ನು ಪಡೆದ ದಿವ್ಯಾತ್ಮ ರಾಷ್ಟ್ರಪಿತ ಬಂಗಾಳದ ದುಃಖಾರ್ತರ ಮಧ್ಯೆ ಪ್ರಾರ್ಥನಾ ಮಗ್ನರಾಗಿ ಉಪವಾಸ ಮಾಡುತ್ತಿದ್ದರು. ದುಃಖಾಶ್ರುಗಳನ್ನು ಕಂಪಿತ ಕರುಣ ಹಸ್ತದಿಂದೊರಸುತ್ತಿದ್ದರು. ಜಗತ್ತು ಈ ಶ್ವೇತಾಗ್ನಿಜ್ವಾಲೆಯ ಸಾನ್ನಿಧ್ಯ ತೀರ್ಥದಿಂದ ಪುನೀತವಾಯಿತು. ಭಾರತ ಪಾಕಿಸ್ತಾನಗಳು ವಿಶ್ವಭೂಪಟದಲ್ಲಿ ತಲೆಯೆತ್ತಿ ನಿಂತವು. ಇಂಗ್ಲೆಂಡ್ ಸರಿಸಮಾನ ಮಿತ್ರರಾಷ್ಟ್ರವಾಗಿ ಉಳಿಯಿತು.

ಜಾತಿಮತ್ಸರದ ವಿಷಜ್ವಾಲೆ ಮತ್ತೆ ಮತ್ತೆ ಕೆರಳಿ ನಿಲ್ಲುತ್ತಿತ್ತು. ಬಂಗಾಳದಿಂದ ಬಿಹಾರಕ್ಕೆ ಬಿಹಾರದಿಂದ ದೆಹಲಿಗೆ ಧಾವಿಸಿದರು ಗಾಂಧೀಜಿ. ಕುದಿಯುವ ಕೊಪ್ಪರಿಗೆಯಲ್ಲಿ ಧುಮುಕಿ ತಮ್ಮ ಅಜೇಯ ಅಮೃತಸಿಂಚನದಿಂದ ದ್ವೇಷವನ್ನು ಸಾಂತ್ವನಗೊಳಿಸುತ್ತಿದ್ದರು. ದೆಹಲಿಯಲ್ಲಿ ಮಿತಿಮೀರಿದ ವಿಧ್ವಂಸಕ ದಂಗೆಗಳನ್ನೆದುರಿಸಲು 1948 ರ ಜನವರಿ ಹದಿಮೂರರಂದು ಉಪವಾಸ ಕೈಗೊಂಡರು. ಜನವರಿ ಮೂವತ್ತರಂದು ಪ್ರಾರ್ಥನಾಸಭೆಗೆ ತಮ್ಮ ನಚ್ಚಿನ ಮೊಮ್ಮಕ್ಕಳ ಭುಜದ ಮೇಲೆ ಕೈಯಿಟ್ಟು ನಡೆದುಬಂದರು. ಅವರ ಚಿರಪರಿಚಿತ ದಿವ್ಯಹಸ್ತಗಳು ಜನಸ್ತೋಮಕ್ಕೆ ನಮಿಸಿದವು. ಹಠಾತ್ತನೆ ತಲೆಗೆಟ್ಟ ಹಿಂದೂ ಯುವಕ ಗೋಡ್ಸೆ ಅವರೆಡೆಗೆ ನುಗ್ಗಿಬಂದು ಗುಂಡಿಕ್ಕಿ ಹೊಡೆದುಬಿಟ್ಟ. "ಹೇ ರಾಮ್" ಎಂದುಸುರಿ ಆಕ್ಷಣದಲ್ಲಿ ಪ್ರಾಣತ್ಯಾಗ ಮಾಡಿದರು ಈ ವಿಶ್ವ ವಿಭೂತಿಪುರುಷ.

ಕಾಲವೇ ಮೂಕವಾಗಿ ದುಃಖಾಶ್ರುಗಳನ್ನು ಸುರಿಸಿತು. ಕವಿಹೃದಯ ಕಂಪಿಸಿ ನುಡಿಯಿತು.

ರಾಷ್ಟ್ರಪಿತ ದಿವಂಗತ
ಉನ್ಮತ್ತ ಹಸ್ತಹತ !
ನರ ಹೃದಯದ ವಿಷವಾರ್ಧಿಗೆ
ಜೀವಾಮೃತ ಸಮರ್ಪಿತ !
ಕ್ಷಮಿಸು, ಓ ಜಗತ್ ಪಿತ ;
ಅದೃಷ್ಟಹೀನ ಭಾರತ.

ಮೈಸೂರು ಗಾಂಧೀ ವಿಚಾರ ಪರಿಷತ್ತಿನ ವ್ಯಾಸಂಗಗೋಷ್ಠಿಯಲ್ಲಿ ಮಥಿಸಿಬಂದ ಕೆಲವು ಭಾವನೆಗಳಿಗೆ ನುಡಿಕಟ್ಟಿನ ಕವಚವನ್ನು ತೊಡಿಸಲು ಇಲ್ಲಿ ನಮ್ಮ ಪ್ರಯತ್ನ ಮಾಡ ಲಾಗಿದೆ. ಭವಿಷ್ಯ ಮಾನವಸಮಾಜದ ಭಾವ ಭಾವನೆಗಳಿಗೆ, ವಿಚಾರ ಆಚಾರಗಳಿಗೆ, ಕೃಷಿ ಸಾಧನೆಗಳಿಗೆ ಈ ಶತಮಾನ ನೀಡಿದ ಭವ್ಯಕೊಡುಗೆಗಳ ಸ್ಮರಣೆ ಇದು. ಸಮಾಜದ ಅಗ್ನಿಗರ್ಭದಿಂದ ಹುಟ್ಟಿಬಂದ ಮೂರು ಮಹಾತತ್ವಗಳಾದ ಸ್ವಾತಂತ್ರ್ಯ, ಸಮತೆ, ಸೌಹಾರ್ದಗಳಿಗೆ ಬಾಳಿನ ಚೌಕಟ್ಟಿನಲ್ಲಿ ರೂಪು ಕೊಟ್ಟ ವಿಶ್ವಜ್ಯೋತಿಗಳ ಜೀವನಕಥೆ ಗಳನ್ನು ಸಹೃದಯರಿಗೆ ನಿವೇದಿಸಿದ್ದೇನೆ. ಜ್ಞಾನದಾತರಾದ ಪೂಜ್ಯ ಶ್ರೀ ಎಂ. ಯಾಮುನಾಚಾರ್ಯರ ನಿರ್ವ್ಯಾಜ ವಾತ್ಸಲ್ಯ ಕ್ಕಾಗಿ ಸಾಷ್ಟಾಂಗ ನಮಸ್ಕಾರಗಳನ್ನು ಸಮರ್ಪಿಸುತ್ತೇನೆ.

ಕೆ. ಎಸ್. ಎನ್.